# ಸುಗಮ ಸಂಗೀತ

## ಶಬ್ದಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ-ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ: ದೇಸೀ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶೀ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರಾದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶೀ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ

ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ: ಕನ್ನಡದ ಅರಿವಿನ ವಿಕೇಂದ್ರಿಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಡಾ.ಜಯಶ್ರೀ ಅರವಿಂದ್ ಅವರು 'ಸುಗಮ ಸಂಗೀತ' ಕ್ಷೇತ್ರದಲ್ಲಿ ಪರಿಚಿತ ಹೆಸರು. ಅವರು ಸಂಗೀತಗಾರರಾಗಿ, ಸಂಗೀತ ಸಂಯೋಜಕರಾಗಿ, ಸಂಗೀತ ತಜ್ಞೆಯಾಗಿ ಹೆಸರು ಪಡೆದಿದ್ದಾರೆ. ಕರ್ನಾಟಕದಲ್ಲಿ ಸುಗಮ ಸಂಗೀತದ ಹುಟ್ಟು ಮತ್ತು ಬೆಳವಣಿಗೆಯನ್ನು ಕುರಿತು ವಿಶೇಷ ಅಧ್ಯಯನ ಮಾಡಿ ಡಿ.ಲಿಟ್. ಪದವಿಯನ್ನು ಗಳಿಸಿದ್ದಾರೆ. ಸಂಗೀತವು ಮಾನವ ಸಮುದಾಯಕ್ಕೆ ಬೇಕು. ಇದು ಮಾನವನ ಮನಸ್ಸನ್ನು ಹದದಲ್ಲಿ ಇಡುತ್ತದೆ. ಸಂಗೀತ ಯಾರಿಗೆ ಬೇಕಿಲ್ಲ? ಮನುಷ್ಯನ ಬದುಕಿನೊಡನೆ ಸಂಗೀತವು ಬೆರೆತುಕೊಂಡಿದೆ. ಸಂಗೀತವು ಹಲವು ಶಾಖೆಗಳನ್ನು ಒಳಗೊಂಡಿದೆ. ಲಘುಶಾಸ್ತ್ರೀಯ ಸಂಗೀತ, ಚಲನಚಿತ್ರ ಸಂಗೀತ, ಸುಗಮ ಸಂಗೀತ, ಜನಪದ ಸಂಗೀತ, ನೃತ್ಯ ಸಂಗೀತ-ಹೀಗೆ ಹತ್ತಾರು ಶಾಖೆಗಳನ್ನು ಇದು ಒಳಗೊಂಡಿದೆ. ಡಾ.ಜಯಶ್ರೀ ಅರವಿಂದ್ ಅವರು 'ಸುಗಮ ಸಂಗೀತ' ಕುರಿತು ವಿವರಣಾತ್ಮಕವೂ ವಿಶ್ಲೇಷಣಾತ್ಮಕವೂ ಆದ ಅಧ್ಯಯನವನ್ನು ಮಾಡಿದ್ದಾರೆ. ತಮ್ಮ ಅಧ್ಯಯನದ ಫಲಿತಗಳನ್ನು ಹಲವು ರೀತಿಗಳಲ್ಲಿ ಸಂವಿಶ್ಲೇಷಣೆ ಮಾಡಿದ್ದಾರೆ. ಸುಗಮ ಸಂಗೀತದ ಹುಟ್ಟು ಮತ್ತು ಬೆಳವಣಿಗೆಯನ್ನು ಈ ಗ್ರಂಥದ ಮೂಲಕ ಅನಾವರಣ ಮಾಡಿದ್ದಾರೆ. ಶಾಸ್ತ್ರೀಯ ಸಂಗೀತಕ್ಕೂ ಸುಗಮ ಸಂಗೀತಕ್ಕೂ ಇರುವ ಸಂಬಂಧಗಳನ್ನು ಚರ್ಚಿಸಿರುವ ಭಾಗ ಗ್ರಾಹ್ಯವಾಗಿದೆ. ಜನಪದ ಸಂಗೀತಕ್ಕೂ ಸುಗಮ ಸಂಗೀತಕ್ಕೂ ಇರುವ ವ್ಯತ್ಯಾಸಗಳನ್ನು ಲೇಖಕಿ ಬಹು ಸಮರ್ಥವಾಗಿ ವಿಶ್ಲೇಷಿಸಿದ್ದಾರೆ. ಇಡೀ ಗ್ರಂಥವು ಹನ್ನೊಂದು ಅಧ್ಯಾಯಗಳನ್ನು ಹರಡಿಕೊಂಡಿದೆ. ಸಾಹಿತ್ಯಕ್ಕೂ ಸುಗಮ ಸಂಗೀತಕ್ಕೂ ಇರುವ ಸಾವಯವ ಸಂಬಂಧಗಳನ್ನು ಮೂರು, ನಾಲ್ಕು ಮತ್ತು ಐದನೆಯ ಅಧ್ಯಾಯಗಳಲ್ಲಿ ಹೊಚ್ಚ ಹೊಸದಾಗಿ ನಿರೂಪಿಸಿದ್ದಾರೆ. ಸುಗಮ ಸಂಗೀತ ಕುರಿತು ಇಂಥದ್ದೊಂದು ಮೌಲಿಕ ಗ್ರಂಥವನ್ನು ಕನ್ನಡ ವಿಶ್ವವಿದ್ಯಾಲಯಕ್ಕಾಗಿ ಸಿದ್ಧಪಡಿಸಿಕೊಟ್ಟ ವಿದುಷಿ ಡಾ. ಜಯಶ್ರೀ ಅರವಿಂದ್ ಅವರಿಗೆ ಅಭಿನಂದನೆಗಳು.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಮತ್ತು ಸಹಾಯಕ ನಿದೇರ್ಶಕರಾದ ಶ್ರೀ ಬಿ.ಸುಜ್ಞಾನಮೂರ್ತಿ ಅವರಿಗೆ ಅಭಿನಂದನೆಗಳು.

**ಡಾ. ಎ. ಮುರಿಗೆಪ್ಪ**
ಕುಲಪತಿ

# ಲೇಖಕರ ಮಾತು

ಇಂದು ಸುಗಮ ಸಂಗೀತವೆಂಬ ಗಾಯನ ಪ್ರಕಾರ ಒಂದು ಸಂಗೀತದ ಶೈಲಿಯಾದರೂ ಸಂಗೀತವನ್ನು ಮೀರಿದ ಕವಿತೆಯ ದರ್ಶನವನ್ನು ತೋರುವ ಗಾಯನ ಪ್ರಕಾರವಾಗಿದೆ. ಇಲ್ಲಿ ಸಾಹಿತ್ಯಕ್ಕಾಗಿ ಸಂಗೀತವಿದೆಯಲ್ಲದೆ, ಸಂಗೀತಕ್ಕಾಗಿ ಸಾಹಿತ್ಯವಿಲ್ಲ. ಸಂಗೀತ ಮತ್ತು ಸಾಹಿತ್ಯಗಳ ಅನ್ಯೋನ್ಯ ಹೊಂದಾಣಿಕೆಯಲ್ಲಿಯೇ ಇದರ ಸಫಲತೆ ಇದೆ. ಪ್ರಸ್ತುತ ಪಡಿಸುವ ಕಲಾವಿದನ ಜಾಣ್ಮೆ, ಕಂಠಸಿರಿಯ ಮಾಧುರ್ಯವೇ ಪಾತ್ರ ಧಾರಿಯಾಗಿದೆ. ಕವಿ, ಸಂಯೋಜಕ ಸೂತ್ರಧಾರಿಗಳಾದರೆ, ಗಾಯಕನೇ ಪಾತ್ರಧಾರಿ. ಅವನ ರಾಗಾಭಿನಯದ ಮೋಡಿಯಲ್ಲಿಯೇ ಸುಗಮ ಸಂಗೀತದ ಜನಪ್ರಿಯತೆ ಅಡಗಿದೆ. ಸುಗಮ ಸಂಗೀತದ ಜನಪ್ರಿಯತೆಯಲ್ಲಿ ನೂರಾರು ಕವಿಗಳ, ಕಲಾವಿದರ, ಸಂಗೀತ ವಾದ್ಯಗಾರರ, ಸಂಘಟನಾಕಾರರ, ಸಂಯೋಜಕರ, ಕಾಳಜಿ ಇದೆ. ಶಾಸ್ತ್ರೀಯ ಸಂಗೀತಗಾರರಿಂದ ಅಲಕ್ಷ್ಯಗೊಂಡು 'ಲಘುಸಂಗೀತ'ವೆಂದಾಗಿ, ಕಡೆಗೆ 'ಸುಗಮ ಸಂಗೀತ'ವೆಂಬ ಹೆಸರು ಪಡೆದ ಈ ಗಾಯನ ಪ್ರಕಾರ, ತನ್ನ ಸಾಹಿತ್ಯಾರ್ಥಶಕ್ತಿಯಿಂದ ಎತ್ತರ ಬಿತ್ತರಗಳಿಂದ ಶೈಕ್ಷಣಿಕ ಮಟ್ಟಕ್ಕೇರಿದೆ. ವಿಶ್ವವಿದ್ಯಾಲಯದಲ್ಲಿ ಸಂಶೋಧನ ಪದವಿ ಪಡೆಯುವಷ್ಟು ಔನ್ನತ್ಯವನ್ನೂ, ವಿಚಾರ ಸಂಪತನ್ನೂ ಹೊಂದಿದೆ. ಇದೀಗ ಹಂಪೆ ವಿಶ್ವವಿದ್ಯಾನಿಲಯದ ಸುವರ್ಣ ಅರಿವಿನಂಗಳ ಮಾಲೆಗೆ 'ನವಸುಮ'ವಾಗಿ ಸೇರುತ್ತಿದೆ. ಇದು ನನಗೆ ಅತ್ಯಂತ ಸಂತೋಷ ತಂದಿದೆ. ಕೇವಲ ವೇದಿಕೆಗಳಲ್ಲಿ, ಆಕಾಶವಾಣಿಯಲ್ಲಿ, ಧ್ವನಿಸುರುಳಿಗಳಲ್ಲಿ ಪ್ರಸಾರವಾಗುತ್ತಾ, ಪ್ರಚಾರಗಳಿಸುತ್ತಾ ಜನಪ್ರಿಯವಾಗಿದ್ದ ಈ ಗಾಯನ ಪ್ರಕಾರ, ತನ್ನ ಅಪೂರ್ವ ವ್ಯಕ್ತಿತ್ವ, ಸಿದ್ಧಾಂತಗಳ ಮೂಲಕ ವಿಶ್ವವಿದ್ಯಾನಿಲಯದ ಆವರಣವನ್ನು ಪ್ರವೇಶಿಸಿದೆ. ಶಾಸ್ತ್ರೀಯ ಕಲೆಯ ಗೌರವವನ್ನೂ ಘನತೆಯನ್ನೂ ಪಡೆಯುತ್ತಾ ಇತಿಹಾಸವನ್ನು ಸೃಷ್ಟಿಮಾಡುತ್ತಿದೆ. ಈ ಅರಿವಿನ ಅಂಗಳ ಮಾಲಿಕೆಯಲ್ಲಿ ನನ್ನ ಕೆಲವು ಚಿಂತನೆಗಳು, ವಿಚಾರಗಳು ದಾಖಲಾಗುತಿತರುವುದಲ್ಲದೆ, ಸುಗಮಸಂಗೀತದ ಇತಿಹಾಸವೂ ಮುಂದುವರೆಯುತ್ತಿದೆ. ಅಲ್ಲದೆ, ಜನಸಾಮಾನ್ಯರಿಗೆ, ಮುಂದಿನ ಪರಂಪರೆಗೆ, ಯುವಪೀಳಿಗೆಗೆ, ಸುಗಮ ಸಂಗೀತದ ಅರಿವನ್ನು ಮೂಡಿಸುವಲ್ಲಿ ಪರಿಣಾಮಕಾರಿಯಾಗಿದೆ. ಈ ಪುಸ್ತಕದಲ್ಲಿ ನನ್ನ ವಿಚಾರಗಳನ್ನು ಹಂಚಿಕೊಳ್ಳಲು ಅನುವುಮಾಡಿಕಟ್ಟ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಸಾರಾಂಗದ ನಿದೇಶಕರಾದ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್ ಅವರಿಗೆ ಆಭಾರಿಯಾಗಿದ್ದೇನ.

ಈ ಗ್ರಂಥವನ್ನು ರಚಿಸಲು ಅವಕಾಶ ಮಾಡಿಕೊಟ್ಟ ಅಂದಿನ ಕುಲಪತಿಗಳಾಗಿದ್ದ ಡಾ. ಬಿ.ಎ. ವಿವೇಕ ರೈ ಅವರನ್ನು ಇಂದಿನ ಕುಲಪತಿಗಳಾದ ಡಾ. ಎ ಮುರಿಗೆಪ್ಪ ಇವರನ್ನು ನಾನು ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ. ಈ ಗ್ರಂಥ ರಚನೆಯ ಸಂದರ್ಭದಲ್ಲಿ ನೆರವಾದ ಹಲವಾರು ಮಿತ್ರರನ್ನೂ ಸಂಗೀತಜ್ಞರನ್ನೂ ತುಂಬ ಹೃದಯದಿಂದ ನೆನೆಯುವುದು ನನ್ನ ಕರ್ತವ್ಯ.

ಈ ಗ್ರಂಥವು ಸುಗಮ ಸಂಗೀತ ಕ್ಷೇತ್ರದ ಆಸಕ್ತರಿಗೆ 'ಕೈಪಿಡಿ' ಆಗುವುದೆಂಬ ನಂಬುಗೆ ನನಗಿದೆ. ಕನ್ನಡ ನಾಡಿನ ಸುಗಮ ಸಂಗೀತ ಸಮುದಾಯಕ್ಕೆ ಈ ಗ್ರಂಥವನ್ನು ಆದರದಿಂದ ಒಪ್ಪಿಸುತ್ತಿದ್ದೇನೆ.

**ಡಾ. ಜಯಶ್ರೀ ಅರವಿಂದ್**

ಬೆಂಗಳೂರು

# ಅಧ್ಯಾಯ ೧ – ಸಂಗೀತದ ಹುಟ್ಟು ಮತ್ತು ಗುರಿ

ಭಾವಾಭಿವ್ಯಕ್ತಿಯ ಪರಮ ಸಾಧನವಾದ ಸಂಗೀತವು ಭರತಖಂಡದಲ್ಲಿ ಆದಿಕಾಲದಿಂದಲೂ ಅಸ್ತಿತ್ವದಲ್ಲಿದೆ. ಇದರ ಉತ್ಪತ್ತಿ ವೇದಗಳಿಗೂ ಮೊದಲಿನದೆಂದು ಅನೇಕ ಸಂಗೀತ ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ನಿಸರ್ಗದ ಕೊಡುಗೆಯಾಗಿ ಸಂಗೀತ ಮಾನವನಿಗೆ ದೊರಕಿದೆ. ನಿಸರ್ಗದಲ್ಲಿ ತೋರಿ ಬರುವ ಶಬ್ದ ವೈವಿಧ್ಯ ಮಾನವನ ಮನಸ್ಸಿನಲ್ಲಿ ವಿವಿಧ ಭಾವನೆಗಳನ್ನು ಮೂಡಿಸಿತು. ಆ ಭಾವನೆಗಳೇ, ಹರ್ಷ, ದುಃಖ, ಕುಣಿತ, ಲಯಗಳ ರೂಪದಲ್ಲಿ ಹೊರಹೊಮ್ಮಿತು. ಹಾಡಾಗಿ ಮಾರ್ಪಟ್ಟಿತು. ಯಾವುದೊಂದು ದೇಶದ, ಅಥವಾ ಇತಿಹಾಸದ ಕಾಲಮಾನದ ಅಭಿವೃದ್ಧಿ, ಸುಖ ಸಂತೋಷ, ಉತ್ಸಾಹ, ನಯಗಾರಿಕೆ, ಜನಜೀವನದ ಶೈಲಿ ಇವುಗಳನ್ನು ಅಳೆಯಲು ಆ ದೇಶದ ಅಥವಾ ಆಯಾಕಾಲದ ಜನರ ಕಲೆಗಳು ಎನ್ನಬಹುದು. ಪ್ರಭಾವಶಾಲಿಯಾದ ಕಲೆಗಳ ನಿರ್ಮಾಣಕ್ಕೆ ಸಮಾಜದ ಅಂದಿನ ಪರಿಸ್ಥಿತಿಯೇ ಕನ್ನಡಿಯಾಗಿರುತ್ತದೆ. ಸಮಾಜವನ್ನು ಕಟ್ಟುವಲ್ಲಿ ಕಲೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಮನುಷ್ಯ ಸಂಸ್ಕೃತಿಯೊಡನೆ ನಿಕಟವಾದ ಸಂಬಂಧ ಹೊಂದಿರುತ್ತವೆ. ಅವು, ನೃತ್ಯ, ಶಿಲ್ಪ, ಚಿತ್ರ ಮತ್ತು ಸಂಗೀತ ಮತ್ತು ಸಾಹಿತ್ಯ ಮೊದಲಾದ ಕಲೆಗಳು. ಇವು ಆಯಾಕಾಲದ ಜನರ ಮನಸ್ಸನ್ನು ಬಿಂಬಿಸುತ್ತವೆ. ಅವರ ಜೀವನ ಸಂಸ್ಕೃತಿಯನ್ನು ಕಾಯ್ದಿರಿಸಿಕೊಂಡು ಬರುತ್ತವೆ. ಕಾಲದ ಪಯಣದಲ್ಲಿ ಇವು ಸಾಕ್ಷೀಭೂತಗಳಾಗಿ ನಿಲ್ಲುತ್ತವೆ. ಕಲೆ ಎಂಬುದು ಕಲಾವಿದನ ಅನುಭವಗಳ ಮೂಸೆಯಿಂದ ಪುಟಿದು ಬಂದು ರೂಪುಗೊಳ್ಳುವ ಕೃತಿಯಾಗಿರುತ್ತದೆ. ಅದು ಕಹಿ ಅಥವಾ ಸಿಹಿಯಾಗಿರಬಹುದು. ಅದು ಯಾವುದೂ ಮುಖ್ಯವಾಗಿರದೆ, ಅವನ ಜೀವನದ ಅನುಭವದ ವೈಶಾಲ್ಯವನ್ನಷ್ಟೇ ಅದು ತಂದುಕೊಡುತ್ತದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಮಾನವ ಜೀವನದ ಸುಖ, ದುಃಖ, ನ್ಯಾಯ, ಅನ್ಯಾಯ, ಈರ್ಷ್ಯೆ, ಅಜ್ಞಾನ, ತಿಳಿವುಗಳ ಸಂಘರ್ಷ, ಕಾಮ, ಶೃಂಗಾರ, ಒಲುಮೆ, ವಿಕಾರ ಔದಾರ್ಯ, ಸಂತೋಷ ಮುಂತಾದ ಭಾವನೆಗಳ ವಿನಿಮಯ ಮತ್ತು ವಿಕಾಸಗಳಿಗೆ ಲಲಿತಕಲೆಗಳಲ್ಲಿ ಉತ್ತಮವಾದ ಕಲೆಯಾದ ಸಂಗೀತವು ಅತ್ಯಂತ ಸಹಾಯಕವಾಗಿದೆ. ಅದು ವಿಶ್ವದ ಭಾವನೆಗಳ ಭಾಷೆ ಎಂಬ ಹಿರಿಮೆ ಗಳಿಸಿದೆ. ಹೃದಯವನ್ನು ನೇರವಾಗಿ ಮುಟ್ಟುವ ಕಲೆಯಾದ ಸಂಗೀತಕ್ಕೆ 'ಗಾಂಧರ್ವ ವೇದ' ವೆಂಬ ಹೆಸರಿದೆ. ಇದು ನಾದಾನುಭವವನ್ನು ನೀಡಿ ಬ್ರಹ್ಮಾನಂದವನ್ನು ಸಪ್ತಸ್ವರಗಳಲ್ಲಿ ತಂದುಕೊಡುತ್ತದೆ.

ಸಂಗೀತವೆಂದರೆ ಚೆನ್ನಾಗಿ ಹಾಡುವುದು ಎಂಬುದು ಸಾಮಾನ್ಯ ಅರ್ಥವಾದರೂ, ಉಪನಿಷತ್ತು. ಭಗವದ್ಗೀತೆ ಮುಂತಾದವುಗಳಲ್ಲಿ ವಿಶೇಷ ಸ್ಥಾನ ಪಡೆದ ಕಲೆಯಾಗಿದೆ. ಇದು ಮನೋರಂಜನೆಯನ್ನು ನೀಡಿ ನಿತ್ಯ ಜೀವನದ ಬೇಸರವನ್ನು ಹೋಗಲಾಡಿಸುತ್ತದೆ. ಭಾರತದೇಶವೇ ಪ್ರಪ್ರಥಮವಾಗಿ ಸೊಲ್ಫಾ ಪದ್ಧತಿಯಲ್ಲಿ ಸಪ್ತಸ್ವರಗಳ ಪದ್ಧತಿಯನ್ನು ಆಚರಣೆಗೆ ತಂದು 'ಸರಿಗಮ ಪಧನಿ' ಎಂದು ಹೆಸರಿಸಿದೆ. ಈ ಏಳು ಅಕ್ಷರಗಳನ್ನು ಸೇರಿಸಿ ಒಂದು ಪದವಾಗಿ ಮಾಡಿದರೆ 'ಸರಿಗಮಪದನಿ' ಎಂದಾಗುತ್ತದೆ. ಇದು 'ಸರಿ' ಎಂದರೆ ಸಂಸ್ಕೃತದಲ್ಲಿ 'ದೋಣಿ' ಎಂದರ್ಥ. 'ಗಮ' ಎಂದರೆ ಹೊಂದಿಸುವುದು. 'ಪದ' ಎಂದರೆ ಸ್ಥಾನ. 'ನಿ' ಎಂದರೆ ಕೊಡುವುದು. ಅಂದರೆ ಒಟ್ಟಿನಲ್ಲಿ 'ಸಂಸಾರ ಸಮುದ್ರವನ್ನು ದಾಟುವುದಕ್ಕೆ ದೋಣಿಯಾದ ಪರಮಾತ್ಮನನ್ನು ಹೊಂದಿಸುವ ಮಾರ್ಗ ಎಂದರ್ಥವಾಗುತ್ತದೆ. ಸಮಸ್ತ ಜೀವಿಗಳಿಗೂ, ಪಶುಪಕ್ಷಿ ಪ್ರಾಣಿಗಳಿಗೂ, ಹೃದಯ ಮಿಡಿಸುವ ಕಲೆಯಾದ ಸಂಗೀತ, ಇಂದ್ರಿಯಗಳ ಚಂಚಲತೆಯಿಂದಾಗಿ ಹರಿದಾಡುವ ಮನಸ್ಸನ್ನು ಕಡಿವಾಣ ಹಾಕಿ ನಿಲ್ಲಿಸಬಲ್ಲದು. ಮನಸ್ಸನ್ನು ಶುಚಿಮಾಡಿ ಶೃಂಗರಿಸಬಲ್ಲದು. ರೋಗಗಳನ್ನು ನಿವಾರಿಸಬಲ್ಲದು. ದೇಹಕ್ಕೆ ಶಕ್ತಿಯನ್ನೂ ಕಾಂತಿಯನ್ನೂ ತುಂಬಿಕೊಡುತ್ತಾ, ಮನಸ್ಸಿಗೆ ಚೈತನ್ಯವನ್ನೂ, ಸುಖವನ್ನೂ ತಂದುಕೊಡಬಲ್ಲದು. ಈ ಸಂಗೀತ ವಿದ್ಯೆಯ ಉದ್ದೇಶ ಪರಮಾತ್ಮನನ್ನು ಆರಾಧಿಸಿ ಮುಕ್ತಿಯನ್ನು ಪಡೆಯುವುದು. ಲೌಕಿಕದಿಂದ ಅಲೌಕಿಕದತ್ತ ನಡೆಸುವ ಒಂದು ಗಾನಯಾನದಲ್ಲಿ ಪರಮಾತ್ಮನ ಉಪಾಸನೆಯ ಮೂಲಕ ಆತ್ಮೋದ್ಧಾರವಾಗುತ್ತದೆ. ಶಬ್ದಸ್ವರೂಪವಾದ ಕಾವ್ಯ ಮತ್ತು ಸಂಗೀತವು ಭಗವಂತನ ಸ್ವರೂಪವೆಂದು ಭಾವಿಸಲಾಗಿದೆ. ಇದು ಮಾನವನನ್ನು ಭವಸಾಗರದಿಂದ ಶಾಂತಿಯ ಕಡೆ ದಾಟಿಸುವ ದೋಣಿಯಾಗಿ ಕೆಲಸ ಮಾಡುತ್ತದೆ.

**ಸಂಗೀತ ಸಾಹಿತ್ಯಗಳ ಪರಂಪರಾನುಗತ ಸಂಬಂಧ**

ಸಂಗೀತವು ಕೇವಲ ಒಂದು ದೇಶಕ್ಕೆ ಅಥವಾ ಒಂದು ಜಾತಿಗೆ ಅಥವಾ ಒಂದು ಭಾಷೆಗೆ ಸೇರಿದ್ದಲ್ಲ. ಅದು ಇಡೀ ವಿಶ್ವಕ್ಕೆ ಸೇರಿದ್ದು. ಪ್ರಪಂಚದ ಇತಿಹಾಸದಲ್ಲೇ ಮೊದಲನೆಯ ವಾಙ್ಮಯವಾದ ವೇದವು ಗಾನರೂಪವಾದುದು. ಭಗವಂತ ಸಾಮಗಾನಪ್ರಿಯ. ಶ್ರೀಕೃಷ್ಣನ ಕೈಯ್ಯಲ್ಲಿ ಕೊಳಲು, ಪರಮೇಶ್ವರನ ಕೈಯ್ಯಲ್ಲಿ ಡಮರುಗ, ಸರಸ್ವತಿಯ ಕೈಯ್ಯಲ್ಲಿ ವೀಣೆ, ದಕ್ಷಿಣಾಮೂರ್ತಿಯ ಹಸ್ತದಲ್ಲಿ ವೀಣೆ ಇರುವುದರಿಂದ, ಈ ಎಲ್ಲ ದೇವತೆಗಳು ಗಾನಲೋಲರೆಂದು ತಿಳಿಯುತ್ತದೆ. ಹೀಗೆ ಬಹಳ ಹಿಂದಿನಿಂದಲೇ ಸಂಗೀತವು ಭಾರತೀಯರಿಗೆ ಪೂಜ್ಯವಸ್ತುವೆಂದು ಸ್ವೀಕೃತವಾಗಿದೆ. ಭಗವಂತನನ್ನು ಪಾಸಿಸುವ, ಆರಾಧಿಸುವ ಶ್ರೇಷ್ಠಮಾರ್ಗವೆಂದು ಕಂಡುಕೊಂಡ ಹಲವು ಸಾಧನೆಗಳಲ್ಲಿ ಸಂಗೀತ ಕಲೆ ಪ್ರಮುಖವಾಗಿದೆ. 'ಸಂಸಾರ ದುಃಖದಿಂದ ಬೆಂದ ಉತ್ತಮ'ರನ್ನು ಅನುಗ್ರಹಿಸುವುದಕ್ಕೋಸ್ಕರ ಪ್ರಭುವಾದ ಶಂಕರನಿಂದ ಸಂಗೀತ ವಿದ್ಯೆ ಪ್ರಕಾಶಿಸಲ್ಪಟ್ಟಿತು ಎಂದು ವಿದ್ಯಾರಣ್ಯಸ್ವಾಮಿಗಳು ಸಂಗೀತದ 'ಗುರಿ' ಮತ್ತು ಹಿರಿಮೆಯನ್ನು ಕುರಿತು ಹೇಳಿದ್ದಾರೆ.

## ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಂಗೀತದ ಮಿಡಿತ

ಕನ್ನಡದ ಜನರು, ಕನ್ನಡದ ಕವಿಗಳು ಕುರಿತೋದದೆಯಂ ಕಾವ್ಯ ಪರಿಣತಮತಿಗಳಾಗಿದ್ದಂತೆ ಕುರಿತೋದದೆ ಗೇಯಪರಿಣತಮತಿಗಳೂ ಆಗಿದ್ದರು. ಮಹಾಕಾವ್ಯ ನಿರ್ಮಿತಿಗೆ ಅಷ್ಟಾದಶ ವರ್ಣನೆಗಳು ಹೇಗೆ ಅನಿವಾರ್ಯವೋ ಕನ್ನಡ ಕಾವ್ಯರಚನೆಗೆ ಸಂಗೀತ ವರ್ಣನೆಯೂ ಹಾಗೆಯೇ, ಅನಿವಾರ್ಯ ಎಂಬಂತೆ ಕನ್ನಡದ ಕವಿಗಳು ಪಾಲಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಕಾವ್ಯಗಳ ಮಾತು ಹಾಗಿರಲಿ, ಕೇವಲ ಲೋಕ ನೀತಿ, ಸಮಾಜ ಸುಧಾರಣೆಗಳನ್ನೇ ಗುರಿಯಾಗಿ ಇಟ್ಟುಕೊಂಡಿದ್ದ ಬಸವಣ್ಣನಂತಹ ವಚನಕಾರರೂ, ಸರ್ವಜ್ಞನಂತಹ ತ್ರಿಪದಿಕಾರರೂ, ನಿಜಗುಣ, ಸರ್ಪಭೂಷಣರಂತಹ ಹಾಡುಗಬ್ಬಿಗರೂ, ಪುರಂದರದಾಸರಂತಹ ಕೃತಿಕಾರರೂ, ಸಂಗೀತ ವರ್ಣನೆಯ ಸವಿಯಿಂದ ಬಾಯಿ ಚಪ್ಪರಿಸುತ್ತಲೇ ಬಂದಿದ್ದಾರೆ. ಕೇವಲ ಶಾಸ್ತ್ರಗ್ರಂಥಗಳನ್ನೇ ಬರೆಯಲು ಹೊರಟ ನೃಪತುಂಗ ನಾಗವರ್ಮರೂ ಕೂಡ ಸಂಗೀತದ ಬಗೆಗೆ ವಿಶೇಷ ಅಕ್ಕರೆ, ಮೆಚ್ಚುಗೆಯನ್ನು ವ್ಯಕತಪಡಿಸಿದ್ದಾರೆ. ಇಡೀ ಪ್ರಾಚೀನ ಕನ್ನಡಕಾವ್ಯಕೋಶದಲ್ಲಿ ಸಂಗೀತವನ್ನು ಸ್ವಲ್ಪವಾದರೂ ಪ್ರಸ್ತಾಪಿಸದ ಕವಿಗಳೇ ಇಲ್ಲ ಎನ್ನಬಹುದು. ಜಿನಭಕ್ತಿ-ಹರಭಕ್ತಿ-ಹರಿಭಕ್ತಿಗಳ ಅಮೃತ ಸಿಂಚನವು ಕನ್ನಡ ಸಾಹಿತ್ಯ ತೋಟದಲ್ಲಿ ತರತರದ ಸವಿಸೋನೆಯನ್ನು ತಂದಿವೆ. ಹೂಮಳೆಗರೆದಿವೆ.

ಜೈನಕವಿಗಳಿಗಂತೂ ಜಿನತೀರ್ಥಂಕರನ ಜನ್ಮಾಭಿಷೇಕ, ಪಟ್ಟಾಭಿಷೇಕ ಮತ್ತು ಮಹಾನಿರ್ವಾಣ ಕಾಲಗಳಲ್ಲಿ, ಇಂದ್ರನು ದಿವ್ಯದಿಂದ ಪರಿವಾರ ಸಮೇತನಾಗಿ ಇಳಿದು ಬಂದು ಓಲೈಸುವುದೂ, ಗೀತನರ್ತನಾದಿಗಳಿಂದ ಸೇವಿಸುವುದೂ ಅನುಲ್ಲಂಘನೀಯ ಕಾವ್ಯನಿಯಮವೇ ಆಗಿಹೋಗಿತ್ತು. ಹರಿಯಾಗಲಿ ಹರನಾಗಲಿ ಪರಮಜಿನನಿಗೆ ಸಂಗೀತ ಪ್ರೇಮದಲ್ಲಿ ಎಳ್ಳಷ್ಟೂ ಕಡಿಮೆಯಲ್ಲವೆಂಬುದನ್ನು ಬ್ರಾಹ್ಮಣ ಮತ್ತು ವೀರಶೈವ ಕವಿಗಳು ತೋರಿಸಿಕೊಟ್ಟಿದ್ದಾರೆ. ಕನ್ನಡ ಕವಿಗಳು ಸಂಗೀತ ಶಾಸ್ತ್ರದಲ್ಲಿ ಪಡೆದಿದ್ದ ಪಾಂಡಿತ್ಯವೂ, ವಿವರಜ್ಞಾನವೂ ಅಚ್ಚರಿಯನ್ನುಂಟುವಂತಹದು. ಕೆಲವರಂತೂ ಪ್ರಸಿದ್ಧ ಶಾಸ್ತ್ರಗ್ರಂಥಗಳಿಂದ ಸಂಸ್ಕೃತಶ್ಲೋಕಗಳನ್ನೇ ಉದ್ಧರಿಸಿಕೊಂಡಿದ್ದಾರೆ. ಅವರ ಸಂಗೀತೋಕ್ತಿಗಳ ಉಲ್ಲೇಖ ಮಾತ್ರದಿಂದಲೇ ಕನ್ನಡನಾಡಿನಲ್ಲಿ ಸಂಗೀತದ ಇತಿಹಾಸವನ್ನು, ಸಂಗೀತದ ಸಾಧನೆ, ಅದು ಸಾಧಿಸಿದ ಮಹತ್ತು, ಬೃಹತ್ತುಗಳನ್ನು ಗುರುತಿಸಬಹುದು.

## ಕನ್ನಡನಾಡಿನಲ್ಲಿ ಸಂಗೀತ ವೃತ್ತಿಯಾಗಿ ಮತ್ತು ಪ್ರವೃತ್ತಿಯಾಗಿ

ಕನ್ನಡನಾಡಿನಲ್ಲಿ ಸಂಗೀತವನ್ನು ವೃತ್ತಿಯಾಗಿಯೂ, ಕಲಾವಿಲಾಸಕ್ಕಾಗಿಯೂ ಅಭ್ಯಾಸಮಾಡಲಾಗುತ್ತಿತ್ತು. ವೃತ್ತಿವಂತ ಅವನದ್ಧಾದಿ ವಾದ್ಯಕಾರರಿಗೆ ವಿದ್ಯಾವಂತರೆಂಬ ವೃತ್ತಿನಾಮವು ಕನ್ನಡದೇಶದಲ್ಲಿ ಬಳಕೆಯಲ್ಲಿತ್ತೆಂದು ಸಾರಂಗದೇವನೂ ಅವನ ಭಾಷ್ಯಕಾರನಾದ ಕನ್ನಡಿಗ ಕಲ್ಲಿನಾಥನೂ ಹೇಳುತ್ತಾರೆ. ಪುರಂದರದಾಸರೂ ಇದೇ ಅರ್ಥದಲ್ಲಿ ಶ್ರೀಕೃಷ್ಣನ ಆಸ್ಥಾನದ ವಾದಕ ಎಂಬರ್ಥದಲ್ಲಿ 'ಬಿಜಾವಂತರಾವು' ಎಂದು ಸೂಳಾದಿಯೊಂದರಲ್ಲಿ ಹೇಳಿಕೊಂಡಿದ್ದಾರೆ. ಸಂಗೀತಗಾರರನಿಗೆ 'ವಿದ್ವಾಂಸ' ಎಂದು ದಕ್ಷಿಣ ದೇಶದಲ್ಲೆಲ್ಲ

ಪ್ರಚಾರವಾಗಿರುವ ವೃತ್ತಿಬಿರುದು, ಕನ್ನಡನಾಡಿನಲ್ಲಿ ಹದಿನೇಳನೆಯ ಶತಮಾನಕ್ಕಿಂತ ಮೊದಲೇ ಹುಟ್ಟಿದಾಗಿ ಕಂಡು ಬರುತ್ತದೆ. 'ವಿದ್ವಾಮಸ' ಎಂಬ ಪದವನ್ನು ಗೋವಿಂದ ವೈದ್ಯನು (ಕ್ರಿ.ಶ.೧೬೫೦) ಮೊಟ್ಟಮೊದಲಬಾರಿಗೆ ಉಪಯೋಗಿಸಿದ್ದಾನೆ.

ಸ್ತ್ರೀಪುರುಷರಿಬ್ಬರೂ ಸಂಗೀತವನ್ನು ಹವ್ಯಾಸವಾಗಿಯೂ ವೃತ್ತಿಯಾಗಿಯೂ ಆಶ್ರಯಿಸುತ್ತಿದ್ದ ಹೆಂಗಸರ ಸಂಖ್ಯೆಯೇ ಇದರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಸಂಗೀತಗಾರರಿಗಾಗಿಯೇ ನಿರ್ದಿಷ್ಟ ಬೀದಿಗಳೂ, ಬಡಾವಣೆಗಳು ಕನ್ನಡನಾಡಿನ ನಗರಗಳಲ್ಲಿ ಇರುತ್ತಿದ್ದವೆಂದು ಪೊನ್ನ, ನೇಮಿಚಂದ್ರ, ಅಗ್ಗಳ, ಗೋವಿಂದ ವೈದ್ಯ ಮೊದಲಾದವರು ಹೇಳಿದ್ದಾರೆ.

ಸಂಗೀತ ಕಚೇರಿಗಳಿಗಾಗಿ ಪ್ರತ್ಯೇಕವಾಗಿ ಸಂಗೀತ ಶಾಲೆಗಳೇ ನಿರ್ಮಿತವಾಗಿದ್ದವೆಂದು, ರನ್ನ, ಅಗ್ಗಳ, ಕಮಲಭವ, ಸೋಮರಾಜದೇವ ಮತ್ತು ರತ್ನಾಕರವರ್ಣಿಗಳಿಂದ ತಿಳಿದುಬರುತ್ತದೆ. ಕರ್ನಾಟಕದಲ್ಲಿ ಬಹುಹಿಂದಿನ ಕಾಲದಿಂದಲೂ ಸಂಗೀತ ಕಚೇರಿಗಳಿಗೆ 'ಕೇಳಿಕೆ' ಎಂಬ ಹೆಸರೇ ರೂಢಿಯಲ್ಲಿತ್ತೆಂದು 'ಕಮಲಭವನೇ' ಮೊದಲಾದ ಕವಿಗಳ ಉಕ್ತಿಯಿಂದ ಕಂಡುಬರುತ್ತದೆ.

ಹಾಡುಗಾರಿಕೆಯಲ್ಲಿ ಒಬ್ಬರೇ ಹಾಡಿರುವ ಹಾಡು 'ಏಕಲ'ವೆಂದೂ, ಇಬ್ಬರೂ ಕೂಡಿ ಹಾಡುವ ಹಾಡು 'ಯಮಲ'ವೆಂದೂ, ಅನೇಕರು ಗುಂಪಾಗಿ ಸೇರಿ ಹಾಡುವುದು 'ವೃಂದ' ಎಂಬ ಮೂರು ಗಾನಪದ್ಧತಿಗಳನ್ನು ನಮ್ಮ ಕನ್ನಡದ ಕವಿಗಳಾದ ನಾಗಚಂದ್ರ, ಪಂಪ, ಪೊನ್ನ, ಅಗ್ಗಳ, ಜನ್ನ ಮುಂತಾದವರು ಉಲ್ಲೇಖಿಸಿದ್ದಾರೆ. ಹಾಡುಗಾರಿಕೆಗೆ 'ದಂಡಿಗೆ'ಯೆಂಬ ವೀಣಾವಾದ್ಯ ಪ್ರಭೇದ ಅಥವಾ ಕೊಳಲಿನ ಪಕ್ಕವಾದ ಕಂಡುಬರುತ್ತದೆ. ತಂತಿವಾದ್ಯ, ಗಾಳಿವಾದ್ಯ, ಚರ್ಮವಾದ್ಯ ಮುಂತಾದ ವಾದ್ಯ ಮೇಳಗಳು ಕನ್ನಡಕಾವ್ಯಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತವೆ.

'ಮೇಳ'ವೆಂಬ ಹೆಸರು ಪಂಪನಕಾಲದಿಂದಲೇ ಕಂಡುಬರುತ್ತದೆ. ವಾದ್ಯವೃಂದಗಳ ವ್ಯವಸ್ಥೆಗೆ 'ಕುತಪ'ವೆಂಬ ಹೆಸರು. ಮೇಳದ ನಾಯಕನಿಗೆ 'ನಯಕಾರ'ನೆಂದೂ, ಸಂಗೀತಕೃತಿಗಳ ಧಾತು-ಮಾತುಗಳನ್ನು ರಚಿಸುವ ವಾಗ್ಗೇಯಕಾರನಿಗೆ 'ಬಯಕಾರ'ನೆಂದೂ ಹೆಸರಿದ್ದುದು 'ರತ್ನಾಕರ ವರ್ಣಿಯಿಂದ ತಿಳಿದುಬರುತ್ತದೆ. ವಾದ್ಯ ಸಮೂಹಕ್ಕೆ 'ಗೋಷ್ಠಿ' ಎಂದೂ ಹಾಡುಗಾರಿಕೆಗೆ ಆಧಾರಶ್ರುತಿಯಾಗಿ 'ಕೊಳಲ' ವಾದ್ಯವನ್ನು ಉಪಯೋಗಿಸುತ್ತಿದ್ದರೆಂದೂ ನಮ್ಮ ಕನ್ನಡದ ಕವಿಗಳಾದ ಪಂಪ, ಜನ್ನ, ನಾಗಚಂದ್ರ ಮುಂತಾದವರು ತಮ್ಮ ಕಾವ್ಯದಲ್ಲಿ ವರ್ಣಿಸಿದ್ದಾರೆ.

ತಂಬೂರಿಯ ಉಪಯೋಗವು ಶ್ರುತಿಗಾಗಿ ನಮ್ಮ ಸಂಗೀತದಲ್ಲಿ ತಲೆದೋರಿದ್ದು ಸುಮಾರು ೧೫-೧೬ನೆಯ ಶತಮಾನಗಳಿಂದೀಚೆಗೆ ಮಾತ್ರ. ಇದಕ್ಕೆ ಮುಂಚೆ ಷಡ್ವ-ಪಂಚಮಿ ಭಾವಗಳನ್ನು ಮಾತ್ರ ಸ್ಫುರಿಸುವ ತಂಬೂರಿಯನ್ನು ಆಧಾರಶ್ರುತಿಗಾಗಿ ಬಳಸಲು ತಆತ್ವಿಕ ಹಾಗೂ ತಾಂತ್ರಿಕ ತೊಡರುಗಳಿದ್ದರಿಂದ ಆಧಾರ ಶ್ರುತಿಗಾಗಿ ಉಚ್ಚ ಮತ್ತು ತೀಕ್ಷ್ಣ ಸ್ವರವಿರುವ ಕೊಳಲನ್ನೇ ಆಧಾರಶ್ರುತಿಯನ್ನಾಗಿ ಬಳಸಲಾಗುತ್ತಿತ್ತು. ಹೀಗೆಯೇ ಆಧಾರಶ್ರುತಿಯಾಗಿ ತುಂಬುರುವೀಣೆಯನ್ನು ಉಪಯೋಗಿಸಲಾಗುತ್ತಿತ್ತೆಂದು ಪಾಲ್ಕುರಿಕೆ ಸೋಮ ಮತ್ತು ರತ್ನಾಕರವರ್ಣಿ ತಿಳಿಸಿದ್ದರೆ, 'ತಂಬೂರಿ' ಆಧಾರಶ್ರುತಿಯಾಗಿತ್ತೆಂದು ಗೋವಿಂದ ವೈದ್ಯ, ಶ್ರೀಪಾದರಾಯ ಮತ್ತು ಪುರಂದರದಾಸಾದಿಗಳು ಉಲ್ಲೇಖಿಸಿದ್ದಾರೆ.

ಕನ್ನಡಕಾವ್ಯಗಳಿಂದ ತಿಳಿಯಬಹುದಾದ ಬಹುಮುಖ್ಯವಾದ ಮತ್ತೊಂದು ಸಂಗತಿ ಎಂದರೆ ಆಧಾರಶ್ರುತಿಗಾಗಿ ಬಳಸುತ್ತಿದ್ದ ಸ್ವರ. ಪಂಚಮವೇ ಎಲ್ಲ ಸಂಗೀತ ಸಂದರ್ಭಗಳಲ್ಲಿಯೂ ಆಧಾರಶ್ರುತಿಯಾಗಿ ಬಳಕೆಯಾಗುತ್ತಿತ್ತು. ಏಕಲಾದಿ ಗಾಯನ ಸಂದರ್ಭಗಳಲ್ಲಿಯೂ, ಮೇಳ, ಸಂಪ್ರದಾಯಗಳಲ್ಲಿಯೂ ಪಂಚಮವು ಆಧಾರಸ್ವರವಾಗಿತ್ತೆಂದು ಅಗ್ಗಳ, ಸೋಮರಾಜಾದಿ ಕವಿಗಳು ವರ್ಣಿಸಿದ್ದಾರೆ. ಇದು ನಮ್ಮ ಸಂಗೀತ ಶಾಸ್ತ್ರ ಚರಿತ್ರೆಯ ಮೇಲೆ ಸ್ವಾರಸ್ಯವಾದ ಬೆಳಕು ಬೀರುತ್ತದೆ. ಕನ್ನಡ ಸಾಹಿತ್ಯದಲ್ಲಿ ಹೀಗೆ ಸಂಗೀತದ ಉಲ್ಲೇಖವು ಪಂಪನ ಆದಿಪುರಾಣದಿಂದ ಹಿಡಿದು ಬಹುತೇಕ ಎಲ್ಲ ಮುಖ್ಯ ಕಾವ್ಯಗಳಲ್ಲೂ ಬಂದಿದೆ. ಇವುಗಳ ಅಧ್ಯಯನದಿಂದ 'ಸಂಗೀತ ಕಲೆಯು ನಡೆದು ಬಂದ

ದಾರಿ, ವಾದ್ಯಗಳ ಬೆಳವಣಿಗೆ ಅವುಗಳ ವಾದನ ಶೈಲಿ, ರಾಗಗಳ ಚರಿತ್ರೆ ಮುಂತಾದ ಇತಿಹಾಸದ ಮೈಲಿಗಲ್ಲುಗಳನ್ನು ಗುರುತಿಸಲು ತುಂಬಾ ಸಹಾಯವಾಗುತ್ತದೆ.

ಕೆಲವು ಕವಿಗಳು ಪ್ರಾಸಂಗಿಕವಾಗಿ ಸಂಗೀತ ಹಾಗೂ ವಾದ್ಯಗಳ ವರ್ಣನೆ ಮಾಡಿದ್ದರೆ, ಮತ್ತೆ ಕೆಲವರು ಸಂಗೀತದ ವರ್ಣನೆಗೆಂದೇ ಸಂಧಿಗಳನ್ನು ಮೀಸಲಾಗಿಟ್ಟಿದ್ದಾರೆ. ಅಲ್ಲಿಯ ವಿಸ್ತಾರವಾದ ವರ್ಣನೆಯಿಂದ ವಾದ್ಯಗಳನ್ನು ಅವರು ಹಿಡಿಯುತ್ತದ್ದ ರೀತಿ, ನುಡಿಸುತ್ತಿದ್ದ ವೈಖರಿ ಕಣ್ಣಿಗೆ ಕಟ್ಟುತ್ತದೆ. ವಾದ್ಯಗಳ ನಾದ ಕವಿ ತುಂಬುತ್ತದೆ. ಹಾಡುಗಾರಿಕೆ ಇಂಪಾಗಿ ಕಿವಿಮುಟ್ಟುತ್ತದೆ. ನಮ್ಮ ಕನ್ನಡದ ಕವಿಗಳಿಗಿದ್ದ ಸಂಗೀತ ಜ್ಞಾನ ಅಚ್ಚರಿ ಹುಟ್ಟಿಸುತ್ತದೆ.

* * *

## ಅಧ್ಯಾಯ ೨ - 'ಸುಮಗಸಂಗೀತ'

ಸಂಗೀತ ಮತ್ತು ಸಾಹಿತ್ಯದ ಅನುಪಮ ದಾಂಪತ್ಯ ಜೋಡಿಯಾದ ಈ ಗಾಯನ ಪ್ರಕಾರ ಕನ್ನಡನಾಡಿನಲ್ಲಿ ಯಾವ ದಿನ ಭಾವಗೀತೆ ತನ್ನ ಸಂಪೂರ್ಣತೆಯಿಂದ ಅನಾವರಣಗೊಂಡಿತೋ ಅಂದೇ, ಆ ಹೊತ್ತಿನಲ್ಲೇ, ಆ ಅಮೃತಗಳಿಗೆಯಲ್ಲೇ ಕಾವ್ಯದ ದನಿಯಾಗಿ ಹುಟ್ಟಿಕೊಂಡಿತು. ಕವಿಯ ಎದೆಮಿಡಿತವನ್ನು ನಾದದ ಮೂಲಕ ಪ್ರಕಾಶಪಡಿಸಲು ದನಿ ತೆರೆಯಿತು. ಕವಿ ತನ್ನ ಎದೆಯಾಳದಲ್ಲಿ ತಾನೇ ಹಾಡಿಕೊಂಡು ಸಂವೇನೆಯೇ ಭಾವಗೀತೆಯಾಯಿತು. ಶಾಸ್ತ್ರೀಯ ಸಂಗೀತ ಶಿಷ್ಟ ಸಂಗೀತವನ್ನು ಹೊತ್ತು ತಂದರೆ, ಸುಗಮಸಂಗೀತ ಸಾಹಿತ್ಯವನ್ನು ತಲೆಯ ಮೇಲಿಟ್ಟು ಮೆರೆಸಿಕೊಂಡು ಬಂದಿತು. ಕವಿತೆಯ ಅರ್ಥವನ್ನು ತನ್ನ ನಿರೂಪಣೆಯಿಂದ ವ್ಯಾಖ್ಯಾನಿಸಿ ಅದರ ಅರ್ಥವನ್ನು ವಿಸ್ತರಿಸುತ್ತಾ ಬಂದಿತು. ಕವಿತಾ ಸಂಗೀತವೇ 'ಸುಗಮಸಂಗೀತ'ವೆಂಬ ಅರ್ಥಪೂರ್ಣ ಹೆಸರನ್ನು ಪಡೆಯಿತು. ಸಂಗೀತದ ಸ್ವರಗಳ ಬಣ್ಣಗಳಲ್ಲಿ ಕಾವ್ಯದ ಚಿತ್ರವನ್ನು ಯಥಾವತ್ತಾಗಿ, ಸುಂದರವಾಗಿ, ಅರ್ಥಪೂರ್ಣವಾಗಿ ಬಿಡಿಸುವುದನ್ನೇ ಸಂಕಲ್ಪಿಸಿಕೊಂಡು ಬಂದು ಕಾವ್ಯವನ್ನು ಬಳಸಿತು ಮತ್ತುಬೆಳೆಸಿತು. ಸಂಗೀತದ ಮೂಲಕ ಸಾಹಿತ್ಯದ ಎದೆಮಿಡಿತವನ್ನು ಹಿಡಿದು ತೋರಿಸುವ ಈ ಗಾಯನ ಪ್ರಕಾರದಲ್ಲಿ ಸಂಗೀತಕ್ಕಾಗಿ ಸಾಹಿತ್ಯ ಸೃಷ್ಟಿಯಾಗದೆ, ಸಾಹಿತ್ಯಕ್ಕಾಗಿ ಸಂಗೀತ ಸಂಯೋಜನೆಯಾಯಿತು.

ಸುಗಮಸಂಗೀತ ಕವಿಯ ಕವನವನ್ನು ತನ್ನ ಸ್ವರಸಾಮರ್ಥ್ಯದಿಂದ ಪುನರ್‌ಸೃಷ್ಟಿಮಾಡಿ ಕವಿ ಮನೋಭೂಮಿಕೆಯಲ್ಲಿ ಹುಟ್ಟಿಕೊಂಡ ಭಾವನೆಗಳನ್ನು, ವಿಚಾರಗಳನ್ನು ಜನಸಾಮಾನ್ಯರಿಗೆ ಸುಗಮವಾಗಿ, ಸುಲಭವಾಗಿ ತಲಪಿಸುವ ಮಾಧ್ಯಮವಾಯಿತು. ಅರಿಸ್ಟಾಟಲ್ ಹೇಳಿದಂತೆ ಭಾಷೆ ತಾನು ನೀಡಲಾಗದ ಅನುಭವಗಳನ್ನು ಅದು ಸಂಗೀತದ ಸಾಹಚರ್ಯ ಪಡೆದುಕೊಂಡಾಗ, ಪರಿಣಾಮಕಾರಿಯಾಗಿ ಹೇಳಿತು. ಏಕೆಂದರೆ ಎಲ್ಲಾ ಕಾಲದಲ್ಲೂ ಎಲ್ಲ ದೇಶದಲ್ಲೂ ಅಕ್ಷರಸ್ಥರ ಸಂಖ್ಯೆ ಕಡಿಮೆಯಿರುತ್ತದೆ. ಅಕ್ಷರಸ್ಥರಾದವರಲ್ಲೂ ಸಾಹಿತ್ಯಕೃತಿಯನ್ನು ಅಧ್ಯಯನ ಮಾಡಬಲ್ಲ, ಅರ್ಥಮಾಡಿಕೊಳ್ಳಬಲ್ಲ, ಸಾಮರ್ಥ್ಯ ಇರುವ ಜನರ ಸಂಖ್ಯೆ ಇನ್ನೂ ಕಡಿಮೆಯಿರುತ್ತದೆ. ಜೊತೆಗೆ ಸಂಗೀತ ಕಲೆ ಮನಸ್ಸನ್ನು ಆಕರ್ಷಿಸುವಷ್ಟು ಸುಲಭವಾಗಿ ಮತ್ತಾವ ಕಲೆಯೂ ಆಕರ್ಷಿಸಲಾರದು. ಮಾತು ಅಥವಾ ಸಾಹಿತ್ಯವಲ್ಲದ ಅನ್ಯಕಲಾಮಾಧ್ಯಮಗಳು 'ಭಾವ'ಗಳನ್ನು ಮಾತಿಗಿಂತಲೂ ಚೆನ್ನಾಗಿ ಅಥವಾ ತೀಕ್ಷ್ಣವಾಗಿ ತೋರಿಸಿಕೊಡಬಲ್ಲವಾದರೂ ಭಾವಕ್ಕೆ ಕಾರಣವಾದ ಮಾನಸಿಕ ವಿಚಾರ ಸರಣಿಯನ್ನು ಅವು ತೋರಿಸಿಕೊಡಲಾರವು. ಮಾತಿಲ್ಲದ ಗೀತವಾದ್ಯಗಳು, ವೀಣೆ, ಪಿಟೀಲು, ಕೊಳಲು, ಮೃದಂಗ ಇತ್ಯಾದಿಗಳು ಕಂಪು ಹೊರಡಿಸಬಲ್ಲ ನಾದತರಂಗಗಳಿಂದ ನಮ್ಮಲ್ಲಿ ದುಃಖ, ಹಿಗ್ಗು, ಕುಗ್ಗು, ಉಕ್ಕು, ಸೊಕ್ಕು ಮೊದಲಾದ ಭಾವಗಳನ್ನು ಇತರರಲ್ಲಿ ಚೆನ್ನಾಗಿ ಪ್ರೇರೇಪಿಸಬಲ್ಲವು. ಹಾಗೆಯೇ ತಾವೂ ಪ್ರಕಟಿಸಬಲ್ಲವು. ಆದರೆ ಅವು ಏತರಿಂದಾದವು; ಯಾವ ಕಾರಣದಿಂದ ಆ ದುಃಖವೋ, ಸುಖವೋ ಉಂಟಾಯಿತು, ಅದರಿಂದ ಮನಸ್ಸಿಗೆ ಏನೆಲ್ಲ ತೋಚುತ್ತದೆ ಎಂಬ ವಿವರಗಳನ್ನೆಲ್ಲಾ ತಿಳಿಸಬೇಕಾದ ಸಮಯದಲ್ಲಿ ಅವುಗಳ ಪಾತ್ರ ಸಲ್ಲದು. ಭಾವಗಳಿಗೆ ಸೂಕ್ಷ್ಮತೆ, ವಿಸ್ತಾರ, ತೀವ್ರತೆ, ಮಂದತೆ ಮೊದಲಾದ ಗುಣಗಳನ್ನು

ಅವು ಒದಗಿಸಬಲ್ಲುವಾದರೂ ಭಾಷೆ ಮಾಡಬಲ್ಲ ಕಾರಣ ನಿವೇದನೆಯ ಶಕ್ತಿ, ಅವಕ್ಕಿಲ್ಲ. ಅಂದರೆ ನಮ್ಮ ಮನಸ್ಸಿನಲ್ಲಿ ನಡೆಯುತ್ತಿರುವ ವಿಚಾರ ಕಲ್ಪನೆಗಳನ್ನು ಇನ್ನೊಬ್ಬರಿಗೆ ಹೆಚ್ಚು ಕಡಿಮೆ ಅದೇ ರೀತಿಯಲ್ಲಿ ವಿವರಿಸುವ ಕೆಲಸ ಭಾಷೆಯಿಂದ ಮಾತ್ರ ಸಾಧ್ಯ. ಆದರೆ ಸಂಗೀತ, ನೃತ್ಯಾದಿ ಕಲೆಗಳು ನಮ್ಮಲ್ಲಿ ಉಂಟುಮಾಡುವ ಪ್ರೇರಣೆಗಳು ಭಾವಗಳಿಗೆ ಸಂಬಂಧಿಸಿದವು. ಗೀತ, ನೃತ್ಯಗಳಂತಹ ಮಾಧ್ಯಮಗಳ ಪರಿಣಾಮ, ಭಾಷೆಗಿಂತಲೂ ಹೆಚ್ಚಿನ ಪ್ರಚೋದನೆಗೆ ಕಾರಣವಾಗಬಲ್ಲದು ಸಾಹಿತ್ಯಕ್ಕೆ ಸಂಗೀತ ಪ್ರವೇಶ ಮಾಡಿದ್ದು ಈ ಕಾರಣಕ್ಕೆ ಇರಬಹುದು. ಉತ್ಕೃಷ್ಟವಾದ ಸಾಹಿತ್ಯ, ವಾದ್ಯ ಸಂಗೀತದೊಂದಿಗೆ ಕೂಡಿದ ಹಾಡುಗಾರಿಕೆ, ಹಾಡುವವರ ಹಾಗೂ ಕೇಳಿದವರ ಮನಃಸ್ಥಿತಿಯನ್ನು ಸಮಸ್ಥಿತಿಗೆ ತರುತ್ತವೆ. ಇದೇ ಕಾರಣಗಳಿಂದ ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ಕಾವ್ಯವನ್ನು ಹಾಡುವ ಪದ್ಧತಿ ರೂಢಿಗೆ ಬಂತು ಗಾಯಕರು ಕವಿಯ ಮನೋಭೂಮಿಕೆಯಲ್ಲಿ ಸಿದ್ಧವಾದ ಭಾವಗಳನ್ನು ಅದರೊಂದಿನ ವಿಚಾರಗಳನ್ನು ಜನ ಸಾಮಾನ್ಯರಿಗೆ ತಲುಪಿಸುವ ಸಾಂಸ್ಕೃತಿಕ ರಾಯಭಾರಿಗಳಾದರು. ಸಂಗೀತದಲ್ಲಿ ಅಭಿರುಚಿಯಿರುವವರಿಗೆ ಸಾಹಿತ್ಯದಲ್ಲಿಯೂ ಅಭಿರುಚಿಯುಂಟಾಯಿತು. ಸಾಹಿತ್ಯಾಭಿರುಚಿಯಿಂದ, ಜ್ಞಾನದ, ತಿಳುವಳಿಕೆಯ ಗುಣಮಟ್ಟವೂ ಔನ್ನತ್ಯಕ್ಕೇರಿತು. ಕವಿತಾಸಂಗೀತ ಸುಗಮವಾಗಿ ಸಹೃದಯರ ಹೃದಯವನ್ನು ಪ್ರವೇಶ ಮಾಡುತ್ತ, ಹೊಸ ದಿಗಂತವನ್ನು ತೆರಯಿತು.

ಸುಗಮಸಂಗೀತ, ಕವಿಯ ಸೃಷ್ಟಿಗೂ, ಸಹೃದಯರ ರಸಾನುಭವಕ್ಕೂ ನಡುವೆ ಸೇತುವೆಯಂತೆ, ಕಾಲುವೆಯಂತೆ ಶಕ್ತಿವಾಹ ತಂತಿಯಂತೆ ಪ್ರಾರಂಭವಾಯಿತು. ಸಂಗೀತದ ರೆಕ್ಕೆಯನ್ನೇರಿ ಹಾರುವ ಭಾವಗೀತೆ ಸಹೃದಯರಿಗೆ ನೇರವಾದ ರಸಾನುಭವವನ್ನು ನೀಡಲು ಸಮರ್ಥವಾಯಿತು. ಅಲ್ಲದೆ ಅವರ ರಸಗ್ರಹಣ ಶಕ್ತಿಯನ್ನು ಉನ್ನತಸ್ತರಕ್ಕೇರಿಸಿತು. ಭಾಷೆಯ ಮರ್ಯಾದೆಯನ್ನು ಕಾಯುವ ಹೊಣೆಗಾರಿಕೆ ಹೊತ್ತುಕೊಂಡಂತೆ ಸಂಗೀತದ ಗೌರವವನ್ನು ಉಳಿಸುವ ಜವಾಬ್ದಾರಿಯನ್ನೂ ಪಡೆದುಕೊಂಡಿತು. ಸಂಗೀತದ ಶಾಸ್ತ್ರೀಯತೆಗೆ ಪ್ರಾಮುಖ್ಯತೆ ನೀಡದೆ, ಅದರ ಮಾಧುರ್ಯ ಸೌಂದರ್ಯವನ್ನು ಉಳಿಸಿಕೊಂಡು, ಅದರ ಅನಿಯಂತ್ರಿತ ಗೀತಗುಣದ ಅಭಿವ್ಯಕ್ತಿಯಲ್ಲಿ, ಕಾವ್ಯದ ಜೀವಸತ್ವವನ್ನು ಪದ, ಲಯ, ಯತಿ, ವಿನ್ಯಾಸವನ್ನು ಎತ್ತಿಹಿಡಿಯಿತು. ನಾದದಿಂದ ಕಾವ್ಯೋದ್ದಿಪನಗೊಳಿಸುತ್ತಾ ಮಿಂಚಿನವೇಗದಲ್ಲಿ ಸಹೃದಯನನ್ನು ಭಾವಪರವಶನನ್ನಾಗಿ ಮಾಡಿತು.

ಸಂಗೀತದ ಬಗೆಗೆ ಹಿಂದು ಮುಂದು ತಿಳಿಯದ, ಆ ಶಾಸ್ತ್ರದ ಪರಿಚಯವೂ, ಜ್ಞಾನವೂ ಇರದ ಸಾಮಾನ್ಯ ಕೇಳುಗನಲ್ಲೂ ನಾದದ ರಿಂಗಣವನ್ನುಂಟುಮಾಡಿ ಬಾಯಿ ಚಪ್ಪರಿಸುವಂತೆ, ಗೀತೆಗೆ ಆತ್ಮೀಯನಾಗುವಂತೆ, ತನ್ಮಯನಾಗಿ ತನ್ನ ತಾನು ಮರೆಯುವಂತೆ ಮಾಡಿತು. ಭಾವಗೀತೆ ಹೇಗೆ ಕ್ಷಣವೊಂದರ ಸ್ಮಾರಕವಾಗಿ ಹುಟ್ಟಿತೋ ಹಾಗೆಯೇ ಅದು ಸುಗಮಸಂಗೀತದಲ್ಲಿ ಅಮೂರ್ತವಾಗಿ ಅನಾವರಣಗೊಂಡಿತು. ಹಾಗೆ ಅನಾವರಣಗೊಳ್ಳುವಾಗ ಭಾವಗೀತೆಯಲ್ಲಿ ನಾದದ ಜೀವಸಂಚಾರ ಮೂಡಿಸಿ ಚಿರಂತನವಾದ ಸಂದೇಶವನ್ನೂ ಮತ್ತು ಮಾಧುರ್ಯವನ್ನೂ ಕೇಳುಗನಿಗೆ ತಿಳಿಸಿ ಉಳಿಸಿಹೋಯಿತು. ಪುಸ್ತಕದೊಳಗಿನ ಭಾವಗೀತೆ ಪರಿಮಳವಿಲ್ಲದ ಅರೆಬಿರಿದ ಮೊಗ್ಗಾದರೆ, ಸುಗಮಸಂಗೀತ ತನ್ನ ಗಂಧರ್ವ ಸ್ಪರ್ಶದಿಂದ ಅದನ್ನು ಪೂರ್ಣವಾಗಿ ಅರಳಿದ ಪರಿಮಳ ಕುಸುಮವನ್ನಾಗಿ ಮಾಡಿತು. ನಮ್ಮ ಸುಗಮಸಂಗೀತಕಾರರು ಘಮಘಮಿಸುವ ಹೂಗಳನ್ನು ಮನೆಮನೆಗೆ ಕೊಂಡೊಯ್ದು ಹಂಚುವ ಹೂವಾಡಗಿತ್ತಿಯರಂತೆ ಹೆಸರಾಂತ ಕವಿಗಳ ಕವಿತೆಗಳನ್ನು ಜನಮನಕ್ಕೆ ತಲಪಿಸಿದರು.

ಜನರ ಮನೆಮನದ ಅಂಗಳದಾಟಿ, ಕೋಣೆಯಲ್ಲಿ ಕುಳಿತ. ಸುಗಮಸಂಗೀತ ಶಬ್ದಗಳಿಗೆ ಹೊಸ ಅರ್ಥವನ್ನು ನೀಡುತ್ತಾ, ಕಾವ್ಯಾರ್ಥವನ್ನು ವಿಸ್ತರಿಸಿತು. ಭಾಷೆಯನ್ನೂ ವಿಸ್ತರಿಸಿತು. ಬದುಕಿನ ಅನುಭವಗಳೂ ವಿಸ್ತಾರವಾದವು. ಅಭಿರುಚಿಗಳು ಮತ್ತಷ್ಟು ಹಿಗ್ಗಿದವು. ಕವಿತಾಶರೀರಿಯಾದ ಸುಗಮಸಂಗೀತ ಅರ್ಥದ ಅಕ್ಷಯಪಾತ್ರೆಯಾಯ್ತು. ಗೋಚರಕ್ಕಿಂತ ಹೆಚ್ಚು ಅಗೋಚರವಾಗಿ ಕೇಳುತ್ತಾ ಹೋದಷ್ಟೂ ನವೀನವಾಯ್ತು. ಎಷ್ಟು ಹೇಳಿದರೂ, ಇನ್ನಷ್ಟು ಚಿಮ್ಮುವ ಅರ್ಥ-ಭಾವ ಕಾರಂಜಿಗಳ ಸಮ್ಮಿಶ್ರಣವಾಯ್ತು. ಕೇಳುಗರ ಬದುಕು, ನಂಬಿಕೆ, ಅನುಭವಗಳಿಗನುಸಾರವಾಗಿ ಅವರೊಳಗೆ ಇರುವ ಅಮೂರ್ತ ಭಾವ ಭಾವನೆಗಳಿಗ ಅದು ಆಕೃತಿಗಳನ್ನು ನೀಡುತ್ತಾ, ಅವರ ಮನಸ್ಸಿನ ಭಾವ - ನಾದ - ಅನುಭವಗಳಿಗನುಸಾರವಾಗಿ ಅರ್ಥವಾಗತೊಡಗಿತ್ತು.

‘ಸುಗಮಸಂಗೀತ’ವೆಂಬ ಗಾಯನಪ್ರಕಾರ ತನ್ನ ಹೆಸರಿನ ಅನ್ವಯಾರ್ಥದಂತೆ ಸುಗಮವೂ ಅಲ್ಲದ, ಸುಲಭವೂ ಅಲ್ಲದ ಗಾಯನ ಪ್ರಕಾರವಾಯಿತು. ಕೇವಲ ಸಂಗೀತದ ದೃಷ್ಟಿಯಿಂದ ನೋಡಿದಾಗ ಅದು ಶಾಸ್ತ್ರವೂ ಕಲೆಯೂ ಎರಡೂ ಬೆರೆತ ವಿಶಿಷ್ಟ ಪ್ರಕಾರವಾಯಿತು. ಶಾಸ್ತ್ರದ ನಿಯಮ ನಿಷ್ಠುರತೆ ಮತ್ತು ಕಲೆಯ ಸ್ವಾತಂತ್ರ್ಯ ಎರಡನ್ನೂ ಒಳಗೊಂಡಿತು. ಶಬ್ದಕ್ಕಿರುವ ಅರ್ಥ ಮತ್ತು ನಾದ ಶಕ್ತಿಗಳನ್ನು ಬಳಸಿಕೊಂಡು ‘ಗೀತದ ಭಾವಪ್ರತಿಮೆ’ಯನ್ನು ಮೂಡಿಸುವ ಸುಗಮಸಂಗೀತ ನಾದದ ಲಯಬದ್ಧವಾದ ಸ್ವರಗಳನ್ನು ಮಾಧ್ಯಮವನ್ನಾಗಿ ಬಳಸಿಕೊಂಡಿತು. ಕವಿತೆಯಲ್ಲಿ ಅರ್ಥ ಮುಖ್ಯವಾದಂತೆ, ಹಾಡಿನಲ್ಲಿ ಭಾವಮುಖ್ಯ ಎಂಬುದನ್ನು ನಿರೂಪಿಸಿತು.

ಸುಗಮಸಂಗೀತದಲ್ಲಿ ಶಿಷ್ಟ ಸಂಗೀತದ ಶಾಸ್ತ್ರದ ಸಿದ್ಧಾಂತಕ್ಕಿಂತ ಅದರ ಕಲಾನೈಪುಣ್ಯತೆಯೇ, ಅದರ ನಿರೂಪಣೆಯೇ ಜೀವಾಳವಾಗಿ ಜನಪ್ರಿಯವಾಯಿತು. ಭಾವಭಾಷೆಗಳ ಸುಂದರ ಸಂಲಗ್ನ ಭಾವಗೀತದಲ್ಲಿ ಮೂಡಿದಂತೆ, ಸಾಹಿತ್ಯ ಸಂಗೀತಗಳ ಸಹಜ ಮೈತ್ರಿ ಸುಗಮಸಂಗೀತದಲ್ಲಿ ಮೂಡಿತು. ಭಾವಗೀತೆಯ ಭಾವದ ಕಾವು-ನಾದದ ಮೋದ ಇವುಗಳ ಹದವಾದ ಅಳತೆವರಿತ ಸಮ್ಮಿಶ್ರಣದಿಂದ ಸುಗಮಸಂಗೀತಪಕ್ವವಾಗಿ ರೂಪುಗೊಂಡಿತು. ಸಂಗೀತದ ಮಾಧುರ್ಯವನ್ನು ಸಾಹಿತ್ಯವೂ, ಸಾಹಿತ್ಯದ ಸ್ಥಾಯಿತ್ವವನ್ನು ಸಂಗೀತವೂ ಹೊತ್ತುಕೊಂಡು ಅವಿನಾ ಸಂಬಂಧಿಗಳಾದವು.

ಸಾಮಾನ್ಯ ಕೇಳುಗರನ್ನೂ ಆಕರ್ಷಿಸುತ್ತ, ಸಮುದಾಯಗಳನ್ನು ಒಗ್ಗೂಡಿಸಿದ ಸುಗಮಸಂಗೀತ ‘ಜಾತಿ, ಧರ್ಮ, ರಾಜಕೀಯ, ಬೇಧಭಿತ್ತಿಗಳನ್ನು ದಾಟಿ ನೇರವಾಗಿ ಮನವನ್ನು ಮುಟ್ಟಿತು. ಜನರನ್ನು ತಟ್ಟಿ ಎಚ್ಚರಿಸಿತು. ಆತ್ಮೀಯವಾಯಿತು.

ಸುಗಮಸಂಗೀತ ಮಾಡಿದ ದೊಡ್ಡ ಕೆಲಸವೆಂದರೆ ಪುಸ್ತಕಗಳಲ್ಲಿ ಬೆಚ್ಚಗೆ ಪವಡಿಸಿದ್ದ ಕಾವ್ಯವನ್ನು ಕರ್ನಾಟಕದ ಉದ್ದಗಲ ಗಾಳಿಯಲ್ಲಿ ತೇಲಿಬಿಟ್ಟು ರಸಿಕರ ಹೃದಯವನ್ನು ತಟ್ಟಿದ್ದು. ಇದರಿಂದ ಕವಿ-ಗಾಯಕ-ಶ್ರೋತೃಗಳ ನಡುವೆ ಮಧುರವಾದ ತ್ರಿವಳಿ ಬಾಂಧವ್ಯ ಬೆಸುಗೆಗೊಂಡಿತು. ಇದು ಇಪ್ಪತ್ತನೆಯ ಶತಮಾನದ ಕೊನೆಯ ದೊಡ್ಡ ಸಾಧನೆಯಾಯ್ತು.

**ಸುಗಮಸಂಗೀತದ ಮೂಲ**

ಸುಗಮಸಂಗೀತವೆಂಬ ಗಾಯನ ಶೈಲಿಗೆ ಅದರ ಹೆಸರು ಮಾತ್ರ ಹೊಸದು. ಆದರೆ ಅದರ ಅಂತರಾತ್ಮ ಸಾವಿರಾರು ವರ್ಷಗಳಷ್ಟು ಹಿಂದಿನದ್ದು. ಈ ಗಾಯನ ಪದ್ಧತಿಗೆ ಹಲವಾರು ಮೂಲ ಆಕರಗಳು ನಮಗೆ ದೊರೆಯುತ್ತವೆ. ಸುಗಮಸಂಗೀತದ ಮೂಲಕ ಆಕರಗಳನ್ನು ಹೀಗೆ ಸ್ಥೂಲವಾಗಿ ಹೆಸರಿಸಬಹುದು.

೧. ಶಾಸ್ತ್ರೀಯ ಸಂಗೀತ
೨. ಜನಪದ ಗೀತೆಗಳು
೩. ಕಾವ್ಯಗಾಯನ ಕಲೆ
೪. ವಚನ ಮತ್ತು ದಾಸರ ಪದಗಳು
೫. ಹೊಸಗನ್ನಡದ ಭಾಷೆ
೬. ಪಾಶ್ಚಾತ್ಯ ಚಿಂತನೆಯ ವಸ್ತು ವಿಚಾರ
೭. ರಂಗಗೀತೆಗಳು
೮. ಮರಾಠಿ ಗೋಡಗಾಣ ಗೀತೆಗಳು

-ಇವೆಲ್ಲವುಗಳಿಂದ ಬೇರೆಯೇ ಆದ ಸುಗಮಸಂಗೀತ ತನ್ನದೇ ಆದ ಒಂದು ವಿಶಿಷ್ಟ ಹದದಲ್ಲಿ, ವಿನೂತನವಾದ ರುಚಿಯಲ್ಲಿ ಇವೆಲ್ಲವನ್ನೂ ಮೈಗೂಡಿಸಿಕೊಂಡ ಸ್ವತಂತ್ರವಾದ ಹಾಡುಗಾರಿಕೆಯಾಗಿದೆ.

**ಶಾಸ್ತ್ರೀಯ ಸಂಗೀತ ಮತ್ತು ಸುಗಮಸಂಗೀತ**

ಸುಗಮಸಂಗೀತ ಕವಿಯ ಕವನವನ್ನು ತನ್ನ ಸ್ವರ ಸಾಮರ್ಥ್ಯದಿಂದ ಪುನರ್ ಸೃಷ್ಟಿಮಾಡಿ, ಕವಿಯ ಮನೋಭೂಮಿಕೆಯಲ್ಲಿ ಹುಟ್ಟಿಕೊಂಡ ಭಾವನೆಗಳನ್ನು, ವಿಚಾರಗಳನ್ನು ಜನಸಾಮಾನ್ಯರಿಗೆ ಸುಗಮವಾಗಿ, ಸುಲಭವಾಗಿ ತಲುಪಿಸುವ ಮಾಧ್ಯಮವಾಗಿದೆ. ಕವಿತೆಯ ಶಬ್ದಗಳಿಗೆ ಹೊಸ ಅರ್ಥವನ್ನು ನೀಡುತ್ತಾ, ಕಾವ್ಯಾರ್ಥವನ್ನು ವಿಸ್ತರವಾಗಿ ಹಿಗ್ಗಿಸುವುದೇ, ಅದರ ವೈಶಿಷ್ಟ್ಯವಾಗಿದೆ. ಇದು ಒಂದು ರೀತಿಯ ಕವಿತಾ ಸಂಗೀತವಾಗಿದೆ. ಇದು ಹುಟ್ಟುವುದೇ ಕವಿತೆಯ ದರ್ಶನದಿಂದ. ಈ ಪ್ರಕಾರದ ಸಂಗೀತದ ಸುಗಮತ್ವ ಎರಡು ಬಗೆಯಲ್ಲಿ ದಟರಕುತ್ತದೆ. ಮೊದಲನೆಯದು ರಸಿಕರು ಇದನ್ನು ಸುಗಮವಾಗಿ ಆಸ್ವಾದಿಸಬಹುದು ಎಂದು ಎರಡನೇಯದು ಕಲಿಯುವ ಅಭ್ಯಾಸಿಗಳಿಗೆ ಇದು ಶಾಸ್ತ್ರೀಯ ಸಂಗೀತಕ್ಕಿಂತ ಸುಲಭ ಮಾರ್ಗ ಎಂದು. ಸುಲಭವೆಂದು ತೋರುವುದುದಾದರೂ 'ಸುಗಮಸಂಗೀತ' ಸುಲಭವಾಗಿ ಕೈಗೆ ಎಟುಕುವ ಗಾಯನ ಪ್ರಕಾರವಂತೂ ಅಲ್ಲ. ಶಾಸ್ತ್ರೀಯ ಸಂಗೀತದ ಆರಂಭಿಕ ಹಂತಗಳ ಕಠಿಣ ಪಾಠವಿಲ್ಲದಿದ್ದರೂ ಶಾಸ್ತ್ರೀಯವನ್ನು ಬಿಟ್ಟು ಸುಗಮಸಂಗೀತ ಅರಮನೆ ಬೆರಗು ಮೂಡಿಸುತ್ತ ನಿಂತಿದೆ. ಒಂದೊಂದು ಸಲದ ಗಾಯನದಲ್ಲೂ, ಅದು ಬಣ್ಣಬಣ್ಣದ ಮೆರುಗನ್ನು ತರಬಲ್ಲದು. ತರತರದ ಚಿತ್ತಾರವನ್ನು ಮೂಡಿಸಬಲ್ಲದು. ಕೋಗಿಲೆಯ ಇನಿಗಾನದಲ್ಲೂ ಹೊಸರುಚಿಯನ್ನು ಹುಟ್ಟು ಹಾಕಬಲ್ಲದು. ಬಿಳಿಯ ಬಣ್ಣದಿಂದ ಏಳು ಬಣ್ಣಗಳು ಹುಟ್ಟಿದಂತೆ, ಏಳು ಸ್ವರದಿಂದ ಸಂಗೀತ ಹುಟ್ಟಿದಂತೆ, ಶಾಸ್ತ್ರೀಯ ಸಂಗೀತದ ಸ್ವರಗಳಲ್ಲಿ ವಿನೂತನವಾದ ರಾಗ ತರಂಗಗಳನ್ನು ಸೃಷ್ಟಿಮಾಡುವ ಸುಗಮಸಂಗೀತ, ಶಾಸ್ತ್ರೀಯ ಸಂಗೀತದ ನೆಲದಿಂದ ಸ್ವರ ಕಲ್ಪನೆಯ ಬಾನಿನಲ್ಲಿ ಹಕ್ಕಿಯಂತೆ ಸ್ವಚ್ಛಂದದಿಂದ ಹಾರಿ ನಲಿಯುತ್ತ ಹೊಸಲೋಕವನ್ನು ತೆರೆದಿದೆ.

ಶಾಸ್ತ್ರೀಯ ಸಂಗೀತ ಮತ್ತು ಸುಗಮಸಂಗೀತ ಎರಡನ್ನೂ ಹೋಲಿಸಿ ನೋಡಿದರೆ, ಸುಗಮಸಂಗೀತಕ್ಕೆ ರಾಗದ ಮಿತಿಯಾಗಲಿ, ಚೌಕಟ್ಟಾಗಲಿ ಇಲ್ಲ. ಆದರೆ ಶಾಸ್ತ್ರೀಯ ಸಂಗೀತದಲ್ಲಿ ರಾಗಗಳಿಗೆ ಒಂದು ಚೌಕಟ್ಟು, ಮತ್ತು ಒಂದು ರೀತಿಯ, ನಿರ್ಬಂಧಕ್ಕೊಳಪಟ್ಟ ಪರಿಮಿತಿ ಇರುತ್ತದೆ. ಸುಗಮಸಂಗೀತಕ್ಕೆ ಬೇಕಾಗಿರುವುದು ಶಬ್ದ ಚಿತ್ರಗಳ ಅಭಿವ್ಯಕ್ತಿ, ಅಂದರೆ ಕವಿತೆಯ ಶಾಬ್ದಿಕ ಅಭಿವ್ಯಕ್ತಿಗೆ ಹೊಂದುವಂತಹ ರಾಗಸಂಯೋಜನೆ. ಅದು ಒಂದೇ ರಾಗವಾದರೂ ಆಗಿರಬಹುದು. ಅಥವಾ ಯಾವ ರಾಗಕ್ಕೂ ಹೊಂದದಂತಹ ಹೊಸ ಸ್ವರ ಸಂಚಾರಗಳೂ ಆಗಿರಬಹುದು. ಅದು ಕವಿತೆಯನ್ನು ನಾದದ ಮೂಲಕ ಅರ್ಥೈಸುತ್ತದೆ. ಕಿವಿಗೆ ಕೇಳುವ ಅರ್ಥವತ್ತಾದ ಶಬ್ದಗಳು ಸ್ವರಗಳು ಉಪಯೋಗಿಸಿಕೊಂಡ ವಾದ್ಯಗಳಿಂದ ಚಿತ್ರವತ್ತಾಗಿ ಕಣ್ಣಿಗೆ ಕಾಣಿಸುತ್ತದೆ. ತಾವು ಕಂಡ ಅನುಭವಗಳನ್ನು ನಾದದ ಮೂಲಕ ಕಟ್ಟಿಕೊಡುತ್ತವೆ. ಶಾಸ್ತ್ರೀಯ ಸಂಗೀತದಲ್ಲಿ ರಾಗ ವಿಜೃಂಭಿಸಿದರೆ, ಸುಗಮ ಸಂಗೀತದಲ್ಲಿ ಕವಿತೆ ಗರಿಬಿಚ್ಚಿ ಕುಣಿಯುತ್ತದೆ. ವಾದ್ಯ ಸಂಯೋಜನೆ, ಕವಿತೆಗೆ ಅರ್ಥಪೂರ್ಣವಾದ ಆವರಣವನ್ನು ಸೃಷ್ಟಿಮಾಡಿಕೊಡುತ್ತದೆ.

ಶಾಸ್ತ್ರೀಯ ಸಂಗೀತ ಮತ್ತು ಸುಗಮಸಂಗೀತ ಎರಡನ್ನೂ ತಾಳೆ ಮಾಡಿ ನೋಡಿದರೆ ಕೆಲವು ಅಂಶಗಳು ಮನದಟ್ಟಾಗುತ್ತವೆ. ಶಾಸ್ತ್ರೀಯ ಸಂಗೀತ ಒಂದು ರಾಗವನ್ನು ಅಥವಾ ಒಂದು ಕೃತಿಯನ್ನು ಸರ್ವಾಂಗ ಸುಂದರವಾಗಿ ಪ್ರಸ್ತುತಪಡಿಸಲು ಒಂದು ಗಂಟೆ ತೆಗೆದುಕೊಂಡರೆ, ಅಥವಾ ಅದಕ್ಕೂ ಹೆಚ್ಚು ಸಮಯ ತೆಗೆದುಕೊಂಡರೆ. ಸುಗಮಸಂಗೀತವಾದರೋ, ಐದು ಅಥವಾ ಆರು ನಿಮಿಷಗಳಲ್ಲೇ ತನ್ನ ಕವಿತೆಯನ್ನು ಅತ್ಯಂತ ಸುಂದರವಾಗಿ ನಿರೂಪಿಸುತ್ತದೆ. ಅಂದರೆ ಶಾಸ್ತ್ರೀಯ ಸಂಗೀತ ಒಂದು ಗಂಟೆಯ ಅವಧಿಯಲ್ಲಿ ಕೇಳುಗರನ್ನು ಮೆಚ್ಚಿಸುವಂತಹುದನ್ನು ಸುಗಮಸಂಗೀತ ಕೇವಲ ಕೆಲವೇ ನಿಮಿಷಗಳಲ್ಲಿ ಮಾಡುತ್ತದೆ. ಸುಗಮಸಂಗೀತದ ಅತಿಶಯತೆ ಇರುವುದೇ ಈ ಪ್ರಸ್ತುತಿಯಲ್ಲಿ. ಆದರೆ ಕಾಲದ ಕಲ್ಪನೆಗಿಂತ ಭಾವದ ಕಲ್ಪನೆಯೇ ಸುಗಮಸಂಗೀತದ ಜೀವಾಳವಾಗಿದೆ. ಭಾವದ ದರ ಪದರಗಳನ್ನು ಬಿಡಿಸಿ ತೋರಿಸುವ ಸುಗಮಸಂಗೀತಕ್ಕೆ ಶಾಸ್ತ್ರೀಯ ಸಂಗೀತದ ಜ್ಞಾನವಿದ್ದೇ ಇರಬೇಕಾಗುತ್ತದೆ. ಒಮ್ಮೆ ಹೇಳಿದ್ದನ್ನು ಮತ್ತೊಮ್ಮೆ ನೆನಪಿನಲ್ಲಿಟ್ಟು ಹಾಡಲು, ಮತ್ತು ಗೀತೆಯ ಭಾವಪ್ರಕಾಶನನದ ವ್ಯತ್ಯಾಸಗಳನ್ನು ಗುರುತಿಸಿಕೊಳ್ಳಲು ನಿಖರವಾದ

ಸ್ವರಜ್ಞಾನವಿರಬೇಕಾಗುತ್ತದೆ. ನಿರೂಪಣೆಯ ಸಂಗತಿಗಳ ಸ್ತರಗಳನ್ನು ರೂಪಿಸಿಕೊಳ್ಳಲು ಮತ್ತು ಪ್ರಸ್ತುತಿಗೊಳಿಸಲು ಶಾಸ್ತ್ರೀಯ ಸಂಗೀತದ ಸ್ವರಗಳ ತಿಳಿವಳಿಕೆ ಬೇಕಾಗುತ್ತದೆ. ಹೀಗಾಗಿ ಶಾಸ್ತ್ರೀಯ ಸಂಗೀತದಷ್ಟೇ ಸಮಪ್ರಮಾಣದ ಸ್ವತಂತ್ರ ಸ್ಥಾಯಿತ್ವವುಳ್ಳ, ಗತಿಗಮನವುಳ್ಳ, ವ್ಯಕ್ತಿತ್ವವಿರುವ ಜೀವಂತಕಲೆ, ಸುಗಮಸಂಗೀತವಾಗಿದೆ. ಇದು ಶುದ್ಧ ಶಾಸ್ತ್ರೀಯ ಸಂಗೀತವಲ್ಲದಿದ್ದರೂ, ಶಾಸ್ತ್ರೀಯದಂತೆ 'ಸ್ವರ'ಭಾರ ಕಸರತ್ತು, ತಾಳದಗತ್ತು, ಲೆಕ್ಕಾಚಾರವಿರದೆ, ಕಲಾತ್ಮಕವೂ, ವೈಜ್ಞಾನಿಕವೂ, ಸರಳವೂ ಆದ ಸಂಗೀತವಾಗಿದೆ. ಸಮರ್ಥ ಗಾಯನ ಪ್ರಸ್ತುತಿಯ ನೈಪುಣ್ಯದಿಂದ ಅಪೂರ್ವವೂ ಅನನ್ಯವೂ ಆದ ಅನುಭವವನ್ನು ಕೊಡುತ್ತದೆ. ಮನುಷ್ಯ ಬುದ್ಧಿಜೀವಿ ಹಾಗೂ ಭಾವಜೀವಿಯಾದುದರಿಂದ ಭಾಷೆ ಮತ್ತು ಗೀತೆ ಎರಡೂ ಅವನ ಮನದಿಂಗಿತವನ್ನು ವ್ಯಕ್ತಪಡಿಸುವ ಮಾಧ್ಯಮವಾಗಿದೆ. ನಾದ ಸಿದ್ಧಿಗೆ ಸಾಹಿತ್ಯಾಂಶದ ಅವಶ್ಯಕತೆ ಇಲ್ಲದಿದ್ದರೂ, ಬುದ್ಧಿಗಮ್ಯವಾದ ಅಭಿವ್ಯಕ್ತಿಗೆ ಸಂಗೀತದ ರಸಸ್ಪರ್ಶ ಅವಶ್ಯಕವಾಗಿದೆ. ಹೀಗಾಗಿ ಸಂಗೀತ, ಸಾಹಿತ್ಯ ಅಂದಿನಿಂದ ಇಂದಿನವರೆವಿಗೆ ಪರಸ್ಪರ ಕೈ ಕೈ ಹಿಡಿದುಕೊಂಡು ಇತಿಹಾಸದ ಹಾದಿಯಲ್ಲಿ ನಡೆದುಬರುತ್ತಿದೆ. ಕಆಲದ ಅಂದಂದಿನ ಅಭಿರುಚಿಗೆ ತಕ್ಕಂತೆ, ತುರ್ತಿಗೆ ಅನುಕೂಲವಾಗುವಂತೆ ಹೊರಳುತ್ತಾ, ಉರುಳುತ್ತಾ, ಬದಲಾವಣೆಯನ್ನು ಪಡೆಯುತ್ತಾ ಬಂದಿದೆ. ಇದು ಅನಿವಾರ್ಯವೂ, ಅವಶ್ಯವೂ ಹೌದು. ಬದಲಾವಣೆಯೇ ಜೀವಂತಿಕೆಯ ಲಕ್ಷಣವಾಗಿದೆ.

**ಜನಪದ ಗೀತೆಗಳು ಮತ್ತು ಸುಗಮಸಂಗೀತ**

'ಜನವಾಣಿ ಬೇರು; ಕವಿವಾಣಿ ಹೂವು'- ಎಂಬ ಉಕ್ತಿಯಂತೆ ಜನಪದ ಸಾಹಿತ್ಯ ಹಾಗೂ ಜನಪದ ಸಂಗೀತ, ಶಿಷ್ಟ ಸಾಹಿತ್ಯ ಹಾಗೂ ಶಿಷ್ಟ-ಸಂಗೀತಕ್ಕೆ ಮೂಲವಾಗಿದೆ. ಈ ಬೇರುಗಳ ಮುಲವನ್ನು ಹುಡುಕಿಕೊಂಡು ಹೋದರೆ ಅದು ಸೃಷ್ಟಿಯಲ್ಲಿ ಮಾನವನ ಉಗಮದವರೆಗೂ ಹೋಗುತ್ತದೆ. ಸೃಜನಶೀಲನಾದ ಮಾನವ ಅನಾದಿಕಾಲದಿಂದಲೂ ತನ್ನ ದುಡಿಮೆಯ ಶ್ರಮನಿವಾರಣೆಗಾಗಿ, ಮನರಂಜನೆಗಾಗಿ, ದೈವದೇವರುಗಳ ಆರಾಧನೆಗಾಗಿ ಸಂಗೀತ ರೂಪದ ಸಾಹಿತ್ಯವನ್ನು ಕುಣಿತವನ್ನು ಬೆಳೆಸಿಕೊಂಡು ಬಂದಿದ್ದಾನೆ. ಅದು ಅವನ ನೋವು ನಲಿವುಗಳ ಅಭಿವ್ಯಕ್ತಿ ಮಾಧ್ಯಮವಾಗಿ ಬೆಳೆದದ್ದೇ ಅಲ್ಲದೆ ಅವನ ಜೀವನಾಭಿರುಚಿಯನ್ನೂ ತಿಳಿಸುತ್ತಾ ಬಂದಿದೆ. ಆದಿ ಕಾಲದಲ್ಲಿ ಇನ್ನೂ ಕವಿತ್ವವೂ, ಶಾಸ್ತ್ರವೂ ಶೈಶವದೆಶೆಯಲ್ಲಿದ್ದಾಗಲೇ, ಹಳ್ಳಿಯ ಹೊಲದ ಕಣದಲ್ಲಿ, ಹಬ್ಬ ಹುಣ್ಣಿಮೆಗಳಲ್ಲಿ, ಸುಖದುಃಖದ ಸಂದರ್ಭಗಳಲ್ಲಿ ಮಾನವ ತನ್ನ ಭಾವನೆಗಳನ್ನು ಹಾಡಿನ ಮೂಲಕ ಕುಣಿತದ ಮೂಲಕ ವ್ಯಕ್ತಪಡಿಸಿದ್ದಾನೆ. ಹೆಂಗಸರು, ಹೊಲದಲ್ಲಿ ಕೆಲಸ ಮಾಡುವ ರೈತರು ತಮ್ಮ ಕೆಲಸದ ಬಳಲಿಕೆಯನ್ನು ಮರೆಸಿಕೊಳ್ಳಲು, ಕುಟ್ಟುವಾಗ, ಬೀಸುವಾಗ, ಉಳುವಾಗ, ತೊಟ್ಟಿಲು ತೂಗುವಾಗ, ಮದುವೆಯ ಸಂಭ್ರಮದಲ್ಲಿ ನಲಿಯುವಾಗ, ಸಾವಿಗಾಗಿ ಅಳುವಾಗ, ಭಾರವನ್ನೆತ್ತುವಾಗ, ಬಂಡಿಯನ್ನು ಹೊಡೆಯುವಾಗ, ದೋಣಿಯನ್ನು ನಡೆಸುವಾಗ, ಕಾಳಗದ ಸಾಧನೆಗಳನ್ನು ಮಾಡುವಾಗ ಹಾಡುಗಳನ್ನು ಹೇಳುತ್ತಿದ್ದರು. ಹೇಳುತ್ತಿದ್ದರು. ಹೇಳುತ್ತಾ ಮುಂದುವರೆಸಿ ತಮ್ಮ ಅನುಭವವನ್ನೂ ಅದರೊಂದಿಗೆ ಕಟ್ಟುತ್ತಿದ್ದರು. ಹೀಗೆ ತಮ್ಮಕಾಯಕದೊಂದಿಗೆ ಹಾಡುತ್ತಿದ್ದ ಹೆಂಗಸರ ಮತ್ತು ಗಂಡಸರ ಉಸಿರಿಗನುಗುಣವಾದ ಲಯ ರಾಗ ಮತ್ತು ಛಂದಸ್ಸುಗಳು ತಾವಾಗಿಯೇ ಹುಟ್ಟಿಕೊಂಡವು. ಅವೇ ಜನರ ಮನೋಭಾವವನ್ನು ಬಿಂಬಿಸುತ್ತಾ, ಜನರಿಂದಲೇ ಸೃಷ್ಟಿಯಾಗಿ ಜನಪದ ಗೀತೆಗಳಾದವು.

ಹೀಗೆ ಜೀವನಾನುಭವದಿಂದ, ಜೀವನದ ಚಿತ್ರಣವನ್ನೇ ಹಾಡುತ್ತಾ ಪ್ರಾರಂಭವಾದ ಜನಪದ ಗೀತೆಗಳು ಸಾಹಿತ್ಯ -ಸಂಗೀತ ಎರಡೂ ದೃಷ್ಟಿಯಿಂದ ಸಹಜವೂ ಸುಂದರವೂ ಆದ ಗೀತೆಗಳಾದವು. ಸಾಹಿತ್ಯ ಮತ್ತು ಸಂಗೀತವೆರಡೂ ಪೂರಕವಾಗಿ ಒಂದಾಗಿ ಮೂಡಿ ಬೇರ್ಪಡದ ಅವಿನಾ ಸಂಬಂಧಿಗಳಾದವು. ಕವಿವರ್ಯ ರವೀಂದ್ರನಾಥ ಠಾಕೂರರು ಹೇಳುವಂತೆ 'ಜಾನಪದ ಗೀತೆಗಳು ಜನತೆಯ ಮನಸ್ಸು ಮತ್ತು ಹೃದಯವನ್ನು ತಿಳಿಯಲು ನಮಗೆ ಸಹಕಾರಿಯಾಗಿವೆ. ಬೇರೆ ಬೇರೆ ಪ್ರದೇಶದ ಹಳ್ಳಿಯ ಹಾಡುಗಳಲ್ಲಿ ಕಂಡುಬರುವ ಸಮಾನಗುಣಗಳಿಂದ ಭಾರತದಾದ್ಯಂತ ಮಾನವ ಸ್ವಭಾವದ ವೈವಿಧ್ಯತೆಯಲ್ಲಿರುವ ಏಕತೆ ಕಾಣುತ್ತದೆ. ಎಲ್ಲ ದೇಶಗಳ ಲೋಕಗೀತೆಗಳನ್ನು ಸಂಗ್ರಹಿಸಿ, ಒಂದನ್ನೊಂದು ಹೋಲಿಸಿ ನೋಡಿದರೆ, ಎಲ್ಲಾ ಮಾನವ ಕುಲಕ್ಕೂ ಸಾಮಾನ್ಯವಾದ ಮನಸ್ಸು ಹೃದಯಗಳು ಅವುಗಳಲ್ಲಿ ಅಡಗಿರುವುದು ಕಂಡುಬರುತ್ತದೆ.

ಯಾವ ದೇಶದಲ್ಲಿಯೇ ಆಗಲಿ, ಯಾವ ಜನಾಂಗದಲ್ಲಿಯೇ ಆಗಲಿ ಸುತ್ತಮುತ್ತಲಿನ ವಾತಾವರಣದ ಮೇಲಿಂದ ಮಾನವನ ಸಂಸ್ಕಾರಗಳು ಮಾತ್ರ ಬದಲಾಗುತ್ತವೆಯಲ್ಲದೆ, ಅವರ ಮನೋಭಾವನೆಗಳು ಎಲ್ಲಿದ್ದರೂ ಒಂದೇ ಆಗಿರುತ್ತದೆ. ಗಂಡಹೆಂಡಿರ ಪ್ರೇಮ, ತಾಯಿ ಮಕ್ಕಳ ವಾತ್ಸಲ್ಯ, ಪ್ರೀತಿ, ಪ್ರೇಮ, ವಿರಹ, ಮಿಲನ, ಆಸೆ, ನಿರಾಸೆ ಮೊದಲಾದ ಜೀವನ ಚಿತ್ರಗಳು ಎಲ್ಲ ಕಡೆಗೂ ಒಂದೇ ಆಗಿದೆ, ಅವುಗಳ ಬಣ್ಣಗಳು ಬೇರೆ ಕಂಡರೂ ರೂಪಗಳು ಒಂದೇ ಆಗಿರುತ್ತವೆ. ಇಂತಹ ಜೀವನ ಚಿತ್ರಗಳನ್ನು ಅಲಿಖಿತರೂಪದಲ್ಲಿ ಇತಿಹಾಸವಿಲ್ಲದಿದ್ದರೂ, ಪರಂಪರೆಯ ಮುದ್ರೆಯನೊತ್ತಿಕೊಂಡೇ ಬಾಯಿಂದ ಕಿವಿಗೆ, ಕಿವಿಯಿಂದ ಬಾಯಿಗೆ, ಅವಿರತವಾಗಿ ಸಾವಿರಾರು ವರುಷಗಳಿಂದ ಹೊತ್ತು ತಂದಿರುವ ಜನಪದ ಗೀತೆಗಳು ಶಿಷ್ಟ ಸಾಹಿತ್ಯದ ಜೊತೆ ಜೊತೆ ಗುಪ್ತಗಾಮಿನಿಯಾಗಿ ಹರಿದುಬಂದಿದೆ. ಜಾನಪದೀಯತೆ ಮತ್ತು ನಾಗರೀಕತೆಗಳು ಪರಸ್ಪರ ವಿರೋಧಿಗಳಂತೆ ತೋರಿದರೂ, ಆಂತರ್ಯದಲ್ಲಿ ಒಂದನ್ನೊಂದು ಆಧರಿಸಿಕೊಂಡು, ನಿರಂತರ ಕೊಳ್ಕೊಡುಗೆಗಳ ಮುಖಾಂತರ ಒಡನಾಡಿಗಳಾಗಿವೆ. ಜನಪದ ಸಾಹಿತ್ಯ ಶಿಷ್ಟ ಸಾಹಿತ್ಯದ ಮೂಲಕ ತಿರಸ್ಕೃತಗೊಂಡರೂ, ಅದರ ಪ್ರವಹನೆಗೆ ಸ್ಫೂರ್ತಿ ಪ್ರೇರಣೆಗಳನ್ನಿತ್ತು ಜನಸಮ್ಮುಖವಾಗಿ ಪ್ರವಹಿಸುವ ದಾರಿಯನ್ನು ತೋರಿಸುತ್ತಲೇ ಬಂದಿದೆ. ಶಿಷ್ಟ ಸಾಹಿತ್ಯದ ಮೇಲೆ ಪ್ರಭಾವವನ್ನು ಬೀರುತ್ತಲೇ ಬಂದಿದೆ. ಪಂಪನಿಂದ ಹಿಡಿದು ವಚನಕಾರರು, ದಾಸಪಂಥದವರು, ಹೊಸಗನ್ನಡದ ಕವಿಗಳು ಎಲ್ಲರೂ ಜನಪದ ಸಾಹಿತ್ಯ ಸಂಗೀತದಿಂದ ಪ್ರಭಾವಿತರಾಗಿ ಕಾವ್ಯ ರಚನೆ ಮಾಡಿದ್ದಾರೆ. ಪೂರ್ವದ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಮೊದಲಾದ ಕನ್ನಡ ಕಾವ್ಯ ಘಟ್ಟಗಳಲ್ಲಿ ಅನೇಕ ಏಳು ಬೀಳುಗಳನ್ನು ಅನುಭವಿಸಿದರೂ ಜಾನಪದ ತನ್ನ ಅಸ್ತಿತ್ವವನ್ನು ಉಳಿಸಿಕೊಂಡೇ ಜೀವಂತವಾಗಿದೆ.

ಸುಗಮಸಂಗೀತದ ಪ್ರಮುಖ ಗುಣವೇ ಸಾಹಿತ್ಯವನ್ನವಲಂಬಿಸಿದ ಸಂಗೀತ. ಇದನ್ನು ಅದು ಜನಪದ ಗೀತೆಗಳಿಂದಲೇ ಪ್ರಭಾವಿತಗೊಂಡು ಸ್ವೀಕರಿಸಿರುವುದು ಕಂಡು ಬರುತ್ತದೆ. ಆದರೆ ಜನಪದ ಗೀತೆಗಳಲ್ಲಿ ಕಂಡುಬರದ ಬೌದ್ಧಿಕ ವಿಚಾರಗಳು, ಆಲೋಚನೆಗಳು ಸುಗಮಸಂಗೀತದ ವಸ್ತುಗಳಾಗಿವೆ. ವಸ್ತು ವೈವಿಧ್ಯತೆಗಳಲ್ಲಿ ಎತ್ತರ, ಬಿತ್ತರಗಳನ್ನು ಪಡೆದಿದೆ.

ನಾಗರಿಕ ಸಾಹಿತ್ಯಕ್ಕೆ ಇರುವ ಹಾಗೆ ಜನಪದ ಸಾಹಿತ್ಯಕ್ಕೂ ಅದರದೇ ಆದ ಒಂದು ಪರಂಪರೆ ಇದೆ. ಆದರೆ ನಾಗರಿಕ ಸಾಹಿತ್ಯಕ್ಕೆ ಇರುವಂತೆ ಜನಪದ ಸಾಹಿತ್ಯಕ್ಕೆ ಇತಿಹಾಸವಿಲ್ಲ. ನಾಗರೀಕ ಸಾಹಿತ್ಯದಲ್ಲಿ ನಾವು ಸ್ಪಷ್ಟವಾದ ಬೆಳವಣಿಗೆಯನ್ನು ಗುರುತಿಸುವುದು ಸಾಧ್ಯವಿದೆ. ಕನ್ನಡ ಸಾಹಿತ್ಯವನ್ನೇ ತೆಗೆದುಕೊಂಡರೆ ಭಾಷೆಯ ಉಪಯೋಗ, ಕಾವ್ಯದ ನಿರ್ದಿಷ್ಟ ರೂಢಿ ಸಂಪ್ರದಾಯಗಳು, ಕಾವ್ಯಾದರ್ಶಗಳು, ಜೀವನದೃಷ್ಟಿ ಮೊದಲಾದವರುಗಳ ಆಧಾರ ಮೇಲೆ ನಿರ್ಮಾಣವಾದ ಕಾವ್ಯ ಪರಂಪರೆಯನ್ನೂ, ಅದಕ್ಕೆ ಕಾಲಕಾಲಕ್ಕೆ ಪ್ರಕಟವಾದ ಬಂಡಾಯ, ಪ್ರತಿಕ್ರಿಯೆಗಳು ಮುಂತಾದವುಗಳನ್ನೂ ಗುರುತಿಸುವುದು ಸಾಧ್ಯವಿದೆ. ಹೀಗೆ ಚಂಪೂ ಸಾಹಿತ್ಯ, ವಚನಕಾರರ ಸಾಹಿತ್ಯ, ಷಟ್ಪದಿ ಸಾಹಿತ್ಯ, ರತ್ನಾಕರವರ್ಣಿ ಮೊದಲಾದವರ ಸಾಹಿತ್ಯ, ನವೋದಯ ಸಾಹಿತ್ಯ ಮುಂತಾಗಿ ಕನ್ನಡ ಕಾವ್ಯದ ಪರಂಪರೆಯನ್ನು ಅದರ ಐತಿಹಾಸಿಕ ಬೆಳವಣಿಗೆಯ ಮೂಲಕ ಅಭ್ಯಾಸಿಸಬಹುದು. ಆದರೆ ಜನಪದ ಸಾಹಿತ್ಯಕ್ಕೆ ಇಂಥ ಬೆಳವಣಿಗೆಯ ಇತಿಹಾಸವಿಲ್ಲ. ಅದರ ಪರಂಪರೆ ಎಲ್ಲ ಕಾಲಕ್ಕೂ ಅಖಂಡವಾದ ಏಕೈಕ ಸಮಕಾಲೀನ ಪರಂಪರೆ. ಅದರಲ್ಲಿ ನಡೆದಿರಬಹುದಾದ ಬದಲಾವಣೆಗಳನ್ನೂ, ಬೆಳವಣಿಗೆಯನ್ನೂ, ತೀರ ಇತ್ತೀಚಿನದನ್ನೂ ಬಿಟ್ಟರೆ, ಗುರುತಿಸಲು ಸಾಧ್ಯವಿಲ್ಲ. ಅಂತೆಯೇ ಇಡಿಯ ಜನಪದ ಸಾಹಿತ್ಯದ ಮನೋಧರ್ಮ ಒಂದೇ ರೀತಿಯಾಗಿ ಕಾಣುತ್ತದೆ. ಇದಕ್ಕೆ ಮುಖ್ಯ ಕಾರಣ. ಜನಪದ ಸಾಹಿತ್ಯಕ್ಕೆ ಲಿಖಿತ ಪರಂಪರೆ ಇಲ್ಲದಿರುವುದು. ಇದು ಕೇವಲ ಮೌಖಿಕವಾದ ಸಾಹಿತ್ಯವಾದ್ದರಿಂದ ಹೆಚ್ಚಾಗಿ ಭಾಷೆಯ ದೃಷ್ಟಿಯಿಂದ ಒಂದು ಪದ್ಯ. ಕಾಲ ಕಾಲಕ್ಕೆ, ಆಯಾ ಕಾಲದ ಭಾಷಾರೂಢಿಗಳಿಗೆ ಅನುಗುಣವಾಗಿ ಬದಲಾಗುತ್ತಾ ಬಂದಿದೆ. ಇದರಲ್ಲಿ ಯಾವ ಪದ್ಯ ಯಾವ ಅವಧಿಯಲ್ಲಿ ರಚಿತವಾಯಿತೆಂದು ತಿಳಿಯಲು ಸಾಧ್ಯವಿಲ್ಲ. ಆದರೆ ಭಾಷೆಯ ದೃಷ್ಟಿಯಿಂದ ಪ್ರಾದೇಶಿಕ ಭಿನ್ನತೆಗಳು ಕಾಣುತ್ತವೆಯೇ ಹೊರತು, ಕಾಲಮಾನದ ಭಿನ್ನತೆಗಳು ಕಾಣುವುದಿಲ್ಲ. ಇತಿಹಾಸ ಮತ್ತು ಕಾಲ್ಪನಿಕ ಐತಿಹ್ಯಗಳನ್ನು ಕುರಿತ ಹಾಡುಗಳಿಗೂ ಸಹ ಸ್ಥೂಲವಾಗಿ ಮಾತ್ರ ಒಂದು ಕಡೆಯ ಕಾಲಮಿತಿಯನ್ನು ಹೇಳಬಹುದು. ಆದರೆ ಇಂತಹ ಹಾಡುಗಳಲ್ಲಿ ಭಾಷೆಯ ಪುರಾವೆಗಳು ಸಿಗುವುದಿಲ್ಲ. ಇದೇನೆ ಇದ್ದರೂ ಎಲ್ಲ ಕಾಲದ

ಜನಪದ ಕವಿಗಳಿಗೂ ಅವರವರ ಕಾಲಕ್ಕೆ ಹಿಂದಿನಿಂದಲೂ ಉಳಿದು ಬಂದ ಜನಪದ ಕಾವ್ಯದ ಜೀವಂತ ಪರಂಪರೆ ಲಭ್ಯವಿತ್ತು ಎಂಬುದು ತಿಳಿಯುತ್ತದೆ.

ಸುಗಮ ಸಂಗೀತದ ಗೀತೆಗಳು ಬಾಯಿಂದ ಕಿವಿಗೆ ಕಿವಿಯಿಂದ ಬಾಯಿಗೆ ಬಂದು ಜನರ ಹೃದಯಕ್ಕಿಳಿದದ್ದು ಅದರ ಆಕರ್ಷಣೆಯಿಂದ. ಅದು ಶಿಕ್ಷಿತರನ್ನೂ ಮತ್ತು ಅಶಿಕ್ಷಿತರನ್ನೂ ಏಕಕಾಲದಿಂದ ಗೆದ್ದಿತು. ಮೌಖಿಕ ರೂಪದಲ್ಲಿ ಲಭಿಸಿ ಜನಪ್ರಿಯವಾದರೂ ಲಿಖಿತರೂಪದಲ್ಲಿ ದೊರೆತು ನಾಗರೀಕ ಸಾಹಿತ್ಯದ ಅಂಗವಾಯಿತು. ಮೊದಲು ಗ್ರಂಥಸ್ಥವಾಗಿ ನಂತರ ಮೌಖಿಕ ರೂಪವನ್ನು ಪಡೆಯಿತು. ಜನಪದ ಸಂಗೀತಕ್ಕೆ ಇಲ್ಲದ ಇತಿಹಾಸ ಮತ್ತು ಕಾಲಮಾನದ ಭಿನ್ನತೆಗಳು ಸುಗಮಸಂಗೀತಕ್ಕೆ ದೊರೆತಿತು. ಶಿಷ್ಟ ಸಂಗೀತದ ಆವರಣದಲ್ಲಿಯೇ ಹುಟ್ಟಿ ಬೆಳೆದರೂ, ಶಿಷ್ಟ ಸಂಗೀತದಿಂದಾಚೆ ದಾಟಿ ಮುಂದೆ ನಿಂತು ಹೊಸ ಚೆಲುವನ್ನು ತೋರಿತು. ಸುಗಮಸಂಗೀತದಲ್ಲಿ ಸಾಹಿತ್ಯ ಗ್ರಂಥಸ್ಥವಾದ್ದರಿಂದ ಸಾಹಿತ್ಯದಲ್ಲಿ ದೋಷಗಳಾಗಲಿ, ಬದಲಾವಣೆಗಳಾಗಲಿ ಆಗಲಿಲ್ಲ. ವಿದ್ಯಾವಂತರು ಅದನ್ನು ಸೃಷ್ಟಿಮಾಡಿದ್ದರಿಂದ ಅದಕ್ಕೆ ರಾಜ ಮರ್ಯಾದೆ ದೊರೆತಿತು. ಸೂಕ್ತವಾದ ವೇದಿಕೆಗಳು ದೊರೆತವು. ಆದರೆ ಜಾನಪದ ಕವಿಗಳಂತೂ ನಿರಕ್ಷರಿಗಳೇ ಆದ್ದರಿಂದ, ಬಲ್ಲವರಿಂದ ಬರೆಯಿಸಿ ಇಡಬೇಕೆಂಬ ವಿಚಾರ ಅವರನ್ನು ಸೋಂಕಲೇ ಇಲ್ಲ. ಸ್ಪೂರ್ತಿ ತುಂಬಿದಾಗ, ಸಂತೋಷವಾದಾಗ, ಪ್ರಸಂಗಬಂದಾಗ, ತಮಗೆ ಬಂದಂತೆ ಹಾಡಿಕೊಂಡು ತೃಪ್ತಿ ಪಡೆದರು. ಕೆಲವೊಂದು ಹಾಡುಗಳು ಜನರ ಬಾಯಲ್ಲಿ ಉಳಿದು ಅನೇಕ ವೇಳೆ ಮಾರ್ಪಾಟು ಹೊಂದಿ ಬೆಳೆಯುತ್ತಾ ಬಂದವು.

ಜನಪದ ಗೀತೆಗಳಲ್ಲಿ ನಮ್ಮ ಜನತೆಯ ಮನಸ್ಸು ಸಹಜ ಸುಂದರವಾಗಿ ಚಿತ್ರಿತವಾಗಿದೆ. ಇಲ್ಲಿಯ ಭಾಷೆ ದಿನಬಳಕೆಯ ಸರಳ ನೇರವಾಗಿದ್ದು, ಕೇಳುಗರ ಮನಸ್ಸನ್ನು ಅರ್ಥಕ್ಕೆ ನೇರವಾಗಿ ಒಯ್ಯುತ್ತದೆ. ಕಾವ್ಯದ ವಸ್ತು ಕೇವಲ ಐಶ್ವರ್ಯವಂತರ ಬಾಳು ಮಾತ್ರವಲ್ಲ, ಶೃಂಗಾರ ಲೀಲೇ ಮಾತ್ರವಲ್ಲ, ಅತೀ ಸಾಮಾನ್ಯ ಜನರ ಬದುಕಿನ ಬೇನೆಗಳೂ, ಬೇಗೆಗಳೂ, ನಲುಮೆ, ನಗೆಯಾಟಗಳೂ ಕಾವ್ಯದಲ್ಲಿ ಸುಂದರವಾಗಿ ರೂಪುಗೊಳ್ಳಬಹುದು ಎಂಬುದು ಜನಪದ ಗೀತೆಗಳಲ್ಲಿ ಎದ್ದು ಕಾಣುವ ಮುಖ್ಯಾಂಶವಾಗಿದೆ. ನಮ್ಮ ಒಡನಾಡಿನ, ಬಡಜೀವನದ ವಿಷಯದಲ್ಲಿ ಮರುಕವನ್ನೂ, ಇಂಥ ಬಡತನದಲ್ಲಿ ಬೆಳೆದರೂ ನಮ್ಮ ಅಕ್ಕತಂಗಿಯರು, ತಾಯಿ, ಅಜ್ಜಿಯರು ತಮ್ಮ ಹೃದಯದಲ್ಲಿ ತುಂಬಿಕೊಂಡಿರುವ ಸೌಜನ್ಯ, ಸರಳತೆ, ಬಂಧು ಮಿತ್ರ ಪ್ರೇಮದ ಔನ್ನತ್ಯ, ಇವೆಲ್ಲಾ ಚಿತ್ರಿತವಾಗಿದೆ. ಜನಪದ ಗೀತೆಗಳ ಈ ಕೌಟುಂಬಿಕ ಒಗ್ಗಟ್ಟು, ವಿನಯದ ವ್ಯಕ್ತಿತ್ವ ಚಿತ್ರಣ, ಕನ್ನಡ ಭಾಷೆಯ ಕಸುವು ಹೊಸಗನ್ನಡದ ಕವಿತೆಗೆ ಚೈತನ್ಯ ನೀಡಿತು. ಉತ್ತರ ಕರ್ನಾಟಕ ಕವಿಗಳು (ಜಾನಪದ ಸಾಹಿತ್ಯದಿಂದ ಪ್ರಭಾವ ಪಡೆದ ಬಗ್ಗೆಯನ್ನು ಮುಂದೆ ವಿವರಿಸಲಾಗಿದೆ) ಜನಪದ ಸಾಹಿತ್ಯದಿಂದ ಪ್ರೇರಣೆ ಪಡೆದು ರಚಿಸಿದ ನವೋದಯ ಸಾಹಿತ್ಯವೇ ಸುಗಮಸಂಗೀತದ ವಸ್ತುವಾಗಿದ್ದರಿಂದ, ಜನಪದ ಗೀತೆಗಳಿಗೂ, ಸುಗಮಸಂಗೀತಕ್ಕೂ ವಸ್ತು, ಭಾಷೆಗಳಲ್ಲಿ ಕೆಲಮಟ್ಟಿಗೆ ಹೋಲಿಕೆ ಕಂಡುಬರುತ್ತದೆ. ಆದರೆ ಸಂಗೀತದ ಮಾತು ಬಂದಾಗ, ಜನಪದ ಗೀತೆಗಳು ಸುಗಮಸಂಗೀತ ಪ್ರಕಾರಗಳಿಂತಾ ತುಸು ಭಿನ್ನವಾಗಿರುತ್ತವೆ. ಆತ್ಮನಿವೇದನಾಗುಣದಲ್ಲಿ, ಸ್ವಾಂತತೆಯಲ್ಲಿ ಸುಗಮಸಂಗೀತದ ಮತ್ತು ಜನಪದ ಗೀತೆಗಳು ಏಕರೀತಿಯ ಅನುಭವವನ್ನು ನೀಡುತ್ತವೆಯಾದರೂ, ಸುಗಮಸಂಗೀತದಲ್ಲಿರುವ ಸಂಕ್ಷಿಪ್ತತೆ ಎಲ್ಲಾ ಜನಪದ ಗೀತೆಗಳಲ್ಲೂ ಕಂಡುಬರುವುದಿಲ್ಲ. ಕಥನ ಕವನಗಳನ್ನೂ, ಮಹಾಕಾವ್ಯಗಳನ್ನು ಗಂಟೆಗಟ್ಟಲೆ ದಿನಗಟ್ಟಲೆ ಹಾಡುವ ಅವರ ಉದ್ದೇಶವೂ ಮಹತ್ತರವಾದುದು. ಜನಪದ ವೃತ್ತಿಗಾಯಕರ ಪರಂಪರೆ ನಾಡಿನ ಮೂಲೆಮೂಲೆಗಳಲ್ಲಿ, ತುಂಬಿದ ಸಭೆಗಳಲ್ಲಿ, ಹಬ್ಬಹರಿದಿನಗಳಲ್ಲಿ, ವಿಶೇಷ ಸಂದರ್ಭಗಳಲ್ಲಿ ತಮ್ಮಕಾವ್ಯಗಳನ್ನು ಹಾಡಿ ಜನತೆಯಲ್ಲಿ ಸದ್ಭಾವನೆಗಳನ್ನು ಬೆಳೆಸಿತು. ತಮ್ಮ ಅರಿವಿನ ಹಾದಿಯನ್ನಾಗಿ ಮಾಡಿಕೊಂಡು ಆತ್ಮತುಷ್ಟಿಯನ್ನೂ ಪಡೆದುಕೊಂಡಿತು. ಜನಪದ ಸಂಗೀತ, ಜನಪದ ಗೀತೆಗಳು ಜನರ ಕಾಯಕದ ಕೈದೀವಿಗೆಯಾದವು. ಜೀವನದ ಅವಶ್ಯಕತೆಗಳಲ್ಲೊಂದಾಗಿತ್ತಾ, ಗಾಳಿಯಂತೆ, ನೀರಿನಂತೆ, ಅನ್ನದಂತೆ, ಬೆಳಕಿನಂತೆ, ಜನರ ಬದುಕಿಗೆ ಅಂಟಿಕೊಂಡು ಸೇರಿ ಹೋದವು. ಜೀವಕ್ಕೆ ಉಸಿರಾದವು. ಭಾವಕ್ಕೆ ಬೆಳಕಾದವು.

ಜನಪದ ಗೀತೆಗಳ ಆದ್ರತೆ, ವೈಯಕ್ತಿಕತೆ ಅಲ್ಲದೆ, ಜನಪದ ಗೀತೆಗಳ ಮುಗ್ಧತೆ, ಸ್ನಿಗ್ಧ ಸೌಂದರ್ಯಕ್ಕಿಂತಾ, ಗಂಭೀರತೆಯನ್ನು ಭಾವತೀವ್ರತೆಯನ್ನು ಸುಗಮಸಂಗೀತವು ಒಳಗೊಂಡಿತು. ಜನಪದ ಗೀತೆಗಳಲ್ಲಿ ಬದುಕಿನ ಬಗ್ಗೆ ಶ್ರದ್ಧೆ ವ್ಯಕ್ತವಾದರೆ, ಸುಗಮಸಂಗೀತದಲ್ಲಿ ಶ್ರದ್ಧೆಯನ್ನೊಳಗೊಂಡ ಕಾಳಜಿ, ಆಸ್ಥೆಗಳು ಪ್ರಕಟಗೊಂಡವು. ಜನಪದಗೀತೆ ಸರಳವಾಗಿ ತಿಳಿಸುವುದನ್ನು ಸುಗಮಸಂಗೀತ ಕಾವ್ಯದ ಧ್ವನಿಯ ಮೂಲಕ ಪ್ರಕಾಶಪಡಿಸಿತು. ಜನಪದಗೀತೆ ತನ್ನ ದೀರ್ಘಕಾವ್ಯಗಳ ಪ್ರಸ್ತುತಿಯಿಂದ ತನಗಿರುವ ಅದ್ಭುತ ಸ್ಮರಣಶಕ್ತಿಯನ್ನು ವ್ಯಕ್ತಪಡಿಸಿದರೆ ಸುಗಮಸಂಗೀತ ಅಲ್ಪಕಾಲದಲ್ಲಿ ಮಿಂಚಿನಂತೆ ಹೊಳೆದು ಎದೆಯ ಭಾರವನ್ನಿಳಿಸಿಹೋಯಿತು. ಜನಪದ ಗೀತೆಗಳಲ್ಲಿ ದೈನಂದಿನ ಬಾಳಿನ ಎಲ್ಲಾ ಅನುಭವಗಳಿಗೆ ತನ್ನನ್ನು ಒಡ್ಡಿಕೊಳ್ಳುವ, ಪ್ರವೃತ್ತಿ ಕಾಣುತ್ತದೆ. ಎಲ್ಲಿಯೂ ಅವು ಬಾಳಿಗೆ ವಿಮುಖವಾಗಿ ನಡೆಯುವುದಿಲ್ಲ. ಎಲ್ಲಿಯೂ ನಿರಾಶಾವಾದಿತನ ಕಾಣುವುದಿಲ್ಲ. ಸುಗಮಸಂಗೀತದಲ್ಲಿ ಇದಕ್ಕೆ ವಿರುದ್ಧವಾಗಿ ಬಾಳಿನ ಪ್ರಕ್ರಿಯೆಗೆ ಕ್ರಾಂತಿ, ಹೋರಾಟ, ನಿರಾಶಾವಾದಿತನ, ಏಕಾಂಗಿತನದ ಕೊರಗು ಎಲ್ಲವೂ ಕಂಡುಬರುತ್ತವೆ. ಮನಸ್ಸನ್ನು ಮೀರಿದ ಬುದ್ಧಿಯ ಕೆಚ್ಚು, ಸಾಧನೆಗಳು ಕಾಣುತ್ತ, ಹಲವು ಸಲ ಬದುಕಿಗೆ ವಿಮುಖವಾದದ್ದು ಕಾಣಸಿಗುತ್ತವೆ.

**ಜನಪದ ಗೀತೆಯಲ್ಲಿ ಛಂದಸ್ಸು**

ನಮ್ಮ ಜನಪದ ಗೀತೆಗಳು ಲಯಬದ್ಧವಾದ ಕುಣಿತ-ಹಾಡುಗಳಿಂದಲೇ ಹುಟ್ಟಿಬಂದವಾದ್ದರಿಂದ ಅವುಗಳು ವಿಶಿಷ್ಟವಾದ ಲಯಗತಿಯಲ್ಲಿಯೇ ನಿರ್ಮಿತವಾದವು. ಅಕ್ಷರಗಣವಾಗಲಿ, ಮಾತ್ರಾಗಣವಾಗಲಿ, ಯಾವುದೂ ಬೇಕಾಗದೆ, ತಮ್ಮ ಗೇಯಕ್ಕೆ ಅನುಗುಣವಾದ ಶಬ್ದದ ಇಟ್ಟಿಗೆಗಳಿಂದಲೇ ಅವು ಕಟ್ಟಲ್ಪಟ್ಟವು. ಗೇಯಗುಣಕ್ಕನುಸ್ತಾರವಾಗಿ ಅಂಶಗಣ ಛಂದಸ್ಸಿಗೆ ಅವು ಹೊಂದಿಕೆಯಾದವು. ಗೇಯತೆಯ ಶಬ್ದಕ್ಕನುಗುಣವಾಗಿ ಮೂರು ಬಗೆಯ ಶಬ್ದಗಣಗಳು ಹುಟ್ಟಿ ಅವು ಬ್ರಹ್ಮ-ವಿಷ್ಣು-ರುದ್ರಗಣಗಳಾದವು. ತ್ರಿಪದಿಯೇ ಜನಪದರ ಜೀವವಾಣಿಯು ತಾನೇ ತಾನಾಗಿ ಹರಿಯಲು ತೋಡಿಕೊಂಡ ಕಾಲುವೆಯಾಯ್ತು. ಮೂರು ಪಾದದ ಚಿಕ್ಕ ಪದ್ಯವು ಕನ್ನಡದ ಗಾಯತ್ರಿ ಎಂದೇ ಕರೆಸಿಕೊಂಡಿತು. ಕನ್ನಡದ ಮೊತ್ತಮೊದಲ ಗೇಯಕೃತಿಯ-ಛಂದೋಬಂಧವೂ ಆಯಿತು. ಚಿಕ್ಕ ಚಿಕ್ಕ ಭಾವಗಳನ್ನು ಹಸಿಗೋಡೆಯಲ್ಲಿ ಹರಳು ಬಗೆದಂತೆ ಪರಿಣಾಮಕಾರಿಯಾಗಿ ವ್ಯಕ್ತಮಾಡಲು ಇದು ಸಹಕಾರಿಯಾಯಿತು. ರಸದಶ ಸ್ಥಾನಗಳಲ್ಲಿ ಬರುವ ಬ್ರಹ್ಮಗಣ ರಾಗಾಲಾಪಕ್ಕೂ, ರಾಗರಂಜನೆಗೂ ಕಾರಣವಾಯಿತು. ಅತಿಕಟ್ಟುನಿಟ್ಟಿನ ಬಂಧವಲ್ಲದ ತ್ರಿಪದಿಯ ಲಯದಲ್ಲಿ ನಿಯತವಾದ ಎಡೆಗಳಲ್ಲಿ ಪಲ್ಲವಿಯ ರೂಪವಾಗಿ 'ಸೋ'-'ನೀ'-'ಕೋಲ' ಮೊದಲಾದ ಸ್ವರ ಸಂಯೋಜನೆಗಳು ಬಂದು ಪಲ್ಲವಿ ಕೊಡುವ ರಾಗ-ಸುಖವನ್ನು ಬರಮಾಡಿಕೊಂಡಿತು.

ಜಾನಪದ ಪದ್ಯ ಸಾಹಿತ್ಯದ ಬಹುಭಾಗವು ಈ ತ್ರಿಪದಿ ರೂಪದ್ದೇ ಆಗಿದೆ. ಜೋಗುಳ, ಬೀಸುವ ಹಾಡು, ಸುವ್ವಾಲೆಪದ, ಬೇರೆ ಬೇರೆ ಮಂಗಳಕಾರ್ಯದ ಹಾಡುಗಳು, ಜಾತ್ರೆಯ ಪದಗಳು, ಹಬ್ಬದ ಹಾಡುಗಳು, ಶೋಕಗೀತೆಗಳು ಇವೆಲ್ಲಾ ಹೆಚ್ಚಾಗಿ ತ್ರಿಪದಿಯಲ್ಲಿವೆ. ಕನ್ನಡ ಮಾತ್ರಾಗಣ ಛಂದಸ್ಸಿನ ಉದಯಕ್ಕೆ ತ್ರಿಪದಿಯ ಲಯ ವಿಕೃತಿಗಳೇ ಮೂಲಕಾರಣವಾಗಿ, ಶಿವಶರಣರ ವಚನಗಳು, ಹರಿದಾಸರ ಕೀರ್ತನೆಗಳು ಮುಂತಾದ ಕಾವ್ಯ ಪ್ರಕಾರಗಳಲ್ಲಿ ಅದು ಮುಂದುವರೆಯಿತು. ತ್ರಿಪದಿಯ ಎರಡನೆ ಸಾಲಿನ ಪುನರುಕ್ತಿಯನ್ನು ತಪ್ಪಿಸಿ, ಅದರ ಸ್ಥಳದಲ್ಲಿ ಬೇರೆ ಪದಗಳನ್ನು ತುಂಬಿ 'ಸಾಂಗತ್ಯ'ವೆಂದು ಕರೆಯಲಾಯಿತು. ಸಾಂಗತ್ಯ ಚೌಪದಿಯಾಗಿ ರೂಢಿಯಲ್ಲಿ ಬಂದಿತು. ಸಾಂಗತ್ಯವೇ ಮುಂದೆ ಲಾವಣಿಯ ಚರಣವಾಗಿ ಪರಿಣಾಮಗೊಂಡಿತು. ಷಟ್ಪದಿ ಸಾಂಗತ್ಯಗಳು ತ್ರಿಪದಿಯ ವಿಸ್ತಾರಗಳಾದವು.

ಕನ್ನಡ ಜನಪದದಲ್ಲಿ ತ್ರಿಪದಿ ಸಾಹಿತ್ಯ ಪಡೆದಷ್ಟು ವಿಸ್ತಾರ, ಬಾಹುಲ್ಯವನ್ನು ಬೇರೆ ಯಾವ ಸಾಹಿತ್ಯ ರೂಪಗಳೂ ಪಡೆಯಲಿಲ್ಲ. ಅದು ಲೋಕಪ್ರಿಯವಾಗುತ್ತಾ ಬಂದಿದ್ದರೂ ಯಾವುದೇ ಒಂದು ಕಾವ್ಯದಲ್ಲಿ ಅದು ಸಂಪೂರ್ಣವಾಗಿ ವಿನಿಯೋಗವಾಗಲಿಲ್ಲ. ಏಕೆಂದರೆ ಅದರ ವ್ಯಾಪ್ತಿ ಕಿರಿದು. ಆದ್ದರಿಂದ ಅದರಲ್ಲಿ ಒಂದು ವಿಸ್ತಾರದ ವರ್ಣನೆಯನ್ನಾಗಲಿ, ದೀರ್ಘಕಾಲ ಮಿಡಿಯುವ ಭಾವವನ್ನಾಗಲಿ, ಸವಿವರವಾಗಿ ಕಾಣಲು ಸಾಧ್ಯವಾಗಲಿಲ್ಲ. ಕನ್ನಡ ಛಂದದ ಮೂಲವಾದ ತ್ರಿಪದಿಯ ಗತಿಯೇ ವಿಕಾಸಗೊಳ್ಳುತ್ತಾ, ಅಭಿಜಾತ ಸಮಾಜದಲ್ಲಿ ಪ್ರಚಲಿತವಿದ್ದ ಸಂಗೀತ ರಾಗ-ತಾಳಗಳನ್ನು ಹೊಂದಿಸಿಕೊಂಡ ಹಾಡುಪದಗಳೂ ಜಾನಪದ ರೀತಿಯಲ್ಲಿ ನಿರ್ಮಿತವಾಗಿ,ಕ್ರಮೇಣ ಪ್ರಚಾರದಲ್ಲಿ

ಬರಲಾರಂಭಿಸಿದವು. ಇವು ಕನ್ನಡ ನಾಡಿನ ಎಲ್ಲ ಭಾಗಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿ ಹರಡಿಕೊಂಡವು. ಇಂತಹ ಗೀತ ಸಾಹಿತ್ಯದಲ್ಲಿ ದೇವದೇವತೆಗಳು, ಸ್ತುತಿಸ್ತೋತ್ರಗಳು, ಜೀವಿತ ಸುಖಕ್ಷೇಮಗಳ ಕೋರಿಕೆಗಳು, ಕೋಲಾಟದ ಪದಗಳು, ಸುಗ್ಗಿಯ ಕುಣಿತದ ಹಾಡುಗಳು, ಪ್ರೀತಿಪ್ರಣಯದ ಹಾಡುಗಳು, ದುಃಖದುಮ್ಮಾನದ ಹಾಡುಗಳು, ಹಾಸ್ಯವಿನೋದ ಗೀತೆಗಳು, ವ್ಯಕ್ತಿಯ ಮನದ ಒಳತೋಟಿಯನ್ನು ಸೂಚಿಸುವ ಭಾವಗೀತೆಗಳು, ಭಜನೆಯ ಕಾಲದಲ್ಲಿ ಬಳಸುವ ದೈವಭಕ್ತಿಗೀತೆಗಳು, ತತ್ವಜ್ಞಾನಗಳನ್ನು ಕುರಿತ ಹಾಡು ಕೀರ್ತನೆಗಳು, ಲೋಕದ ವಿಶಿಷ್ಟ ಘಟನಾ ಸಂದರ್ಭಗಳನ್ನು ಕುರಿತ ಹಾಡುಗಳು, ಸಾಧು ಸತ್ಪುರುಷರ ಪವಾಡದ ಪದಗಳು, ವೀರಪುರುಷರ ಚರಿತ್ರೆಗೆ ಸಂಬಂಧಿಸಿದ ಉತ್ಸಾಹಭಾವದ ಹಾಡುಗಳು, ಮಂಗಲಪದ್ಯಗಳು, ಆರತಿ ಹಾಡುಗಳು ಮುಂತಾದ ಎಷ್ಟೋ ಪ್ರಕಾರದ ಹಾಡುಗಳು ಹುಟ್ಟಿಕೊಂಡವು.

ಜನಪದ ಗೀತೆಗಳಲ್ಲಿ ಗೇಯತೆಯೇ ಪ್ರಧಾನ ಲಕ್ಷಣವಾಯಿತು. ಹಾಡಿನ ಮೋಡಿ, ರಾಗದ ರಂಜನೆ, ನಾದದ ಸುಖ ಇವುಗಳಿಗಾಗಿಯೇ ಜಾನಪದ ಗೀತೆಗಳು ರಚಿತವಾದಂಥವು. ಕಿವಿಗೆ ಇಂಪನ್ನೂ, ಮನಸ್ಸಿಗೆ ತಂಪನ್ನೂ ನೀಡುವುದಕ್ಕಾಗಿ ಅವು ಮೂಡುತ್ತಾ ಬಂದವು. ಬೀಸುವಕಲ್ಲಿನ ನಾದವೇ, ತೋಟಕ್ಕೆ ನೀರು ತೋಡುವ ಏತದ ಸ್ವರವೇ ಅವುಗಳ ಸಹಜ ಶ್ರುತಿಯಾದವು. ತ್ರಿಪದಿಯನ್ನು ರಾಗಿ ಬೀಸುತ್ತಾ ಹೇಳುವ ಧಾಟಿಗೂ, ಹಚ್ಚೆ ಕುಕ್ಕುತ್ತಾ, ಹೇಳುವ ಧಾಟಿಗೂ, ಒನಕೆ ಹಿಡಿದು ಕುಟ್ಟುತ್ತಾ ಹೇಳುವ ಧಾಟಿಗೂ, ತಮ್ಮಟೆ ಡೋಲು, ತಾಳ, ಗಂಟೆ ಮೊದಲಾದ ವಾದ್ಯಗಳೊಂದಿಗೆ ದೇವರನ್ನು ಮೆರೆಸುತ್ತ ಹೇಳುವ ಧಾಟಿಗೂ, ಮದುವೆ ಮುಂಜಿಗಳಲ್ಲಿ ಹಬ್ಬ ಹರಿದಿನಗಳಲ್ಲಿ ಒಸಗೆ ಸೋಬಾನೆಗಳಲ್ಲಿ ಹೇಳುವ ಧಾಟಿಗೂ, ಕೋಲಾಟ ಆಡುವಾಗ, ಬಂಡಿ ಹೊಡೆಯುವಾಗ, ಸುಗ್ಗಿ ಕುಣಿತ ಕುಣಿಯುವಾಗ ಹೇಳುವ ಧಾಟಿಗೂ, ಕಥೆಯನ್ನು ಕುಳಿತು ಹೇಳುವಾಗಿನ ಧಾಟಿಗೂ ಎಷ್ಟೋ ವ್ಯತ್ಯಾಸವಿರುವುದು ಕಂಡುಬರುತ್ತದೆ. ಒಸಗೆ ಮತ್ತು ಸೋಬಾನೆ ಪದಗಳಲ್ಲಿ ಸಾಮೂಹಿಕ ಗಾಯನದ ಹಿಮ್ಮೇಳನಕ್ಕೆ ಹೊಂದಿಕೊಳ್ಳುವ ಧಾಟಿ ರೂಪುಗೊಳ್ಳುತ್ತದೆ. ತ್ರಿಪದಿಯಲ್ಲಿ ಬೇಕಾದ ಉಚ್ಚಾರಗಳನ್ನು ಹಿಗ್ಗಿಸಿಕೊಳ್ಳುತ್ತಾ ಬೇಡದಿದ್ದೆಡೆ ಕುಗ್ಗಿಸಿಕೊಳ್ಳಲು ಅವಕಾಶವಿದ್ದಿದ್ದರಿಂದ ಇದರ ಛಂದಸ್ಸಿನಿಂದ ಹಲವಾರು ಶಾಖೆಗಳು, ಪ್ರತ್ಯೇಕ ಛಂದಪ್ರಕಾರಗಳು ಹುಟ್ಟಿಕೊಳ್ಳುತ್ತಾ ಬಂದವು. ಹಾಡುಗಾರಿಕೆಯ ರಾಗಕ್ಕೆ ತ್ರಿಪದಿಯ ಛಂಧಸ್ಸು ಹೊಂದಿಕೊಳ್ಳುತ್ತಾ, ಸ್ವರಗಳನ್ನು ತೇಲಿಸುತ್ತಾ, ಸ್ವಚ್ಛಂದತೆಯನ್ನು ತರುತ್ತಾ ಹೊಸ ಹೊಸ ಛಂದ ಪ್ರಕಾರಗಳನ್ನು ಹುಟ್ಟು ಹಾಕಿತು. ಸಾಮಾನ್ಯವಾಗಿ ಆದಿಪ್ರಾಸ ಮತ್ತು ಅನುಪ್ರಾಸ ಮತ್ತು ಅಂತ್ಯಪ್ರಾಸಗಳ ಬಂಧದಲ್ಲಿ ಹುಟ್ಟಿಕೊಂಡವು. ಹೆಣ್ಣುಮಕ್ಕಲ ಹಾಡುಗಳು ಸಾಮಾನ್ಯವಾಗಿ ಸಂಪ್ರದಾಯದ ಕಡೆಗೆ ಒಲಿದರೆ, ಪುರುಷರ ಹಾಡುಗಳು ಪ್ರಾಯಶಃ ಸಾಹಸದ ಕಡೆಗೆ ಒಲಿಯಿತು. ಸ್ತ್ರೀಯರ ಹಾಡುಗಳು ತ್ರಿಪದಿಯಲ್ಲಿ ಮೂಡಿಬಂದರೆ ಗಂಡಸರ ಹಾಡುಗಳು ಲಾವಣಿಯ ಚೌಕುಗಳಲ್ಲಿ ಹುಟ್ಟಿಬಂದವು.

ಹೀಗೆ ತ್ರಿಪದಿಯು ವಿವಿಧ ರೂಪಗಳನ್ನು ತುಂಬುತ್ತಾ, ಕನ್ನಡ ಜನಪದ ಛಂದಸ್ಸಿಗೆ ಒಂದು ಚಲನೆಯನ್ನು ತಂದುಕೊಟ್ಟಿತು. ಕನ್ನಡ ಛಂದಸ್ಸಿಗೆ ಜನಪದ ಛಂದಸ್ಸೇ ಮೂಲಾಧಾರವೆಂಬುದನ್ನು ಸ್ಪಷ್ಟಪಡಿಸಿತು. ಅಂಶಗಣ ಗಣಗಳನ್ನೊಳಗೊಂಡ ಈ ಜನಪದ ಗೀತೆಗಳಲ್ಲಿ ಕಂಡುಬರುವ ಛಂದಸ್ಸೇ, ಕನ್ನಡ ಭಾಷೆಯ ನಿಜವಾದ ಛಂದಸ್ಸೆಂಬುದು ಮನದಟ್ಟಾಯಿತು. ಕನ್ನಡ ಪ್ರೌಢ ಸಾಹಿತ್ಯಕ್ಕೆ ಜನಪದ ಸಾಹಿತ್ಯವೇ ತಳಹದಿಯಾಗಿತ್ತು. ಕವಿರಾಜಮಾರ್ಗದಲ್ಲಿ ಅದುವರೆಗೆ ಕನ್ನಡದಲ್ಲಿ ಪ್ರಸಿದ್ಧವಾಗಿದ್ದ ಕನ್ನಡ ಪದ್ಯ ಪ್ರಕಾರಗಳಾದ ಮದನವತಿ, ಅಕ್ಕರ, ದ್ವಿಪದಿ, ಗೀತಿಕೆ, ಏಳೆ, ರಗಳೆ,ಚೌಪದಿ, ಷಟ್ಪದಿ ಮುಂತಾದ ಕಾವ್ಯ ಪ್ರಕಾರಗಳು ಉಲ್ಲೇಖವಿತ್ತು. ಈಗ ಕನ್ನಡ ಜನಪದ ಗೀತೆಗಳಲ್ಲಿ ದ್ವಿಪದಿ, ಏಳೆ, ತ್ರಿಪದಿ, ಚತುಷ್ಪದಿ, ಪಂಚಪದಿ, ಷಟ್ಪದಿ, ರಗಳೆ, ಸಾಂಗತ್ಯ, ಸೀಸಪದ್ಯಗಳೇ ಅಲ್ಲದೆ ಹಲವು ಅಪರೂಪವಾದ ಕನ್ನಡದ ಪದ್ಯಗಳನ್ನೂ ಕಾಣಬಹುದು.

**ಜನಪದ ಸಂಗೀತ ಮತ್ತು ಸುಗಮಸಂಗೀತಕ್ಕೂ ಇರುವ ಪ್ರಮುಖ ವ್ಯತ್ಯಾಸಗಳು**

ಜನಪದ ಸಂಗೀತ ಮತ್ತು ಸುಗಮಸಂಗೀತಕ್ಕೂ ಇರುವ ಪ್ರಮುಖ ವ್ಯತ್ಯಾಸಗಳು ಪ್ರಾರಂಭವಾಗುವುದೇ ಅವುಗಳ ಸೃಷ್ಟಿಯಲ್ಲಿ. ಜನಪದ ಗೀತೆ ಸಮಷ್ಠಿ ಸೃಷ್ಟಿಯಾದರೆ ಸುಗಮಸಂಗೀತ ವ್ಯಕ್ತಿಯ ಸೃಷ್ಟಿ ಮೊದಲನೆಯ ಹಾಡುಗಾರಿಕೆ ದೇಸೀಯ ಶೈಲಿಯದಾದರೆ, ಎರಡನೆಯದು

ಮಾರ್ಗ ಶೈಲಿಯದಾಗುತ್ತದೆ. ಜನಪದ ಅಂಶಗಣದ ಛಂದಸ್ಸಿನಲ್ಲಿ ರಚಿತವಾಗಿದ್ದರೆ ಸುಗಮ ಮಾತ್ರಾ ಛಂದಸ್ಸಿನಲ್ಲಿ ರಚಿತವಾಗಿರುತ್ತದೆ. ಜನಪದ ಗೀತ ಗಾಯನದಲ್ಲಿ ಶಾಸ್ತ್ರೀಯ ಸಂಗೀತದ ಧಾಟಿ ಇರುವುದಿಲ್ಲ. ಜಾನಪದ ಗೀತೆಗಳ ಸ್ವರಗಳು-ಹೆಚ್ಚಾಗಿ ಒಂದು ಸಪ್ತಕವನ್ನು ದಾಟುವುದಿಲ್ಲ. ಅವು ಅರ್ಧ ಸಪ್ತಕದಲ್ಲೇ ಸುತ್ತಿಸುಳಿಯುತ್ತವೆ. ಅವುಗಳ ನಾದತರಂಗ ಮಿತವಾಗಿರುತ್ತದೆ. ಆ ಮಿತಿಯಲ್ಲೇ ಅವು ಭಾವದ ಆಳವನ್ನು ತೋರಿಸುತ್ತವೆ. ಸುಗಮಸಂಗೀತದಲ್ಲಾದರೋ ಸ್ವರಗಳು ಮೂರು ಸಪ್ತಕಗಳನ್ನೂ ದಾಟಬಹುದು. ಒಂದೇ ರಾಗದಲ್ಲಿಯಾದರೂ ಇರಬಹುದು ಅಥವಾ ಹಲವು ರಾಗಗಳ ಸ್ವರಗಳನ್ನು ಸೇರಿಕೊಂಡೂ ಇರಬಹುದು. ಇವುಗಳ ನಾದತರಂಗಕ್ಕೆ ಮಿತಿಯೇ ಇಲ್ಲ. ಕವಿತೆಯ ದರ್ಶನ ಮಾಡಿಸುವದಷ್ಟೇ ಅದರ ಗುರಿ. ಜನಪದಗೀತೆಗಳು ರಾಗಗಳ ವೈವಿಧ್ಯವನ್ನು ತೋರಿಸಲಾರವು. ಅವುಗಳ ಉದ್ದೇಶ ಸಂಗೀತದ ಶಾಸ್ತ್ರ ವಿನ್ಯಾಸವನ್ನಾಗಲಿ, ಪ್ರಾವೀಣ್ಯತೆಯನ್ನು ಪ್ರದರ್ಶಿಸುವುದಾಗಲಿ ಅಲ್ಲ. ರಾಗವೈವಿಧ್ಯತೆಯಿಂದ ಸಾಧಿಸಬಲ್ಲ ಕೆಲಸವನ್ನು ನಾದಕ್ಕೊದಗುವ ತರಂಗಿತತೆಯ ಅನ್ಯಗುಣದಿಂದ ಅವು ತೋರಿಸಬಲ್ಲವು. ಸುಗಮದಲ್ಲಾದರೋ ಸಂಗೀತದ ಪ್ರಾವೀಣ್ಯತೆಯ ಪ್ರದರ್ಶನವಿಲ್ಲದಿದ್ದರೂ, ಕವಿತಾಭಾವದರ್ಶನಕ್ಕೆ ಅಗತ್ಯವಿರುವಷ್ಟು ಸಂಗೀತವನ್ನು ತೋರಿಸಬೇಕಾಗುತ್ತದೆ. ಕಲಾಪ್ರದರ್ಶನದ ಜೊತೆಯಲ್ಲಿ ಭಾವಪ್ರದರ್ಶನವನ್ನೂ ಮಾಡಬೇಕಾಗುತ್ತದೆ. ಸಂಗೀತ ಶಾಸ್ತ್ರ ಕಲೆಯಾಗಿ ಪರಿವರ್ತಿತವಾಗಬೇಕಾಗುತ್ತದೆ.

ಜನಪದ ಗೀತೆಗಳಲ್ಲಿ ಸುಗಮಸಂಗೀತದಲ್ಲಿರುವಷ್ಟು ರಾಗ, ವೈವಿಧ್ಯ, ತಾಳ ವೈವಿಧ್ಯಗಳಿಲ್ಲ. ಕೆಲವೊಮ್ಮೆ ಒಂದೇ ಗೀತೆ ಮತ್ತೊಂದು ಗೀತೆಯಂತೆ ಕೇಳಬಹುದು. ಕೆಲವೇ ರಾಗಗಳಲ್ಲಿ ಆದರೂ ಸ್ವತಂತ್ರವಾದ ನಾದತರಂಗಿತತತೆಯಿಂದ ಅದು ಅಪೂರ್ವವೆನಿಸುತ್ತದೆ.

ಜನಪದ ಗೀತೆಗಳಲ್ಲಿ ಶಾಸ್ತ್ರವಿಲಾಸವನ್ನು ಕಾಣಲಾರೆವು. ಆದರೆ ಅದರ ಸಂಗೀತ ಸರಳ, ಸುಲಭ ಸಂಗೀತ, ಹೆಚ್ಚಿನ ಹಾಡುಗಳೆಲ್ಲಾ ಒಂದೇ ತೆರನದ ರಾಗದಂತೆ ಕೇಳಿಸುತ್ತವೆ. ಅವುಗಳಲ್ಲಿ ಬಹುಸಂಖ್ಯೆಯವು ಅರ್ಧರಾಗಗಳು. ಆದರೆ ಈ ತೆರೆನದ ದೇಶೀಯ ಗೀತದಿಂದಲೇ ಮುಂದೆ ಪೂರ್ಣರಾಗಗಳು ಹುಟ್ಟಿದವು ಎಂಬುದನ್ನು ನಾವು ಮರೆಯಬಾರದು. ರಾಗಪೂರ್ಣತೆಯಿಲ್ಲದಿದ್ದರೂ, ಧಾಟಿಯ ರೀತಿಯಿಂದ ಅವು ಪ್ರಕಟಿಸುವ ವಿಷಯ ವೈವಿಧ್ಯರಸಗಳು ಧಾರಾಳವಾಗಿವೆ.ಜನಪದ ಗೀತೆಗಳ ಕರ್ತೃ ಯಾರು? ಗೀತೆಗಳಿಗೆ ಮಟ್ಟು ಕೂಡಿಸಿದವರಾರು? ಎಂಬುದು ನಮಗೆ ತಿಳಿಯುವುದಿಲ್ಲ. ಅವುಗಳು ಬಾಯಿಂದ ಕಿವಿಗೆ ಕಿವಿಯಿಂದ ಬಾಯಿಗೆ ಬರುವಾಗ ಅವುಗಳ ಸತ್ವಗುಣವನ್ನಷ್ಟೇ ಹೊತ್ತುಕೊಂಡು ಬರುತ್ತದೆ. ಆ ಧಾಟಿಯನ್ನಷ್ಟೇ ಹೊತ್ತುಕೊಂಡು ಬರುತ್ತದೆ. ಸುಗಮದಲ್ಲಾದರೋ ಕವಿ ಗೀತೆಯ ರಾಗಸಂಯೋಜನಕಾರ ಅದನ್ನು ಪ್ರಸ್ತುತಪಡಿಸುವ ಗಾಯಕ ಈ ಮೂರರ ಹೆಸರನ್ನೂ ದಾಖಲಿಸಿಕೊಂಡು ಬರುತ್ತದೆ.

ಜಾನಪದದ ಅಂಶಗಣಗಳಿಂದ ಹುಟ್ಟಿದ, ಬ್ರಹ್ಮ | ವಿಷ್ಣು | ರುದ್ರ ಈ ಮೂರು ಲಯಗಳು ಅಕ್ಷರಕಾಲಕ್ಕನುಗುಣವಾಗಿ ಉತ್ಸಾಹ | ಮಂದಾನಿಲ | ಲಲಿತ ಲಯಗಳಾಗಿ ಮಾತ್ರಾಗಣಗಳಾಗಿ ಪರಿವರ್ತನಗೊಂಡವು. ಜನಪದ ಕಾವ್ಯಗಳ ಮತ್ತೊಂದು ಪ್ರಸಿದ್ಧ ಛಂದೋರೂಪವಾದ 'ರಗಳೆ' ಮಾತ್ರಾಗಣದಿಂದ ಹುಟ್ಟಿಕೊಂಡಿತು. ರಗಳೆಯನ್ನು ಹರಿಹರ ಕವಿ ಬಳಸಿಕೊಂಡು ಕಾವ್ಯವನ್ನೇ ಬರೆದ. ಹೊಸಗನ್ನಡ ಸಾಹಿತ್ಯಕ್ಕೆ ರಗಳೆಯೇ ಅಡಿ ಮೆಟ್ಟಲಾಯಿತು. ಹೊಸಗನ್ನಡಕ್ಕೆ 'ರಗಳೆ'ಯನ್ನು ಪ್ರಥಮವಾಗಿ ತಂದವರು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು. ಮಾಸ್ತಿಯವರ 'ನವರಾತ್ರಿ' -'ಯಶೋಧರಾ' ಕೃತಿಗಳ ಛಂದಸ್ಸು ಸರಳ ರಗಳೆಯಲ್ಲಿಯೇ ರೂಪುಗೊಂಡವು. ಮುಂದೆ ರಾಷ್ಟ್ರಕವಿ ಕುವೆಂಪು ಅವರು ತಮ್ಮ 'ರಾಮಾಯಣದರ್ಶನಂ' ಮಹಾಕಾವ್ಯಕ್ಕೆ ಸರಳ ರಗಳೆಯ ಛಂದಸ್ಸನ್ನೇ ಬಳಸಿದರು.

ಶಾಸ್ತ್ರೀಯ ಸಂಗೀತ ತನ್ನ ಆಳ, ವಿಸ್ತಾರ ಮತ್ತು ನಿರ್ದಿಷ್ಟ ರಾಗಗಳ ಅಂತಶ್ಚಲನೆಗಳ, ಸ್ವರಕಲ್ಪನೆಗಳ ಮನೋಧರ್ಮಕ್ಕೆ ತನ್ನನ್ನು ಒಡ್ಡಿಗೊಂಡಂತೆ, ಜನಪದ ಸಂಗೀತ ಉತ್ತಮವಾದ ಸಾಹಿತ್ಯವನ್ನು, ಅದ್ಭುತವಾದ ಶಕ್ತಿಯುಳ್ಳ ಗ್ರಾಮೀಣ ಧಾಟಿಗಳಿಂದ ಸರಳ ಸಹಜವಾದ ಛಂದಸ್ಸಿನಿಂದ, ಆಡುಮಾತಿನ ನುಡಿಕಟ್ಟಿನಿಂದ ನಿರೂಪಿಸಿತು. ಆದರೆ ಈ ಎರಡೂ ಪ್ರಕಾರದಿಂದ ಪ್ರೇರಣೆ ಪಡೆದು ಇವುಗಳ ಅತ್ಯುತ್ತಮ ಗುಣಗಳನ್ನು ತನ್ನದಾಗಿಸಿಕೊಂಡು ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ಮಹತ್ವತೆಯನ್ನು ಪಡೆದ ಸುಗಮಸಂಗೀತ, ಸಂದೇಶವನ್ನೂ, ಸಂಸ್ಕೃತಿಯನ್ನೂ, ಮಾಧುರ್ಯವನ್ನೂ, ಮುಪ್ಪುರಿಗೊಳಿಸಿತು.

**ಸುಗಮಸಂಗೀತ ಮತ್ತು ಗಮಕ ಅಥವಾ ಕಾವ್ಯಗಾಯನಕಲೆ**

ಕಾವ್ಯಗಾಯನ ಕಲೆಯು ನಮ್ಮ ನಾಡಿನ ಅತ್ಯಂತ ಪ್ರಾಚೀನವಾದ ಕಲೆಗಳಲ್ಲಿ ಒಂದಾಗಿದೆ. ಇದನ್ನೆ 'ಗಮಕಕಲೆ' ಅಥವಾ 'ಪುಸ್ತಕವಾಚನಕಲೆ' ಎಂದು ನಮ್ಮ ಪೂರ್ವಿಕರು ಹೇಳಿದ್ದಾರೆ. ನಮ್ಮ ಭಾರತ ಭೂಮಿಯಲ್ಲಿ ಪ್ರಾಚೀನ ಕಾಲದಿಂದಲೂ ಹೆಸರಾಂತ ಅರವತ್ತುನಾಲ್ಕು ಕಲೆಗಳಲ್ಲಿ ಗಮಕಕಲೆಯನ್ನು ೩ಲನೆಯ ಕಲೆಯನ್ನಾಗಿ ಪರಿಗಣಿಸಿದ್ದಾರೆ.

ಸಾಹಿತ್ಯ ಮತ್ತು ಸಂಗೀತ ಇವುಗಳೆರಡರ ಸ್ನೇಹ ಸಮ್ಮೇಳನದ ಫಲರೂಪವೇ 'ಗಮಕಕಲೆ'ಯಾಗಿದೆ. ಅಂದರೆ ಸಾಹಿತ್ಯದೊಡನೆ ಸಂಗೀತವು ಒಂದು ಹಿತವಾದ ಪ್ರಮಾಣದಲ್ಲಿ ಬೆರೆತು ಕಾವ್ಯದ ಕಥಾಭಾಗದ ವಿವಿಧ ರಸಗಳ ಪೋಷಣೆಗೆ ಸಹಕಾರಿಯಾಗುತ್ತಾ, ಸಾಹಿತ್ಯದ ಭಾವಗಳನ್ನು ವ್ಯಕ್ತಪಡಿಸುವ ಹಾಡುಗಾರಿಕೆ. ಕಾವ್ಯವನ್ನು ಸರ್ವಾಂಗ ಸುಂದರವನ್ನಾಗಿಸಿ ಹಾಡುವವನೆ 'ಗಮಕಿ'. ಒಂದು ಪದ್ಯವು ಸರ್ವಾಂಗ ಸುಂದರವಾಗಿ ಹಾಡಲ್ಪಡಬೇಕಾದರೆ, ಆ ಪದ್ಯ ಅರ್ಥವೇನು? ಆ ಅರ್ಥ ಕೊಡುವ ಕಥಾಭಾಗದ ಹಿನ್ನೆಲೆ ಏನು? ಅದರ ರಸ ಸನ್ನಿವೇಶವೇನು? ಆ ಪದ್ಯದಲ್ಲಿ ಪ್ರತಿಪಾದಿಸಿರತಕ್ಕ ವ್ಯಕ್ತಿ, ವಸ್ತು ಅಥವಾ ವಿಷಯದ ಹೆಚ್ಚುಗಾರಿಕೆಯೇನು? ಆ ಪದ್ಯದಲ್ಲಿ ಕವಿಯು ಜನತೆಗೆ ಹೇಳಬಯಸುವ ವಿಶೇಷ ಸಂಗತಿಯೇನು? ಆ ಪದಗಳ ಲಾಲಿತ್ಯ-ಅಥವಾ ಕಾಠಿಣ್ಯವೇನು? ಆ ಪದಗಳು ತಾವು ಕೊಡುವ ವಿವಿದಾರ್ಥಗಳಿಗೆ ಅಪೇಕ್ಷಿಸುವ 'ಧ್ವನಿ ವಿಶೇಷಗಳೇನು? ಎಂಬೀ ಮುಂತಾದ ವಿಷಯಗಳನ್ನು ಆಳವಾಗಿ ಯೋಚಿಸಿ, ಆ ಪದ್ಯವನ್ನು ಹಾಗೆ ಹಾಡಿದ ಪಕ್ಷದಲ್ಲಿ ಅದು ಶಾಸ್ತ್ರೀಯವಾದ ಗಮಕವಾಗಿ ಸರ್ವಾಂಗ ಸುಂದರವಾದ ವಾಚನವಾಗುತ್ತದೆ. ಇದು ಪದ್ಯದ ಅಂತರಂಗದ ಅಧ್ಯಯನವಾಗುತ್ತದೆ. ಪದ್ಯಕ್ಕೆ ರಸಾನುಗುಣವಾಗಿ ನಿಯೋಗಿಸಲ್ಪಟ್ಟ ರಾಗ ಮತ್ತು ಗೊತ್ತಾದ ಪದಗಳಿಗೆ ಅನ್ವಯಿಸಲ್ಪಡುವ ಆ ರಾಗಭಾಗದ ಧ್ವನಿ ವಿಶೇಷ ಅಥವಾ ಸ್ವರ ಸಂಯೋಜನೆಯ ಸಫಲತೆಯ ಪರಿಣಾಮವಾಗಿ ಕಾವ್ಯಾಮೃತ ರಸಸ್ವಾದನೆಯಾಗುತ್ತದೆ. ಅಂದರೆ ಸುಮಧುರವಾಗಿ ಅರ್ಥಪೂರ್ಣವಾಗಿ ಭಾಷಾಸೌಂದರ್ಯವನ್ನು ಪ್ರದರ್ಶಿಸುತ್ತ ರಸಾನುಭವವಾಗುವಂತೆ ವಾಚಿಸುವ ಕಲೆಯೇ ಗಮಕ ಎಂಬುದು ಮುಖ್ಯವಾಗಿ ಗಮನಿಸಬೇಕಾದ ಅಂಶವಾಗಿದೆ. ಇಲ್ಲಿ ವಾಚನಾಕ್ರಮವೇ ಪ್ರಧಾನವಾಗಿದೆ. ಶಾಸ್ತ್ರೀಯ ಸಂಗೀತದಲ್ಲಿರುವಂತೆ ಇಲ್ಲಿ ತಾಳಮೇಳಗಳ ಸಹಕಾರ ಬೇಕಿಲ್ಲ. ಕಾರಣ ಇದು ತಾಳನಿಬದ್ಧ ಸಂಗೀತವಲ್ಲ. ಕಾವ್ಯದಲಯವನ್ನು ವಾಚನದ ಮೂಲಕ ನಿರೂಪಿಸುವ ಬಗೆಯಿದೆ. ಭಾವನಿರೂಪಣೆಯ ಈ ಮಾಧ್ಯಮದಲ್ಲಿ ಒಂದು ಖಚಿತವಾದ ವಿಧಾನವೂ ಇಲ್ಲ. ಎಷ್ಟು ಜನ ಗಮಕಿಗಳಿದ್ದಾರೋ ಅಷ್ಟೇ ವಿಧದ ಗಮಕ ಶ್ರೇಣಿಗಳಿವೆ. ಕವಿಯ ಕಾವ್ಯವು ಅವನಿಗೆ ಎಷ್ಟು ಚೆನ್ನಾಗಿ ಅರ್ಥವಾಗಿದೆ ಎಂಬುದು ಅವನ ವಾಚನದಿಂದ ತಿಳಿಯುತ್ತದೆ.

ಒಂದು ಪದ್ಯ ಕಾವ್ಯದ ಕಥಾಭಾಗವು ಶ್ರೋತೃಗಳ ಕಿವಿಗೆ ಮತ್ತು ಮನಸ್ಸಿಗೆ ರಂಜಕವಾಗಿರುವಂತೆ ಮಾಡುವುದೇ ಗಮಕಿಯ ಕೆಲಸವಾಯಿತು.

ಇಲ್ಲಿ 'ಗಮಕ' ಎನ್ನುವುದು ಪಾರಿಭಾಷಿಕ ಶಬ್ದವಾಗಿ, ಸುಮಧುರವೂ ಅರ್ಥಪೂರ್ಣವೂ, ಭಾಷಾಸೌಂದರ್ಯವನ್ನು ಪ್ರದರ್ಶಿಸುತ್ತಾ, ರಸಾನುಭವವಾಗುವಂತೆ ವಾಚಿಸುವ ಕಲೆ ಎಂಬ ಅರ್ಥ ತಂದಿತು. ಕಲಾಭಿರುಚಿಯನ್ನೂ ಉಲ್ಲೇಕಿಸುವ ಅನೇಕ ಚಿತ್ರಣಗಳು ದಾಖಲಾತಿಯನ್ನು ಒದಗಿಸುತ್ತ ಗಮಕ ಕಲೆಯ ಮಹತ್ ಗುಣವನ್ನು ತಿಳಿಸುತ್ತದೆ.

ಕಾವ್ಯವೆನ್ನುವುದು ಕವಿಯೋ ಅಥವ ಇನ್ನೊಬ್ಬನೋ ಓದಿದ್ದನ್ನು ಕೇಳಿಕೊಂಡು ಅಥವಾ ತಾನೇ ಓದಿಕೊಂಡು ಅನುಭವಿಸಬೇಕಾದದ್ದು. ಕಾವ್ಯವೆಂದರೆ ಕೇವಲ ಬರೆದದ್ದು ಅಥವಾ ಅಚ್ಚುಮಾಡಿದ್ದಲ್ಲ. ಅದು ಶಬ್ದ ಶರೀರ; ಆದ್ದರಿಂದ ಅದು ಕಿವಿಯ ಮೂಲಕ ಮನಸ್ಸಿನಲ್ಲಿ ಮೂಡಿ ನಿಲ್ಲಬೇಕು. ಹಾಗೆ ಕಾವ್ಯ ಗಾಯನ ಮಾಡುವವನಿಗಾದರೋ ಕಂಠದಲ್ಲಿ ರಾಗವುಕ್ಕಿದಾಗ ಮಾತ್ರ ಅದು ಸಾಧ್ಯ. ಅಷ್ಟು ಇಷ್ಟು ಸಂಸ್ಕಾರವಿದ್ದವನು ಹಾಗೂ ಹೀಗೂ ಕಾವ್ಯವನ್ನು ರಚಿಸಬಹುದು. ಆದರೆ ಯಾರಿಗೆ ಸರಸ್ವತಿ ಪ್ರಸನ್ನಳಾಗುವಳೋ ಅವನು ಮಾತ್ರ ಪಾಠಕಲೆಯನ್ನು ಅರಿತಿರುತ್ತಾನೆ ಎನ್ನುವ ಸಂಸ್ಕೃತ ಅಲಂಕಾರಿಕ ರಾಜಶೇಖರ, ಒಬ್ಬ ಕಾವ್ಯಗಾಯಕನಿಗೆ, ಗಮಕಿಗೆ ಇರಬೇಕಾದ

ಅರ್ಹತೆಗಳನ್ನು ಸ್ಪಷ್ಟವಾಗಿ ನುಡಿದಿದ್ದಾನೆ. ಜನ್ಮಾಂತರದ ಸಂಸ್ಕಾರದ ಬಲದಿಂದ ಮಾತ್ರ ಒಬ್ಬನ ಕಂಠದಲ್ಲಿ ರಾಗ ಉಕ್ಕುತ್ತದೆ. ಹಾಗೆ ಓದುತ್ತಾ ಕಾವ್ಯದ ಗಾಯನದಲ್ಲಿ ಚೆಲುವು ಉಕ್ಕಿಸುವುದು ಅನೇಕ ಜನ್ಮಗಳ ಪುಣ್ಯಫಲ ಎಂದಿದ್ದಾನೆ.

ಗಮಕಕಲೆ ತಾಳ ನಿಬದ್ಧವಲ್ಲದ ಕಾವ್ಯಗಾಯನ ಕಲೆ ಎಂಬುದು ಸ್ಪಷ್ಟವಾಗಿಯೇ ಇದೆ. ಶಾಸ್ತ್ರೀಯ ಸಂಗೀತದಲ್ಲಿ 'ಧಾತು'ವಿಗೆ ಪ್ರಾಧನ್ಯತೆ ಇದ್ದರೆ, ಗಮಕಕಲೆಯಲ್ಲಿ 'ಮಾತು'ವಿಗೆ ಪ್ರಾಧಾನ್ಯತೆ ಇದೆ. ಕನ್ನಡ ಛಂದಸ್ಸಿಗೆ ಸಹಜವಾದ ಯತಿಗೆ ಗಮನವಿಟ್ಟು ತಾಳದ ಗತಿ ಸ್ಫುಟವಾಗಿ ಪ್ರತೀತವಾಗುವಂತೆ ವಾಚನ ಮಾಡುವುದೇ ಗಮಕದ ಅಂತರಾಳ. ನಮಗೆ ಕಂಡುಬರುವ ಮೊದಲ ಗಮಕಿಗಳೆಂದರೆ 'ಕುಶಲವರು'. ಮೊದಲ ಕಾವ್ಯವೇ ವಾಲ್ಮೀಕಿಯ 'ರಾಮಾಯಣ' ಎನ್ನಬಹುದು. ಪ್ರಾಚೀನ ಸಂಸ್ಕೃತ ಮತ್ತು ಕನ್ನಡ ಕೃತಿಗಳಲ್ಲಿ ಈ ಕಲೆಯ ಬಗೆಗೆ ವಿಶಿಷ್ಟ ಮಾಹಿತಿಗಳು ದೊರೆಯುತ್ತವೆ. ಲಕ್ಷ್ಮೀಶನಂತೂ ತನ್ನ ಜೈಮಿನಿ ಭಾರತದಲ್ಲಿ ರಾಗಗಳ ಹೆಸರು, ಜತಿ, ರೀತಿ, ತಾಳ ಪ್ರಮಾಣ, ಕಂಪಿತ, ಮೂರ್ಛನ, ರಸ, ಹಾಡಿನ ಬೆಡಗು, ಬಿನ್ನಾಣ, ಲಯ, ಆಹತ ಮತ್ತು ಪ್ರತ್ಯಾಹತ ವ್ಯಾಪ್ತಿಯನ್ನು ತಿಳಿದು, ವೀಣೆಯನ್ನು ಕೈಯ್ಯಲ್ಲಿ ಹಿಡಿದ, ಬಾಲಕರ ವದನದೊಳ್ ಸರಸ್ವತಿಯೇ ನೆಲೆಸಿದಂತೆ, ವಾಣಿಯ ಆಶೀರ್ವಾದವೆಂಬಂತೆ, ಮೋಹಕವಾದ ಇಂಪಾದ ಧ್ವನಿಯಿಂದ ಕಿವಿಗೆ ಹಬ್ಬವನ್ನುಂಟುಮಾಡುವಂತೆ ವೀಣೆಯನ್ನು ನುಡಿಸಿಕೊಂಡು ಕಾವ್ಯವನ್ನು ಹಾಡಿದರು ಎನ್ನುತ್ತಾನೆ.

ಕನ್ನಡ ಸಾಹಿತ್ಯದಲ್ಲಿ ಕಾವ್ಯ ಎಂದು ಆವಿರ್ಭವಿಸಿತೋ, ಅಂದೇ ಗಮಕ ವಾಚನ ಕಲೆಯೂ ಹುಟ್ಟಿಕೊಂಡಿತು. ಅಷ್ಟೇ ಅಲ್ಲ ರಾಜಾಸ್ಥಾನದಲ್ಲಿ ಕವಿಯ ಕಾವ್ಯದ ವಾಚನದೊಂದಿಗೆ ಅದನ್ನು ವಿಶ್ಲೇಷಿಸುವ ಪರ, ಅಪರಗಳ ಬಗೆಗೆ ಚರ್ಚೆ ಮಾಡುವ ರೀತಿಯೂ ರೂಢಿಗೆ ಬಂದಿತು. ಜೈನ ಸಾಹಿತ್ಯ, ವೀರಶೈವ ಸಾಹಿತ್ಯ ಮತ್ತು ತಮಿಳು ಸಾಹಿತ್ಯದ ಇತಿಹಾಸದಲ್ಲಿ ಕವಿ, ಗಮಕಿ, ವಾದಿ, ವಾಗ್ಮಿ ಎಂಬ ನಾಲ್ಕು ಬಗೆಯ ಪಂಡಿತರನ್ನು ಹೆಸರಸಿದೆ. ಹಿಂದೆ ಈ ನಾಲ್ಕೂ ತರದ ಪಾಂಡಿತ್ಯದಲ್ಲಿ ಪ್ರವೀಣರಾದವರು ಅನೇಕರಿದ್ದರೆಂದೂ ತಿಳಿದುಬರುತ್ತದೆ. ನಮ್ಮ ಕನ್ನಡದ ಕವಿಗಳಾದ ಆದಿಕವಿ ಪಂಪ, ಪೊನ್ನ, ದುರ್ಗಸಿಂಹ, ಕುಮಾರವ್ಯಾಸ, ಹರೀಶ್ವರ ಮುಂತಾದ ಕವಿಗಳು ಕವಿ, ಗಮಕಿ, ವಾದಿ, ವಾಗ್ಮಿಗಳ ಬಗೆಗೆ ಅನೇಕ ವಿಚಾರಗಳನ್ನು, ವಿವರಗಳನ್ನು ನೀಡಿದ್ದಾರೆ. ಕಾವ್ಯಗಾಯನ ಕಲೆಗೆ ಬೇಕಾದ ಅದ್ಭುತ ಸಾಹಿತ್ಯ-ಸಂಗೀತ ಸಂಸ್ಕಾರವನ್ನು ವಿಶ್ಲೇಷಿಸಿದ್ದಾರೆ. ಗಮಕ ವಾಚನದ ಮೂಲಕ ಒಂದು ಕಾಳದ ಸಂಸ್ಕೃತಿಯನ್ನೂ, ಇತ್ತ ಶಾಸ್ತ್ರದ ಲಕ್ಷಣ ಅತ್ತ ಸೌಂದರ್ಯದ ಚಿತ್ರಣ, ಎರಡರಲ್ಲೂ ಪಳಗಿದ ಲಕ್ಷ್ಮೀಶ ಕವಿ, ಕಾವ್ಯಗಾಯನ ಕಲೆಯ ಸ್ಪಷ್ಟ ಸ್ವರೂಪವನ್ನು ನೀಡಿದ್ದಾನೆ. "ವೀಣೆಯನ್ನು ನುಡಿಸಿಕೊಂಡು ಲವಕುಶರು ಕಾವ್ಯವನ್ನು ಹಾಡಿದರು"- ಎಂಬ ಮಾತು ಅತ್ಯಂತ ಮುಖ್ಯವಾದುದು. 'ವಾಲ್ಮೀಕಿ ರಾಮಾಯಣ'ದಲ್ಲಿಯೂ ತಂತ್ರೀಲಯಸಮನ್ವಿತಃ ಎಂಬ ಉಲ್ಲೇಖವಿದೆ. ಆದಿಕವಿ ವಾಲ್ಮಿಕಿಕವಿ ಗಮಕ ವಾಚನದ ಬಗೆಗೆ ಸ್ಪಷ್ಟಚಿತ್ರಣ ಕೊಟ್ಟಿದ್ದಾನೆ. ಇಲ್ಲಿ ವೀಣೆಯನ್ನು ಶ್ರುತಿಗಾಗಿಯೂ, ಕಾವ್ಯದ ಸೌಂದರ್ಯಕ್ಕೆ ಪೂರಕವಾಗಿಯೂ ಎಂಬಂತೆ ಬಳಸಿದ್ದಾನೆ. ಸಂಸ್ಕೃತದ ಆಕರದಲ್ಲಿ ಕಾವ್ಯವಾಚನಕ್ಕೆ ಸಂಗೀತದ ಅವಶ್ಯಕತೆಯನ್ನು ಒತ್ತಿ ಹೇಳಿದಂತೆ ಪಾಶ್ಚಾತ್ಯ ಸಾಹಿತ್ಯದಲ್ಲಿ ಕಾವ್ಯಕ್ಕೆ ಸಂಗೀತ ಒತ್ತಾಸೆ ನೀಡಿದ ಸಂದರ್ಭಗಳು ಕಂಡುಬರುತ್ತವೆ. ಪುರಾತನ ಗ್ರೀಕ್ ಕವಿಗಳು ತಮ್ಮ ಕಾವ್ಯಗಳನ್ನು ಹಾಡುವಾ 'ಲೈರ್' ಎಂಬ ತಂತಿವಾದ್ಯವನ್ನು ನುಡಿಸಿಕೊಂಡು ಹಾಡುತ್ತಿದ್ದರು. 'ಲೈರ್' ವಾದ್ಯದೊಂದಿಗೆ ಹಾಡುತ್ತಿದ್ದ ಗೀತೆಯೇ 'ಲಿರಿಕ್' ಎಂದಾಯಿತು. ಹೊಸ ಕನ್ನಡ ಸಾಹಿತ್ಯದ 'ಭಾವಗೀತೆ' ಎಂಬ ಪದವನ್ನು ಇಂಗ್ಲೀಷಿನ 'ಲಿರಿಕ್' ಎಂಬ ಪದದ ಸಮಾನಾರ್ಥವಾಗಿ ಬಳಸಲಾಯಿತು. ಸಾಮಾನ್ಯವಾಗಿ ಚರಣ ಅಥವಾ ನುಡಿಗಳಂತೆ ವಿಂಗಡವಾಗುತ್ತಾ, ಕವಿಯ ವೈಯುಕ್ತಿಕ ಭಾವಗಳನ್ನು ನೇರವಾಗಿ ಅಭಿವ್ಯಕ್ತಗೊಳಿಸುವ ಸಣ್ಣ ಕವಿತೆಯೇ ಇಂಗ್ಲಿಷಿನಲ್ಲಿ 'ಲಿರಿಕ್'ಆಗಿ ಹೊಸಗನ್ನಡ ಸಾಹಿತ್ಯದ 'ಭಾವಗೀತೆ'ಗಳಾಗಿ ಬಂದವು. ಈ ಭಾವಗೀತೆಗಳೇ ಮುಂದೆ ಸುಗಮಸಂಗೀತ ಪ್ರಕಾರವಾಗಿ ರೂಪುಗೊಂಡವು.

'ಕವಿರಾಜಮಾರ್ಗ'ದಲ್ಲಿ ಉಕ್ತವಾಗಿರುವ 'ಚತ್ತಾಣ' ಮತ್ತು 'ಬೆದಂಡೆ', ಕಾವ್ಯಾವಲೋಕನದಲ್ಲಿ ಉಕ್ತವಾಗಿರುವ 'ಮೆಲ್ವಾಡು, ಪದ, ಬಾಜನೆಗಬ್ಬ-ಇವುಗಳನ್ನು ಗಮನಿಸಿ ಪರಿಶೀಲಿಸಿದರೆ ಇವೆಲ್ಲಾ ಹಾಡತಕ್ಕಂತ ಪದ್ಯಕಾವ್ಯಗಳೆಂದು ತಿಳಿದುಬರುತ್ತದೆ. ಕಬ್ಬಿಗರ ಕಾವ್ಯ, 'ಸೂಕ್ತಿ ಸುಧಾರ್ಣವ' ಮುಂತಾದ ಕೆಲವು ಕಾವ್ಯಗಳಲ್ಲಿನ ಉಲ್ಲೇಕಗಳು 'ಬೆದಂಡೆ' ಹಾಡುಗಬ್ಬವೆಂಬ ಅಂಶವನ್ನು ಸಮರ್ಥಿಸುತ್ತದೆ.

'ಬೆದಂಡೆ' ಪದವು 'ವೈದಂಡಿಕಾ' ಎಂಬ ಸಂಸ್ಕೃತ ಶಬ್ದದ ಅಪಭ್ರಂಶ ರೂಪವಾಗಿದೆ. 'ವಿದಂಡಾ' ಸಂಬಂಧವಾದದ್ದು 'ವೈದಂಡಿಕಾ'. ಕನ್ನಡದಲ್ಲಿ 'ದಂಡಿಗೆ' ಎಂಬ ಪದವೇ ಸಂಸ್ಕೃತದಲ್ಲಿ 'ದಂಡಿಕಾ' ಎಂಬ ಶಬ್ದದಿಂದ ಬಂದದ್ದು. 'ಎನ್ನಕಾಯವ ದಂಡಿಗೆಯ ಮಾಡಯ್ಯ' ಎಂಬ ಬಸವೇಶ್ವರರ ಉಕ್ತಿ; -'ದಂಡಿಗೆ ಬೆತ್ತ ಹಿಡಿಸಿದಳಣ್ಣ' - ಎಂಬ ಪುರಂದರದಾಸರ ಮಾತು 'ಬಲಗೈಯಿಂದ ಮಿಡಿವುತ ಭಾರಿ ದಂಡಿಗೆಯ'- ಎಂಬ ರತ್ನಾಕರನ ವರ್ಣನೆ, ಇವುಗಳಿಂದ 'ದಂಡಿಗೆ' ಎಂದರೆ ಈಗಿನ ಕಾಳದ ಗೋಟುವಾದ್ಯದಂತಹ 'ವೀಣೆ' ಅಥವಾ ಸಾಧಾರಣ ತಂಬೂರಿ ಎಂದು ತಿಳಿಯಬಹುದು. ಆದ್ದರಿಂದ 'ಬೆದಂಡೆ' ಎಂಬುದು 'ದಂಡಿಕಾ' ವಾದ್ಯದೊಂದಿಗೆ ಹಾಡುತ್ತಿದ್ದ ಕಾವ್ಯ ಎಂದು ಊಹಿಸಬಹುದು. ಸಂಸ್ಕೃತದ 'ಚಿತ್ತಾಯತನ' ಕನ್ನಡದ 'ಚತ್ತಾಣ'ವನ್ನು ನಾಗವರ್ಮ ಹೇಳುವ ಬಾಜನೆಗಬ್ಬದೊಂದಿಗೆ ಸಮೀಕರಿಸಿ 'ಚತ್ತಾಣ' ಓದುಗಬ್ಬ ಎಂದು ತೀನಂಶ್ರೀ ಅವರು ಅಭಿಪ್ರಾಯಪಟ್ಟಿದ್ದಾರೆ. 'ಬಾಜನ-'ವಾಚನ' ಎಂಬ ಸಂಸ್ಕೃತ ಪದದ ತದ್ಭವವಾದ್ದರಿಂದ 'ಬಾಜನೆಗಬ್ಬ' ಎಂದರೆ ವಾದ್ಯವಾದನ ಸಮೇತ ಹಾಡುವ ಕಾವ್ಯವೆಂದು ತಿಳಿಯಬಹುದು.

ತಾಳನಿಬದ್ಧವಾಗಿ ಹಾಡುವುದು 'ಗಾನವೆಂದೂ' ತಾಳವನ್ನು ಅಲಕ್ಷಿಸಿ ವಿವಿಧ ರಾಗಗಳ ಮೂಲಕ ಕಾವ್ಯವನ್ನು ಹಾಡುವುದು 'ವಾಚನ' ಅಥವಾ 'ಓದುವುದು' ಎಂದೂ ವ್ಯವಹರಿಸಿರುವುದು ಬಹಳ ಹಿಂದಿನಿಂದಲೇ ರೂಢಿಗೆ ಬಂದಂತೆ ಕಾಣುತ್ತದೆ. ಕನ್ನಡ ಕವಿಗಳು, ಓದು, ವಾಚಿಸು ಎಂಬ ಕ್ರಿಯಾಪದಗಳಿಗೆ ರಾಗಸಹಿತವಾಗಿ ಪಠಿಸು ಎಂಬ ಅರ್ಥವನ್ನು ಕಡೆಯ ಪಕ್ಷ ಒಂದು ಸಾವಿರ ವರ್ಷಗಳಷ್ಟು ಹಿಂದಿನಿಂದಾದರು ಬಳಸುತ್ತಿರುವುದು ಕಂಡುಬರುತ್ತದೆ.

ರನ್ನ(೯೯೦) 'ಭರತಮನೋದುವ ಸಪ್ತಸ್ವರಮಂ ಕುಣಿಯಿಸುವ' - ಎನ್ನುವ ಜನ್ನ (೧೨೨೫) ಚಂಪೂಕೃತಿಯೊಳ್ ಓದಿಪೊಗಳ್ವ-ಎನ್ನುವ, ಅಗ್ಗಳನು (೧೨೦೦) ಸರಸ ಕವಿಕಾವ್ಯ ಮಧು ಮತ್ತೇ ರಾಗದೊಳ್ ಪೊರೆದುಪೊಂಗೆ-ಎನ್ನುವಲ್ಲಿ, ಕಾವ್ಯಗಳನ್ನು ರಾಗದಿಂದ ಓದಿ ಹೇಳುವ ರೂಢಿಯನ್ನು ಹೇಳುತ್ತಾ, ರಾಗದಿಂದ ಕಾವ್ಯ ಪಡೆಯುವ ಉತ್ತಮ ಫಲವನ್ನು ವಿವರಿಸಿದ್ದಾರೆ.

(೧೨೨೫) ಗುಣವರ್ಮ: ಪೂರ್ಣಕಥೆಯನೊರ್ವಳ್ ಸುರಾಗದಿಂವಾಚಿಸಿದಳ್'-ಎನ್ನುತ್ತಾ ಮಹಿಳಾ ಗಮಕಿಗಳ ಬಗೆಗೆ ವಿವರಗಳನ್ನು ನೀಡಿದರೆ, ಸಿಂಗಿರಾಜ (೧೪೪೦-೧೫೫೦); ಕವಿಗಳ ಸಮೂಹದ 'ಗಮಕಿಗಳ ನಿವಹ' ಎಂದು ರಾಜಾಸ್ತಾನದಲ್ಲಿ ಗಮಕಿಗಳು ಇದ್ದ ಬಗೆಯನ್ನು ತಿಳಿಸಿದ್ದಾನೆ. ಕುಮಾರವ್ಯಾಸ. ಓದಿ ಹೊಗಳಿಸಿಕೊಂಡ ಗಮಕಿಗಳು ಎಂದು ಕಾವ್ಯವಾಚನದಲ್ಲಿ ಪ್ರಶಂಸನೀಯರಾದ ಗಮಕಿಗಳ ವೈಭವವನ್ನು ಚಿತ್ರಿಸಿದ್ದಾನೆ. ರತ್ನಾಕರವರ್ಣಿಯಂತೂ, ಕಾವ್ಯವಾಚನವನ್ನು ಮಾಡುತ್ತಿದ್ದ ಗಮಕಿಯೊಬ್ಬಳ ಬಗೆಗೆ ಚಿತ್ರಕಾವ್ಯವನ್ನೇ ತೆರೆದಿದ್ದಾನೆ.

**ಇನ್ನೋದು ಕಾವ್ಯವನೆಂದನಾ ಪಾಡುವ**
**ಕನ್ನೆಯಾ ಹೊತ್ತಗೆ ವಿಡಿದು**
**ಕನ್ನೆಗೋಗಿಲೆ ತಾನೆ ಬಾಯ್ದೆರೆದುದೊಯೆಂಬ**
**ಬಿನ್ನಾಣವೆಸೆಯಲೋದಿದಳು ||**

**ಪಡಲಿಗೆ ಹೊತ್ತಗೆಯ ದಾರವನೊತ್ತಿ**
**ಸಡಲಿಸಿ ಕಿರಿದೋಲೆಗಳನು**
**ಎಡಗೈಯೊಳಾಂತೋದಿದಳು ಬಲಗೈಯಿಂದ**
**ಮಿಡಿವುತ ಭಾರಿದಂಡಿಗೆಯ ||**

'ಕನ್ನೆಕೋಗಿಲೆ ತಾನೆಯೋ' ಎಂಬಂತೆ ಹಾಡಿದ ಬಿನ್ನಾಣಗಿತ್ತಿಯಾದ ಗಮಕವಿದುಷಿಯ ವಾಚನದ ಚಿತ್ರಣ ಇಲ್ಲಿದೆ. ಓಲೆಗರಿಯನ್ನು ಎಡದಗೈಯಲ್ಲಿ ಹಿಡಿದುಕೊಂಡು ಬಲಗೈಯಿಂದ ದಂಡಿಗೆ (ತಂಬೂರಿ)ಯನ್ನು ಮಿಡಿಯುತ್ತಾ ಹಾಡಿದಳು. 'ಪಾಡುವಕನ್ನೆ' ಎಂಬುದರಲ್ಲಿ ಗಮಕವನ್ನು ವೃತ್ತಿಯಾಗಿಸಿಕೊಂಡಿದ್ದಳು ಎನ್ನುವುದು ವ್ಯಕ್ತವಾಗುತ್ತದೆ. ಈ 'ಪಾಡುವಕನ್ನೆ' ಯಾದರೋ ಕೋಗಿಲೆ ಬಾಯ್ದೆರೆದುದೋ ಎಂಬಂತೆ ಕಾವ್ಯವನ್ನು ಹಾಡಲಿಲ್ಲ. ಕಾವ್ಯವನ್ನು ಓದಿದಳು ಎನ್ನುವಲ್ಲಿ 'ಓದಿದಳು'-ಎನ್ನುವ ಪದವನ್ನು ಗಮನಿಸಬೇಕು. ಕಾವ್ಯದ ಒಳಅಂಗಳಕ್ಕೆ ಸಂಗೀತದಿಂದ ಇಳಿದು, ಒಳಗುಹೊರಗನ್ನು ಒಮ್ಮೆಲೆ ಬೆಳಗಿಸುವುದೇ ಈ ಓದುವಿಕೆ. ಸಂಗೀತ ಕೇವಲ ತೆಳು ಪರದೆ ಮಾತ್ರ. ಒಳಗಿನ ಚೆಲುವನ್ನು ಬೆಳಗಿಸುವ ಸಾಧನ ಮಾತ್ರ ಎನ್ನುವುದೇ 'ಗಮಕ' ಕಲೆ ಸಾರುತ್ತಾ ಬಂದ ಸಂದೇಶ.

ಚಂಪೂ, ಷಟ್ಪದಿ, ರಗಳೆ, ಸಾಂಗತ್ಯ ತ್ರಿಪದಿರೂಪಗಳಿದ್ದ ನಮ್ಮ ಹಳೆಗನ್ನಡ ಹಾಗೂ ನಡುಗನ್ನಡದ ಕವಿತೆಗಳು 'ಗೋಷ್ಠಿ'ಯ ಅಲಂಪಿನ ಇಂಪುಗಳ ಮೂಲಕವೇ ಜನತೆಯನ್ನು ತಲಪಿ, ಕವಿಗಳ ಮಹತ್ವವನ್ನು ಅಳತೆ ಮಾಡುತ್ತಿದ್ದವು. ಪ್ರತಿಯೊಬ್ಬ ಕವಿ ಸ್ವತಃ ಹಾಡುಗಾರರನಾಗಿದ್ದನೋ, ಇಲ್ಲವೋ, ಆದರೆ ಆಗ 'ಗಮಕದ' ಗತನ್ನು ಬಲ್ಲವನಂತೂ ಆಗಿರುತ್ತಿದ್ದ. ಭಕ್ತಿ, ವೀರ, ವೈರಾಗ್ಯ, ಶೃಂಗಾರ ಭಾವಗಳನ್ನು ಉದ್ದೀಪಿಸುವ ಕವಿತೆಗಳು ರಸಾನುಭವವನ್ನು ಕೊಡುವ ಮೂಲಕ, ಕೇಳುಗನಿಗೆ ಕವಿಯ ಭಾವಸಂದೇಶವನ್ನು ವಿಸ್ತರಿಸುತ್ತಿದ್ದವು. 'ಕುಮಾರವ್ಯಾಸ' ಲಕ್ಷ್ಮೀಶರ ಮಹಾಕಾವ್ಯಗಳು, ಕರ್ನಾಟಕದಾದ್ಯಂತ ಜನಪ್ರಿಯವಾಗಲು 'ಗಮಕಕಲೆ' ಯೇ ಕಾರಣವಾಯ್ತು.

'ಸಾಹಿತ್ಯಕ್ಕಾಗಿ ಸಂಗೀತ' ರೂಪುಗೊಂಡದ್ದನ್ನು ಪ್ರಪಂಚದ ವಿವಿಧ ಸನ್ನಿವೇಶಗಳಲ್ಲಿ ಕಂಡುಬಂದಂತೆ, ಆ ಕಾವ್ಯವನ್ನು ವಾಚಿಸುವ ಸಂಗೀತ ಶೈಲಿ ಸಾಹಿತ್ಯದ ಸ್ವರೂಪ ಬದಲಾದಂತೆಲ್ಲಾ ತಾನೂ ಬದಲಾಗುತ್ತಾ ಬಂದಿದೆ. ಕುಮಾರವ್ಯಾಸ ಲಕ್ಷ್ಮೀಶರಂಥ ಷಟ್ಪದಿ ಕವಿಗಳನ್ನು ಓದುವ ಸಂಗೀತ ಶೈಲಿ, ಒಂದು ಬಗೆಯಾದರೆ ಸರ್ವಜ್ಞನಂಥ ತ್ರಿಪದಿಕಾರನನ್ನು ಓದುವ ಶೈಲಿ ಇನ್ನೊಂದು. ರತ್ನಾಕರನಂಥ ಸಾಂಗತ್ಯಕಾರನನ್ನು ಓದುವ ಶೈಲಿ ಮತ್ತೊಂದು. ಜಾನಪದ ಲಾವಣಿಗಳನ್ನು ಓದುವ ಶೈಲಿ ಮಗದೊಂದು. ಇವೆಲ್ಲಾ ಗಮಕದ ವಿಶಾಲ ಕಕ್ಷೆಯಲ್ಲಿ ಬರುವುದಾದರೂ ಸೂಕ್ಷ್ಮವಾದ ಅಂತಃಭೇದಗಳನ್ನು ಹೊಂದಿದೆ ಎನ್ನುವುದು ಗಮನಿಸಬೇಕಾದ ಅಂಶ. ಕಾವ್ಯವು ಹೊರಳಿದಂತೆಲ್ಲಾ ಸಂಗೀತವೂ ಕೂಡ ಹೊರಳುತ್ತಾ ಕಾವ್ಯವನ್ನು ಅನುಸರಿಸುತ್ತಾ ಬದಲಾಗುತ್ತಾ ಬಂದಿತು. ಭಾಷೆಯ ಬಂಧ, ವಸ್ತು, ಶೈಲಿ, ಭಾವ, ಬದಲಾದಂತೆಲ್ಲಾ, ಸಂಗೀತವೂ ಅದಕ್ಕೆ ಪೂರಕವಾಗುತ್ತಾ, ಹೊಂದಿಕೊಳ್ಳುತ್ತಾ ಬಂದಿತು. ಸುಗಮಸಂಗೀತವೂ ಇದಕ್ಕೆ ಹೊರತಾಗಲಿಲ್ಲ.

ಸುಗಮಸಂಗೀತವು ಗಮಕ ಕಲೆಯ ವಿಸ್ತರಣೆಯಾಯಿತು. ಶಾಸ್ತ್ರೀಯ ಸಂಗೀತದ ರಾಗಗಳನ್ನು ಭಾವಾನುವರ್ತಿಗೊಳಿಸಿ, ಒಂದು ಕವಿತೆಗೆ ದಾಟಿ ಹಚ್ಚುತ್ತಾ, ಹಾಡುತ್ತಾ, ಕವಿತೆಯನ್ನು ಜನಪ್ರಿಯಗೊಳಿಸುವಲ್ಲಿ ಮಹತ್ತರ ಸಾಧನೆ ಮಾಡಿತು. ನವೋದಯ ಕಾಲದ ಕವಿತೆಗಳು ಅವುಗಳ ಹ್ರಸ್ವತೆ ಮತ್ತು ಗೇಯಗುಣದಿಂದಾಗಿ, ಸಂಗೀತಗಾರರ ಗಮನವನ್ನು ಸೆಳೆದುಕೊಂಡವು. ಇದರ ಪರಿಣಾಮವಾಗಿ ಆ ಕಾಲದ ಕವಿತೆಗಳನ್ನು ಹಾಡುಗಾರಿಕೆಗೆ ಅಳವಡಿಸುವ ಹೊಸ ಪ್ರಯೋಗವೊಂದು ಪ್ರಾರಂಭವಾಯಿತು. ಅದು ಅನಂತರ 'ಸುಗಮಸಂಗೀತ'ವೆಂಬ ಪರಂಪರೆಯಾಗಿ ಬೆಳೆದು ಬಂದಿತು.

ಭಾವಾಭಿನಯದ ಮೂಲಕ ಅಭಿವ್ಯಕ್ತವಾಗುವ ಕವಿತೆಗಳನ್ನು ರಾಗಾಭಿನಯದ ಮೂಲಕ ನಿರೂಪಿಸಲು ಪ್ರಾರಂಭಿಸಿದ ಸುಗಮಸಂಗೀತದಲ್ಲಿ ಆತ್ಮಾವಲೋಕನದ ಹೊಸ ಭಾವವೂ ಪ್ರಕಾಶಗೊಳ್ಳಲು ತೊಡಗಿತು. ಜನಪರವಾದ ಸುಗಮಸಂಗೀತ ಜೀವನದ ಪ್ರತಿಬಿಂಬವೂ, ಗತಿಬಿಂಬವೂ ಆಗಿ ಜನಪ್ರಿಯವಾಗತೊಡಗಿತು. ಅಕ್ಷರಸ್ಥರಿಗೂ, ಅನಕ್ಷರಸ್ಥರಿಗೂ ಕವಿಯ ಕವಿತೆಯನ್ನು ಪರಿಣಾಮಕಾರಿಯಾಗಿ ತಲುಪಿಸಿತು.

ತಾಳನಿಬದ್ಧವಾದ ಗಮಕ ಗಾಯನದಿಂದ ಪ್ರೇರಣೆ ಪಡೆದ ಸುಗಮಸಂಗೀತ ತಾನು ತಾಳಕ್ಕೆ ಬದ್ಧವಾಯಿತು. ಜೊತೆಗೆ ಪಕ್ಕವಾದ್ಯ ಪರಿಕರಗಳನ್ನೂ ಸೇರಿಸಿಕೊಂಡು ತನ್ನ ದಿಗಂತಗಳನ್ನು ಮತ್ತಷ್ಟು ಹಿಗ್ಗಿಸಿಕೊಂಡಿತು. ವಾಚನದ ಉತ್ತಮಾಂಶಗಳನ್ನು ಅರಗಿಸಿಕೊಂಡು ಆ ವಾಚನ ಶೈಲಿಗೆ ಸಂಗೀತದ ಮೆರಗನಿತ್ತಿದ್ದೇ ಅಲ್ಲದೆ ಲಯ ವೈವಿಧ್ಯತೆಗಳಿಂದ, ಭಾವಪ್ರಕಾಶನದ ಪ್ರಸ್ತುತಿಯಿಂದ ಸ್ವಂತಿಕೆಯನ್ನು ತಂದಿತು.

* * *

# ಅಧ್ಯಾಯ ೩ - ಭಾವಗೀತೆಯ ನವೋದಯ

ಮಾನವ ಸಮಾಜದಲ್ಲಿರುವಾಗ ಸಂಘಜೀವಿಯಾಗಿದ್ದು, ತಾನು ಕಂಡ ಚೆಲುವು, ಉಂಡ ನಲಿವು, ಇವುಗಳು ಇತರರಿಗೂ ದೊರೆಯಲಿ, ಮುಂದೆಯೂ ಉಳಿಯಲಿ ಎಂಬ ಆಕಾಂಕ್ಷೆಯಿಂದ ಅದನ್ನು ಮತ್ತೊಬ್ಬರಲ್ಲಿ ಹೇಳಿಕೊಳ್ಳುತ್ತಾನೆ. ಸಮಾನವು ವಿಕಾಸಗೊಡಂತೆ ಅವನ ಅನುಭವವೂ ವಿಕಾಸಗೊಳ್ಳುತ್ತದೆ. ಭಾಷೆಯೂ ವಿಕಾಸಗೊಳ್ಳುತ್ತದೆ. ಅಂತೆಯೇ ಸಾಹಿತ್ಯವೂ ವಿಕಾಸಗೊಳ್ಳುತ್ತದೆ. ಈ ವಿಕಸನದಲ್ಲಿ ಹಲವು ಬಾರಿ ತಡೆಯಾಗಬಹುದು; ಹಲವು ಸಾರಿ ಕವಲು ದಾರಿಗಳಲ್ಲಿ ನಡೆಯಬಹುದು. ಇದೆಲ್ಲವೂ ಸಮಾಜದಲ್ಲಿ ಆಗುವ ಬದಲಾವಣೆಯನ್ನವಲಂಬಿಸಿರುತ್ತದೆ. ಆಯಾ ಕಾಲಕ್ಕೆ ಆಯಾ ಸಮಾಜದ ಸ್ಥಿತಿಗೆ ಅನುಗುಣವಾದ ಸಾಹಿತ್ಯವು ಸೃಷ್ಟಿಯಾಗುತ್ತದೆ. ಇದು ಸಾಹಿತ್ಯದ ನಿಯಮ. ಈ ರೀತಿಯಲ್ಲಿಯೇ ಕನ್ನಡ ಕಾವ್ಯದ ಇತಿಹಾಸದಲ್ಲಿ ಹಳಗನ್ನಡ ನಡುಗನ್ನಡ ಮತ್ತು ಹೊಸಗನ್ನಡ ಕಾವ್ಯಗಳು ರೂಪುಗೊಂಡವು.

ಕನ್ನಡ ಕಾವ್ಯದ ಇತಿಹಾಸ ಆರಂಭದಿಂದಲೂ ಸಂಸ್ಕೃತದ ಸಂಪರ್ಕದಲ್ಲಿ ಬೆಳೆದು ಬಂದಿತು. ಕನ್ನಡ ಸಾಹಿತ್ಯಕ್ಕೆ ಸಂಸ್ಕೃತ ಸಾಹಿತ್ಯವೇ ಪ್ರೇರಕ, ಪೋಷಕ ಗುರುವಾಯಿತು. ಸಂಸ್ಕೃತ ಸಾಹಿತ್ಯದಿಂದ ಕನ್ನಡ ಸಾಹಿತ್ಯ ಉದ್ದಕ್ಕೂ ಸ್ಫೂರ್ತಿ ಪಡೆಯಿತು. ಹಳೆಯದನ್ನು ಬಿಸುಟು ಹೊಸದನ್ನು ಬರಮಾಡಿಕೊಳ್ಳುವ ಬದುಕಿನ ಜೀವಂತಿಕೆಯ ಹೊರಳಿನಲ್ಲಿ ಕನ್ನಡ ಭಾಷೆಯೂ ಹೊರತಾಗದೆ ಇಂಗ್ಲಿಷ್ ಭಾಷೆಯ ಪ್ರಭಾವಕೆಕ ಒಳಗಾಯಿತು. ೧೯ನೇಯ ಶತಮಾನದಲ್ಲಿ ಇಂಗ್ಲಿಷರ ಆಳ್ವಿಕೆಯಲ್ಲಿ ಪಾಶ್ಚಾತ್ಯರ ನಾಗರೀಕತೆ, ಐಹಿಕ ಸಾಧನ ಸಂಪತ್ತು, ರಾಜ್ಯಶಾಸ್ತ್ರ, ಕಲೆ, ಮತ ಸಾಹಿತ್ಯ ಮುಂತಾದವುಗಳಿಗೆ ಸಂಬಂಧಪಟ್ಟ ನವೀನ ಜ್ಞಾನದ ಸೆಳೆತಕ್ಕೆ ಮಿಕ್ಕ ದೇಶಭಾಷೆಗಳಂತೆಯೇ ಕನ್ನಡವೂ ಸಿಕ್ಕಿ ಒಂದು ಹೊಸ ದೇಶಾಭಿಮಾನವನ್ನೂ, ಹೊಸರುಚಿಯನ್ನೂ ಕಲಿತು, ಹೊಸರೀತಿಗಳಲ್ಲಿ ಕಾವ್ಯ ಸೃಷ್ಟಿಯ ಕಾವ್ಯಾಭ್ಯಾಸ ಪ್ರಾರಂಭವಾಯಿತು. ಭಾಷಾಂತರಗಳೂ, ಅನುಕರಣಗಳು, ಸ್ವಂತ ಕವಿತೆಗಳು, ಹೊಸಕಾವ್ಯ ರೂಪಗಳು, ಹೊಸ ಛಂದಸ್ಸುಗಳು, ಹೊಸ ಅಭಿಪ್ರಾಯಗಳು ಸಂಪ್ರದಾಯವನ್ನು ಮರೆತು ಸ್ವಾತಂತ್ರ್ಯ ಪ್ರಿಯತೆಯನ್ನು ಮೈಗೂಡಿಸಿಕೊಳ್ಳತೊಡಗಿದವು. ಇಂಗ್ಲಿಷ್ ಸಾಹಿತ್ಯವನ್ನು ಅಭ್ಯಾಸ ಮಾಡಿದವರು ಕನ್ನಡ ಕಾವ್ಯಕ್ಕೂ ಅದಕ್ಕೂ ಇದ್ದ ವ್ಯತ್ಯಾಸಗಳನ್ನು ಮನನ ಮಾಡುತ್ತಾ, ವ್ಯಕ್ತಿ ಸ್ವಾತಂತ್ರ್ಯ ಸಹಜತೆಗೆ, ಒತ್ತು ಕೊಡತೊಡಗಿದರು. ಜನಸಾಮಾನ್ಯರ ಆಶೋತ್ತರಗಳ ಕಡೆಗೆ, ಪ್ರಕೃತಿಯ ಕಡೆಗೆ ಸಾಹಿತ್ಯ ತಿರುಗಲು ಪ್ರಾರಂಭವಾಯಿತು. ಜಾನಪದ ಛಂದಸ್ಸನ್ನು ಪ್ರೌಢವಾದ ವಸ್ತುವಿಗೆ ಬಳಸುವುದೂ, ಜನಬಳಕೆಯ ಆಡುಮಾತಿನ ಹತ್ತಿರ ಹತ್ತಿರದ ಭಾಷೆಯನ್ನೇ ಸಾಹಿತ್ಯದಲ್ಲಿ ಬಳಸುವುದು ಹೊಸತನದ ಅಲೆ ಎಬ್ಬಿಸಿತು. ಸಾಹಿತ್ಯದ ರೂಪ, ವಸ್ತು, ಶೈಲಿ ಎಲ್ಲವೂ ಹೊಚ್ಚ ಹೊಸದಾಯಿತು.

೧೯ನೆಯ ಶತಮಾನದ ಕೊನೆಯಲ್ಲಿ ಹಳೆಯದರ ನಡುವೆ ಹೊಸದು ಅಲ್ಲಲ್ಲಿ ಕಾಣಿಸಿಕೊಂಡಿತು. ಹೊಸಹೊಲೆಯು ಹರಿದ ಕವಲು ದಾರಿಗಳು ಹತ್ತಾರಾದವು. ಕನ್ನಡಕ್ಕೆ ಇಂಗ್ಲಿಷ್ ನಾಟಕಗಳು ರೂಪಾಂತರಗೊಂಡು ಬರತೊಡಗಿದವು. ಷೇಕ್ಸ್‌ಪಿಯರ್‌ನ 'ಒಥೆಲೊ' ಕನ್ನಡಕ್ಕೆ ರೂಪಾಂತರಗೊಂಡು 'ಶೂರಸೇನ ಚರಿತ್ರೆ'ಯಾಯಿತು. ರೋಮಿಯೋ ಎಂರ್ಡ್ ಜೂಲಿಯೆಟ್ 'ರಾಮವರ್ಮ

ಲೀಲಾವತಿ'ಯಾಯಿತು. ದಿ ಟೇಮಿಂಗ್ ಆಫ್ ದಿ ಶ್ರೂ 'ಚಂಡೀಮದಮರ್ದನ'ವಾಗಿ ಬಂತು. ಅಲ್ಲಲ್ಲಿ ಇಂಗ್ಲಿಷ್ ಕವಿತೆಗಳ ಅನುವಾದಗಳೂ, ಸ್ವತಂತ್ರವಾಗಿ ಅವುಗಳ ರೀತಿಯನ್ನನುಸರಿಸುವ ಕವಿತೆಗಳೂ ಬಂದವು. ಹಾಡುಗಳನ್ನು ಕಂದ, ವೃತ್ತಗಳಲ್ಲಿಯೂ ಬರೆಯಲಾಯಿತು.

ಮೈಸೂರಿನಲ್ಲಿ ರಾಜಾಶ್ರಯವಿದ್ದುದರಿಂದ ಕನ್ನಡದ ಕಾವ್ಯ ಉಸಿರಾಡಿಕೊಂಡಿತ್ತು. ಆದರೆ, ಉತ್ತರ ಕರ್ನಾಟಕದಲ್ಲಿ ಮರಾಠಿಯವರ ಪ್ರಾಬಲ್ಯದಿಂದ ಕನ್ನಡಕ್ಕೆ ಸಜಹವಾಗಿಯೇ ಸಿಗಬೇಕಾಗಿದ್ದ ಸ್ಥಾನವೂ ಇರಲಿಲ್ಲ. ಮೈಸೂರು ಮತ್ತು ಮಂಗಳೂರು ಕಡೆಗಳಲ್ಲಿ ಸಂಪ್ರದಾಯಬದ್ಧತೆ ಮುಂತಾದ ಕಾರಣಗಳಿಂದ ಕಾವ್ಯವು ಜನಸಾಮಾನ್ಯರಿಂದ ದೂರವಾಯಿತು. ಧಾರವಾಡ ಜಿಲ್ಲೆಯಲ್ಲಿ ಬರಿಯ ಮರಾಠಿ ಶಾಲೆಗಳೇ ತುಂಬಿ, ಕನ್ನಡ ಕಲಿಸುವ ಶಾಲೆಗಳಲ್ಲಿ ಮರಾಠಿಯನ್ನು ಬಾಲಬೋಧ ಲಿಪಿಯನ್ನಾಗಿ ಕಲಿಸಬೇಕೆಂದು ಸರ್ಕಾರವೇ ಆಜ್ಞೆವಿಧಿಸಿತ್ತು. ಶೇಷಗಿರಿರಾವ್ ಚೂರಮುರಿಯವರಂತಹ ಕಟ್ಟಾ ಕನ್ನಡದ ಅಭಿಮಾನಿಗಳು, ೧೮೨೨-೨೮ರ ಸುಮಾರಿನಲ್ಲಿ 'ಶಾಕುಂತಲ' ನಾಟಕದ ಅನುವಾದ, ಎಲ್ಲಾ ಭಾಷೆಯಲ್ಲಿದ್ದರೂ, ಕನ್ನಡ ಭಾಷೆಯಲ್ಲಿ ಇರಲಿಲ್ಲವೆಂದೂ ತಾವು ಸಾಯುವ ಮೊದಲು ಹೇಗೋ ಆ ನಾಟಕವನ್ನು ಕನ್ನಡಕ್ಕೆ ತಂದುದಾಗಿಯೂ ಹೇಳಿಕೊಂಡರು. ೧೮೯೦ನೇ ಇಸವಿಯಲ್ಲಿ ಶ್ರೀರಾಮಚಂದ್ರ ಹನುಮಂತ ದೇಶಪಾಂಡೆ, ವೆಂಕಟರಂಗೋಕಟ್ಟಿ, ಶ್ಯಾಮರಾವ್‌ವಿಠಲ, ಧೋಂಡೋನರಸಿಂಹ ಮುಳಬಾಗಿಲು ಮುಂತಾದ ಕನ್ನಡದ ಕಟ್ಟಾಭಿಮಾನಿಗಳಿಂದ ವಿದ್ಯಾವರ್ಧಕ ಸಿಂಘವು ಸ್ಥಾಪಿತವಾಯಿತು. ಮರಾಠಿಯ ಮೋಹದೊಳಗೆ ಸಿಲುಕಿಕೊಂಡ ಕನ್ನಡಿಗರ ಕಣ್ಣು ತೆರೆಯಿಸಲು ಹಲವಾರು ಮಹನೀಯರು ತಮ್ಮ ಕಾಣಿಕೆ ಸಲ್ಲಿಸಿದರು. ಭುಜಂಗರಾವ್ ಹುಯಿಲಗೋಳ, ಅಣ್ಣರಾವಸವದಿ, ಶೇಷಗಿರಿರಾವ್ ಚೂರಿಮುರಿ, ಗಂಗಾಧರ ಮಡಿವಾಳೇಶ್ವರ, ಡೆಪ್ಯೂಟಿ ಚೆನ್ನಬಸಪ್ಪನವರು ಮುಂತಾದವರು ಕನ್ನಡದ ಕಟ್ಟಾಳಾಗಿ ಕೆಲಸ ಮಾಡಿದರು. ಡೆಪ್ಯೂಟಿ ಚೆನ್ನಬಸಪ್ಪನವರಂತೂ ವಿದ್ಯಾ ಇಲಾಖೆಯೊಂದಿಗೆ ಸತತವಾಗಿ ಹೋರಾಡಿ ಧಾರವಾಡದಲ್ಲಿ ಕನ್ನಡ ಶಾಲೆಗಳಾಗುವಂತ ಮಾಡಿದರು. ಶ್ರೀ ಡಿ.ವಿ. ಗುಂಡ್ಪನವರು ಬರೆದ 'ಶ್ರೀವಿದ್ಯಾರಣ್ಯರು' ಗ್ರಂಥ ಪ್ರಸಕ್ತ ಕನ್ನಡ ಇತಿಹಾಸವನ್ನು ತೋರಿಕೊಟ್ಟು ಕನ್ನಡಿಗರಿಗೆ ಅಭಿಮಾನವುಕ್ಕುವಂತೆ ಪ್ರೇರೇಪಿಸಿತು. ಆಲೂರ ವೆಂಕಟರಾಯರು, ಮುದವೀಡು ಕೃಷ್ಣರಾಯರು, ಕನ್ನಡ ಪತ್ರಿಕೆಗಳನ್ನು ಹೊರಡಿಸಿ ಜನರಲ್ಲಿ ಕ್ನನಡದ ಅಭಿಮಾನ ತುಂಬಿ ಹೊಸ ಚೈತನ್ಯವನ್ನು ಬೆಳಗಿಸಲು ಕಾರಣರಾದರು. ತಳುಕಿನ ವೆಂಕಣ್ಣಯ್ಯನವರೂ, ಎ.ಆರ್. ಕೃಷ್ಣಶಾಸ್ತ್ರಿಗಳೂ 'ಪ್ರಬುದ್ಧ ಕರ್ನಾಟಕ'ದ ಮೂಲಕ ಹೊಸ ಕವಿಗಳನ್ನು ಬೆಳಕಿಗೆ ತಂದರು.

ಮೈಸೂರಿನ ಕಡೆ ತಾತಯ್ಯ ಎಂ. ವೆಂಕಟಕೃಷ್ಣಯ್ಯನವರು, ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರು ಕನ್ನಡಕ್ಕಾಗಿ ಪ್ರಚಾರಮಾಡತೊಡಗಿದರು. ಇಂಗ್ಲಿಷ್ ಗೀತೆಗಳು ತೆರೆದ ಹೊಸ ಬೆಳಕಿನ ಹಾದಿ ಇಂಗ್ಲಿಷ್ ಸಾಹಿತ್ಯದ ಉಕ್ತಿ ವೈವಿಧ್ಯ. ಅರ್ಥಸಂಪತ್ತು, ವಸ್ತು ವೈವಿಧ್ಯ, ಭಾವ ಸ್ವಾತಂತ್ರ್ಯ ಇವುಗಳಿಂದ ಪ್ರೇರಿತರಾದವರು ಕನ್ನಡವನ್ನು ಅನಾದರಿಸುವುದನ್ನು ಕಂಡು, ಕನ್ನಡವನ್ನು ಇಂತಹ ಸ್ಥಿತಿಯಿಂದ ಪಾರು ಮಾಡಬೇಕೆಂದು ಎಚ್ಚರಿಕೆಯ ಉಪನ್ಯಾಸಗಳನ್ನು ಬಿ.ಎಂ.ಶ್ರೀ ಅವರು ನಾಡಿನಾದ್ಯಂತ ಬಿತ್ತರಿಸಿದರ. 'ಕನ್ನಡ ಮಾತು ತಲೆ ಎತ್ತುವ ಬಗೆ' ಎಂಬುದೇ ಅವರ ಮಂತ್ರವಾಗಿತ್ತು. ಹೊಸಗನ್ನಡವನ್ನೇ ಬರೆಯಬೇಕು. ಕಠಿನ ಪದಗಳಲ್ಲಿ ಕೈವಲ್ಲವುಂಟೆಂದು ಮೋಸ ಹೋಗದೆ, ಅರ್ಥದಲ್ಲಿ ಬುದ್ಧಿಯನ್ನು ಓಡಿಸಿ ಪ್ರೌಢಿಮೆ ತೋರಿಸಬೇಕು ಎಂದು ಸಾರಿದರು. ತಮ್ಮ 'ಇಂಗ್ಲಿಷ್ ಗೀತಗಳು' ಕವಿತಾ ಸಂಗ್ರಹದ ಮೂಲಕ ಹೊಸ ಹಾದಿಯನ್ನೇ ಸೃಷ್ಟಿಮಾಡಿದರು. 'ಶ್ರೀ' ಯವರಿಗಿಂತಲೂ ಮೊದಲು ಇಂಗ್ಲಿಷ್ ಕವಿತೆಯ ಆಸ್ವಾದವನ್ನು ಪಡೆದ ಕವಿಗಳೂ ಎಸ್.ಜಿ. ನರಸಿಂಹಾಚಾರ್ಯ, ಜಯರಾಮಾಚಾರ್ಯ, ಎಸ್.ಜಿ. ಗೋವಿಂದರಾಜಯ್ಯಂಗಾರ್, ಪಂಜೆ ಮಂಗೇಶರಾಯ, ಹಟ್ಟಿಯಂಗಡಿ ನಾರಾಯಣರಾಯ, ಶಾಂತಕವಿ, ಸಾಲಿರಾಮ ಚಂದ್ರರಾಯ ಮುಂತಾದವರಿಂದ ಕನ್ನಡದ ಹೊಸಕಾವ್ಯ ಪ್ರಾರಂಭವಾದರೂ, ನಿಜವಾದ ಹೊಸತನ ಪ್ರಾರಂಭವಾಗಿದ್ದು ಬಿ.ಎಂ.ಶ್ರೀ. ಅವರಿಂದಲೇ. 'ಶ್ರೀ' ಅವರಿಗಿಂತ ಮೊದಲಿನವರು ಹಳೆಯ ಜಾಡಿನಲ್ಲಿ ಸಾಗಿದ್ದರೂ, ಕಾವ್ಯದ ರೂಪ ಬದಲಾಗಿರಲಿಲ್ಲ. ಹೊಸ ಕಾವ್ಯಕ್ಕೆ ಮನೋಭೂಮಿ ಸಿದ್ಧವಾಗಿದ್ದರೂ, ಹೊಸ ಬಣ್ಣದ ಹೂಗಳು ಚಿಗುರಿದ್ದು, 'ಶ್ರೀ' ಅವರ ಇಂಗ್ಲಿಷ್ ಗೀತಗಳು ಬಂದ ಮೇಲೆಯೇ, ಇಂಗ್ಲಿಷ್ ಸಾಹಿತ್ಯವೇ ಸಂಸ್ಕೃತ ಸಾಹಿತ್ಯದಿಂದ ನಮ್ಮ ಕನ್ನಡ ಕಾವ್ಯಮಾಲೆಗೆ ಇಳಿದಿರುವ ದೋಷಗಳನ್ನು ಪರಿಹಾರ ಮಾಡಬೇಕು ಎಂದು ಹೇಳಿ ಕಾವ್ಯಗಳ ವಸ್ತು, ರೀತಿ, ಭಾವ, ವರ್ಣನೆ, ಶೈಲಿ, ರೂಪ ಎಂದು ಆರು ಬಗೆಯಾಗಿ ಆ ದೋಷಗಳನ್ನು ತೋರಿದರು. '೧೯೨೧'ರಲ್ಲಿ 'ಶ್ರೀ' ಅವರ 'ಇಂಗ್ಲಿಷ್ ಗೀತಗಳು' ಪ್ರಕಟವಾಯಿತು. ಹಳೆಯ ಛಂದೋರೂಪಗಳ ಬಂಧನದಲ್ಲಿ ಸಿಲುಕಿ ಕಾವ್ಯ

ಕ್ಲೀಷೆಯಾಗುತ್ತಿದ್ದ ಸಂದರ್ಭದಲ್ಲಿ ನಮ್ಮ ಯುಗಧರ್ಮಕ್ಕೆ ಹೊಂದಿಕೊಳ್ಳುವಂಥ, ಅರ್ಥಪೂರ್ಣ ಎನ್ನಿಸಿಕೊಳ್ಳುತ್ತಿದ್ದ ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯದ ಪ್ರಭಾವದಿಂದ ಕನ್ನಡ ಕಾವ್ಯಕ್ಕೆ ಜೀವತುಂಬಿದ್ದೇ ಬಿ.ಎಂ.ಶ್ರೀಯವರು ಕನ್ನಡ ನವೋದಯಕ್ಕೆ ನೀಡಿದ ಮಹೋನ್ನತ ಕೊಡುಗೆಯಾಯಿತು. ನಮ್ಮ ನವೋದಯ ಕಾಲದ ಎಲ್ಲ ಕವಿಗಳು 'ಶ್ರೀ' ಅವರ ಈ ಪ್ರಯೋಗಗಳ ಪ್ರಭಾವದಿಂದ ಬೆಳೆದು ತಮ್ಮ ಸಾಹಿತ್ಯ ಸತ್ವಗುಣವನ್ನು ತೋರಿದರು. ಕಾವ್ಯದ ಹೊರರೂಪವಾದ ಛಂದಸ್ಸೇ ಇಡೀ ಒಂದು ನಾಡಿನ ಕಾವ್ಯಮಾರ್ಗದಲ್ಲಿ ಕ್ರಾಂತಿಕಾರಕ ಆಯಾಮಗಳನ್ನು ಸೃಷ್ಟಿಸಬಲ್ಲದು ಎಂಬುದಕ್ಕೆ 'ಶ್ರೀ' ಅವರು ಹಾಕಿಕೊಟ್ಟ ಕಾವ್ಯರೂಪವೇ ಸಾಕ್ಷಿಯಾಯಿತು. ಬಿ.ಎಂ.ಶ್ರೀ ಅವರಿಗೆ ಶ್ರೇಷ್ಠ ಕಾವ್ಯವನ್ನು ಕೊಡಬೇಕೆಂಬ ಆಸೆಗಿಂತ ಮಿಗಿಲಾಗಿ ಶ್ರೇಷ್ಠಕಾವ್ಯ ಪರಂಪರೆಯತ್ತ ಜನರ ಮನಸ್ಸು ಹರಿಯುವಂತೆ ಮಾಡುವುದೇ ಮುಖ್ಯವಾಗಿತ್ತು. 'ಶ್ರೀ' ಅವರ 'ಇಂಗ್ಲಿಷ್ ಗೀತಗಳು' ೧೯೨೧ರಲ್ಲಿ ಪ್ರಕಟವಾದ ದಿನದಿಂದಲೇ ಖ್ಯಾತಿ ಗೌರವಗಳನ್ನು ಪಡೆಯಿತು. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿ ನಿಂತು 'ಯುಗ ಪ್ರವರ್ಥಕಕೃತಿ' ಎಂಬ ವಿಶಿಷ್ಟ ಸ್ಥಾನವನ್ನು ಪ್ರಸಿದ್ಧಿಯನ್ನೂ ಗಳಿಸಿತು.

"ಇಂಗ್ಲಿಷ್ ಸಾಹಿತ್ಯ ಸಮುದ್ರದ ಕರೆಯಲ್ಲಿ ತೆರೆಯೆಸೆದ ಈ ಕೆಲವು ಸಣ್ಣ ಚಿಪ್ಪುಗಳಿಂದ ಆ ದಿವ್ಯ ರತ್ನಾಕರದ ಲಾವಣ್ಯವೂ, ವಾಸನೆಯೂ, ಘೋಷವೂ, ರುಚಿಯೂ, ಸಹೃದಯರ ಅನುಭವಕ್ಕೆ ಸಿದ್ಧಸದೆ ಇರಲಾರವೆಂದು ನಾನು ನಂಬಿರುತ್ತೇನೆ" ಎಂದು ತಮ್ಮ 'ಇಂಗ್ಲಿಷ್ ಗೀತಗಳ' ಅರಿಕೆಯಲ್ಲಿ ತಿಳಿಸಿರುವ ಶ್ರೀ ಅವರು ತಮ್ಮ ಕಾವ್ಯೋದ್ದೇಶವೇನೆಂಬುದನ್ನು ಸ್ಪಷ್ಟಿಪಡಿಸಿದ್ದಾರೆ. "ಸಂಪ್ರದಾಯ ಮಾರ್ಗವನ್ನೇ ಛಲ ಹಿಡಿಯದೆ. ವಿಶ್ವಕವಿತಾ ವಿಷಯಗಳಾದ ಯುದ್ಧ, ಪ್ರೇಮ, ಮರಣ, ದೇಶಭಕ್ತಿ, ದೈವಭಕ್ತಿ, ಪ್ರಕೃತಿ ಸೌಂದರ್ಯ, ಮಾನವ ಜನ್ಮದ ಸುಖದುಃಖಗಳು, ರಾಗದ್ವೇಷಗಳು, ಪುರುಷಾರ್ಥಗಳು, ಜನ್ಮಾಂತರ ದರ್ಶನಗಳು ಮುಂತಾದ ಕಾವ್ಯವಸ್ತುಗಳನ್ನು ಇತರ ದೇಶದ ಕವಿಗಳು ಯಾವ ರೀತಿಯಲ್ಲಿ ಪುಷ್ಟಿಗೊಳಿಸಿ ಸಹಜ ಭಾಷೆಯಲ್ಲಿ ಸೌಂದರ್ಯ ರಚನೆಯನ್ನು ಮಾಡಿರುವರೋ ಅದನ್ನೆಲ್ಲ ಶ್ರದ್ಧೆಯಿಂದ ಪರಾಮರ್ಶಿಸಿ, ಧೈರ್ಯವನ್ನೂ ಶಿಕ್ಷಣಬದ್ಧವಾದ ಸ್ವಾತಂತ್ರ್ಯವನ್ನೂ ವಹಿಸಿ ಕನ್ನಡ ಕವಿಗಳು ಹಿಂದಕ್ಕಿಂದಲೂ ಮುಂದೆ ಇನ್ನೂ ಶ್ರೇಯಸ್ಸನ್ನು ತಾಳಲಿ ಎನ್ನುವುದೇ ನಮ್ಮೆಲ್ಲರ ಹಾರೈಕೆಯಾಗಿದೆ" ಎಂದಿದ್ದಾರೆ.

ಇಂಗ್ಲಿಷ್ ಗೀತಗಳು ತೆರೆದಿದ್ದು ಇಂಗ್ಲಿಷ್ ಕಾವ್ಯದ ಭಾವಗೀತೆಗಳ ಮಾರ್ಗವನ್ನು ಅದರಲ್ಲೂ ರೊಮ್ಯಾಂಟಿಕ್ ಭಾವಗೀತೆಗಳ ಮಾರ್ಗವನ್ನು ಎಂಬುದು ಗಮನಾರ್ಹ. ಇವು ತಂದ ಹಿರಿಮೆ ಎಂದರೆ, ಛಂದಸ್ಸಿನ ಮತ್ತು ಭಾಷೆಯ ವಿಷಯಗಳಲ್ಲಿ ತಂದ ಬಗೆಬಗೆ ಹೊಸತನ. ಭಾಷೆಯ ಮೂಲಕ 'ಶ್ರೀ'ಯವರು ಅದುವರೆಗೂ ಇದ್ದ ಕಾವ್ಯದ ಭಾಷೆಯ ಆಡಂಬರತೆಯನ್ನು ನೀಗಿಸಿ ಬಿಟ್ಟರು. ಅಚ್ಚಕನ್ನಡದ ಚಿಕ್ಕ ಸರಳ ಪದಗಳು, ಆಡುಮಾತಿನ ಲಯ, ನೇರವಾದ ನಿರಾಡಂಬರವಾದ ವರ್ಣನೆ, ದೈನಂದಿನ ಜೀವನದ ನುಡಿಗಟ್ಟು, ನಿರಲಂಕೃತವಾದ ವರ್ಣನೆ, ಕಥನ ಶೈಲಿ, ಇವುಗಳಲ್ಲಿ ಕನ್ನಡ ಭಾಷೆಯ ಅಜ್ಞಾತಶಕ್ತಿ ಸಾಮರ್ಥ್ಯಗಳನ್ನು ಅಪೂರ್ವವಾಗಿ ಪ್ರಕಟಿಸಿದವು. ಅದುವರೆಗೂ ಇದ್ದ ಕಾವ್ಯದ ಭಾಷೆಯ ಮೂಲ ಭಾವನೆಗಳು ಕರಗಿ ಹೋಗಿ ಕಂಡರಿಯದ ನವ ಭಾಷಾಕಟ್ಟು ಕಾಣಿಸಿಕೊಂಡಿತು.

ಇಂಗ್ಲಿಷ್ ಗೀತಗಳು ಪ್ರಕಟವಾದಗಳಿಗೆ 'ಅಮೃತಗಳಿಗೆ'. ಅದನ್ನು ರಚಿಸಿದ ಹಸ್ತ 'ಅಮೃತಹಸ್ತ' ಎಂದ ದ.ರಾ. ಬೇಂದ್ರಯವರು, ಇದು 'ಹೊಸಕವನಗಳಿಗೆ ಮಾರ್ಗದರ್ಶಕವಾಗಿ, ತರುಣರ ಮೆಚ್ಚಿಕೆಯದಾಗಿ, ಭಾವಗೀತೆಗಳ ಭಾಷಾಂತರಕ್ಕೊಂದು ಕೈಪಿಡಿಯಾಗಿದೆ. ಆಕ್ಲಿಷ್ಟ ಪ್ರಸನ್ನ ಕಾವ್ಯ ಶೈಲಿಗೆ ಮಾದರಿಯಾಗಿ ನಿಂತಿದೆ. ಹೊಸಕವನಗಳ ಓಂಕಾರದಲ್ಲಿ 'ಶ್ರೀಯವರ ಶ್ರೀ ಕಾರವು ನಿತ್ಯ ನವೀನವಾಗಿದೆ ಎಂದಿದ್ದಾರೆ.

'ಶ್ರೀ' ಯವರ ಹಿರಿಯ ಶಿಷ್ಯರಲ್ಲಿ ಒಬ್ಬರಾದ ಮಾಸ್ತಿಯವರು 'ಎಳೆಯರೆದೆಯಲಿ ಹಾಡುವಾಸೆಯನು ಸುಳಿಸಿದಿರಿ'- ಎಂದು ತಮ್ಮನ್ನು 'ಶ್ರೀ' ಯವರ ಕಾವ್ಯಮಾರ್ಗ ಸೆಳೆದಿದ್ದನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ. ಕುವೆಂಪು ಅವರು 'ಶ್ರೀ' ಯವರ ಬಗೆಗೆ ಹೇಳುತ್ತಾ 'ನನ್ನ ಕವಿ ಪ್ರತಿಭೆಯನ್ನು ಕನ್ನಡದ ಕಡೆಗೆ ತಿರುಗಿಸಿದ ನಿಮಿತ್ತ ಮಾತ್ರ ವ್ಯಕ್ತಿ ಒಬ್ಬ ವಿದೇಶಿಯ ಕವಿಯಾದರೂ, ಅದಕ್ಕೆ ಮೆಚ್ಚುಗೆಯ ಪ್ರೋತ್ಸಾಹ ತೀರ್ಥವನ್ನು ತಳಿದು ನಿದರ್ಶನ ಮಾತ್ರದಿಂದಲೇ ನನಗೆ ಮಾರ್ಗದರ್ಶಕರಾಗಿ ಅದರ ಬೆಳೆಗೆ ಬೇಕಾದ ವಿದ್ವದ್ಬಲವನ್ನು ಶೇಖರಿಸಲು ಕಾರಣವಾದ ವ್ಯಕ್ತಿಗಳಲ್ಲಿ ಶ್ರೀಯವರು ಅಮಿತಗಣ್ಯರಾಗಿದ್ದಾರೆ" ಎಂದಿದ್ದಾರೆ.

‘ಇಂಗ್ಲಿಷ್ ಗೀತ’ಗಳನ್ನು ರಚಿಸಿ ಕನ್ನಡದ ಕಾವ್ಯ ಸಂಪತ್ತನ್ನು ಬೆಳೆಸುವುದರ ಜೊತೆಗೆ ಹೊಸಗನ್ನಡದ ‘ಕವಿಕುಲ’ವನ್ನು ಬೆಳೆಸಿದ ‘ಶ್ರೀ’ಯವರು ನವಯುಗದ ಪ್ರವರ್ತಕರಾದರು. ಹೊಸಗನ್ನಡದ ಕವಿಕುಲಪತಿಗಳಾದರು. ಕನ್ನಡದಲ್ಲಿ ಹೊಸಕವಿತೆ ಸೊಂಪಾಗಿ ಚಿಗುರುವಂತೆ ಮಾಡಿ ‘ಆಧುನಿಕ ಕರ್ನಾಟಕ’ ಕವಿ ಚೂತವನ ಚೈತ್ರರಾದರು. ‘ಇಂಗ್ಲಿಷ್ ಗೀತಗಳು’ ಪ್ರಕಟವಾದ ಅನಂತರ ಹೊಸಕಾವ್ಯದ ಅಭ್ಯಾಸದಲ್ಲಿ, ಹೊಸಕವಿತಯ ಸೃಷ್ಟಿಯಲ್ಲಿ ಕವಿಗಳಿಗೆ ಹೆಚ್ಚು ಹೆಚ್ಚು ಆಸಕ್ತಿ ಬಂದಿತು. ಹೊಸ ಸ್ಫೂರ್ತಿ ಹೊಸ ಕವಿಗಳನ್ನು ಸೃಷ್ಟಿಸಿತು. ಮಾಸ್ತಿ, ಕೆ.ವಿ. ಪುಟ್ಟಪ್ಪ, ಪು.ತಿ. ನರಸಿಂಹಾಚಾರ್, ವಿ.ಸೀತಾರಾಮಯ್ಯ ಮತ್ತು ‘ಶ್ರೀ’ಯವರ ಉಳಿದ ಶಿಷ್ಯರು ಸೇರಿ ‘ಕಿರಿಯರ ಕಾಣಿಕೆ’ ಮತ್ತು ‘ತಳಿರು’ ಎಂಬ ಸಂಗ್ರಹ ಕವಿತೆಗಳ ಗ್ರಂಥಗಳನ್ನು ತಂದರು. ಈ ಸಂಗ್ರಹಗಳೇ ಮುಂದಿನ ಕಾವ್ಯದ ರಸಸಿದ್ಧಿಯ ಹಾದಿತೋರಿದವು.

**ಕವಿತೆ ಗರಿಬಿಚ್ಚಿದಾಗ**

‘ಶ್ರೀ’ಯವರ ಹಿರಿಯ ಶಿಷ್ಯರಾದ ಮಾಸ್ತಿಯವರು ೧೯೨೨ರಲ್ಲಿ ‘ಬಿನ್ನಹ’ವೆಂಬ ಕವಿತಾ ಸಂಗ್ರಹವನ್ನು ಪ್ರಕಟಿಸಿದರು. ರಾಗ ತಾಳಗಳೊಂದಿಗೆ ಹೆಸರಿಸಲಾದ ಈ ಗೀತಗಳು ಪುರಂದರದಾಸ ಕೀರ್ತನೆಗಳಿಂದ ಸ್ಫೂರ್ತಿ ಪಡೆದವಾಗಿದ್ದವು. ‘ಬಿನ್ನಹ’ವನ್ನು ಗೀತೆಗಳ ಗೊಂಚಲೆಂದೇ ಹೇಳಿದ ಮಾಸ್ತಿಯವರು, ಅವು ಹಾಡಲೆಂದೇ ಬರೆದ ಗೀತೆಗಳಾಗಿದ್ದವು. ೧೯೨೪ರಲ್ಲಿ ಮಾಸ್ತಿಯವರು ಪ್ರಕಟಿಸಿದ ‘ಅರುಣ’ ಕವಿತಾ ಸಂಕಲನ ತನ್ನ ವಸ್ತು, ನಿರೂಪಣೆ, ರೂಪ ದೃಷ್ಟಿಗಳಿಂದ ಹೊಸತನವನ್ನೇ ತೆರೆಯಿತು. ಛಂದಸ್ಸು, ಭಾಷೆಯ ಬಳಕೆ ಎಲ್ಲವೂ ಹಳೆಯದ್ದೇ ಆಗಿದ್ದರೂ, ಈ ಸಂಗ್ರಹದ ವೈಶಿಷ್ಟ್ಯವಾಗಿ ‘ಸರಳ ರಗಳೆ’ಯನ್ನು ಮಾಸ್ತಿಯವರು ಮೊತ್ತಮೊದಲಬಾರಿಗೆ ಪ್ರಯೋಗಿಸಿದರು. ‘ಸ್ಥಳಗಳ ಹೆಸರು’ ಎಂಬ ಕವಿತೆಯೇ ಹೊಸಗನ್ನಡದ ಕಾವ್ಯವದಲ್ಲಿ ಮೊತ್ತಮೊದಲ ಬಾರಿಗೆ ಸರಳರಗಳೆಯನ್ನು ಸಫಲವಾಗಿ ಪ್ರಯೋಗ ಮಾಡಿದ ಕವಿತೆಯಾಯಿತು. ಈ ಛಂದೋರೂಪವು ಹೊಸಗನ್ನಡಕ್ಕೆ ಮಾಸ್ತಿಯವರು ನೀಡಿದ ಹಿರಿಯ ಕಾಣಿಕೆಯಾಯಿತು. ಇವರ ‘ನವರಾತ್ರಿ’- ‘ಯಶೋಧರಾ’ ಕೃತಿಗಳ ಛಂದಸ್ಸು ಸರಳರಗಳೆಯಲ್ಲಿಯೇ ರೂಪುಗೊಂಡವು. ಕನಕದಾಸ ಕತೆಗಳು ಕಥನ ಕವನಕ್ಕೆ ‘ಸರಳರಗಳೆ’ ಸೊಗಸು ತಂದಿತಲ್ಲದೆ ಸರಳ ರಗಳೆಯನ್ನು ಕಥನ ಕವನಕ್ಕೆ ಹೇಗೆ ಬಳಸಿಕೊಂಡರೆ ಚೆನ್ನ ಎನ್ನವುದನ್ನು ಮನದಟ್ಟು ಮಾಡಿಕೊಟ್ಟಿತ್ತು. ಮಾಸ್ತಿಯವರ ಮುಖ್ಯವಾದ ಸಾಧನೆ ಎಂದರೆ ಅವರ ‘ಕಥನ ಕವನ’ಗಳು ಮತ್ತು ಸಾನೆಟ್ಟುಗಳು.

೧೯೨೮ರಲ್ಲಿ ಕಿರಿಯ ಕಾಣಿಕೆ ಕವಿತಾ ಸಂಲಕವು ಹೊರಬಂದು ಹಲವು ಅನುವಾದಗಳೂ, ಎಲ್. ಗುಂಡಪ್ಪನವರ ‘ಚಟಾಕಿ’ಯಂತಹ ಉತ್ತಮವಾದ ಅಣಕವಾಡು, ಪುಟ್ಟಪ್ಪನವರ ರೂಪಾಂತರ ಕವಿತೆ ‘ಬೊಮ್ಮನಹಳ್ಳಿಯ ಕಿಂದರಜೋಗಿ’ ಪು.ತಿ.ನ. ಅವರ ಮನಮುಟ್ಟುವ ಕವಿತೆ ‘ನನ್ನ ನಾಯಿ’, ಮನದ ಒಳತೋಟಿಯನ್ನು ತೋಡಿದ ತೀ.ನಂ.ಶ್ರೀ ಅವರ ‘ಎರಡು ದಾರಿ’- ಕವಿತೆಗಳು ಹೊಸ ದಾರಿಯನ್ನು ತೆರೆದವು.

೧೯೩೦ರಲ್ಲಿ ಹೊರಬಂದ ‘ತಳಿರು’ ಕವಿತಾ ಸಂಗ್ರಹವೂ ಹೊಸ ಪ್ರಯೋಗಗಳ ಮತ್ತೊಂದು ಮಜಲನ್ನು ಪಡೆಯಿತು. ‘ಕಿರಿಯಕಾಣಿಕೆ’ಯಲ್ಲಿ ಕಾಣದ ಹಲವಾರು ಹೊಸಯುವಕವಿಗಳಾದ ಎಂ.ವಿ. ಸೀತಾರಾಮಯ್ಯ, ಜಿ.ಪಿ. ರಾಜರತ್ನಂ, ದಿನಕರದೇಸಾಯಿ ಮುಂತಾದ ಕವಿಗಳು ತಮ್ಮ ಮೊದಮೊದಲ ಕವನಗಳನ್ನು ‘ತಳಿರು’ ಸಂಗ್ರಹಕ್ಕೆ ನೀಡಿದರು. ಈ ಸಂಗ್ರಹದ ಕವಿಗಳಾಗಿ ತಮ್ಮ ಕವಿ ಜೀವನವನ್ನು ಪ್ರಾರಂಭಿಸಿದ ಬಹುಪಾಲು ಕವಿಗಳು ಹೊಸಗನ್ನಡದ ಆಶಾಕಿರಣಗಳಾಗಿ ಜಗಜಗಿಸುವ ತಾರೆಗಳಾದರು. ಹೊಸಗನ್ನಡ ಕವಿತೆಯ ಬೇರು ಭದ್ರವಾಗಿ ಊರಲು ‘ತಳಿರು’ ಸಂಕಲನವೇ ನಾಂದಿ ಹಾಡಿತು.

೧೯೩೦ರಲ್ಲಿ ‘ಶ್ರೀ’ಯವರ ಶಿಷ್ಯರಾದ ಪುಟ್ಟಪ್ಪನವರು ‘ಕೊಳಲು’ ಎಂಬ ಕವಿತಾ ಸಂಗ್ರಹವೊಂದನ್ನು ಪ್ರಕಟಿಸಿದರು. ಪ್ರಗಾಥ, ಸಾನೆಟ್ ವಿವಿಧ ಛಂದೋರೂಪಗಳ ಭಾವಗೀತೆಗಳು ಈ ಸಂಗ್ರಹದ ಚೆಲುವನ್ನು, ಗುಣವನ್ನು ಹೆಚ್ಚಿಸಿದವು. ಇಂಪಾದ, ಮಧುರವಾದ ಹೊಸ ಹೊಸ ಮುದ್ದುಪದ್ಯಗಳು ತಮ್ಮ ಸರಳ ಶೈಲಿಯಿಂದ ಅತ್ಯಂತ ಆಕರ್ಷಣೆಯನ್ನು ಮೂಡಿಸಿದವು. ಹೃದಯದಿಂದ ಬಂದು ಹೃದಯವನ್ನು ನೇರವಾಗಿ

ಮುಟ್ಟುವ ಗುಣಗಳನ್ನು ಹೊಂದಿದ್ದ ಈ ಕವನಗಳು ಛಂದಸ್ಸಿನಲ್ಲಿ, ಪ್ರಾಸವೈಖರಿಯಲ್ಲಿ, ಭಾಷೆಯಲ್ಲಿ ಮತ್ತು ವಸ್ತುವಿನ ಎಲ್ಲ ರೀತಿಯಲ್ಲಿಯೂ ಈ ಸಂಗ್ರಹದ ನೂರಮೂರು ಪದ್ಯಗಳು ಹೊಸ ಪ್ರಯೋಗಗಳಾಗಿ ಸಿದ್ಧಪ್ರಯೋಗಗಳಾದವು.

೧೯೩೧ರಲ್ಲಿ ಸಿ.ವಿ. ಸೀತಾರಾಮಯ್ಯನವರ 'ಗೀತಗಳು' ಪ್ರಕಟವಾಯಿತು. ೧೯೩೩ರಲ್ಲಿ 'ದೀಪಗಳು', ೧೯೩೩ರಲ್ಲಿ 'ನೆಳಲು-ಬೆಳಕು ಸಂಗ್ರಹಗಳು ಪ್ರಕಟಗೊಂಡವು. 'ಗೀತಗಳು' ಕವನ ಸಂಕಲನ ತನ್ನ ಶೀರ್ಷಿಕೆಯಿಂದಲೇ ತಾವು ಹಾಡುವುದಕ್ಕ ಎಂದೇ ಹುಟ್ಟಿದವು ಎಂಬುದನ್ನು ಸೂಚಿಸಿದವು. ಈ ಕವಿತೆಗಳ ಮುಖ್ಯಗುಣವೇ ಹಾಡುತನ. ಗೀತಗಳೆಂದೇ ಕರೆದ ಅರ್ಥದಲ್ಲಿ ಇವು ಸಾರ್ಥ್ಯಕ್ಯವಾದವು. ವಿ.ಸಿ. ಅವರ ಕವನಗಳಲ್ಲಿ ಪ್ರತಿಯೊಂದರಲ್ಲಿಯೂ ಗುರುತಿಸಬಹುದಾದ ಅಂಶವೆಂದರೆ ಗೇಯತೆ ಹಾಡುಗಳಾಗಿಯೇ ಹುಟ್ಟಿದ್ದವು. ಹೊಸಕವಿತೆಯ ಪರವಾಗಿ ಕಾವ್ಯದ ಸ್ವರೂಪವನ್ನು ಶಬ್ಧರೂಪಕ್ಕೂ, ಸಂಧಿ ನಿಯಮಗಳಿಗೂ ಕಡೆಗೆ ನಿರ್ದುಷ್ಟತೆಗೂ ಮೀರಿದ ಗುಣವೊಂದಿದೆ ಎಂದು ಧೈರ್ಯವಾಗಿ ಘೋಷಿಸಿದರು. ಈಗಿನ ಕವಿಗಳು ವಿಶ್ವಸಾಹಿತ್ಯದ ಅಭ್ಯಾಸದಿಂದ ತಮ್ಮ ಮನಸ್ಸನ್ನು ವಿಶಾಲಪಡಿಸಿಕೊಂಡಿರುವರೆಂದು ಸೂಚಿಸಿದರು. ಹೊಸಕವಿಗಳು ಬರೆಯುತ್ತಿರುವ ಭಾವಗೀತಗಳ ಲಕ್ಷಣಗಳನ್ನು ಕ್ರೋಢಿಕರಿಸಿ ನಿರೂಪಿಸುವ ಪ್ರಯತ್ನವನ್ನು ಮೊತ್ತಮೊದಲು ಮಾಡಿದವರು. ವಿ.ಸಿ. ಅವರು ಕವಿ ಕವಿತೆಗೆಳನ್ನು ಬರೆಯುವುದು ಆತ್ಮನಿವೇದನೆಗೆ ಮಾತ್ರವಲ್ಲೆ, ಇನ್ನೊಬ್ಬರು ಅದನ್ನು ಅನುಕರಿಸಲೆಂದಲ್ಲ. ಸ್ವರವಿನ್ಯಾಸ, ಅಕ್ಷರ ಯೋಗ, ಲಯಗತಿ, ಚಿತ್ರ ಕಲ್ಪನಾಶಕ್ತಿ ಇವುಗಳು ಕವಿಯ ಮನಸ್ಸಿನ ಭಾವವನ್ನು ಓದುಗರಿಗೆ ತಂದುಕೊಡುವ ಸಾಧನಗಳಾಗುವಷ್ಟು ಮಟ್ಟಿಗೆ ಪ್ರಾಮುಖ್ಯವಾದವು. 'ಕವಿಯು ಪ್ರಪಂಚವನ್ನು ಕಣ್ಣು ತುಂಬಾ ನೋಡಲಿ. ತನ್ನ ಆದೇಶಗಳು ಒಂದು ಹದಕ್ಕೂ, ಪಾಕಕ್ಕೂ ಬರುವಂತೆ ಮನಸ್ಸನ್ನು ನಿರಂತರವಾಗಿ ಒಂದು ಶಾಖದಲ್ಲಿಟ್ಟುಕೊಳ್ಳಲಿ, ತನ್ನ ವ್ಯಕ್ತಿತ್ವದ ಮುದ್ರೆಯನ್ನು ಕವಿತೆಯ ಮೇಲೆ ಹಾಕಲಿ. ಅವನು ನಿಜವಾಗಿ ವ್ಯಕ್ತಿಯಾದರೆ ಆ ಮುದ್ರೆ ಬಿದ್ದೇ ಅವನ ವಾಣಿ ಕೇಳುವುದು. ಪ್ರಪಂಚಕ್ಕೆ ಒಂದು ಹೊಸದೃಷ್ಟಿಯನ್ನು ಸಾತ್ವಿಕದಿಂದ ಮಿಡಿಯುವ ಒಂದು ಮೃದು ಜೀವನವನ್ನೂ ಕಾಣಿಕೆಯಾಗಿ ಅರ್ಪಿಸಲಿ; ಅದರಿಂದ ಪ್ರಪಂಚದ ಸತ್ವವು ಬೆಳೆಯುವಂತಾಗಲಿ" ಎಂದು ಕವಿವಾಣಿಯ ಗುರಿಯನ್ನು, ರೀತಿಯನ್ನು ನಿರ್ದೇಶಿಸಿದರು. ಭಾವಗೀತೆಯ ರೂಪರೇಖೆಗಳನ್ನು, ಕಾವ್ಯತತ್ವವನ್ನು ಸ್ಪಷ್ಟವಾಗಿ ನಿರೂಪಿಸಲು ಯತ್ನಿಸಿದರು. ವಿ.ಸಿ ಅವರ ಗೀತೆಗಳು ಸಂಕಲನದ 'ಕೋಗಿಲೆ'- 'ಮೃಗಶಾಲೆಯ ಸಿಂಹಗಳು' - ಅಭೀಃ- 'ಮಗಳನ್ನು ಒಪ್ಪಿಸುವ ಹಾಡು' ಇವೆಲ್ಲಾ ಪ್ರಸಿದ್ಧ ಗೀತಗಳಾದವು. ಮಗಳನ್ನು ಒಪ್ಪಿಸುವ ಹಾಡಂತೂ ಹಾಡಿನ ಗೂಡಿಗೆ ತೋರಣ ಪ್ರಾಯವಾಯಿತು.

ಮಂಗಳೂರಿನ ಮುಖ್ಯ ಕವಿಗಳಾದ ಎಂ. ಗೋವಿಂದಪೈ ಅವರು ಯಾವ ಬಳಗವನ್ನೂ ಕಟ್ಟದೆ ಏಕಾಂಗಿಯಾಗಿ ನಿಂತು ಕಾವ್ಯ ಸೃಷ್ಟಿಗೆ ತೊಡಗಿದರು. ೧೯೩೦ರಲ್ಲಿ ಪ್ರಕಟವಾದ 'ಗಿಳಿವಿಂಡು' ಕವಿತಾ ಸಂಕಲನ ಒಬ್ಬ ಕವಿ ಮಾಡಿದ ಅದ್ಭುತ ಕಾವ್ಯವಾಗಿ ಸಿದ್ಧಿಪಡೆಯಿತು. ಸರಳರಗಳೆಯಲ್ಲಿ ಮಾಸ್ತಿಯವರು ಮೊದಲಿಗರಾದಂತೆ, ಕನ್ನಡದ ಮೊತ್ತಮೊದಲನೆಯ ಸಾನೆಟ್ ಬರೆದವರು ಗೋವಿಂದಪೈಗಳಾದರು. ಕಾವ್ಯದ ನಿಯಮಗಳನ್ನು ಪ್ರಾಸವನ್ನೂ ಬಿಟ್ಟರೆ, ಕೈಕಾಲು ಊನವಾಗುತ್ತದೆ ಎಂಬ ಕುರುಡು ನಂಬಿಕೆಯನ್ನು ಮುರಿದು, ಪ್ರಾಸತ್ಯಾಗವನ್ನು ಮಾಡಿ, ಕನ್ನಡ ಕವಿತಾ ಕನ್ನೆಯ ಕೈಯ್ಯಲ್ಲಿ ತೊಡಿಸಿದ ಸಂಕೋಲೆಗಳನ್ನು ಬಿಡಿಸಿದ ಕೀರ್ತಿ ಇವರಿಗೆ ಸಂದಿತು. ಕಥನ ಕವನ, ಪ್ರಗಾಥ, ಮಹಾಕಾವ್ಯಖಂಡ, ಸಾನೆಟ್ ಮುಂತಾದ ಪ್ರತಿಯೊಂದು ಕಾವ್ಯರೂಪದಲ್ಲಿಯೂ ಹಿರಿಯಸಿದ್ಧಿ ಪಡೆದಿದ್ದರು. ಇವರ ಕವಿತೆಗಳಲ್ಲಿ ಬಹುಮುಖವಾದ ಪಾಂಡಿತ್ಯ ಶಬ್ಧ ಪ್ರಭುತ್ವ, ಭಾವವಿಲಾಸ, ದೈವಭಕ್ತಿ, ನಾಡುನುಡಿಗಳ ಪ್ರೇಮ ಮಿಡಿಯಿತು. ಪಾಶ್ಚಾತ್ಯ ಸಾಹಿತ್ಯ ಮತ್ತು ನಮ್ಮ ದೇಶದ ಸಾಹಿತ್ಯಗಳನ್ನು ಚೆನ್ನಾಗಿ ಅರಗಿಸಿಕೊಂಡ ಸಮನ್ವಯ ಗೋವಿಂದಪೈ ಅವರಲ್ಲಿ ಎದ್ದು ಕಂಡಿತು. ಇವರ ಕವಿತಾವಸ್ತು, ವಿಶ್ವವ್ಯಾಪ್ತಿಯಾದ ಧರ್ಮವನ್ನು ಕುರಿತದ್ದು. ಹೇಳುವ ಬಗೆಯಾದರೋ ಧ್ವನಿಪೂರ್ಣವಾಗಿ ನೇರವಾಗಿ ಎದೆಯನ್ನೇ ಮುಟ್ಟುವಂತಹುದು. ಈ ಸಾಧನೆ ಸಿದ್ಧಿಗಳನ್ನು ಇವರ 'ಗೊಲ್ಗೊಥಾ ಮತ್ತು ವೈಶಾಖೀ' ಮಹಾಕಾವ್ಯ ಖಂಡಗಳು ನಿರೂಪಿಸಿದವು. 'ತಾಯೆ ಬಾರ ಮೊಗವತೋರೆ ಕನ್ನಡಿಗರ ಮಾತೆಯೆ ಹರಸು ತಾಯೆ, ಸುತರಕಾಯೆ, ನಮ್ಮ ಜನ್ಮದಾತೆಯೆ ಕವಿತೆಯಲ್ಲಿ ಬಳಸಿದ ಅರ್ಥ, ಶಬ್ದ ಸೌಂದರ್ಯ ಗೋವಿಂದಪೈಯವರ ಕಲ್ಪನೆಯ ಘನತೆಯನ್ನು ಎತ್ತಿ ಹಿಡಿಯಿತು.

ಗೋವಿಂದ ಪೈ ಅವರಲ್ಲದೆ ಮಂಗಳೂರು ಪ್ರಾಂತ್ಯದಲ್ಲಿ ಬಹಳ ಕವಿಗಳು ಆಗ ಮುಂದೆ ಬರಲಿಲ್ಲ. ಮುಳಿಯ ತಿಮ್ಮಪ್ಪಯ್ಯ, ಎಂ.ಎನ್. ಕಾಮತ್, ಕಡ್ಲೆಂಗೋಡ್ಲು ಶಂಕರಭಟ್ಟ, ಸೇರಿಯಾಪ ಕೃಷ್ಣಭಟ್ಟ, ಪಾಂಡೇಶ್ವರ ಗಣಪತಿರಾವ್, ಪೇಜಾಚರದ ಸದಾಶಿವರಾವ್, ಪಂಜೆ ಮಂಗೇಶರಾವ್ ಇವರುಗಳು ಮಾತ್ರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಸರು ಮಾಡಿದ್ದರು. ತುಳುವಿನಲ್ಲಿದ್ದ ಜಾನಪದ ಕಥೆಗಳನ್ನು ಜೋಗುಳದ ಹಾಡುಗಳನ್ನು ಕೇಳಿ ಮೆಚ್ಚಿದ್ದ ಪಂಜೆ ಮಂಗೇಶರಾಯರು ಅವುಗಳಲ್ಲಿ ಕೆಲವನ್ನು ಕನ್ನಡಿಸಿ, ಜೋಗುಳಗಳನ್ನು, ತಮ್ಮ ಕವಿತಾ ಸಂಕಲನ 'ಪದ್ಯಪುಸ್ತಕ'ದಲ್ಲಿ ಅಚ್ಚುಹಾಕಿದರು. ಕಥನ ಕವನಗಳನ್ನು ರೂಢಿಸಿ ಸಂಶೋಧನೆ ನಡೆಸಿದರು. ಯಕ್ಷಗಾನದ ಪದಗಳನ್ನೂ ತಮ್ಮ 'ಪದ್ಯ ಪುಸ್ತಕ'ಗಳಲ್ಲಿ ಹಾಕಿದರು. ಜಾನಪದ ಕಲೆಯ ಮುಖ್ಯರೂಪವಾದ ಯಕ್ಷಗಾನ ಮತ್ತು ಮನೆಮನೆಯಲ್ಲೂ ಪ್ರತಿಧ್ವನಿಸುವ ಜೋಗುಳದ ಹಾಡುಗಳಿಗೆ ಮತ್ತೇ ಪ್ರಾಮುಖ್ಯತೆ ಬಂದಿತು. ಹಳೆಯ ಜೋಗುಳದ ಹಾಡುಗಳ ಹಾದಿಯಲ್ಲಿಯೇ ಕೆಲವು ಹೊಸ ಜೋಗುಳದ ಹಾಡುಗಳ ಸೃಷ್ಟಿಯಾಯಿತು. ಹಿಂದಿನ ಯಕ್ಷಗಾನಗಳ ಹಾದಿಯಲ್ಲೇ ಕೆಲವು ಹೊಸ ಯಕ್ಷಗಾನಗಳೂ ಸಿದ್ಧವಾದವು.

**ಜಾನಪದ ಬಾನಂಗಣಕೆ ಹಾರಿದ ನವೋದಯ ಪಕ್ಷಿ**

ಜಾನಪದ ಸಾಹಿತ್ಯದಲ್ಲಿ ಆಸಕ್ತಿ ಮೂಡಿ ಆ ಬಗೆಯ ಸಾಹಿತ್ಯವನ್ನು ಸೃಷ್ಟಿಮಾಡುವ ಪ್ರಯತ್ನ ಎಲ್ಲಾ ಭಾಷೆಗಳ ಸಾಹಿತ್ಯಗಳ ನವೋದಯ ಕಾಲದಲ್ಲಿ ನಡೆದಂತೆ ನಮ್ಮ ಕನ್ನಡದಲ್ಲೂ ನಡೆಯಿತು. ಬೇರೆ ಬೇರೆ ದೇಶದ ಸಾಹಿತ್ಯದ ಇತಿಹಾಸದಂತೆ ಕನ್ನಡ ಭಾಷೆಯಲ್ಲೂ ಜಾನಪದ ಸಾಹಿತ್ಯ 'ಪುನರ್ದರ್ಶನ'ವಾಯಿತು. ಪಂಜೆಯವರ ಕಾಲದಿಂದ ಪ್ರಾರಂಭವಾದ ಈ ಪ್ರಯತ್ನವನ್ನು ನಂತರ ಬಂದ ವಿದ್ವಾಂಸರು ತಾವೂ ಮುಂದುವರೆಸಿದರು. ಜಾನಪದ ಹಾಡುಗಳನ್ನು ಸಂಗ್ರಹಿಸಿ ಕೂಡಿಸಿದರು. ಹೀಗೆ ಮಂಗಳೂರಿನಲ್ಲಿ ಪ್ರಾರಂಭವಾದ ಈ ಆಸಕ್ತಿ ನಂತರ ಧಾರವಾಡ ಮತ್ತು ಮೈಸೂರು ಕಡೆಗಳಿಗೂ ಆವರಿಸಿ ಜಾನಪದ ಗೀತೆಗಳ ಮೇಲಿನ ಒಲವು ಹೆಚ್ಚಾಯಿತು.

ಧಾರವಾಡ 'ಗೆಳೆಯರ ಗುಂಪು' ರಚಿಸಿ ಪ್ರಕಟಿಸಿದ್ದ 'ಹಕ್ಕಿ ಹಾರುತಿದೆ' ಹೊಸ ಬಗೆಯ ಸಾಹಿತ್ಯದೊಂದಿಗೆ ಪರ್ವಕಾಲವನ್ನು ಆರಂಭಿಸಿತು. ಬದಲಾವಣೆ ಮತ್ತು ಬೆಳವಣಿಗೆ, ಇವುಗಳ ಮಧ್ಯೆ, ದ.ರಾ.ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ಶಂಭಾಜೋಶಿ, ಅಭ್ಯಂಕರ, ಮಧುರಚೆನ್ನ, ವಿನೀತ ರಾಮಚಂದ್ರ, ವಿ.ಕೆ.ಗೋಕಾಕ, ರಂ.ಶ್ರೀ.ಮುಗಳಿ, ಶ್ರೀಧರ ಖನೋಳ್ಕರ ಮುಂತಾದವರು ಗೆಳೆಯರ ಗುಂಪಿನ ಗರಿಗಳಾಗಿ ಸೇರಿದರು. 'ಮನೋಹರ ಗ್ರಂಥ ಮಾಲೆ' 'ಜಯಂತಿ'ಯಂತಹ ಪ್ರಕಟನಾ ಸಂಸ್ಥೆಗಳು, ನಿಯತಕಾಲಿಕಗಳು ಪ್ರಾರಂಭವಾಗತೊಡಗಿದವು. ಕಾವ್ಯವಿಮರ್ಶೆಯ ತತ್ವಗಳನ್ನು ಪಾಶ್ಚಾತ್ಯ ವಿಮರ್ಶನ ಮಾಡುವುದು ಪ್ರಾರಂಭವಾಯಿತು. ಹಾಗೆಯೇ ಜಾನಪದ ಗೀತಗಳನ್ನು ಹಳ್ಳಿ ಹಳ್ಳಿಯಿಂದ ಸಂಗ್ರಹಿಸುವ, ಮರೆತು ಹೋಗುತ್ತಿದ್ದ ಅವನ್ನು ಹೊಸ ಸಾಹಿತ್ಯಗಳ ಸೃಷ್ಟಿಯ ಮೂಲಕ, ಮೂಲ ಮಟ್ಟುಗಳನ್ನು ಬಳಿಸಿಕೊಳ್ಳುವ ಪ್ರಯತ್ನವೂ ನಡೆಯಿತು. ಹೊಸ ಕವಿತೆಗೆ ಬೇಕಾದ ಹೊಸ ಛಂದೋರೂಪಗಳ ಸಲುವಾಗಿ ಜಾನಪದ ಧಾಟಿಗಳನ್ನು ಅಳವಡಿಸಿಕೊಂಡರು.

ಕವಿ ದ.ರಾ. ಬೇಂದ್ರೆಯವರು ಗೆಳೆಯರ ಗುಂಪಿನ ನಿರ್ದೇಶಕರಾಗಿದ್ದರು. ಕನ್ನಡದ ಏಕೀಕರಣದ ಕಡೆಗೆ ಒಂದು ಮುಖ್ಯ ಹೆಜ್ಜೆಯನ್ನಿಟ್ಟಿದ್ದ ಗೆಳೆಯರ ಗುಂಪು ಹೊಸ ಸಾಹಿತ್ಯದ ಅರಿವು, ಅಗತ್ಯಗಳನ್ನು ತಿಳಿದುಕೊಂಡಿತ್ತು. ಕಾವ್ಯ ರಚನೆಯಲ್ಲಿ ಹೊಸ ಪ್ರಯೋಗಗಳನ್ನು ನಡೆಸಿದುದೇ ಅಲ್ಲದೆ ಕಾವ್ಯದ ವಿಮರ್ಶೆಯನ್ನೂ ಬೆಳೆಸಿತು. 'ಗೆಳೆಯರ ಗುಂಪಿ'ನವರ ಶುಭಾರಂಭದಿಂದ ಕಾವ್ಯದ ಹಳೆಯ ರೂಪಕ್ಕೆ ಹೊಸ ಆತ್ಮವೂ ಅನುಭವ ಸಾಹಿತ್ಯದ ಬಗ್ಗೆ ಆಸಕ್ತಿಯೂ ಬಂದಿತು. ಛಂದಸ್ಸು ತಾನಾಗಿಯೇ ಭಾವಕ್ಕೆ ತಕ್ಕಂತೆ ಬಳುಕಿ ಬದಲಾಯಿತು. ಈ ಕಾಲದಲ್ಲಿ ಬೇಂದ್ರೆಯವರು ತಾವು ಮನೆಯಲ್ಲಿ, ತಮ್ಮ ಚಿಕ್ಕಂದಿನಲ್ಲಿ ತಾಯಿಯಿಂದ ಕೇಳಿದ್ದ ಮರಾಠೀ ಅಭಂಗ್, ದಾಸರಪದಗಳು, ಊರಲ್ಲಿ ವರ್ಷ ತುಂಬಾ ಕೇಳುತ್ತಿದ್ದ ಲಾವಣಿ, ಅನುಭವ ಪದಗಳು, ಇವುಗಳಿಂದ ಕನ್ನಡ ಕಾವ್ಯಕ್ಕೆ ಜಾನಪದ ಮಟ್ಟುಗಳನ್ನು ಅಳವಡಿಸಿಕೊಳ್ಳಲು ಯತ್ನಿಸುತ್ತಿದ್ದರು.

‘ಹಕ್ಕಿ ಹಾರುತಿದೆ’ ಕವನ ಸಂಗ್ರಹ ತಂದ ಗೆಳೆಯರ ಗುಂಪು ಭಾವ ಪ್ರಪಂಚವನ್ನು ವಿಸ್ತರಿಸಿದಂತೆ ಛಂದಸ್ಸಿನ ಚೌಕಟ್ಟನ್ನೂ ವಿಸ್ತರಿಸಿತು ‘ಹಕ್ಕಿ ಹಾರುತಿದೆ’ ಎನ್ನುವ ಶೀರ್ಷಿಕೆಯಿಂದಲೇ ಕವಿತೆಯಲ್ಲಿ ಒಂದು ಹೊಸ ತಂತಿಯನ್ನು ಮೀಟಿತು. ಕಾವ್ಯದ ಹಳೆಯ ಸಂಕೋಲೆಗಳನ್ನು ಕಳಚಿ ಹೊಸಯುಗದ ಬಾಗಿಲನ್ನು ತೆರೆಯಿತು.

ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ. ಕನ್ನಡದ ಹೊಸಕವಿತೆಯಲ್ಲಿ ಮೊತ್ತಮೊದಲ ಬಾರಿಗೆ ಹಳ್ಳಿಯ ಹಾಡುಗಳ ಮಟ್ಟುಗಳಿಗೆ ಸಾಹಿತ್ಯದಲ್ಲಿ ಮುಖ್ಯ ಸ್ಥಾನವನ್ನು ದೊರಕಿಸಿಕೊಟ್ಟ ಕೀರ್ತಿ, ಗೆಳೆಯರ ಗುಂಪಿನ ಕವಿಗಳಿಗೆ ಸೇರುತ್ತದೆ. ಜಾನಪದ ಗೀತೆಗಳನ್ನು ಕೂಡಿಸಿ, ಅವುಗಳನ್ನು ಪರಿಶೋಧಿಸಿ, ಅಭ್ಯಾಸ ಮಾಡಿ, ಅವುಗಳ ಹಿರಿಯಗುಣವನ್ನು ಗುರುತಿಸಿ, ಪುನರ್ಜನ್ಮ ಕೊಟ್ಟಿದ್ದೇ ಈ ಗೆಳಯರ ಗುಂಪಿನ ಮಹಾತ್ಸಾಧನೆ ಎನ್ನಬೇಕು.

ಜಾನಪದ ಗೀತಗಳನ್ನು ಸಂಕಲಿಸುವ ಕಾರ್ಯವನ್ನು ಗೆಳೆಯರ ಗುಂಪಿನ ಧೂಲಾ, ಕಾಪಸೆ, ರೇವಪ್ಪ, ಹಲಸಂಗಿ ಚೆನ್ನಮಲ್ಲಪ್ಪ, ಸಿಂಪಿ ಲಿಂಗಣ್ಣ, ಮಧುರಚೆನ್ನ ಮುಂತಾದವರು ಕೈಕೊಂಡರು. ಈ ಜಾನಪದ ಗೀತಗಳ ಮಟ್ಟುಗಳನ್ನು ಪ್ರತಿಭಾಪೂರ್ಣವಾಗಿ ತಮ್ಮ ಕವಿತೆಗೆ ಉಪಯೋಗಿಸಿಕೊಂಡವರಲ್ಲಿ ಬೇಂದ್ರೆಯವರು ಮುಖ್ಯರು. ಅವರೇ ಹೇಳಿದಂತೆ ಜಾನಪದ ಗೀತಗಳಲ್ಲಿ ನೆಲದೆದೆಯ ತಾಯಿಬೇರಿನ ಸಂಚಲನವನ್ನು ಅನುಭವಿಸುತ್ತಾ, ತಮ್ಮ ಕವಿತೆಗಳಿಗೆ ಈ ಸಂಚಲನವನ್ನು ನೀಡಿದರು. ಶಿಶುನಾಳ ಷರೀಫ್ ಸಾಹೇಬರ ತತ್ವಪದಗಳು ಆಗ ಎಲ್ಲೆಲ್ಲಿಯೂ ಪ್ರಚಾರದಲ್ಲಿದ್ದವು. ಸಾಮಾನ್ಯ ಜನರ ದಿನಬಳಕೆಯ ಮಾತನ್ನು ಜನರ ಜೀವನದಿಂದಲೇ ಅರಿಸಿಕೊಂಡ ಘಟನೆಗಳನ್ನು ವೇದಾಂತದ ಹೋಲಿಕೆಗಳ ಮೂಲಕ ಕವಿತೆಯಲ್ಲಿ ಹೇಳುವುದು ಜನಪ್ರಿಯವಾಯಿತು. ಅನುಭವವನ್ನು ಜೀವನದಿಂದಲೇ ಅರಿಸಿಕೊಂಡು ಸಮರ್ಥ ಉಪಮೆಗಳ ಮೂಲಕ ಬಿತ್ತರಿಸುವ ಷರೀಫರ ಹಾಡುಗಳು ಜನಜನಿತವಾದವು.

ಗೆಳೆಯರ ಗುಂಪಿನ ಮಧುರಚೆನ್ನರಿಗೆ, ಷರೀಫರ ಹಾಡು, ಅರವಿಂದ ದರ್ಶನ, ವಚನ ಸಾಹಿತ್ಯ, ಜಾನಪದ ಹಾಡುಗಳು ವಿಶೇಷ ಪ್ರಭಾವ ಬೀರಿದವು. ಜೊತೆಗೆ ಎ.ಇ.ಯೇಟ್ಸ್ ಎಂಬ ಇಂಗ್ಲೀಷ್ ಅನುಭಾವಿ ಕವಿಯ ಪ್ರಭಾವವೂ ಜೊತೆಗೂಡಿತು.

ಜಾನಪದ ಹಾಡುಗಳ ಪುನರುಜ್ಜೀವನವು ಎಲ್ಲ ದೇಶಗಳ ಸಾಹಿತ್ಯದ ನವೋದಯದ ಕಾಲದಲ್ಲಿಯೂ ಆಗಿದ್ದಲ್ಲದೆ ಇಂಗ್ಲೆಂಡಿನಲ್ಲಿ ವರ್ಡ್ಸ್‌ವರ್ತ್, ಕೋಲರಿಜ್ ಮುಂತಾದ ರೊಮ್ಯಾಂಟಿಕ್ ಕವಿಗಳ ಹೊಸಕಾವ್ಯ ಸಿದ್ಧತೆಗೆ ಜನಪದ ಸಾಹಿತ್ಯವೇ ಪೋಷಕ ಶಕ್ತಿಯಾಗಿ ಬಂದದ್ದು ಕಂಡುಬರುತ್ತದೆ. ಜಾನಪದ ಗೀತಗಳು ಜನಜೀವನದಲ್ಲಿ ತುಂಬಿದ್ದ ಶೃಂಗಾರ, ರಮ್ಯತೆ, ಅನುಭಾವ, ಮೈ ಜುಮ್ಮೆನಿಸುವ ಅದ್ಭುವ ಕತೆಗಳು, ಇವುಗಳನ್ನೂ, ಭಾಷೆಯ ಸಹಜತೆಯನ್ನೂ, ಕಲ್ಪೆಯ ಹೊಸತನವನ್ನೂ, ಕಾವ್ಯಕ್ಕೆ ತಂದುಕೊಟ್ಟವು. ರೊಮ್ಯಾಂಟಿಕ್ ಕಾವ್ಯಕ್ಕೆ ಇವು ನಿಜವಾದ, ನಿರ್ವಿವಾವಿವಾದ ಸ್ಫೂರ್ತಿಗಳಾದವು. ಕನ್ನಡ ಸಾಹಿತ್ಯದಲ್ಲಿಯೂ ಜಾನಪದ ಗೀತೆಗಳು ಹಿರಿಯಸ್ಥಾನವನ್ನು ಪಡೆದುಕೊಂಡವು. ವಿಶೇಷವಾಗಿ ನವೋದಯದ ಕಾಲದಲ್ಲಿನ ಕವಿಗಳಿಗೆ ಜಾನಪದ ಗೀತೆಗಳು ಹೊಸ ಸ್ಫೂರ್ತಿಯನ್ನು ತಂದುಕೊಟ್ಟವು.

* * *

# ಅಧ್ಯಾಯ ೪ - ನವೋದಯ ಸಾಹಿತ್ಯ ಮತ್ತು ಸುಗಮಸಂಗೀತ

ಕನ್ನಡ ನವೋದಯದ ಸಂದರ್ಭದಲ್ಲಿ ಕವಿಗಳು ತಮ್ಮ ಕವಿತೆಗಳ ಭಾವಪೂರ್ಣವಾದ ವಾಚನ ವಿಧಾನದಿಂದ ಅಂದಿನ ಓದುಗರನ್ನು ರೋಮ್ಯಾಂಟಿಕ ಅನುಭವವೊಂದರಲ್ಲಿ ನಿಲ್ಲಿಸುತ್ತಾ, ತಮ್ಮ ಕಾವ್ಯವನ್ನು ನಿಜವಾಗಿ ಹೇಗೆ ಓದಬೇಕು. ಎಂಬುದನ್ನು ತೋರಿಸಿಕೊಟ್ಟರು. ಅದು ಗಮಕ ವಾಚನ ವಿಧಾನದಿಂದ ಬೇರೆಯೇ ಆಗಿದ್ದು ಹೊಸಬಗೆಯ ಅಭಿವ್ಯಕ್ತಿಯಾಯಿತು. ಸುಗಮಸಂಗೀತ ಕವಿಯ ಕವಿತೆಯೊಂದನ್ನು ಎರಡು ಸ್ತರದ ಜನರಿಗೆ ಅಂದರೆ ವಿದ್ಯಾವಂತರು ಮತ್ತು ಅಶಿಕ್ಷಿತರಾಗಿದ್ದು ಸಾಹಿತ್ಯಸಕ್ತರಾಗಿರುವ ಬಹುಜನ ಸಮುದಯಕ್ಕೆ ತಲುಪಿಸುವ ಒಂದು ಆಕರ್ಷಕ ಮಾಧ್ಯಮವಾಗಿ ಬೆಳೆದು ಬಂದಿತು. ನಮ್ಮಲ್ಲಿ ಬಹಳ ಪ್ರಾಚೀನ ಕಾಲದಿಂದಲ್ಲೂ ಕೂಡ ಕವಿತೆಯನ್ನು ಬಹುಜನ ಸಮುದಾಯಕ್ಕೆ ತಲುಪಿಸುವ ಬೇರೆ ಬೇರೆಯ ವಿಧಾನಗಳಿವೆ. ಅವುಗಳಲ್ಲಿ 'ವಾಚನ' ಎನ್ನುವುದು ಗಮಕಕಲೆಯನ್ನು ಕುರಿತು ಹೇಳಿದ್ದಾವರೆ. 'ಕೀರ್ತನ' ಅಥವಾ 'ಹಾಡು' ಹರಿದಾಸರು. ಪದಗಳನ್ನು ಕುರಿತು ಹಾಡುಗಾರಿಕೆಯಾಗುತ್ತದೆ. ಇದು ಸಂಗೀತದ ಸಾಹಚರ್ಯದಿಂದ ಬೆಳೆದುಬಂತು. ವಚನ ಸಾಹಿತ್ಯ ವಾಚನ-ಗಾಯನ, ಎರಡೂ ಸಂಪ್ರದಾಯಕ್ಕೆ ಹೊಂದುವಂತಹುದಾಗಿತ್ತು. ಸಾಹಿತ್ಯಕ್ಕೆ ಮತ್ತು ಹಾಡುಗಾರಿಕೆಗೆ ಪ್ರಾಚೀನಕಾಲದಿಂದಲೂ ಹೀಗೆ ಅವಿನಾ ಸಂಬಂಧವಿದ್ದೇ ಇತ್ತು. ನಮ್ಮ ಜಾನಪದ ಗೀತೆಗಳಂತೂ ಇತಿಹಾಸವಿಲ್ಲದೆಯೂ, ಪರಂಪರೆಯ ಮುದ್ರೆಯನ್ನೊತ್ತಿಕೊಂಡು ಬಾಯಿಂದ ಕಿವಿಗೆ, ಕಿವಿಯಿಂದ ಬಾಯಿಗೆ ಅವಿರತವಾಗಿ ಶಿಷ್ಟ ಸಾಹಿತ್ಯದ ಜೊತೆ ಜೊತೆಗೆ ಗುಪ್ತಗಾಮಿನಿಯಾಗಿ ಹರಿದುಬಂದಿತ್ತು. ಅಂದರೆ ಕನ್ನಡ ಸಾಹಿತ್ಯ, ವಾಚನದ ರೂಪದಲ್ಲಿ, ಗಮಕ ಕಲೆಯ ರೂಪದಲ್ಲಿ, ಕೀರ್ತನದ ರೂಪದಲ್ಲಿ ಜಾನಪದ ಗಾಯನ ರೂಪದಲ್ಲಿ, ಹೀಗೆ ನಾಲ್ಕು ಮುಖ ಹೊತ್ತುಕೊಂಡಿತ್ತು. ಆದರೆ ಈ ನಾಲ್ಕು ಪದ್ಧತಿಗೆ ಅಲ್ಲದೆ ಐದನೆಯ ಹೊಸ ಪದ್ಧತಿ ಆವಿಷ್ಕಾರವಾಗುವ ಅಗತ್ಯವನ್ನು ನಮ್ಮ ಕನ್ನಡ ನವೋದಯ ಕಾವ್ಯ ತಂದುಕೊಟ್ಟವು. 'ಭಾವಗೀತೆ'ಗಳೆಂಬ ಮಿಂಚು ಹೊಸಗನ್ನಡ ಸಾಹಿತ್ಯದಲ್ಲಿ ಒಮ್ಮೆಲೆ ಹಣಿಕಿ ಹಾಕಿ ತನ್ನ ಇರವನ್ನು ಎತ್ತಿಹಿಡಿಯಿತು. ಹೊಸಗಾಯನದ ಪದ್ಧತಿಗೆ ನಾಂದಿಹಾಡಿತು.

**ಭಾವಗೀತೆ ಎಂಬ 'ಮಿಂಚು'**

ಕವಿಯ ಭಾವ ಪ್ರಧಾನವಾದ ಕಾವ್ಯವೇ ಬಾವಗೀತೆಯಾಯಿತು. ಇಂಗ್ಲಿಷ್‌ನ ಲಿರಿಕ್ ಎಂಬ ಪದದ ಸಮಾನಾರ್ಥವಾಗಿ 'ಭಾವಗೀತೆ' ಎಂಬ ಹೆಸರು ಬಂದಿತು. 'ಲಿರಿಕ್' ಎಂಬುದು ಲೈರ್ ಎಂಬ ತಮತಿ ವಾದ್ಯದೊಡನೆ ಹಾಡಿಕೊಂಡ ಗೀತೆಯಾಗಿತ್ತು. ಭಾರತೀಯ ಸಂಗೀತದಲ್ಲಿ ಆಧಾರ ಶ್ರುತಿಗಾಗಿ ತಂತಿವಾದ್ಯ ತಂಬೂರಿ, ಕೊಳಲು, ಇಟ್ಟುಕೊಂಡ ಹಾಗೆ ಪುರಾತನ ಗ್ರೀಕ್ ಕವಿಗಳು ತಮ್ಮ ಕಾವ್ಯಗಳನ್ನು ಜನರ ಮುಂದೆ ಹಾಡುವಾಗ ಜೊತೆಗೆ ತಂತಿವಾದ್ಯವನ್ನು ಶ್ರುತಿಗಾಗಿ ಇಟ್ಟುಕೊಂಡು ಹಾಡುತ್ತಿದ್ದರು. ಎರಡು ಸಾವಿರ ವರ್ಷಗಳಿಂತಲೂ ಹಿಂದೆ ಭಾವಗೀತೆ ಮೊದಲು ಜನ್ಮ ತಳೆದಾಗ ಸಂಗೀತದ ಸಾಹಚರಿಯಾಗಿಯೇ ಮೂಡಿತು. ಮೋಡವಿಲ್ಲದ ಮಿಂಚಿನಂತೆ ಸಂಗೀತದ ಸಾಹಚರ್ಯವಿಲ್ಲದ ಭಾವಗೀತೆಗಳನ್ನು ಗ್ರೀಕರು ಕಲ್ಪಿಸಿಕೊಂಡಿರಲಿಲ್ಲ. ಅನೇಕ ಸಲ ನೃತ್ಯವೂ ಅದರ ಪ್ರಧಾನ ಸಂಗಾತಿಯಾಗಿತ್ತು. ಅಲೌಕಿಕ ಅಥವಾ ಲೌಕಿಕ ಉದ್ದೇಶಗಳಿಂದ ಪ್ರಚೋದಿತವಾದ ಯಾವ ಭಾವಗೀತೆಗಳನ್ನೇ ಆಗಲಿ. ಗ್ರೀಕರು ಹಾಡುವುದಕ್ಕೋಸ್ಕರವಾಗಿಯೇ ರಚಿಸುತ್ತಿದ್ದರು. ಪ್ರಾರ್ಥನಾಗೀತೆ, ವಿಜಯಗೀತೆ, ಬಸಗೆ ಗೀತಗಳು, ಆಡೂನೆ ದೇವತೆಯನ್ನು ಕುರಿತ ಗೀತೆಗಳು ಈ ಎಲ್ಲವೂ ಸಂಗೀತಕ್ಕಾಗಿಯೇ ರಚಿಸಲ್ಪಡುತ್ತಿದ್ದವು.

ಪಶ್ಚಿಮ ಯುರೋಪಿನ ಮಧ್ಯಯುಗದ ಭಾವಗೀತೆ ಕೂಡ ಗ್ರೀಕ್ ಭಾವಗೀತೆಗಳಷ್ಟೇ ಜನಪ್ರಿಯವಾಗಿದ್ದು ನೃತ್ಯ ಗೀತೆಗಳೊಂದಿಗೆ ಅದರಷ್ಟೇ ಆತ್ಮೀಯವಾದ ಸಂಬಂಧವನ್ನು ಹೊಂದಿದ್ದವು. ಫ್ರಾನ್ಸಿನ ಪ್ರಾವೆನ್ಸ್ ಮತ್ತು ಆದರ ಸುತ್ತಮುತ್ತಣ ಪ್ರದೇಶಗಳಲ್ಲಿ ಯಥೇಚ್ಛವಾಗಿ ರಚಿತವಾದ ಗೀತಗಳಿಗಂತೂ ಸಂಗೀತವೇ ಉಸಿರಾಗಿತ್ತು. ಇಂಗ್ಲೆಂಡಿನಲ್ಲಿ ಕೂಡ ಹದಿನೇಳನೆಯ ಶತಮಾನದ ಕೊನೆಯಬರೆಗು ಭಾವಗೀತೆಯಲ್ಲಿ ಸಂಗೀತ ಅನಿವಾರ್ಯವಾದ ಅಂಶ ಎಂಬ ಭಾವ ಇದ್ದೇ ಇತ್ತು. ಗ್ರೀಕರು ಗೀತನೃತ್ಯಗಳಿಗೆ ಕೊಟ್ಟಿದ್ದ ಪ್ರಾಮುಖ್ಯತೆಯ ಜತೆಗೆ, ಭಾವಗೀತಾಕಾರರಲ್ಲಿ ಬಹುಮಂದಿಗೆ ಕಾವ್ಯಪ್ರತಿಭೆಯೊಡನೆ ಸಂಗೀತ ಪ್ರತಿಭೆಯೂ ಇರಬೇಕೆಂಬ ಕಾರಣದಿಂದ 'ಕಾವ್ಯಸಂಗೀತ'

ಎರಡೂ ಒಮ್ಮೆಲೆ ಎರಡು ಮುಖವಿರುವ ನಾಣ್ಯದಂತೆ ಚಾಲನೆಗೆ ಬಂದವು. ಆದರೆ ಕಾವ್ಯಕಲೆ ಬೆಳೆದಂತೆ ಸಂಗೀತ ಅಥವಾ ಬಾಹ್ಯದ ಯಾವುದೇ ವಾದ್ಯಗಳ ಸಹಕಾರವಿಲ್ಲದೆ, ಭಾವದ ಪರಿಣಾಮವನ್ನು ಕಾವ್ಯದ ಪದಗಳು ಛಂದೋಗತಿಯೂ ಉಂಟುಮಾಡಬಲ್ಲುದು ಎಂಬುದು ಕ್ರಮೇಣ ಅರಿವಾಯಿತು. ಕವಿ ವರ್ಡ್ಸ್‌ವರ್ತ್ ತನ್ನ ಕವನ ಸಂಕಲನದ ಮುನ್ನುಡಿಯಲ್ಲಿ ಹಿನ್ನೆಲೆಯ ವಾದ್ಯಗಳ ಬದಲು, ಉತ್ಸಾಹಪೂರ್ಣವೂ, ಉದ್ವೇಗಯುಕ್ತವಾದ ವಾಚನವೇ ಅವುಗಳನ್ನು ಶಕ್ತಿಪೂರ್ಣವಾಗಿ ಮಾಡಲು ಸಾಧ್ಯ ಎಂದ. ಭಾವಗಿತೆಗೆ ಬಾಹ್ಯ ವಾದ್ಯ ಸಂಗೀತಗಳು ಅಗತ್ಯ ಎಂದು ಪ್ರಾರಂಭಿಸಿ ಕೊನೆಗೆ ಭಾವಗೀತೆ ನಾದಶರೀರಿಯಾಗಿ ಮೂಡಬಲ್ಲುದು ಎನ್ನುವವರೆಗೆ ಬೆಳೆಯಿತು. ಮೊದಮೊದಲು ಹೊರಗಣ ಅನಿವಾರ್ಯವಾದ ಸಂಗೀತ ಕ್ರಮಕ್ರಮವಾಗಿ ಭಾವಗೀತೆಯ ಶರೀರವನ್ನು ಪ್ರವೇಶಿಸಿ ಅನಂತರ ಅದರ ಆತ್ಮದ ಒಂದು ಅಂಗವಾಗಿ ಮಾರ್ಪಟ್ಟಿತು.

ತೀವ್ರವಾದ ಭಾವದ ಅಭಿವ್ಯಕ್ತಿಯನ್ನು ತನ್ನ ಗುರಿಯಾಗಿ ಹೊತ್ತ ಭಾವಗೀತೆ ಅಂದು ಸಂಗೀತವನ್ನು ತನ್ನ ನೆರವಿಗೆ ಕರೆದು. ನಂತರ ಛಂದಸ್ಸನ್ನು ಆಶ್ರಯಿಸಿತು. ಛಂದಸ್ಸಿನ ಸಂಸರ್ಗದಿಂದ ಭಾವಗೀತೆಗಳು ತಮಗೆ ತಾವೇ ಹಾಡತೊಡಗಿದವು. ಛಂದಸ್ಸು ಭಾಷೆಯನ್ನು ಸಂಗೀತ ಕಡೆಗೊಯ್ದು ಒಂದು ಅದ್ಭುತ ಶಕ್ತಿಯನ್ನಾಗಿ ಪರಿವರ್ತಿಸಿದಾಗ ನಾದದಿಂದ ಪದಕ್ಕೆ ಬಲ, ಪದದಿಂದ ನಾದಕ್ಕೆ ಬಲ ಉಂಟಾಯಿತು. ಕಾಳಿದಾಸನು ತನ್ನ ಶಾಕುಂತಲದ ಪ್ರಸ್ತಾವನೆಯಲ್ಲಿ 'ಶ್ರುತಿಪ್ರಸಾದನ' ವೆಂದು ಹೇಳಿದಂತೆ ಶ್ರವಣಾಕರ್ಷಣೆಯೇ ಕವಿತೆಯ ಮೊದಲಗುಣವಾಗಿ ಸಂಗೀತದ ಸಾಹಚರ್ಯದಿಂದ ಅದು ಸಾಧ್ಯವಾಯಿತು. ಪ್ರಪಂಚದ ಎಲ್ಲಾ ಮಹಾಕಾವ್ಯಗಳು ಮೊದಲು ಸಂಗೀತದ ರೂಪದಲ್ಲೇ ಹುಟ್ಟಿದ್ದವು.

ಭಾವ ಪ್ರಧಾನವಾದದ್ದು. ಗೀತಗುಣವಿರುವುದು, ಭಾವಗೀತೆಯ ಎರಡು ಮುಖಗಳಾಂತೆ, ಬುದ್ಧಿಯ ತುಡಿತದ ಅಭಿವ್ಯಕ್ತಿಯೂ ಅದಕ್ಕೆ ಸೇರಿಕೊಂಡಿತು. ಕುವೆಂಪು ಅವರು ಕಲಾಸುಂದರಿಯನ್ನು ಕುರಿತು ಹೇಳುತ್ತಾ 'ಆಕೆ ಬುದ್ಧಿಬಾವಗಳ ವಿದ್ಯುದಾಲಿಂಗನದಿಂದ ಆವಿರ್ಭವಿಸಿರುವ ಪ್ರತಿಭಾ ರೂಪಿಸಿ, ಆಕೆಯ ಶ್ರೇಷ್ಠ ಅವತಾರವೇ ಕವಿತೆ. ಕವಿತೆ ಇತರ ಕಲೆಗಳಿಗಿಂತಲೂ ಅತಿಶಯವಾದ ಗೌರವಕ್ಕೆ ಪಾತ್ರವಾಗಿದೆ. ಅದು ವಾಙ್ಮಯ ಶರೀರಿಯಾಗಿರುವುದರಿಂದ ರಾಗರಸಭಾವಗಳನ್ನು ಉದ್ದಿಪನ ಮಾಡಿ, ಮನಸ್ಸಿಗೆ ಜ್ಞಾನಜ್ಯೋತಿಯನ್ನು ದಾನಮಾಡಿ ಆತ್ಮವನ್ನು ಅತ್ಯುನ್ನತ ಸ್ಥಿತಿಗೆ ಕೊಂಡೊಯ್ಯುತ್ತದೆ. ಧ್ಯಾನಮಯವೂ, ತತ್ವಶೀಲವೂ ಅಲ್ಲದ ಕವಿತೆ ಎಷ್ಟೇ ಭಾವರಾಗ ಪೂರ್ಣವಾಗಿದ್ದರೂ ಅದರಲ್ಲಿ ಎಷ್ಟೇ ಮಧುರ ಪದ ಶೈಲಿ ಇದ್ದರೂ ಅದು ಸಮುದ್ರದ ತೆರೆಗಳ ಮೇಲೆ ಮನಮೋಹಿಸುವ ಕ್ಷಣಿಕ ನಶ್ವರವಾದ ನೊರೆಯಂತೆಯೇ ಹೊರತು ಕಡಲಿನ ಆಳವಲ್ಲ. ಗಂಭೀರ ಗೌರವದಿಂದ ಮೌನವಾಗಿರುವ ಮುತ್ತುಗಳಂತೆ ಮಾನ್ಯವಾಗಲಾರದು; ಘನವಾಗಲಾರದು; ಶಾಶ್ವತವಾಗಲಾರದು. ಉತ್ತಮ ಕವಿತೆಗೆ ತೇಜಸ್ವಿನಂತೆ ತಪಸ್ಸೂ ಅತ್ಯಾವಶ್ಯಕ. ಉತ್ತಮ ಕವಿತೆಯಲ್ಲಿ ಆಳವಾದ ಆಲೋಚನೆ ಇರಬೇಕು ಎಂದು ಕವಿತಾ ಸುಂದರಿಯ ನಿಜವಾದ ಸೌಂದರ್ಯವನ್ನು ಬಿಚ್ಚಿಟ್ಟರು.

ಮಾನವ ಭಾವವನ್ನು ಕೆರಳಿಸಬಲ್ಲ, ಕವಿ ಹೃದಯವನ್ನು ಮಿಡಿಯಬಲ್ಲ ಯಾವುದೇ ವಿಷಯವಾದರೂ ಭಾವಗೀತೆಗೆ ವಸ್ತುವಾಗಬಲ್ಲುದು. ಒಂದು ಭಾವ, ಒಂದು ಸಂದರ್ಭ ಅಥವಾ ಒಂದು ಆಲೋಚನೆ ಎನ್ನುವುದು ಭಾವಗೀತೆಯ ಪ್ರಧಾನಗುಣಗಳಾದ ಐಕ್ಯತೆ ಮತ್ತು ಸಂಕ್ಷಿಪ್ತಿತೆಯಾದಂತೆ, ಭಾವದಲ್ಲಿ ಏಕಸೂತ್ರತೆ ಇರುವುದೂ ಮುಖ್ಯವಾಗುತ್ತದೆ. ಬಾವಗೀತೆಯಲ್ಲಿ ಕವಿಯು ತನ್ನ ಸ್ವಂತಭಾವವನ್ನು ನೇರವಾಗಿ ಅಭಿವ್ಯಕ್ತಿಗೊಳಿಸುವುದರಿಂದ ಅಲ್ಲಿ ಅವನ ವ್ಯಕ್ತಿತ್ವವು ಕಾಣಿಸಿಕೊಳ್ಳುತ್ತದೆ. ಅವನ ವಿಚಾರಗಳು, ಆದರ್ಶ, ಅನುಭವ ಜನ್ಯವಾದ ಭಾವನೆಗಳು ಪ್ರಕಟವಾಗುತ್ತಾ ಕವಿಯ ವ್ಯಕ್ತಿತ್ವದ ಪ್ರತಿಬಿಂಬವಾಗುತ್ತದೆ. ವಾಲ್ಟ್‌ವೈಟ್‌ಮನ್ ಎಂಬ ಕವಿ ತನ್ನ ಲೀವ್ಸ್ ಆಫ್ ಗ್ರಾಸ್ 'ಪುಸ್ತಕದ ಬಗೆಗೆ ಹೇಳುತ್ತಾ 'ಗೆಳೆಯನೇ ಇದು ಬರಿಯ ಪುಸ್ತಕವಲ್ಲ. ಇದನ್ನು ಮುಟ್ಟಿದವನು ಒಬ್ಬ ಮನುಷ್ಯನನ್ನು ಮುಟ್ಟುತ್ತಾನೆ ಎಂದಿದ್ದಾನೆ. ಮಿಲ್ಟನ್ ಎಂಬ ಮತ್ತೊಬ್ಬ ವಿದ್ವಾಂಸ 'ಹಿರಿಯ ಜೀವವೊಂದರ ಜೀವರಕ್ತವೇ' ಎಂದಿದ್ದಾನೆ.

ಭಾವಗೀತೆಯ ವಸ್ತು, ಬಹು ಬೈಯುಕ್ತಿಕತೆಯಿಂದ ಆರಂಭವಾಗಿ ವಿಶ್ವವ್ಯಾಪ್ತಿಯಾಗುವಂತಹ ವಸ್ತುವಿನವರೆಗೂ ಹಬ್ಬಿಕೊಂಡಿತು. ಪ್ರೀತಿ, ನಿರಾಶೆ, ಸಾಮಾಜಿಕ ಜೀವನ, ಆದರ್ಶ, ಪ್ರಾಪಂಚಿಕ ವಿವಿಧ ಅನುಭಾವಗಳು, ವಿರಹ, ಮಿಲನ, ಸುಖದುಃಖ ಮೊದಲಾದ ಬದುಕಿನ

ಎಳೆಗಳು, ಭಕ್ತಿ ಅನುಭಾವ, ಹಾಸ್ಯ ತರುವಂತಹ ಅಸಂಗತ ವಿಷಯ, ಹೀಗೆಯೇ ಎಲ್ಲವೂ ಕವಿಯ ಅನುಭವಕ್ಕೆ ಬರುವ ವಿಷಯಗಳೇ ಆಗಿ ಭಾವಗೀತೆಗಳಾದವು. ಹಿಂದಿನ ಅಥವಾ ಅಂದಿನ, ಕ್ಷಣದ ಯಾವುದೋ ಸನ್ನಿವೇಶ, ಒಲಿದ ಒಂದು ಆವರಣ, ಆದ ಒಂದು ಬೇಸರ ಅಥವಾ ಹರ್ಷದ ಕ್ಷಣ ವಿಜೃಂಭಣ, ಆವೇಗ, ಸಂದೇಹ, ಕೊರಗು ಮುಂತಾದ ಭಾವಗಳನ್ನು ಭಾವಗೀತೆ ಪ್ರತಿಬಿಂಬಿಸಲ್ಪಟ್ಟಿತ್ತು. ಬಹುಮುಖವಾದ ವಸ್ತುವನ್ನೊಳಗೊಂಡ ಭಾವಗೀತೆ ಮಲೆನಾಡಿನ ಗಿರಿಯ ಪಂಕ್ತಿ, ವನರಾಜಿಗಳು, ನದಿತೊರೆಗಳು, ಮಳೆ, ಮೋಡ, ಬಾನು ಮಂಜು, ಬೆಳಕು, ಕಗ್ಗತ್ತಲು, ಮೌನ, ಬೆಳಗು, ಬೆಳದಿಂಗಳು, ಕಲೆ, ಕವಿತೆ, ಜೀವನ ವಿಮರ್ಶೆ, ಶೃಂಗಾರ, ನಾಡಿನ ಚಿಂತೆ ಎಲ್ಲವನ್ನೂ ತನ್ನ ತೆಕ್ಕೆಗೆ ತೆಗೆದುಕೊಂಡಿತು.

'ಭಾವಗೀತೆ' ಎಂಬ ಹೆಸರು, ಉಸಿರು, ಚೈತನ್ಯಗಳಲ್ಲಿ ಭಾರತೀಯವಾದರೂ, ಹೆಸರು ರೂಪಗಳಲ್ಲಿ ಪಾಶ್ಚಾತ್ಯ ಸಹಿತ್ಯ ಪ್ರಪಂಚಕ್ಕೆ ಸೇರಿದುದು. ಹಿಂದಿನ ಕಾಲದ ಕಾವ್ಯಗಳಲ್ಲಿಯೂ, ಅನುಭಾವೀ ಶಿವಶರಣರ ವಚನಗಳಲ್ಲಿಯೂ, ಭಕ್ತಿ ಪಂಥದ ದಾಸರಪದಗಳಲ್ಲಿಯೂ ಭಾವಗೀತೆಗಳ ಗುಣಗಳನ್ನು ಕಾಣಬಹುದು. ಆದರೆ ಇವುಗಳಲ್ಲಿ ಒಂದು ಕಥೆಯ, ಒಂದು ನಿರೂಪಣೆಯ ಅಂಗವಾಗಿ ಬರುತ್ತಿದ್ದವೇ ಹೊರತು ಬೇರಯಾಗಿ, ತಮ್ಮದೇ ವ್ಯಕ್ತಿತ್ವದ ಮೇಲೆ ನಿಲ್ಲುವ ಬಿಡಿ ಪದ್ಯಗಳಾಗಿ ಬರುತ್ತಿರಲಿಲ್ಲ. ಆದರೆ ಭಾರತಕ್ಕೆ ೧೯-೨೦ನೇ ಶತಮಾನದಲ್ಲಿ ಕಾಲಿಟ್ಟ ಪಾಶ್ಚಾತ್ಯ ಸಂಸ್ಕೃತಿ ತನ್ನೊಡನೆ ತನ್ನ ಸಾಹಿತ್ಯ ಪ್ರಕಾರಗಳನ್ನೂ ಹೊತ್ತು ತಂದಿತು. ಅವುಗಳಲ್ಲಿ ಭಾರತೀಯ ಮನಸ್ಸನ್ನು ಮೊದಲು ಸೆರೆಹಿಡಿದದ್ದು ಈ ಭಾವಗೀತೆಯೇ. ವಂಗಕವಿ ರವೀಂದ್ರರಲ್ಲಿ ಮುಗಿಲು ಮುಟ್ಟಿದ ಈ ಸಾಹಿತ್ಯ ರೂಪ ಕ್ರಮಕ್ರಮವಾಗಿ ಭಾರತದ ಉಳಿದ ಎಲ್ಲ ಭಾಷೆಗಳಲ್ಲಿಯೂ ಹಬ್ಬಿ ಪಸರಿತು. ಗ್ರೀಕ್ ಬಾವಗೀತೆಗಳು ಫ್ರೆಂಚ್ ಭಾಷೆಯ ಮೂಲಕ ಇಂಗ್ಲಿಷ್ ಸಾಹಿತ್ಯವನ್ನು ಪ್ರವೇಶಮಾಡಿದವು. ಪ್ರೆಂಚ್ ಬಾಷೆ, ವಸ್ತು, ರೂಪ, ಭಾಷೆ ಈ ಮೂರರ ದೃಷ್ಟಿಯಿಂದ ಪರಿಪೂರ್ಣವಾದ ಭಾವಗೀತೆಗಳನ್ನು ಇಂಗ್ಲಿಷ್ ಸಾಹಿತ್ಯಕ್ಕೆ ನೀಡಿತು.

ಭಾವಗೀತೆಗಳು ಸಾನೆಟ್, ಪ್ರಗಾಥ, ಎಲಿಜಿ; ಇಡಿಲ್ ಮುಂತಾದ ವಿವಿಧ ರೂಪಗಳನ್ನು ಹೊತ್ತುಕೊಂಡಿತು. ಇವು ವಸ್ತುವಿನ ಆಧಾರದ ಮೇಲೆ ಮಾಡಿದ ಪ್ರಕಾರಗಳಾಗಿರದೆ ಅವುಗಳ ಛಂದೋರೂಪದ ನಿರೂಪಣಾ ರೀತಿಯ ಆಧಾರದ ಮೇಲೆ ವರ್ಗೀಕೃತಗೊಂಡವು. ಗ್ರೀಕರಲ್ಲಿ 'ಎಲಿಜಿ' ಎನ್ನುವುದು ಒಂದು ಛಂದಸ್ಸಿನ ಹೆಸರಾಗಿತ್ತು. ಶೋಕಗೀತೆ ಎನ್ನುವ ಇನ್ನೊಂದು ಹೆಸರಿನಿಂದ ಕರೆಯಲ್ಪಡುವುದು ನಂತರ ರೂಢಿಗೆ ಬಂತು.

ಹೊರಗಣ್ಣಿಗೆ ಕಿರಿದಾಗ ಕಾಣುತ್ತ, ಸರಳವಾಗಿ ಸುಲಭವಾಗಿ ತೋರುವ ಭಾವಗೀತೆಯ ಸ್ವರೂಪ ಶಕ್ತಿಪೂರ್ಣವೂ, ಜಟಿಲವು ಆಗಿರುವುದು ಸ್ಪಷ್ಟವಾಗುತ್ತದೆ. ತನ್ನ ಕೆಲವೇ ಸಾಲುಗಳಲ್ಲಿ ಅನಂತತೆಯನ್ನು ಹಿಡಿದಿಡುತ್ತಾ, ಅನಂತ ಸಂಪತ್ತನ್ನು, ಪರಿಪೂರ್ಣ ಸೌಂದರ್ಯವನ್ನು 'ಪುಟ್ಟಕನ್ನಡಿಯಲ್ಲಿ ಹಿಡಿದಿಡುವ ಭಾವಗೀತೆ. ಮಿಂಚಿನಷೇ ಕ್ಷಣಿಕ, ಮಿಂಚಿನಷ್ಟೇ ಚಂಚಲ, ಮಿಂಚಿನಷ್ಟೇ ಆಕರ್ಷಕ.

**ಕವಿತೆ ಗೀತೆಯಾದಾಗ**

ಸಂಗೀತ ಸಹಚರಿಯಾಗಿ ಜನಿಸಿದ ಭಾವಗೀತೆ ಕ್ರಮಕ್ರಮವಾಗಿ ಸಂಗೀತದ ಭಾಹ್ಯಾವಲಂಬನವನ್ನು ಕಳೆದುಕೊಂಡರೂ ಕೆಲವೊಂದು ಭಾವಗೀತೆಗಳು ಹಾಡುವುದಕ್ಕಾಗಿಯೇ ಬರೆಯಲ್ಪಟ್ಟವು ಭಾವಗೀತೆಗಳಲ್ಲಿ ಮೂರು ಪ್ರಕಾರಗಳು ಕಂಡುಬಂದವು. ಅವು

೧. ಸಂಗೀತಕ್ಕೋಸ್ಕರವಾಗಿಯೇ ರಚಿತವಾದದ್ದು

೨. ಸಾಹಿತ್ಯವೇ ಪ್ರಧಾನವಾದದ್ದು, ರಾಗದೊಂದಿಗೆ ಅರ್ಥಕ್ಕೆ ಚ್ಯುತಿ ಇಲ್ಲದೆ ಹಾಡುವಂತಹುದು.

೩. ಸಾಹಿತ್ಯವೇ ಪ್ರಧಾನವಾಗಿ ಏನು ಮಾಡಿದರೂ ಸಂಗೀತಕ್ಕೆ ಅಳವಡದೆ ಇರುವಂತಹುದು.

– ಇಲ್ಲಿ ಮೊದಲನೆಯ ಗುಂಪಿನ ಭಾವಗೀತೆಗಳು ಶುದ್ಧ ಸಂಗೀತ ಪ್ರಧಾನವಾದದ್ದು ಪ್ರಾಚೀನರ ಅನೇಕ ಕೀರ್ತನೆಗಳು ಈ ಗುಂಪಿಗೆ ಸೇರುತ್ತವೆ. ಸಾಹಿತ್ಯ ಗೌಣವಾಗಿ, ಸಂಗೀತವೇ ಪ್ರಧಾನವಾದ ಇವು ಬರುಯ ಹಾಡಾಗಿರುತ್ತವೆ. ಹಾಡಿಗಾಗಿ ಹೊಸೆದ ಸಾಹಿತ್ಯದಿಂದ ಕೂಡಿರುತ್ತದೆ. ಇಂಗ್ಲಿಷಿನಲ್ಲಿ ಇವುಗಳನ್ನು '**ಸಾಂಗ್–ಲಿರಿಕ್'** ಎಂದು ಕರೆಯುತ್ತಾರೆ. ಋ.ವಿ.ಜಿ.ಯವರ ಅಂತಃಪುರಗೀತೆಗಳು, ಮಾಸ್ತಿಯವರ 'ಬಿನ್ನಹ' ಮುಂತಾದವು ಈ ಪ್ರಕಾರಕ್ಕೆ ಸೇರುತ್ತವೆ. ಭಾವಸ್ಪಂದಿಯಾದ ಸಂಗೀತ ಮಾತ್ರದಿಂದ ಇದು ಗಮನ ಸೆಳೆಯಬಲ್ಲುದಲ್ಲದೆ ಸಾಹಿತ್ಯಾರ್ಥಗಳಿಂದ ಅಲ್ಲ.

ಎರಡನೇಯ ಬಗೆಯ ಹಾಡುಗಳಲ್ಲಿ ಸಾಹಿತ್ಯ ಪ್ರಧಾನ. ಕವಿ ಸಂಗೀತಜ್ಞನಾಗಬೇಕಾದ ಅವಶ್ಯವಿಲ್ಲ. ರಾಗತಾಳಗಳ ನಿರ್ದೇನ ಬೇಕಿಲ್ಲ. ಕವಿತೆಯೇ ತನ್ನಲ್ಲಿ ಅಂತರ್ಗತವಾಗಿರುವ ಗೀತಗುಣದಿಂದ ಸಂಗೀತದ ಸ್ಪರ್ಶಮಾಡಿಸುತ್ತದೆ. ತಜ್ಞ ಸಂಗೀತ ಸಂಯೋಜಕರಿಗೆ ರಾಗ ಸಂಯೋಜಿಸಲು ಗೀತವೇ ಸ್ಫೂರ್ತಿಯಾಗಿರುತ್ತದೆ. ಕವಿಯಾದವನು ಯಾವುದೇ ನಿರ್ದಿಷ್ಟರಾಗದ ಮೂಲಕ ಕಲ್ಪಿಸಿಕೊಂಡು ಬರೆಯದಿದ್ದರೂ ಇವು ತಮಗೆ ತಾವೇ ಹಾಡಿಕೊಳ್ಳುತ್ತವೆ. ಸಂಗೀತ ಸಂಯೋಜನೆ ಮೂಲಕ ಸಾಹಿತ್ಯದ ಸೂಕ್ಷ್ಮತೆಗಳನ್ನು ಸೌಂದರ್ಯವನ್ನು ಅದ್ಭುತವಾಗಿ ಹಿಡಿದಿಟ್ಟುಕೊಡುತ್ತದೆ. ಸಂಗೀತದಿಂದ ಬೇರ್ಪಡಿಸಿದಾಗ ಅವು ಮಬ್ಬಾಗುತ್ತವೆ. ಈ ಬಗೆಯ ಗೀತಗಳಿಂದ 'ಸುಗಮಸಂಗೀತವೆಂಬ ಗಾಯನ ಪ್ರಕಾ೨೦ನೇ ಶತಮಾನದಲ್ಲಿ ಪ್ರಾರಂಭವಾಗಿ ಜನಪ್ರಿಯವಾಯಿತು.

ಮೂರನೇಯ ಗುಂಪಿನ ಕವಿತೆಗಳು ಓದುವುದಕ್ಕಾಗಿಯೇ ಬರೆದ ಕವಿತೆಯಾಗಿದ್ದು ಅದರ ಉದ್ದೇಶವೇ ಶಾಬ್ದಿಕರೂಪದ ಸಾಹಿತ್ಯದ ಚಿತ್ರಣವಾಗಿರುತ್ತದೆ. ಅದಕ್ಕೆ ಸಂಗೀತ ಹೊಂದುವುದೂ ಇಲ್ಲ. ಹೊಂದಿಸುವ ಔಚಿತ್ಯವೂ ಇಲ್ಲ. ನವೋದಯ ಸಾಹಿತ್ಯದ ಅನಂತರ ಬಂದ ನವ್ಯಕಾವ್ಯ ಈ ಗುಂಪಿಗೆ ಸೇರಿತು. ಸುಗಮಸಂಗೀತದ ಕಕ್ಷೆಯಿಂದ ಹೊರಗಿರುವ ನವ್ಯ ಸಾಹಿತ್ಯವನ್ನು ಕುರಿತು ಅವಲೋಕಿಸುವುದು ಇಲ್ಲಿ ಪ್ರಸ್ತುತವಲ್ಲ.

ನಮ್ಮಲ್ಲಿ ಪ್ರಾಚೀನದಿಂದಲೂ ಹಾಡಬಹುದಾದ ಕಾವ್ಯ ಮತ್ತು ಓದಬಹುದಾದ ಕಾವ್ಯ ಎರಡೂ ಪ್ರಕಾರಗಳು ರಚನೆಯಾಗುತ್ತ ಬಂದಿದೆ. ಅವುಗಳನ್ನು ಹಡುಗಬ್ಬ ಮತ್ತು ಓದುಗಬ್ಬ ಎಂದು ಕರೆಯಲಾಗುತ್ತಿತ್ತು ಎಂಬುದನ್ನು ಈಗಗಾಲೇ ವಿವರಿಸಲಾಗಿದೆ. ಆಧುನಿಕ ದೃಷ್ಟಿಯಿಂದ ನೋಡಿದರೆ ಬಸವಣ್ಣ ಒದುಗಬ್ಬದ ಪ್ರತಿನಿಧಿಯಾಗಿ ಕಂಡುಬಂದರೆ ಪುರಂದರದಾಸರು ಹಾಡುಗಬ್ಬದ ಪ್ರತಿನಿಧಿಯಾಗಿ ಕಂಡುಬರುತ್ತಾರೆ. ಲಕ್ಷ್ಮೀಶ, ರತ್ನಾಕರವರ್ಣಿ, ಕನಕದಾಸ, ಮುದ್ದಣ-ಮುಂತಾದವರು ಓದುಗಬ್ಬ, ಹಾಡುಗಬ್ಬ ಎರಡನ್ನೂ ರಚಿಸಿ ಖ್ಯಾತರಾಗಿದ್ದಾರೆ. ಇಪ್ಪತ್ತನೆಯ ಶತಮಾನದಲ್ಲಿ 'ಕುವೆಂಪು' ಬೇಂದ್ರೆ, ಪುತಿನ, ಆನಂದಕಂದ, ಕೆ.ಎಸ್.ನ, ಜಿ.ಎಸ್. ಶಿವರುದ್ರಪ್ಪ, ಚೆನ್ನವೀರಕಣವಿ' ಮೊದಲಾದ ಹಿರಿಯ ಕವಿಗಳು ಕವಿತೆ ಮತ್ತು ಗೀತೆ ಎರಡನ್ನೂ ಸಮೃದ್ಧವಾಗಿ ರಚಿಸಿ ಸವ್ಯಸಾಚಿಗಳಾಗಿದ್ದರು. ನವ್ಯದ ಆಂದೋಲನದಲ್ಲಿಯೂ, ಕೆ.ಎಸ್. ನಿಸಾರ್ ಅಹಮದ್, ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ, ಸುಮತೀಂದ್ರ ನಾಡಿಗ್, ಚಂದ್ರಶೇಖರ ಕಂಬಾರ, ಹೆಚ್.ಎಸ್. ವೆಂಕಟೇಶ್ ಮೂರ್ತಿ, ಬಿ.ಆರ್. ಲಕ್ಷಣರಾವ್ ಮುಂತಾದವರು ತಮ್ಮ ಓದುಗವಿತೆ (ನವ್ಯ)ಯ ಜೊತೆಜೊತೆಯಲ್ಲೇ ಹಾಡಬಹುದಾದ ಕವಿತೆಗಳನ್ನು ಬರೆದು ಸುಗಮಸಂಗೀತದ ತೋಟಕ್ಕೆ ಘಮಿಘಮಿಸುವ ಹೂವುಗಳನ್ನು ತುಂಬಿದ್ದರು. ಬದುಕಿನ ಸಂಕೀರ್ಣ ಅನುಭವಗಳನ್ನು ವಸ್ತುವನ್ನಾಗಿಸಿಕೊಂಡು ದಿನದಿನಕ್ಕೆ ಎತ್ತರಕ್ಕೆ ಏರುತ್ತಾ, ಬಿತ್ತರಕ್ಕೆ ಹರಡಿಕೊಳ್ಳುತ್ತಾ ಅರ್ಥಪೂರ್ಣವಾಗಿ ಸಾಗಿತು.

**ಸುಗಮಸಂಗೀತ ಮತ್ತು ರಂಗಗೀತೆ (ನಾಟ್ಯ ಸಂಗೀತ)**

ಸುಗಮಸಂಗೀತವು ಶಾಸ್ತ್ರೀಯ ಸಂಗೀತದ ಬೇರಿನಿಂದ ಹುಟ್ಟಿ, ಜನಪದಸಂಗೀತದ ಮೊಗ್ಗಿನಂತೆ ಬಿರಿದು ಗಮಕ ಕಲೆಯ ವಿಸ್ತರಣೆಯಲ್ಲಿ ಹರಡಿಕೊಂಡು ಹೊಸಗನ್ನಡದ ನವೋದಯದಲ್ಲಿ ಅರಳಿ ಪರಿಮಳ ಚೆಲ್ಲತು. ನಂತರ ನವೋದಯ ಕವಿತೆಗೆ ದಾಟಿ ಹಚ್ಚಿಹಾಡುವ ಕ್ರಮ ಬಹುಶಃ ರಂಗಭೂಮಿಯಿಂದ ಬಂದಂತೆ ತೋರುತ್ತದೆ. ರಂಗಗೀತೆಗಳು ಸನ್ನಿವೇಶಕ್ಕೆ ಬದ್ಧವಾಗಿ, ಅಭಿನಯಕ್ಕೆ ಪೂರಕವಾಗಿ, ಸಂಭಾಷನೆಗೆ

ಪೋಷಕವಾಗಿ ವಾದ್ಯವೃಂದದ ಸ್ವರಮೇಳದೊಂದಿಗೆ ಹಾಡುತ್ತಿದ್ದ ಗೀತೆಯೇ ರುಪಾಂತರದಲ್ಲಿ ಸರಳವೂ ಸುಲಭವೂ ಆಗಿ ಸುಗಮಸಂಗೀತವಾಗಿರಬಹುದು.

ಭಾವಗೀತೆ ತನ್ನ ವೈಯುಕ್ತಿಕ ತುಡಿತದ ಅನುಭವವನ್ನು ಕಂಡುಕೊಳ್ಳುತ್ತಾ, ತನ್ನ ಅನುಭವಕ್ಕೆ ಅರ್ಥವನ್ನು ಹುಡುಕಿಕೊಂಡು ತನ್ನ ಭಾವನೆಗಳನ್ನು ಶಕ್ತಿಯುತವಾಗಿ ಲಯಬದ್ಧವಾದ ಮುಕ್ತ ಅಭಿವ್ಯಕ್ತಿಯ ಭಾವನೆಗಳ ಮೂಲಕ, ಪ್ರತಿಮೆಗಳ ಮೂಲಕಹೇಳುವಾಗ ಸಾಮಾನ್ಯವಾದ ಅನುಭವವೂ ಸಾಂಕೇತಿಕವಾದ ಆಯಾಮವನ್ನು ಪಡೆಯಿತು. ಅದು ನಾನಾ ಪ್ರಕಾರದಲ್ಲಿ ನಾನಾ ಸಂದರ್ಭಗಳಿಗೆ ತಕ್ಕಂತೆ ಉಪಯೋಗಿಸಲ್ಪಟಿತು. 'ಕಾವ್ಯೇಶು ನಾಟಕಂ ರಮ್ಯಂ' ಎಂದು ಕಾಳಿದಸ ಹೇಳಿರುವಂತೆ, 'ರಮ್ಯ' ಎನಿಸಿಕೊಂಡ ನಾಟಕಕ್ಕೂ 'ರಸಗಳ ಭಾಷೆ' ಎಂದೇ ಗೌರವಕ್ಕೆ ಪಾತ್ರವಗಿದ್ದ ಸಂಗೀತ ಸೇರಿಕೊಂಡಿತ್ತು. ಸಂಗೀತ ಭಾವಾಭಿವ್ಯಕ್ತಿಯ ಸಮರ್ಥ ಮಾಧ್ಯಮವಾಗಿದ್ದರಿಂದ ಮಾತಿನ ಮೂಲಕವೂ ವ್ಯಕ್ತಪಡಿಸಲಾಗದ ಮೃದುಮನಸ್ಸಿನ ಸೂಕ್ಷ್ಮಭಾವನೆಗಳನ್ನು ಹಾಡಿನ ಮೂಲಕ ವ್ಯಕ್ತಪಡಿಸುವ ಪರಿಪಾಠ ಬಂದಿತ್ತು. ನಾಟ್ಯಗೀತೆ ಅಥವಾ ರಂಗಗೀತೆಗಳೆಂಬ ಗೀತಪ್ರಕಾರಗಳು ಹುಟ್ಟಿಕೊಂಡವು. ಅವು ನಾಟಕದ ಸಂಭಾಷಣೆಗಿಂತ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡವು. ಬೆಳಕು ಮತ್ತು ಧ್ವನಿವರ್ಧಕಗಳ, ರಂಗಪರಿಕರಗಳಾವೂ ಇರದ ಆ ದಿನಗಳಲ್ಲಿ ನಾಟಕದ ವಸ್ತು ಮತ್ತು ಸನ್ನಿವೇಶಗಳನ್ನು ಅರ್ಥೈಸಿಕೊಡುವಲ್ಲಿ, ಭಾವರಸಗಳನ್ನು ಅನುಭವಕ್ಕೆ ತಂದು ಕೊಡುವಲ್ಲಿ ಸಂಭಾಷಣೆಯಷ್ಟೇ ಸಂಗೀತವೂ ಕೂಡ ಒಂದು ಸಮರ್ಥ ಮಾಧ್ಯಮವಾಗಿ ಬೆಳೆದುಬಂದಿತ್ತು. ಅತ್ಯಂತ ಸೂಕ್ಷ್ಮವಾದ ಸಂಚಾರಿ ಭಾವಗಳ ಅಭಿವ್ಯಕ್ತಿಗೆ ಆಂಗಿಕಾಭಿನಯ ಅತ್ಯಂತ ಸ್ಥೂಲ ಮಾಧ್ಯಮವಾಗಿ ಬಿಡುವ ಅಪಾಯವಿದ್ದುದರಿಂದ, ಅಲ್ಲದೆ ರಸದ ಸಂಚಾರಿಭಾವಗಳನ್ನು ಆಂಗಿಕಾಭಿನಯದಿಂದಲೇ ಅರ್ಥೈಸಿಕೊಡುವುದು ಅಸಾಧ್ಯವಾದಾಗ ಸಂಗೀತದ ರಾಗಗಳು, ಅದರ ಸ್ವರ, ಆಲಾಪ, ತಾನಗಳು, ಅರ್ಥಪೂರ್ಣವಾದ ರಸಭಾವಗಳನ್ನು ಕಟ್ಟಿಕೊಡುತ್ತಿದ್ದವು. ಪೌರಾಣಿಕ ನಾಟಕಗಳೇ ಹೆಚ್ಚಾಗಿ ಪ್ರಯೋಗ ಗೊಳ್ಳುತ್ತಿದ್ದ ಅಂದು ಕಥೆಗೆ ಪುರಕವಾದ ಅತಿವಾಸ್ತವ ಪರಿಸರವನ್ನುಂಟುಮಾಡುವ ವಿಶೇಷ ಗುಣವನ್ನು ಸಂಗೀತ ಹೊಂದಿದ್ದರಿಂದ ಅದು ರಂಗಪ್ರದರ್ಶನದಲ್ಲಿ ಪ್ರಾಧಾನ್ಯತೆ ಪಡೆದಿತ್ತು. ಅಂದಿನ ರಂಗಸಂಗೀತವಾದರೂ ಶಾಸ್ತ್ರೀಯ ಸಂಗೀತದ ಒಂದು ಭಾಗವಾಗಿಯೇ ಬೆಳೆದುಬಂದಿತ್ತು. ಸಮಾಜದಲ್ಲಿ ಸಂಗೀತಕ್ಕೆ ಸಕಷ್ಟು ಪ್ರೋತ್ಸಾಹವಿಲ್ಲದ ಆ ಕಾಲದಲ್ಲಿ ಅರಮನೆಗಳನ್ನು ಬಿಟ್ಟರೆ, ಕೆಲವು ನಾಟಕ ಮಂಡಳಿಗಳೇ ಸಂಗೀತಗಾರರಿಗೆ ಆಶ್ರಯತಾಣಗಳೆನಿಸಿದ್ದವು. ಸಂಗೀತವನ್ನು ಕಲಿಯಬೇಕೆಂಬ ಅಭಿಲಾಷಿಗಳೂ ನಾಟಕಮಂಡಳಿಗಳನ್ನೇ ಆಶ್ರಯಿಸಬೇಕಾಗಿತ್ತು. ಅಂದಿನ ಈ ಪರಿಸ್ಥಿತಿಯಿಂದಾಗಿ ಸಂಗೀತಕ್ಕೆ ಶಾಸ್ತ್ರೀಯ ಬಲ ದೊರೆಯಿತು. ಮಂಡಳಿಯಲ್ಲಿರುತ್ತಿದ್ದ ಖ್ಯಾತ ವಿದ್ವಾಂಸರುಗಳೇ ನಾಟಕದ ಹಾಡುಗಳಿಗೆ ರಾಗ ತಾಳಗಳನ್ನು ಸಂಯೋಜಿಸುವ, ಬಾಲ ಕಲಾವಿದರಿಗೆ ಸಂಗೀತ ಶಿಕ್ಷಣ ನೀಡುವ ಹೊಣೆಯನ್ನು ನಿರ್ವಹಿಸಬೇಕಾಯಿತು.

ಉತ್ತರ ಕರ್ನಾಟಕದಲ್ಲಿ ಮರಾಠಿ ನಾಟಕ ಮಂಡಳಿಗಳು ಪದೇ ಪದೇ ಒಂದು ಮರಾಠಿ ಭಾಷೆಯ ನಾಟಕಗಳನ್ನಾಡುತ್ತಿದ್ದರು. ಜನರು ಮುಗಿಬಿದ್ದು ನೋಡುತ್ತಿದ್ದರು. ಇದನ್ನು ಕಂಡ ಶಾಂತಕವಿಗಳು ಛಲತೊಟ್ಟು ಕನ್ನಡ ವೃತ್ತಿರಂಗಭೂಮಿಯನ್ನು ಸ್ಥಾಪಿಸಿದರು. ಉತ್ಕಟ ಕನ್ನಡಾಭಿಮಾನಿಗಳೂ, ವಿದ್ವಾಂಸರೂ, ಕವಿಗಳೂ, ಸುಪ್ರಸಿದ್ಧ ಕೀರ್ತನಕಾರರೂ ಆದ ಶಾಂತಕವಿಗಳ ಛಲದಿಂದ, ಕನ್ನಡನಾಡಿನ ಜನಪದ ರಂಗಭೂಮಿಯ ಜೀವಕಣಗಳಿಂದ, ಕನ್ನಡ ವೃತ್ತಿರಂಗಭೂಮಿ ಜೀವದಳಿತು. ಆದರೆ ಹಳೆಯ ಮೈಸೂರು ಪ್ರಾಂತ್ಯಕ್ಕೆ ಬಂದ ಪಾರ್ಸಿ ಕಂಪನಿಗಳ ವೈಭವ, ರಂಗತಂತ್ರ-ಸಂಗೀತ, ಎಲ್ಲವನ್ನೂ ಕಂಡ ಮೈಸುರು ಅರಸರು ಅರಮನೆಯ ಆಸರೆಯಲ್ಲಿಯೇ ನಾಟಕರಂಗವನ್ನು ಸ್ಥಾಪಿಸಿದರು. ಅರಮನೆ ಆಶ್ರಯದಿಂದ ಮೈಸೂರು ಭಾಗದಲ್ಲಿ ದಕ್ಷಿಣಾದಿ ಸಂಗೀತಕ್ಕೆ ಪ್ರೋತ್ಸಾಹ ಸಿಕ್ಕರೆ, ಹಿಂದೂಸ್ತಾನಿ ಸಂಗೀತಗಾರರ ಸಂಪರ್ಕದಿಂದ ಉತ್ತರ ಕರ್ನಾಟಕದಲ್ಲಿ ಉತ್ತರಾದಿ ಸಂಗೀತ ಬೆಳೆದು ಬರಲು ಅನುಕೂಲವಾಯ್ತು. ವಿಶೇಷವೆಂದರೆ ಭಾರತದ ಬೇರೆ ಬೇರೆ ಭಾಗಗಳ ಹಿಂದೂಸ್ತಾನಿ ಗಾಯಕರಿಗೂ, ಉತ್ತರ ಕರ್ನಾಟಕಕ್ಕೂ ಸ್ನೇಹ ಕಲ್ಪಿಸುವಲ್ಲಿ ಮೈಸೂರು ಅರಮನೆ ಮುಖ್ಯ ಪಾತ್ರವಹಿಸಿತು. ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಸಂಗೀತದಲ್ಲಿ ಅತೀವ ಆಸಕ್ತಿಯಿದ್ದುದರಿಂದ, ಆಸ್ಥಾನದ ಗಾಯಕರಿಂದ ಆಗಾಗ ದಕ್ಷಿಣಾದಿ ಸಂಗೀತದ ಸಮಾರಾಧನೆ ನಡೆಯುತ್ತಿತ್ತು.ಹಾಗೆಯೇ ಒಡೆಯರು ಹಿಂದೂಸ್ತಾನಿಗಾಯಕರನ್ನೂ ಅರಮನೆಗೆ ಕರೆಸಿ ಆಮಂತ್ರಿಸಿ ಅವರ ಸಂಗೀತ ಕೇಳಿ

ಸಂತೋಷಪಡುತ್ತಿದ್ದರು. ಹೆಸರಾಂತ ಹಿಂದೂಸ್ತಾನಿ- ಸಂಗೀತ ವಿದ್ವಾಂಸರು ಮೈಸೂರಿನ ಅರಮನೆಗೆ ಹೋಗುವಾಗ, ಅಲ್ಲಿಂದ ಮರಳಿ ಬರುವಾಗ, ಮಾರ್ಗ ಮಧ್ಯೆ ಹುಬ್ಬಳ್ಳಿ, ಧಾರವಾಡ ಕಡೆಗಳಲ್ಲಿ ಸಂಗೀತ ಪ್ರಿಯರ ಆಗ್ರಹದ ಮೇರೆಗೆ ಕೆಲವು ಬೈಠಕ್‌ಗಳನ್ನು ನಡೆಸಿಕೊಡುತ್ತಿದ್ದರು. ಇವುಗಳ ಪರಿಣಾಮ ಹಿಂದೂಸ್ತಾನಿ ಸಂಗೀತದ ಮಾಧುರ್ಯಕ್ಕೆ ಜನ ಒಲಿಯತೊಡಗಿದರು. ಇದನ್ನು ಗಮನಿಸಿದ ನಾಟ್ಯ ಸಂಘಗ ಒಡೆಯರು ಶ್ರೇಷ್ಠ ಗವಾಯಿಗಳನ್ನು ತಮ್ಮ ಸಂಘಕ್ಕೆ ಕರೆತರಲು ಮುಂದಾದರು. ಕನ್ನಡ ಬಲ್ಲ ಗವಾಯಿಗಳು ಜನಪ್ರಿಯ ಯಿಂದುಸ್ತಾನಿ ಚೀಜಗಳನ್ನು ಸಂಸ್ಕರಿಸಿ ರಂಗಗೀತೆಗಳಿಗೆ ಅಳವಡಿಸತೊಡಗಿದರು. ಹೀಗಾಗಿ ಉತ್ತರ ಕರ್ನಾಟಕದಲ್ಲ ರಂಗಗೀತೆಗಳು ಹಿಂದೂಸ್ತಾನಿ ಧಾಟಿಗಳನ್ನು ಮೇಳವಿಸಿಕೊಂಡು ಜನಪ್ರಿಯವಾಗತೊಡಗಿದವು. ಇದೇ ವೇಳೆಗೆ ಮಹಾರಾಷ್ಟ್ರದಲ್ಲಿ ಬಾಲಗಂಧರ್ವ , ಸವಾಯಿಗಂಧರ್ವ, ಹೀರಾಬಾಯಿ ಬಡೋದೆಕರ, ದೀನಾನಾಥ ಮಂಗೇಶರರ, ಗೋವಿಂದರಾವ್ ಟೇಂಬೆ ಮುಂತಾದ ಖ್ಯಾತ ಗಾಯಕರಿಂದ ಮರಾಠಿಯಲ್ಲಿ ರಂಗಗೀತೆಗಳ ದುರಂಧರಶೈಲಿ, ಗಿರಡಿ ತಾನಬಾಜಿಗಳ ಶ್ರೀಮಂತ ಪರಂಪರೆ ನಿರ್ಮಾಣವಾಗಿತ್ತು. ಕೊಣ್ಣೂರ ಶಿವಮೂರ್ತಿ ಸ್ವಾಮಿಗಳು, ಶಿರಹಟ್ಟಿ ವೆಂಕೋಬರಾಯರು, ಮರಾಠಿ ರಂಗಭೂಮಿಯನ್ನು ಮೀರಿ,ತಮ್ಮ ಮಂಡಳಿಗಳನ್ನು ಸಂಘಟಿಸುವ ಪ್ರಯತ್ನದಲ್ಲಿ ಸಂಗೀತದ ಸಲುವಾಗಿ ಅಲ್ಲಿರುವ ಶ್ರೇಷ್ಠ ಗವಾಯಿಗಳ ಮೊರೆಹೊಕ್ಕರು. ಸಾತಾರದ ಗಣುಬುವಾ, ಈಚಲ ಕರಂಜಿಯ ಬಾಲಕೃಷ್ಣ ಬುವಾ, ಗೋವಿಂದರಾವ್ ಟೇಂಬೆ, ಇವರ ಮಾರ್ಗದರ್ಶನದಲ್ಲಿ, ಮುರಗೋಡ ಗಂಗಾಧರಪ್ಪ, ತುಕಾರಾಮಬುವಾ ಗೋಕಾರ್, ಬಸವರಾಜ ಮನಸೋರ, ತುಳೇದ ಗುಡ್ಡ ಗಂಗೂಬಾಯಿ, ರಾಮಬುವಾಮರೋಳ ಮೊದಲಾದವರು ತಮ್ಮ ಹಾಡುಗಾರಿಕೆಯಿಂದ ರಂಗದ ಮೇಲೆ ಬೆಳಗಿದರು. ಮರಾಠಿ ನಾಟಕಗಳನ್ನು ಸರಳಶೈಲಿಯಲ್ಲಿ ಅನುವಾದಿಸಿದ ವಾಮನರಾಯರು ರಂಗಗೀತೆಗಳನ್ನು ಸುಲಲಿತವಾಗಿ ಕನ್ನಡಕ್ಕೆ ತಂದು ಬಹುಜನರಿಗೆ ಅನುಕರಣೀಯರಾದರು. ಮೂಲದಲ್ಲಿ ಮರಾಠಿ ರಂಗಸಂಗೀತವಾದರೂ ಕರ್ನಾಟಕ ಸಂಗೀತದ ಕೆಲವು ಧಾಟಿಗಳನ್ನು ಅನುಕರಿಸಿದ್ದು ಉಲ್ಲೇಖನೀಯವಾಯಿತು.

(೧೮೭೭) ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯಂತೆ, (೧೮೮೧) ಹಳೆಯ ಮೈಸೂರು ವೃತ್ತಿರಂಗಭೂಮಿಯ ಸಂಗೀತವೂ ಶಾಸ್ತ್ರೀಯ ಸಂಗೀತ ವಿದ್ವಾಂಸರಿಂದಲೇ ಪ್ರಾರಂಭವಾಯಿತು. ಹಿರಿಯ ವಿದ್ವಾಂಸರಾದ ಬಿಡಾರಂಕೃಷ್ಣಪ್ಪ, ಚಿಕ್ಕರಾಮರಾಯರು ರಾಯಚೂಟಿ ಮೊದಲಾದವರು ಅಭಿನಯಿಸುವಾಗ ಪಿಟೀಲು ಟಿ.ಚೌಡಯ್ಯನವರೇ ಮಕ್ಕವಾದ್ಯ ಸಹಕಾರ ನೀಡುತ್ತದ್ದರು. ಜನರಿಗೆ ಸಂಗೀತ ಪ್ರಿಯವಾಗಿತ್ತು. ದಂಗಭೂಮಿಯಲ್ಲಿ ಸಂಗೀತ ಕಛೇರಿಯೇ ನಡೆದರೂ ರಸಿಕರು ವಿಮರ್ಶೆಗೆ ಹೋಗದೆ ಸಂಗೀತವಾಗಿಯೇ ಸ್ವೀಕರಿಸುತ್ತಿದ್ದರು. ಇದರಿಂದ ಕನ್ನಡ ವೃತ್ತಿರಂಗ ಭೂಮಿಯಲ್ಲಿ ಹೆಚ್ಚಿನ ಕಾಲ ಅಭಿನಯಕ್ಕಿಂತಲೂ, ಸಂಗೀತಕ್ಕೆ ಹೆಚ್ಚಿನ ಪ್ರಾಶಸ್ತ್ಯ ಬಂದು ನಟ-ನಟಿಯರಿತೆ ಸಂಗೀತಜ್ಞಾನ ಅತ್ಯಂತ ಆವಶ್ಯಕವಾಗಿತ್ತು.

ಮೊದಮೊದಲು ಶಾಸ್ತ್ರೀಯ ಸಂಗೀತದ ಕೃತಿಗಳು, ಜಾವಳಿಗಳು, ತಿಲ್ಲಾನಗಳು ಸಾಹಿತ್ಯ ಬದಲಿಸಿಕೊಂಡು ರಂಗಸಂಗೀತವಾಗಿ ನುಗ್ಗಿದವು. ನಾಟಕಲ್ಲಾಗಿಯೇ ಸಂಗೀತ ಸೃಷ್ಟಿಯಾಗಲಿಲ್ಲ. ಶಾಸ್ತ್ರೀಯ ಸಂಗೀತದ ಸಂಗತಿಗಳು, ತಾಳದ ಗರಡಿಪಟ್ಟುಗಳು, ಚಮತ್ಕಾರಿಕವಾಗಿ ರಂಗದ ಮೇಲೆ ವಿಜೃಂಭಿಸಿದವು. ಆದರೆ ಅರಮನೆಯ ಆಸರೆ ತಪ್ಪಿಹೋದ ಮೇಲೆ ಸಂಗೀತ ಬಲ್ಲವರು ರಂಗಕ್ಕಿಳಿಯುವುದು ಕಡಿಮೆಯಾಯ್ತು. ಶಾಸ್ತ್ರೀಯ ಸಂಗೀತದ ಹಾಡುಗಾರಿಕೆಯ ಗುಣಮಟ್ಟ ತೆಳುವಾಗಿ, ಅಂಥಹ ಸಂಗೀತವೇ ಪ್ರಧಾನವಾಗಿ ನಾಟಕಗಳು ಮುಗ್ಗರಿಸುತ್ತಾ,ತಮ್ಮ ಪ್ರಸಿದ್ಧಿಯನ್ನು ಕಳೆದುಕೊಳ್ಳತೊಡಗಿದವು. ಇದೇ ಸಮಯದಲ್ಲಿ ಮರಾಠಿ, ಪಾರ್ಸಿ ಕಂಪನಿಗಳ ಮುಖಾಂತರ ಪ್ರಸಿದ್ಧವಾಗಿದ್ದ ಜನಪ್ರಿಯ ಧಾಟಿಗಳು ರಂಗಕ್ಕೆ ನುಗ್ಗತೊಡಗಿದವು. ಸಂಗೀತದ ಹುಚ್ಚಾಟ, ಹಾಡಲು ಬಾರದಿರುವವರೂ, ಕಿರುಚಾಡುತ್ತಾ ಹಾಡುವುದಕ್ಕೆ ಇತಿಶ್ರೀ ಹಾಡಿದವರು, ನಾಟಕ ಶಿರೋಮಣಿ ಎನಿಸಿದ್ದ, ಎ.ವಿ. ವರದಾಚಾರ್ ಅವರು. ಸಂಗೀತವನ್ನು ನಾಟಕದ ಒಂದು ಅಂಗವಾಗಿ, ಅರ್ಥಪೂರ್ಣವಾಗಿ ಬಳಸುವುದನ್ನು ಪ್ರಾರಂಭಿಸಿ ಸಂಗೀತದ ಘತನೆಯನ್ನು ಹೆಚ್ಚಿಸಿದ್ದೇ ಅಲ್ಲದೇ, ರಂಗಸಂಗೀತದಲ್ಲಿ ರಾಗಭಾವ ಸಾಹಿತ್ಯದ ಅಭಿವ್ಯಕ್ತಿಗೆ ಹೆಚ್ಚು ಪೋಷಕವಾಗುತ್ತಾ 'ಅಭಿನಯಗೀತೆ'ಗಳೆಂಬ ಹೆಸರು ಪಡೆಯಿತು. ಸಂಗೀತವೇ ರಂಗಭೂಮಿಯ ಮಾನದಂಡವಾಗಿ ಹಾಡಬಲ್ಲವನೆ ನಟ, ಹಾಡುವುದೇ ನಾಟಕ ಎಂದಾಯಿತು. ಒಂದು ನಾಟಕದಲ್ಲಿ ನಲವತ್ತರಿಂದ ಐವತ್ತು ಹಾಡುಗಳಿರುತ್ತಿದ್ದವು. ಕಂದಪದ್ಯ, ವೃತ್ತ, ಸೀಸಪದ್ಯ ಎಲ್ಲವೂ ಅಲ್ಲಿ ರಾರಾಜಿಸುತ್ತಿದ್ದವು. ಸೇವಕನಿಂದ

ರಾಜನವರೆವಿಗೆ ಹಾಡುಗಳ ಸರಮಾಲೆ ಇರುತ್ತಿದ್ದವು. ಕಥೆ ಮಹತ್ವದ ತಿರುವು ಕಾಣುವ ಸನ್ನಿವೇಶದಲ್ಲೂ ಗಂಟೆಗಟ್ಟಲೆ ಹಾಡಿ ಪ್ರೇಕ್ಷಕರನ್ನು ರಂಜಿಸಬೇಕಾಗಿತ್ತು. ಕೆಲವೊಮ್ಮೆ ಪ್ರೇಕ್ಷಕರ ಕೋರಿಕೆಯ ಮೇರೆಗೆ ಎರಡು ಬಾರಿ, ಹಲವು ಬಾರಿ, ಒಂದೊಂದು ಹಾಡನ್ನು ಹಾಡಲಾಗಿತ್ತಿತ್ತು. ೧೯೪೦ರವರೆಗೂ ಸಂಗೀತ ಅಭಿನಯಕ್ಕೆ ಸಹಕಾರಿಯಾಗಿ, ಪ್ರೇಕ್ಷಕರ ಮನೋರಂಜನೆಯ ಉತ್ತಮ ಸಾಧನವಾಗು ನಡೆದುಬಂದಿತು. ಆದರೆ 'ಗರುಡ ಸದಾಶಿವ' ಅದರ ಕಾಲದಿಂದ ಅಭಿನಯಕ್ಕೆ ಪ್ರಾಶಸ್ತ್ಯ ಸಿಕ್ಕಿ ಸಂಗೀತ ಹಿತಮಿತವಾಗುತ್ತಾ ಬಂದಿತು.

ವೃತ್ತಿರಂಗಭೂಮಿಯಲ್ಲಿ ಕೇವಲ ಅಲಂಕಾರಕ್ಕಾಗಿ ಬಳಕೆಯಾಗುತ್ತಿದ್ದ ಸಂಗೀತ ಒಂದೆಡೆಯಾದರೆ ಹವ್ಯಾಸಿ ರಂಗಭೂಮಿಯಲ್ಲಿ ಸಂಗೀತ ಇರಲೇ ಇಲ್ಲ. ಸಂಗೀತವನ್ನು ರಂಗಭೂಮಿಯಲ್ಲಿ ಸರಿಯಾಗಿ ದುಡಿಸಿಕೊಂಡ ರಂಗಭೂಮಿ ಎಂದರೆ ಜನಪದ ರಂಗಭೂಮಿ ಎನ್ನಬಹುದು.

ರಂಗ ಸಂಗೀತಕ್ಕೆ ಸಂಬಂಧಿಸಿದಂತೆ ಭಾರತದ ಬೇರೆ ಬೇರೆ ರಾಜ್ಯದ ಕಡೆಗೆ ನಾವು ಕಣ್ಣು ಹಾಯಿಸಿದಾಗ ಮಹಾರಾಷ್ಟ್ರ, ಬಂಗಾಳ, ಅಸ್ಸಾಂ, ಒರಿಸ್ಸಾ ಮುಂತಾದೆಡೆ 'ನಾಟ್ಯ ಸಂಗೀತ'ವೆಂಬ ಒಂದು ಗಾಯನ ಪ್ರಕಾರವೇ ಜೀವಂತವಾಗಿರುವುದನ್ನು ಕಾಣಬಹುದು. ಪ್ರಸಿದ್ಧ ಸಂಗೀತ ವಿದ್ವಾಂಸರುಗಳಿಂದ ಹಿಡಿದು ಯುವಪೀಳಿಗೆಯವರೆವಿಗೆ 'ನಾಟ್ಯ ಸಂಗೀತ'ವನ್ನು ಹಾಡುವುದೇ ಹಿರಿಮೆಯಾಯಿತು. ನಾಟ್ಯ ಸಂಗೀತ ತನಗೆ ಹೊಂದಿಕೊಂಡು ಬಳಸಲಾಗುತ್ತಿದ್ದ ಪಕ್ಕವಾದ್ಯಗಳೊಡನೆಯೇ ಸಂಗೀತ ಪ್ರಕಾರವಾಗಿ ಬೆಳೆದು ನಿಂತಿತು. ತನ್ನದೇ ಅದ ಶೈಲಿಯಿಂದ, ನಾಟಕೀಯತೆಯಿಂದ ವಿಶಿಷ್ಟವಾಯಿತು.

ಮಾನವ ಜೀವನದ ಏಳುಬೀಳುಗಳನ್ನು, ನಲಿವು, ಗೆಲುವುಗಳನ್ನು ಪ್ರದರ್ಶಿಸುವ, ಕಲೆ, ಸಾಹಿತ್ಯ, ಸಂಗೀತ, ನೃತ್ಯಗಳ ಮೂಲಕ ಸಂಕೀರ್ಣತೆಯನ್ನು ತೋರುವ ರಂಗಗೀತೆಗಳು ಪೌರಾಣಿಕ ಸಾಹಿತ್ಯದಿಂದ ಸಾಮಾಜಿಕ ಸಾಹಿತ್ಯದ-ಕಡೆಗೆ ನಡೆಯುತ್ತಾ ಬಂದವು. ಅಲೌಕಿಕವಾದ ಸಂಗೀತವೂ ಲೌಕಿಕವಾಗುತ್ತಾ ಬಂದಿತು. ಪಾತ್ರಗಳಿಗೆ ತಕ್ಕಂತೆ ಬದಲಾಗುತ್ತಾ ಬಂದಿತು. ಪಾತ್ರಗಳಾಗಿ ಆತ್ಮನಿವೇದನೆಯನ್ನು ಮಾಡುತ್ತಾ ಬಂದವು. ಹಾಡಾಗಿ ತಮ್ಮ ಭಾವನೆಗಳನ್ನು ತೋಡಿಕೊಂಡವು. ೬೦ನೇ ಶತಮಾನದ ಕಾವ್ಯಕ್ಕೆ ಪ್ರೇರಕವಾಗಿ ಕವಿತೆಯ ಒಳಹೊಕ್ಕವು. ಭಾವಗೀತೆಯಲ್ಲಿ ನಾಟಕೀಯತೆಯ ಹೊಳಹು ಮೂಡಿಬಂದಿತು.

**ಯಕ್ಷಗಾನ**

'ಯಕ್ಷಗಾನ' ಎಂಬ ಪದ ವಾಸ್ತವಿಕವಾಗಿ ಒಂದು ಸಂಗೀತ ಪದ್ಧತಿಯ ಹೆಸರಾಗಿಯೂ, ಒಂದು ಬಗೆಯ ನಾಟಕ ಪದ್ಧತಿಗೂ ಬಳಸಲಾಗುತ್ತಿದೆ. ಆಂಧ್ರಪ್ರದೇಶದಲ್ಲಿ ಹೆಸರಾಗಿರುವ ಕೂಚುಪುಡಿ ನಾಟಕ ಸಂಪ್ರದಾಯ, ಯಕ್ಷಗಾನ ಸಂಪ್ರದಾಯ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದೆ. ತಂಜಾವೂರಿನ ಮೇಲತ್ತೂರು ಎಂಬಲ್ಲಿ ಉಳಿದಿರುವ ಒಂದು ನಾಟಕ ಪದ್ಧತಿಯನ್ನು 'ಯಕ್ಷಗಾನ' ಎಂದೇ ಕರೆಯುತ್ತಿದ್ದಾರೆ. ಕರ್ನಾಟಕದಲ್ಲಿ, ಮಲೆನಾಡಿನಲ್ಲಿ 'ಯಕ್ಷ' ಶಬ್ಧಕ್ಕೆ ಪೂಜೆ ಅಥವಾ 'ಆರಾಧನೆ' ಎಂಬುದು ನಿಜವಾದ ಅರ್ಥ. 'ಗಾನ' ಎಂಬುದು ರಾಗತಾಳಗಳಲ್ಲಿ ರಚಿಸಲ್ಪಟ್ಟ ಪ್ರಬಂಧ ಎಂದು ಕರೆಯಲ್ಪಡುತ್ತದೆ. ಒಟ್ಟಿನಲ್ಲಿ 'ಯಕ್ಷಗಾನ'ವೆಂದರೆ 'ಶಾಸ್ತ್ರೀಯ ಸಂಗೀತದಲ್ಲಿ ಹಾಡತಕ್ಕ ಪೂಜಾಪ್ರಬಂಧ' ಎಂಬ ಅರ್ಥವಿದೆ.

ಕರ್ನಾಟಕ ಸಂಗೀತ ಪದ್ಧತಿಯೆಂಬುದು ಹುಟ್ಟುವ ಕಾಲದಲ್ಲಿಯೇ ಅಥವ ಅದಕ್ಕಿಂತಾ ಎಷ್ಟೋ ಮೊದಲಿಗೆ ಯಕ್ಷಗಾನವು ಸುಸಂಬದ್ಧವಾದ, ಪ್ರಭಾವಶಾಲಿಯಾದ, ವಿಕಸಿತವಾದ ಸಂಗೀತ ಪದ್ಧತಿಯಾಗಿದ್ದಿರಬೇಕೆಂದು ಅನ್ನಿಸುತ್ತದೆ. ಈ ಗಾನದ ಪರಂಪರೆಗೆ ಸುಮಾರು ಸಾವಿರ ವರುಷಗಳಿದ್ದಿರಬಹುದೆಂದು ಡಾ. ಶಿವರಾಮಕಾರಂತರು ಅಭಿಪ್ರಾಯಪಟ್ಟದ್ದಾರೆ. ಇದರ ಹೆಸರು ಹೇಗೆ ಬಂತೆಂಬ ಚಾರಿತ್ರಿಕ ಆಧಾರಗಳು ದೊರಕುವುದಿಲ್ಲವಾದರೂ, ನಮ್ಮ ಸಂಗೀತದ ಲಾಕ್ಷಣಿಕನಾದ ಗೋವಿಂದ ದೀಕ್ಷಿತನು ತನ್ನ ಸಂಗೀತಸುಧೆಯಲ್ಲಿ 'ಯಕ್ಷೌಷಿಗೀತ ಮಪಿ ಗಾನಶೈಲಿ' ಎಂದು ಅದು 'ಗಾಯನಶೈಲಿ' ಎಂದು ಸ್ಪಷ್ಟವಾಗಿ ಹೇಳಿದ್ದಾನೆ.

ಕನ್ನಡ ನಾಡಿನಲ್ಲಿ ಕ್ರಿ.ಶ. ೧೧೮೯ಕ್ಕೂ ಮೊದಲೇ 'ಯಕ್ಷಗಾನ'ವಿತ್ತು ಎಂಬುದನ್ನು ಚಂದ್ರಪ್ರಭ ಪುರಾಣ ಮತ್ತು ಮಲ್ಲಿನಾಥಪುರಾಣವೂ ತಿಳಿಸುತ್ತದೆ. 'ಎಕ್ಕಲಗಾಣ'-ಎಂಬ ಪದ ಪ್ರಯೋಗ ಕಂಡುಬರುತ್ತದೆ.

ಕರ್ನಾಟಕಕ್ಕೆ ವಿಶಿಷ್ಟವಾದ ದೇಸೀಗಾಯನ ಪದ್ಧತಿಯಾದ ಯಕ್ಷಗಾನವು 'ಮಾರ್ಗ' ಪದ್ಧತಿಯ ಸಂಗೀತ ಪ್ರಕಾರಗಳಾದ ಉತ್ತರಾದಿ, ದಕ್ಷಿಣಾದಿಗಳಂತೆ ವಿಶೇಷ ಹೆಸರು ಪಡೆಯದೆ ನೃತ್ಯನಾಟಕ ಪದ್ಧತಿಯೊಂದಕ್ಕೆ ಸಾರಥಿಯಾಗಿ ಬೆಳೆದುಬಂದಿತು. ಈ ಗಾಯನ ಕಲೆಯಲ್ಲಿ ಗಾನ-ವಾದನ ನೃತ್ಯಗಳು ಮಾತ್ರವಲ್ಲದೆ, ಬಣ್ಣಗಾರಿಕೆಯ ವೇಷಗಳೂ, ಪಾತ್ರ ಸಂವಾದಗಳೂ ಸೇರಿ ಇದು ದೃಶ್ಯ, ಶ್ರವ್ಯ ಎಂಬೆರಡು ರೂಪಗಳನ್ನು ತಾಳಿತು. ಬುಡಗುತಿಟ್ಟು ಮತ್ತು ತೆಂಕುತಿಟ್ಟು ಎಂಬ ಪ್ರಮುಖ ವಿಭಾಗಗಳೂ ಆದವು. ಬಡಗುತಿಟ್ಟಿನ ಯಕ್ಷಗಾನದಲ್ಲಿ ಮುಕ್ಕಾಲುಭಾಗ ಜಾನಪದವೂ, ತೆಂಕುತಿಟ್ಟನ ಯಕ್ಷಗಾನದಲ್ಲಿ ಮುಕ್ಕಾಲುಭಾಗ ಮಾರ್ಗಲಕ್ಷಣವೂ ರೂಢಿಗೆ ಬಂದಿತು.

ವಿಜಯನಗರದ ಸಾಮ್ರಾಜ್ಯದ ಅಭ್ಯುದಯ ಕಾಲದಲ್ಲಿ, ನಮ್ಮ ವ್ಯಾಸಕೂಟದಾದಕೂಟಗಳ ಹಾಗೂ ವೀರಶೈವ ಹರಿದಾಸ ಕೂಟಗಳ ಪ್ರಭಾವದಿಂದ ಆಂಧ್ರ ಕರ್ನಾಟಕಗಳ ದೇವಾಲಯಗಳಲ್ಲಿ ನಡೆಯುತ್ತಿದ್ದ ಸಂಗೀತ ನಾಟ್ಯಸೇವೆಗಳು ಸಂಸ್ಕೃತ ಪೂಜಾ ಪ್ರಬಂಧಗಳ ಬದಲು ದೇಶ ಭಾಷಾರಚನೆಗಳಲ್ಲಿ ನಡೆಯುವ ಸಂಪ್ರದಾಯ ಉಂಟಾಗಿತ್ತು ಹಾಗೆ ದೇವರ ಕಥೆಗಳಲ್ಲಿ ನೂತನವಾಗಿ ರಚನೆಗೆ ಬಂದ 'ಪೂಜಾ ಪ್ರಬಂಧಗಳೇ' ಯಕ್ಷಗಾನಗಳೂ. 'ಯಕ್ಷಗಾನ'ವೆಂಬ ಹೆಸರೂ ಪ್ರಾಯಶಃ ಆಂಧ್ರದ್ದೇ ಆಗಿರಬೇಕೆಂದು ಮುಳಿಯ ತಿಮ್ಮಪ್ಪಯ್ಯ ಅಭಿಪ್ರಾಯಪಡುತ್ತಾರೆ. ಪುರಂದರದಾಸರ ಸಮಕಾಲೀನರಾಗಿ ಆಂಧ್ರದ ಪದಕವಿತಾ ಪಿತಾಮಹನೆಂದೇ ಪ್ರಖ್ಯಾತನಾದ ತಿರುಪತಿ ಅಣ್ಣಮಾಚಾರ್ಯ (೧೪೦೮-೧೫೦೦) ತನ್ನ 'ಸಂಕೀರ್ತನ ಲಕ್ಷಣ'ವೆಂಬ ಗ್ರಂಥದಲ್ಲಿ ಯಕ್ಷಗಾನವೆಂಬುದು ಅನೇಕ ವಿಧದ ತಾಳದ ಪದ್ಯಗಳು ಹಾಗೂ ಕಂದ, ವೃತ್ತ, ದ್ವಿಪದಿ ಮೊದಲಾದ ಛಂದಸ್ಸುಗಳುಳ್ಳ ವಿಶಿಷ್ಟಗೇಯ ಪ್ರಬಂಧವೆಂಬ ವಿವರಣೆಯನ್ನು ಅವನಿಗೂ ಮೊದಲಿದ್ದ ಸಂಕೀರ್ತನಾಚಾರ್ಯರು ಕೊಟ್ಟಿರುವುದಾಗಿ ಹೇಳಿದ್ದಾನೆ. ಈ ಗ್ರಂಥದ ತೆಲುಗು ಅವತರಣಿಕೆಯನ್ನು ತಿರುಪತಿಯ ದೇವಸ್ಥಾನವು ಮುದ್ರಿಸಿದೆ.

ಇಲ್ಲಿ 'ಗೇಯಪ್ರಬಂಧ' ಎನ್ನುವುದರಿಂದ ಶಾಸ್ತ್ರೀಯ ಸಂಗೀತದಲ್ಲಿ ಪದ್ಯ ರಾಗತಾಳಗಳಲ್ಲಿ ಎಂಬುದು ಮನದಟ್ಟಾಗುತ್ತದೆ. ಆಂಧ್ರದ ಪ್ರಸಿದ್ಧ ಯಕ್ಷಗಾನದ ಕವಿ ಆದಿಭಟ್ಟ ನಾರಾಯಣದಾಸನೆಂಬುವನು, ವಾಗ್ಗೇಯಕಾರರಿಂದ ರಚಿತವಾಗಿ, ಶ್ರುತಿಲಯಾತ್ಮಕವಾಗಿ, ರಾಗವೈವಿಧ್ಯತೆಯಿಂದ, ಜಾತಿ, ಮೂರ್ಛನೆಗಳಿಂದ, ಸ್ವರಾಲಾಪಗಳಿಂದ ಕೂಡಿರುವ ಗೇಯ ರಚನೆಯೇ 'ಯಕ್ಷಗಾನ'ವೆಂದರೆ, ತಂಜಾವೂರಿನ ಚೆಂಗಲ್ವಕಾಳನೆಂಬ ಕವಿ 'ರಾಧಾವಿಲಾಸ'ವೆಂಬ ತನ್ನ ಕಾವ್ಯದಲ್ಲಿ ಯಕ್ಷಗಾನವನ್ನು ಇಪ್ಪತ್ತು ತಂತಿಗಳ ವೀಣೆಯಾಗಿದ್ದ ರಾವಣಹಸ್ತ ಮತ್ತು ಉಡುಕು, ಜಾಗಟೆಗಳೊಂದಿಗೆ ಹಾಡಲಾಗುತ್ತಿತ್ತು ಎಂದು ವಿವರಿಸಿದ್ದಾನೆ.

ಒಟ್ಟಿನಲ್ಲಿ ಯಕ್ಷಗಾನ ಸಾಹಿತ್ಯದಲ್ಲಿ ಮಾತುಗೀತಕ್ಕೆ ಬೆಂಬಲವಾಗಿದ್ದು ಗೀತ ಮಾಧ್ಯಮ ಉದ್ದಕ್ಕೂ ಕಥಾನಕವನ್ನು ನಡೆಯಿಸಿಕೊಂಡು ಹೋಗುವ ಒಂದು ಮುಖ್ಯ ಸಾಧನವಾಗಿದೆ. ಗೀತದ ಅಂಗವಾಗಿ ಬರುವ ತಾಳವಾದ್ಯಗಳಾದ, ಚಂಡೇಮದ್ದಳೆ, ತಾಳಗಳು, ಭಾವಗಳನ್ನು ಬಿಂಬಿಸುವ ಕೆಲಸದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಭಾವಪ್ರಚೋದನೆಯನ್ನು ಸುಂದರವಾಗಿ ನಡೆಯಿಸಿಕೊಳ್ಳುತ್ತವೆ.

**ಯಕ್ಷಗಾನ ಸಂಗೀತ– ಸುಗಮಸಂಗೀತ**

ನಮ್ಮ ಮಾರ್ಗ ಪದ್ಧತಿಯ ಗೀತಗಳಾದ ದಕ್ಷಿಣಾದಿ ಸಂಗೀತ ಶೈಲಿಗಳನ್ನು ಪರಿಶೀಲಿಸಿದರೆ, ಅಲ್ಲಿಯ ಪ್ರಬಂಧಗಳಲ್ಲಿ ಅಡಗಿರುವ ಭಾವರಸಗಳ ಸಂಖ್ಯೆ ಜಾತಿಗಳು ಮಿತವಾದವು. ತುಲಸಿದಾಸ, ಸೂರದಾಸ, ಕ್ಷೇತ್ರಯ್ಯ, ತ್ಯಾಗರಾಜ, ಪುರಂದರದಾಸರು ತಮ್ಮ ಜೀವನಲಹರಿಯಾಗಿದ್ದ ಶೋಕ, ಭಕ್ತಿ, ಶಾಂತಿರಸಗಳನ್ನೇನೋ ಚೆನ್ನಾಗಿ ಚಿತ್ರಿಸಿದ್ದಾರೆರ. ನೂರಾರು ರಾಗಗಳನ್ನು ಅವರು ಬಳಸಿಕೊಂಡರು ಭಾವರಸಗಳು ಮಾತ್ರ ಬದಲಾಗಲಿಲ್ಲ. ಅವು ಶೋಕ, ಭಕ್ತಿ ಆಂತಿರಸಗಳಾಚೆ ಕಣ್ಣೆತ್ತಿ ನೋಡಲಿಲ್ಲ. ಆದರೆ 'ಯಕ್ಷಗಾನವು

ನಾಟಕಕ್ಕೆ ಬಳಸಿಕೊಂಡ ಗೀತಜಾತಿಯಾದ್ದರಿಂದ, ಆ ಹಾಡುಗಬ್ಬಗಳ ರಚನಾಕಾರರು ಮೂಲತಃ ಹಾಡುಗಾರರೇ ಆಗಿದ್ದು 'ಮಾನವನ ಮನಸ್ಸಿನ ಉಕ್ಕು, ಸೊಕ್ಕು, ಕೆಚ್ಚು, ಕ್ರೌರ್ಯ, ಹರ್ಷ, ಮತ್ಸರ ಮುಂತಾದ ಮಾನವ ಸಹಜ ರಸಗಳಿಗೂ ವ್ಯಕ್ತ ಸ್ವರುಪವನ್ನು ತಂದುಕೊಟ್ಟರು. ತೋರಿಕೆಗೆ ಸರಳವೆಂದು ಕಾಣುವ ಜನಪದ ಗೀತಗಳಲ್ಲೇ ವಿವಿಧ ಭಾವಗಳನ್ನು ತುಂಬಿ ಅಪೂರ್ವವಾದ ಯಶಸ್ಸನ್ನು ಸಾಧಿಸಿದರು.

ಯಕ್ಷಗಾನದಂತಹ ಸುಂದರ ಸಂಗೀತ ಶೈಲಿಯು ನಾಟಕದರ್ಮವನ್ನು ಪ್ರತಿಪಾದಿಸುತ್ತಾ ಬಂದರೂ ಅದು ಉಳಿದುಕೊಂಡಿದ್ದು ತನ್ನ ಭಾವರಸ ಪ್ರತಿಪಾದನಾ ಶಕ್ತಿಯಿಂದ, ಶಾಸ್ತ್ರದ ವೈಖರಿಯನ್ನು ಪ್ರದರ್ಶನ ಮಾಡದೆ, ನಾಟಕದ ಸಾಹಿತ್ಯ ಅಭಿವ್ಯಕ್ತಪಡಿಸಿದ, ಕೋಪತಾಪ, ಸುಖದುಃಖ, ವಿಸ್ಮಯ, ಆಶ್ಚರ್ಯ, ಹಾಸ್ಯ-ಸಂತೋಷ ಮೊದಲಾದ ರಸಭಾವನೆಗಳನ್ನು ನೇರವಾಗಿ, ಸರಳವಾಗಿ ತೋರಿಸಿತು. ಈ ಹಾಡುಗಳಲ್ಲಿನ ಭಾಷೆ ಸರಳವಾದದ್ದಾಗಿ, ಕೇಳಿದೊಡನೆಯೇ ಥಟ್ಟನೆ ಅರ್ಥವಾಗುವಂತಹುದಾಯಿತು. ಷಟ್ಪದಿ, ಕಂದ, ದ್ವಿಪದಿ ಮುಂತಾದ ಛಂದಗಳು ಎಲ್ಲ ವಿಷಯಗಳ ಪ್ರತಿಪಾದನೆಗೂ ಒಂದೇ ಶರೀರವನ್ನು ಪಡೆದವು. ಆದರೆ ಹಾಡುಗಳು ನಿಶ್ಚಿತ ರಾಗ- ತಾಳಗಳಲ್ಲಿ ನೂರಾರು ದೇಹಗಳನ್ನು ಪಡೆದುಕೊಂಡು ಬಂದವು. ಒಳ್ಳೆಯ ಗೀತ ಪ್ರಬಂಧವೊಂದು ತನ್ನ ಮೊದಲಿನ ಸೊಲ್ಲಿನಲ್ಲೇ, ಮುಂದೆ ಬರುವ ಹಾಡಿನ ವಿಷಯದ ಜೀವಾಳವನ್ನು ಸೂಚಿಸುವುದೇ ಅದರ ಉತ್ತಮಾಂಶವಾಯಿತು. ತನ್ನ ದೈನಂದಿನ ಸಂಭಾಷೆಗಳ ಧ್ವನಿ ಮತ್ತು ಭಾವಗಳನ್ನು ಪ್ರಕಟಿಸುವ ಗುಣವೇ ಸಾಹಿತ್ಯಕ್ಕೆ ಸಂಗೀತ ನೀಡುವ ಶಕ್ತಿಯಾಯಿತು.

ಹೀಗೆಯೇ ಸುಗಮಸಂಗೀತ ಜನಕ್ಕೆ ಹತ್ತಿರವಾದದ್ದು ಸರಳವಾದ ಭಾಷೆಯಿಂದ ಮತ್ತು ಕೇಳಿದೊಡನೆ ಮನದ ಆಳಕ್ಕೆ ಇಳಿಯುವಂತಹ ಭಾವನಿರೂಪಣೆಯಿಂದ ನಿತ್ಯ ಜೀವನದ, ಆಗು ಹೋಗಿನ ಅನುಭವಗಳ ಅಭಿವ್ಯಕ್ತಿಯಿಂದ, ಆಡುಮಾತಿನ ಭಾಷೆಯ ಸ್ವಂತಿಕೆಯಿಂದ ಸಮಾಜಮುಖಿಯಾಗಿ ಸುಗಮಸಂಗೀತ ಪ್ರಿಯವಾಯಿತು. ಯಕ್ಷಗಾನದ ಹಾಡುಗಳಲ್ಲಿ ಅದ್ಭುತವಾದ ಭಾವಶಕ್ತಿ ಇರುವಂತೆ ಸುಗಮಸಂಗೀತದಲ್ಲೂ ಭಾವೋದ್ದೀಪನ ಶಕ್ತಿಯಿದ್ದು, ಭಾವರಸನಿರೂಪಣೆಯೇ ಎರಡೂ ಸಂಗೀತದ ಉದ್ದೇಶವಾಯಿತು. ಯಕ್ಷಗಾನದಲ್ಲಿಯಾದರೋ ಮಾತು, ಧಾತು, ಕುಣಿತ, ಮೂರೂ ಮುಪ್ಪುರಿಗೊಂಡು ದೃಶ್ಯ-ಶ್ರಾವ್ಯ ಎರಡೂ ಮಾಧ್ಯಮಗಳಲ್ಲಿ ವ್ಯಕ್ತವಾಯಿತು. ನಾಟಕದ ಅಂಗವಾಗಿ ಬಯಲಿನಲ್ಲಿ ಬೆಳೆದ ಈ ಗೀತ ಪದ್ಧತಿ ಶಕ್ತಿಯುತವಾಗುತ್ತಾ, ಗಟ್ಟಿಯಾಗಿ ತೆರೆದ ಕೊರಳಿನಿಂದ ಹಾಡುವುದನ್ನು ರೂಢಿಮಾಡಿಕೊಂಡಿತು. ಆದರ ಗುಣಧರ್ಮ ಸೂಕ್ಷ್ಮವೂ, ವಿಸ್ತಾರವೂ ಆಗುವುದರ ಬದಲು ಸರಳವೂ, ತೀಕ್ಷ್ಣವೂ ಆಗುತ್ತಾ ಬಂದಿತು.

ಯಕ್ಷಗಾನ ಗೀತಗಳನ್ನು ಅಳೆದು ನೋಡಿದರೆ ಮಾರ್ಗ ಪದ್ಧತಿಯಲ್ಲಾಗಲಿ ಇತರ ಜಾನಪದ ಸಂಪ್ರದಾಯಗಳಲ್ಲಾಗಲೀ, ಭಕ್ತಿಭಾವವನ್ನು ಬಿಟ್ಟರೆ ಇತರ ಭಾವಗಳಲ್ಲಿ ಇಷ್ಟು ಸತ್ವಶಾಲಿಯಾದ ಪ್ರಬಂಧ ಸಮುದಾಯ ದೊರೆಯುವುದು ಕಷ್ಟ. ನಾಟಕಗಳಲ್ಲಿ ಬರಬಹುದಾದ ಯಾವತ್ತೂ ರಸಭಾವಗಳನ್ನು ಚಿತ್ರಿಸಲು ನಮ್ಮ ಯಕ್ಷಗಾನ ತೊಡಗಿತು. ಬರಿಯ ದು:ಖವೋ, ವಿರಹವೋ, ಭಕ್ತಿಯೋ, ಮಾರ್ಗ ಪದ್ಧತಿಗಳ ಮುಖ್ಯ ವಸ್ತುಗಳಾಗಿ ಬೆಳೆದಂತೆ, ಬರಿಯ 'ಶೋಕಮುಖಿ'ಯಾಗಿ ಬೆಳೆಯದೆ, ಬಹುಮುಖಿಯಾಗಿ ಬೆಳೆಯಿತು. ಸಿಟ್ಟು, ಸೆಡು, ಕೋಪ, ತಾಪ ಮೊದಲಾದ ಪ್ರತಿಯೊಂದು ಭಾವವಿಲಾಸವೂ ಅದರಲ್ಲಿ ಗೀತರೂಪಕ್ಕಿಳಿಯಿತು. ಅನೇಕ ಜಾನಪದ ಗೀತ ಸಮುದಾಯವನ್ನು ಮೀರಿಸುವಷ್ಟು ಸುಂದರವಾಗಿ ಪಳಗಿತು. ೨೦ನೇ ಶತಮಾನದ ಸುಗಮಸಂಗೀತ ವಸ್ತು ಬಾಹುಳ್ಯದಿಂದ ಯಕ್ಷಗಾನದ ಭಾವವಿಲಾಸಕ್ಕೆ ಸರಿಸಾಟಿಯಾಗಿ ನಿಂತಿರುವುದು ಕಂಡುಬರುತ್ತದೆ. ಜಾನಪದಕ್ಕೆ ಇದ್ದ ಇತಿಮಿತಿಗಳನ್ನು ದಾಟಿ ಬಂದ ಸುಗಮಸಂಗೀತ ವಾಸ್ತವ ಬದುಕಿಗೆ ಹಿಡಿದ ಕನ್ನಡಿಯಾಗುತ್ತಾ ಮನಸ್ಸಿನ ಭಾವರಸಗಳ ಹೊಯ್ದಾಟವನ್ನು ಸೂಕ್ಷ್ಮವಾಗಿ ಚಿತ್ರಿಸುತ್ತಾ, ಅರ್ಥದ ಪರಿಧಿಯನ್ನು ವಿಸ್ತರಿಸಿತು.

* * *

# ಅಧ್ಯಾಯ ೫ - ವಚನ ಮತ್ತು ಹರಿದಾಸರ ಕೀರ್ತಗಳು

'ಶಿವಶರಣ ಹಾಗೂ ಹರಿದಾಸ' ಈ ಎರಡು ಜನಮುಖಿ ಆಂದೋಲನಗಳು ಕರ್ನಾಟಕದ ಸಂಸ್ಕೃತಿಕ ಜಗತ್ತಿನ ಉತ್ಕೃಷ್ಟ ಮಾದರಿಗಳು. ಶಿವಶರಣರದು ವೈದಿಕ ಧರ್ಮದ ವಿರುದ್ಧದ ಪ್ರತಿಭಟನೆಯಾದರೆ ವೈದಿಕ ಧರ್ಮದ ಪುನರುತ್ಥಾನದ ಆಶಯದಲ್ಲಿ ಹರಿದಾಸ ಆಂದೋಲನ ಹುಟ್ಟಿತು. ವಚಲ ಸ್ವರವಚನಗಳ ಮೂಲಕ ಶಿವಶರಣರು ಹರೋತ್ತಮತೆಯನ್ನು ಪ್ರತಿಪಾದಿಸಿದರೆ ಹರಿದಾಸರು ಕೀರ್ತನೆ, ಸುಳಾದಿ ಉಗಾಭೋಗಗಳಲ್ಲಿ ಹರಿಸರ್ವೋತ್ತಮತೆಯನ್ನು ಮಂಡಿಸಿದರು.

ಕನ್ನಡದ ಪಾಡು ಮೇಲ್ವಾಡು, ಬಾಜನೆಗಬ್ಬ, ಪದಗಳೇ ಕಾಲಾಂತರದಲ್ಲಿ ಕೀರ್ತನೆಯ ರೂಪ ಪಡೆಯಿತು. ೧೨ನೇ ಶತಮಾನಗಳಲ್ಲಿ ಶರಣರು ಹಾಡಿದ ಪದಗಳೇ ಕನ್ನಡದ ಮೊದಲ ಕೀರ್ತನೆಗಳಾದವು. ೧೫-೧೬ನೇ ಶತಮಾನಗಳಲ್ಲಿ ಹರಿದಾಸರು ಯಾವ ಕೀರ್ತನ ಸಾಹಿತ್ಯ ಪ್ರಕಾರದಿಂದ ಇಡೀ ದಕ್ಷಿಣ ಭಾರತದ ಸಂಗೀತ ಮತ್ತು ಸಾಹಿತ್ಯ ಪ್ರಪಂಚಗಳೆರಡರಲ್ಲೂ ಅದ್ವಿತೀಯ ಕೀರ್ತಿಯನ್ನು ಗಳಿಸಿದರೋ ಆ ಕೀರ್ತನ ಪ್ರಕಾರಕ್ಕೆ ಬಸವಾದಿ ಶಿವಶರಣರ ಗೀತೆಗಳೇ ಮೂಲವೂ, ಮಾದರಿಯೂ ಆಗಿರಬೇಕೆಂದು ಎಲ್. ಬಸವರಾಜು ಅವರು ಅಭಿಪ್ರಾಯಪಟ್ಟಿದ್ದಾರೆ.

ವಚನಕಾರರು ಕನ್ನಡ ಸಹಿತ್ಯಕ್ಕೆ ನೀಡಿದ ಕೊಡುಗೆಯೇ, ಜನ ಸಾಮಾನ್ಯರ ನಾಡಿಬಡಿತವನ್ನು ಕಾವ್ಯದಲ್ಲಿ ಮೂಡಿಸಿತು. ಕನ್ನಡ ಕೀರ್ತನ ಸಾಹಿತ್ಯದ ಮೊದಲ ಕೀರ್ತನಕಾರನೆಂಬ ಕೀರ್ತಿಗೆ ಪಾತ್ರನಾದ ಸಕಲೇಶ ಮಾದರಸ, ಬಸವೇಶ್ವರರ ಹಿರಿಯ ಸಮಕಾಲೀನನಾದುದರಿಂದ ೧೨ನೇ ಶತಮಾನದಲ್ಲಿ ಕೀರ್ತನ ಸಾಹಿತ್ಯದ ಪರಂಪರೆ ಅಧಿಕೃತವಾಗಿ ಪ್ರಾರಂಭವಾಯಿತೆನ್ನಬಹುದು. ಇದನ್ನು ಬಸವೇಶ್ವರ, ಅಲ್ಲಮಪ್ರಭು, ಚೆನ್ನಬಸವೇಶ್ವರ, ಸಿದ್ಧರಾಮ, ಅಕ್ಕಮಹಾದೇವಿ, ನೀಲಲೋಚನೆ ಮುಂತಾದ ನೂರಾರು ಶಿವಶರಣರು ಮುಂದುವರೆಸಿದರು. ಶಿವಶರಣರ ಅನುಭವಾಮೃತವೇ ವಚನಗಳೆನಿಸಿದವು.

ಬಸವೇಶ್ವರ ಮೊದಲಾದ ಶಿವಶರಣರು ಕನ್ನಡ ಕೀರ್ತನ ಸಾಹಿತ್ಯದ ಪ್ರವರ್ತಕರಾದರೂ ಈ ಪರಂಪರೆಗೆ ಒಂದು ಮಹಾಪೂರವನ್ನು ತಂದು ಅಸಂಖ್ಯಾತ ಹಾಡುಗಬ್ಬಗಳನ್ನು ರಚಿಸಿ ಕೀರ್ತನಕಾರರೆಂದೇ ಪ್ರಸಿದ್ಧರಾದವರು ಹರಿದಾಸರು. ಸಂಕೀರ್ಣವಾಗಿದ್ದ ಮತತತ್ವಗಳು ಹಾಗೂ ಆಧ್ಯಾತ್ಮಿಕ ಸಂಗತಿಗಳು ಸಂಗೀತದ ಮಾಧ್ಯಮದಲ್ಲಿ, ಸರಳ ಕನ್ನಡದಲ್ಲಿ, ಸುಲಭ ಭಕ್ತಿಯಲ್ಲಿ ಜನಸಾಮಾನ್ಯರಿದ್ದಲ್ಲೇ ದೊರೆತದ್ದು ರೋಚಕವಾಗಿತ್ತು. ದಾಸರು ಕೊಟ್ಟ ಈ ಹೊಸ ಪರಿಕಲ್ಪನೆ ಜನಸಾಮಾನ್ಯರಲ್ಲಿ ಒಂದು ಆತ್ಮವಿಶ್ವಾಸ ಹಾಗೂ ಭರವಸೆಯನ್ನು ಹುಟ್ಟು ಹಾಕಿತು. ಹರಿದಾಸ ಸಾಹಿತ್ಯ, ಜನರ ಮಧ್ಯೆ, ಜನರ ಮುಂದೆ ಹುಟ್ಟಿದ ಆಶುರಚನೆಗಳಾಗಿದ್ದವು. ಅವು ಅಂದಂದಿಗೆ ಮೌಖಿಕವಾಗಿ ಹಾಡಿದ ತುರ್ತಾಗಿತ್ತು. ಅನುಭವ ಮಂಟಪದಂತಹ ಕೇಂದ್ರೀಕೃತ ವ್ಯವಸ್ಥೆಯೊಳಗೆ ಇವು ನಿರ್ಮಾಣಗೊಂಡದ್ದಾಗಿರಲಿಲ್ಲ. ಅವು ಬೀದಿಬೀದಿಗಳಲ್ಲಿ, ಮನೆಮನೆಗಳಲ್ಲಿ, ಓಡಾಡುತ್ತ, ಹಾಡುತ್ತ, ತಿರುಗುತ್ತಾ, ಕುಣಿಯುತ್ತಾ ಸಾಗುವಗ ಕಂಡುಂಡ ಲೋಕಾನುಭವದ ಸಾರವಾಗಿದ್ದವು. ಕ್ಷಣದಲ್ಲಿಯೇ ಕಟ್ಟಿದ ಅನುಭವದ ಅಮೃತಬಿಂದುಗಳಾಗಿದ್ದವು. ಭಾವತನ್ಮಯತೆಯಲ್ಲಿ ಮೂಡಿದ್ದ ಈ ರಚನೆಗಳು ಕವಿತೆಯ ಎಲ್ಲ ಉತ್ತಮಾಂಶಗಳನ್ನು ತುಂಬಿಕೊಂಡು ಸಾಹಿತ್ಯ ಮತ್ತು ಸಂಗೀತದ ಸಮರಸದ ಪಾಕವಾಗಿದ್ದ ನಿರ್ಮಲ ಭಾವಗೀತೆಗಳಾಗಿದ್ದವು. ಮೌಖಿಕವಾಗಿ ಹುಟ್ಟಿ ಪ್ರಸಾರವಾದ ಈ ಭಾವಗೀತೆಗಳೇ ಲಿಖಿತರೂಪಕ್ಕೆ ಬಂದು ಉಳಿದು 'ದಾಸಸಾಹಿತ್ಯ' ಎಂಬ ಹೆಸರು ಪಡೆಯಿತು.

ಕನ್ನಡ ದಾಸ ಸಾಹಿತ್ಯದಲ್ಲಿ ಮೊದಲ ರಚನೆ ನೀಡಿದವರು ೧೩-೧೪ನೇ ಶತಮಾನದಲ್ಲಿದ್ದ ನರಹರಿತೀರ್ಥರೆನ್ನಬಹುದು. ಇವರ 'ಎಂತುಮರುಳಾದೆ ನಾನೆಂತು ಮರುಳಾದೆ' ಮತ್ತು 'ಹರಿಯೆ ಇದು ಸರಿಯೆ'- ಎಂಬ ಎರಡು ಕೀರ್ತನೆಗಳು ಮಾತ್ರ ದೊರೆತಿದ್ದು 'ನರಹರಿ' ಎಂಬ ಅಂಕಿತವನ್ನು ಪಡೆದಿದೆ. ಕೀರ್ತನೆಗಳ ಎಲ್ಲಾ ಲಕ್ಷಣ, ಅವಯವಗಳನ್ನು, ಒಳಮಿಡಿತವನ್ನು ಚಿತ್ರಸುವ ಈ ಎರಡು ಕೀರ್ತನೆಗಳು ಆತ್ಮ ಚಿಂತನೆಯ ಪ್ರವೃತ್ತಿ ಮತ್ತು ಪ್ರಾಮಾಣಿಕ ನಿವೇದನೆಯೊಂದಿಗೆ ಹರಿದಾಸ ಪರಂಪರೆಯನ್ನು ತೆರೆದವು.

**ಹರಿದಾಸರ ಕೀರ್ತನೆಗಳು ಮತ್ತು ಸುಗಮಸಂಗೀತ**

ಹರಿದಾಸರು ಹಾಡಲೆಂದು ಕೀರ್ತನೆಗಳನ್ನು ಬರೆದರಾದರೂ, ಹಾಡಿಗಾಗಿಯೇ ಕೀರ್ತನೆಯನ್ನು ಬರೆಯಲಿಲ್ಲ. ಅದರ ದೃಷ್ಟಿಯಲ್ಲಿ ಕೃತಿಯೆಂಬುದು ಸಾಹಿತ್ಯ ಮತ್ತು ಸಂಗೀತಗಳ ಒಟ್ಟು ಮೊತ್ತ. ಶಿವದಾಸ, ಹರಿದಾಸ ಮತ್ತು ಶ್ರೀ ವೈಷ್ಣವ ಕವಿಗಳಲ್ಲಿ ಸಹಿತ್ಯ ಮತ್ತು ಸಂಗೀತ ಸಾಮರಸ್ಯವಾಗಿತ್ತು. ಭಕ್ತಿಯೇ ಈ ಹಾಡುಗಳಿಗೆ ಆಧಾರ ಶ್ರುತಿಯಾಗಿ ಮಿಡಿದಿತ್ತು. ಈ ಒಂದು ಗುಣವೇ ನವೋದಯ ಕವಿಗಳು ಬರೆದ ಕೀರ್ತನೆಗಳಲ್ಲೂ ಹಾಸುಹೊಕ್ಕಾಯಿತು. ಸಂಗೀತ ಮತ್ತು ಭಕ್ತಿ, ಕೀರ್ತನ ಸಾಹಿತ್ಯದ ಅವಿಭಾಜ್ಯ ಅಂಶಗಳಾದವು. ನವೋದಯದ ಕವಿಗಳಾದ ಮಾಸ್ತಿಯವರ (೧೯೨೨) 'ಬಿನ್ನಹ' ಕವಿತಾ ಸಂಗ್ರಹದಲ್ಲಿನ ಹಾಡುಗಳು 'ದಾಸಸಾಹಿತ್ಯ'- ವಚನಸಾಹಿತ್ಯಗಳ ಸಂಪ್ರದಾಯಕ್ಕೆ ಸೇರಿ ರಾಗ-ತಾಳಗಳೊಂದಿಗೆ ಹೆಸರಿಸಲ್ಪಟ್ಟವು 'ಬಿನ್ನಹ' ಗೀತೆಗಳ ಗೊಂಚಲೆಂದು ಹೇಳಿಕೊಂಡ ಮಾಸ್ತಿಯವರು, ಶೈಲಿ ಬಂಧುಗಳಲ್ಲಿ ಪುರಂದರ ದಾಸರ ಕೀರ್ತನೆಗಳನ್ನೇ ಸ್ಫೂರ್ತಿಯನ್ನಾಗಿಸಿಕೊಂಡಿದ್ದರು. ೧೯೨೮ರಲ್ಲಿ ಬೆಟಗೇರಿ ಕೃಷ್ಣಶರ್ಮರು 'ಭಾವಗೀತೆ' ಎನ್ನುವ ಕವಿತಾ ಸಂಕಲನವೊಂದನ್ನು ಧಾರವಾಡದ ರಾಷ್ಟ್ರೀಯ ಶಿಕ್ಷಣ ಸಮಿತಿಯ ಮೂಲಕ ಸಂಪಾದಿಸಿ ಪ್ರಕಟಿಸಿದರು. ಅದರ ತುಂಬ, ಪುರಂದರದಾಸ, ಕನಕದಾಸ, ವಾದಿರಾಜ, ನಿಜಗುಣ ಶಿವಯೋಗಿ ಮೊದಲಾದವರ ಕೀರ್ತನೆಗಳೇ ಅಲ್ಲದೆ, ಕೀರ್ತನೆಯ ಶಿಲ್ಪವನ್ನು ಉಪಯೋಗಿಸಿ ಡಿ.ವಿ.ಜಿ. ಬೆಟಗೇರಿ ಕೃಷ್ಣ ಶರ್ಮ ಮತ್ತು ಮಾಸ್ತಿಯವರು ಬರೆದ ಕವಿತೆಗಳೂ ಇದ್ದವು. ಕನ್ನಡದ ಭಾವಗೀತೆ ಕೀರ್ತನ ಸಾಹಿತ್ಯದಿಂದ ಪ್ರೇರಣೆ ಪಡೆದುಕೊಂಡಿದ್ದಕ್ಕೆ ಈ ಕವಿತಾ ಸಂಕಲನ ಸಾಕ್ಷಿಯಾಯಿತು. ಅದಾಗಲೇ ಹೊಸಗನ್ನಡದ ಬಾನಿನತ್ತ ಕಣ್ಣರಳಿಸಿ ನೋಡುತ್ತಿದ್ದರೂ, ಹೊಸ ಅನುಭವವನ್ನು ಬಾಚಿಕೊಳ್ಳಲು ಭಯ, ಸಂಕೋಚಗಳಿದ್ದವು.

ಪಾಶ್ಚಾತ್ತೀಕರಣದ ಅನುಕರಣದ ಭಯ, ಹೊಸಹಾದಿತ್ತ ದಿಗಿಲು ಮೂಡಿಸಿತ್ತು. ಕನ್ನಡತನದಲ್ಲಿಯೇ ಕಾವ್ಯ ಮಾರ್ಗವನ್ನು ಹುಡುಕುತ್ತಿದ್ದ ನವೋದಯ ಕವಿಗಳು ಇಂಗ್ಲಿಷ್ ಸಾಹಿತ್ಯದ ವಸ್ತುರೂಪಗಳನ್ನು ಕನ್ನಡದ ಭಾಷೆಯ ಮೂಲಕ ನಿರೂಪಿಸಲು ಪ್ರಾರಂಭಿಸಿದರು. ಕೀರ್ತನೆಗಳ ಪದಲಯ ವಿನ್ಯಾಸಗಳನ್ನೇ ಸ್ವೀಕರಿಸಿ, ಆಧುನಿಕ ಭವಗೀತೆಗಳ ಹುಟ್ಟಿಗೆ ಕಾರಣರಾದರು. ಕೀರ್ತನ ಸಾಹಿತ್ಯದಲ್ಲಿನ ದೈವಭಕ್ತಿಗೆ ಬದಲಾಗಿ ಪ್ರೀತಿ, ಸ್ನೇಹ ಮಿಲನ, ಹರ್ಷ, ವಿರಹಗಳೇ ಭಾವಗೀತೆಗಳಾಗಿ ಹುಟ್ಟಿಕೊಂಡವು. ಪ್ರಾರಂಭದ ಭಾವಗೀತೆಗಳು ಶಿಲ್ಪದಲ್ಲಿ ಕೀರ್ತನೆಗಳನ್ನೆ ಅನುಸರಿಸಿದವು. ಪಲ್ಲವಿಯಿಂದ ಅನುಪಲ್ಲವಿಗೆ ಪಲ್ಲವಿಸಿ ಬಳಿಕ ಮೂರು ಅಥವಾ ನಾಲ್ಕು ಅಥವ ಐದರು ಚರಣಗಳ ಪದ್ಯಗಳನ್ನು ಒಳಗೊಂಡು ಕಡೆಯಲ್ಲಿ ದಸರ 'ಅಂಕಿತ'ದ ಮೂಲಕ ಅವರ ಅಧಿದೈವದ ಹೆಸರನ್ನು ಸೂಚಿಸುವ ಕೀರ್ತನೆಗಳನ್ನು ಅನುಕರಿಸುತ್ತಾ ಬಂದ ಭಾವಗೀತೆ ಅಂಕಿತವನ್ನು ಕೈಬಿಡುತ್ತಾ, ಕೀರ್ತನೆಯ ರುಪದಲ್ಲಿಯೇ ಹುಟ್ಟಿ ಕಾಲಕ್ರಮೇಣ ವಸ್ತು, ಶೈಲಿಯಲ್ಲಿ ಹೊಸತನ ತೆರೆದವು. ಹರಿದಾಸರ ಹಾಡುಗಳ ಜನಪ್ರಿಯತೆ ಭಾವಗಿತೆಗೂ ಹರಿದು ಬಂದಿತು. ಕಾರಣ ದಾಸರ ಹಾಡುಗಳಲ್ಲಿ ಹಾಸುಹೊಕ್ಕಾಗಿದ್ದ ಆಡುನುಡಿಯ ಭಾಷೆ ಮತ್ತು ಜೀವನದ ಚಿತ್ರಣ, ವೈಯುಕ್ತಿಕ ನೋವು, ನಲಿವುಗಳು, ಸಾಮಾಜಿಕ ಎಚ್ಚರದ ವಿಷಯಗಳು ಇವೆಲ್ಲಾ ಭಾವಗೀತೆಗೂ ಹರಿದು ಬಂದಿತು. ಮತ ಧರ್ಮ ಪ್ರತಿಪಾದನೆಯನ್ನು ಬಿಟ್ಟು ಲೌಕಿಕ ಆಸಕ್ತಿಯನ್ನು ಕ್ರೋಢೀಕರಿಸಿಕೊಳ್ಳುತ್ತಾ ಜನಪ್ರಿಯವಾಯಿತು.

ಹರಿದಾಸರ ನಂತರ ಬಂದ ಶ್ರೀವೈಷ್ಣವ ಹಾಡುಗಾರರು ಕೀರ್ತನೆಗಳ ವಸ್ತು ವ್ಯಾಪ್ತಿಯನ್ನು ಮತ್ತಷ್ಟು ಹಿಗ್ಗಿಸಿದರು. ದೈವಿಕ ಶೃಂಗಾರದಿಂದ ಮೊದಲುಗೊಂಡು, ಲೌಕಿಕ ಶೃಂಗಾರಗಳೊಂದಿಗೆ, ನಾಡು, ನುಡಿಗಳ ಅಭಿಮಾನ, ಪ್ರಕೃತಿ ವರ್ಣನೆ, ಸ್ನೇಹ, ರಾಜಭಕ್ತಿ ಮೊದಲಾದ ಅನೇಕ ಅಂಶಗಳು ಇವರ ಹಾಡುಗಳ ವಸ್ತುಗಳಾದವು. ವಸ್ತುವಿನಲ್ಲಿ ವೈವಿಧ್ಯತೆ ಕಾಲಿಕ್ಕಿತು. ಒಂದೇ ಭಾವವನ್ನು ಹಾಡಿನ ಪ್ರಾರಂಭದಿಂದ ಕಡೆಯವರೆವಿಗೆ ಸಾಧಿಸುವ ಗೀತ ಗೊಂಚಲುಗಳು ಬಳಕೆಗೆ ಬಂದವು. ಒಂದೇ ಭಾವದಿ ನಾನಾಮುಖದ ಚಿತ್ರಣಗಳು ತಲೆಯಿಟ್ಟವು. ಈ ಗೀತೆಗೊಂಚಲುಗಳನ್ನು 'ಸಪ್ತಪದಿ' ಗಳೆಂದು ಕರೆದರು. ಪಲ್ಲವಿಯುಳ್ಳ ಈ ಗೀತೆಗಳ ಲಯಧಾಟಿಗಳು ನವೋದಯ ಕಾವ್ಯದ ಅನೇಕ ಭಾವಗೀತೆಗಳಿಗೆ ಅದ್ಭುತವಾಗಿ ಹೆಗಣೆಯಾಗಿ ನಿಂತವು.

ಕನ್ನಡ ಭಾವಗೀತಾ ಗಾಯನವು ಪ್ರಾರಂಭವಾದಗ ಶಾಸ್ತ್ರೀಯ ಸಂಗೀತದ ಪಡಿನೆಳಲಿನಂತೆಯೇ ಶಾಸ್ತ್ರೀಯರಾಗದ ಮಡಿಲಿನಲ್ಲಿಯೇ ಹುಟ್ಟಿಕೊಂಡು ಅಲ್ಲಿಯೇ ಬೆಳೆಯಿತು. ಕೀರ್ತನ ಹಾಡುಗಾರಿಕೆಯಿಂದ ಸ್ವಲ್ಪಮಟ್ಟಿಗೆ ರಾಗಶೈಲಿಯಲ್ಲಿ ಲಘುವಾಗಿತ್ತಾದರೂ ಶಾಸ್ತ್ರೀಯ ಬಂಧದಿಂದ ಆಚೆ ಬಂದಿರಲಿಲ್ಲ.

ಪಾಶ್ಚಾತ್ತೀಕರಣದ ಅನುಕರಣದ ಭಯ, ಹೊಸಹಾದಿಯತ್ತ ದಿಗಿಲು ಮೂಡಿಸಿತ್ತು. ಕನ್ನಡತನದಲ್ಲಿಯೇ ಕಾವ್ಯ ಮಾರ್ಗವನ್ನು ಹುಡುಕುತ್ತಿದ್ದ ನವೋದಯ ಕವಿಗಳು ಇಂಗ್ಲಿಷ್ ಸಾಹಿತ್ಯದ ವಸ್ತುರೂಪಗಳನ್ನು ಕನ್ನಡದ ಭಾಷೆಯ ಮೂಲಕ ನಿರೂಪಿಸಲು ಪ್ರಾರಂಭಿಸಿದರು. ಕೀರ್ತನೆಗಳ ಪದಿಲಯ ವಿನ್ಯಾಸಗಳನ್ನೇ ಸ್ವೀಕರಿಸಿ, ಆಧುನಿಕ ಭಾವಗೀತೆಗಳ ಹುಟ್ಟಿಗೆ ಕಾರಣರಾದರು. ಕೀರ್ತನ ಸಾಹಿತ್ಯದಲ್ಲಿನ ದೈವಭಕ್ತಿಗೆ ಬದಲಾಗಿ ಪ್ರೀತಿ, ಸ್ನೇಹ ಮಿಲನ,ಹರ್ಷ, ವಿರಹಗಳೇ ಭಾವಗೀತೆಗಳಾಗಿ ಹುಟ್ಟಿಕೊಂಡವು.

ಕವಿತೆಯ ರುಚಿ ಸಂಗೀತದ ಸಾಹಚರ್ಯದಿಂದ ದ್ವಿಗುಣಿತವಾಗುತ್ತದೆ ಎಂದು ವಾಲ್ಮೀಕಿ ಮತ್ತು ಕಾಳಿದಾಸರು ಸಾರಿದ್ದಂತೆ, ಸಾಹಿತ್ಯಕ್ಕೆ ಸಂಗೀತ ಸೇರಿದಾಗ ಅದು ಕೇಳುಗನ ಅಂತರಂಗದ ಭಾವಗ್ರಹಣಶಕ್ತಿಯನ್ನು ತೀಕ್ಷ್ಣಗೊಳಿಸಿತು.

ನಮ್ಮ ಹರಿದಾಸರು ಸಂಗೀತ ಮತ್ತು ಸಾಹಿತ್ಯ ಸಮರಸ್ಯದ ಪ್ರತೀಕವದ ಕೀರ್ತನ ಸಾಹಿತ್ಯ, ಸಂಗೀತವನ್ನು, ಸಂಗೀತದ ಉನ್ನತಿಗಾಗಿ ಬಳಸದೆ, ಸಾಹಿತ್ಯವನ್ನು ಸರ್ವಜನಾದರಣೀಯವಾಗಿಸಲು ಬಳಸಿಕೊಂಡಿತು. ಕೀರ್ತನ ಸಾಹಿತ್ಯದಲ್ಲಿ ಕಂಡುಬರುವ ಸಂಗೀತ ಹೆಚ್ಚಾಗಿ ಹೃದಯದ ಸಂಗೀತವೇ ಹೊರತು ಬುದ್ಧಿಯ ಸಂಗೀತವಲ್ಲ. ಸಂಗೀತವನ್ನು ಶಾಸ್ತ್ರೀಯವಾಗಿ ಅಭ್ಯಸಿಸಿಲ್ಲದ ಜನಸಾಮಾನ್ಯರ ಬಾಯಲ್ಲೂ ಶರಣರ ಪದಗಳು, ಹರಿದಾಸರ ಹಾಡುಗಳು ನಲಿಯುವುದನ್ನು ನೋಡಿದರೆ ಈ ಅಂಶ ಸ್ಪಷ್ಟವಾಗುತ್ತದೆ. ಭಾವಗೀತಾಗಾಯನ ಅಥವಾ ಸುಗಮಸಂಗೀತವಾದರೋ ಹೃದಯವನ್ನು ಹೊಕ್ಕು ಬುದ್ಧಿಯನ್ನು ಮೀಟುವಂತಹ ಸಂಗೀತವಾಗಿದೆ. ಶರಣರವಚನ ದಾಸರಪದಗಳ ಸಾಹಿತ್ಯದ ಮಹತ್ ಉದ್ದೇಶ, ಒಟ್ಟುಗುರಿ, ಸಂಕಲ್ಪವೇ ಸತ್ಯದ ದರ್ಶನವಾಗಿದ್ದರೆ, ಸುಗಮಸಂಗೀತದ ಸಾಹಿತ್ಯದ ಉದ್ದೇಶ, ಸಂಕಲ್ಪ, ಕವಿತಾದರ್ಶನವಾಗಿದೆ. ಶರಣರ ವಚನಗಳು ಮತ್ತು ದಾಸರಪದಗಳು ತಾವು ಕಂಡ ಸತ್ಯವನ್ನು ಅನುಭವಿಸಿ, ಕಾಣದವರಿಗೂ ಅವುಗಳನ್ನು ತೋರಿಕೊಡುತ್ತವೆ. ಜೊತೆಗೆ ಸಮಾಜವನ್ನು ಮುನ್ನಡೆಸುತ್ತವೆ. ಸಮಾಜಕ್ಕೆ ಹಿತವನ್ನುಂಟುಮಾಡಬೇಕೆನ್ನುವುದೇ ಅವುಗಳ ಉದ್ದೇಶ. ಬದುಕಿನ ಮಹತ್ವತೆಯನ್ನು ಸಾರುತ್ತಾ, ಅದರ ಅನಿವಾರ್ಯತೆಯನ್ನು ಬೋಧಿಸುತ್ತವೆ. ಸುಗಮಸಂಗೀತದ ಉದ್ದೇಶವೂ ಇದೇ ಆಗಿದೆ. ಅದರಲ್ಲಿ ವೈಯುಕ್ತಿಕತೆಯ ಚಿಂತನೆಯೊಡನೆ, ಪ್ರಾಮಾಣಿಕವಾದ ಜೀವನಾನುಭವದ ದರ್ಶನವಿರುತ್ತದೆ. ಕಾವ್ಯದ ಭಾಷೆ ಉತ್ಕೃಷ್ಟಮಟ್ಟದ್ದಾಗಿರುತ್ತದೆ. ಭಾವಸೂಕ್ಷ್ಮತೆ, ವೈಚಾರಿಕತೆಗಳು ಎರಡೂ ಪ್ರಕಾರಗಳಲ್ಲಿ ಸಮಾನವಾಗಿರುತ್ತವೆ. ಭಾವುಕತೆಯೇ ಹಾಡಾಗಿ, ಕವಿತೆಯಾಗಿ ರೂಪು ತಾಳಿರುತ್ತದೆ.

**ಸಂಪ್ರದಾಯ ಹಾಡುಗಳು**

ಯಾವುದೇ ಜನಪದ ಸಾಹಿತ್ಯ ತಾನು ಬದುಕಿರುವ ಪರಿಸರದ ಹಿನ್ನೆಲೆಯಲ್ಲಿ ಆಯಾ ಸಮಾಜಕ್ಕೆ ಅನುಗುಣವಾದ ಭಾಷಿಕ ಹಾಗೂ ಸಾಂಸ್ಕೃತಿಕ ನೆಲೆಗಳನ್ನು ಗುರುತಿಸಿಕೊಳ್ಳುತ್ತದೆ. ಶಿಷ್ಟ ಸಂಪ್ರದಾಯದ ಬ್ರಾಹ್ಮಣ ಸಮಾಜದಲ್ಲಿ ಪುಷ್ಟಿಯಾಗಿ ಅಲ್ಲಿಯೇ ಬಳಕೆಗೊಳ್ಳುವ ಸಂಪ್ರದಾಯಪದಗಳು ಶಿಷ್ಟ ಸಾಹಿತ್ಯಿಕ ರಚನೆಗಳಂತೆ ಕಂಡರೂ, ತಮ್ಮ ಜಾಯಮಾನದಲ್ಲಿ ಅವು ಶುದ್ಧ ಜನಪದ ಗೀತೆಗಳೇ. ಈ ಹಾಡುಗಳೆಲ್ಲ ಒಂದು ಕಾಲಕ್ಕೆ ಅವಿದ್ಯಾವಂತರೇ ಆಗಿದ್ದ ಬ್ರಾಹ್ಮಣ ಸ್ತ್ರೀಯರಲ್ಲಿ ಮೌಖಿಕ ಮೂಲವನ್ನು ಅನುಸರಿಸಿ, ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದಿದೆ. ಇವುಗಳ ಕರ್ತೃತ್ವ ಅಜ್ಞಾತವಾಗಿಯೇ ಉಳಿದಿದೆ.

ಹೆಸರೇ ಸೂಚಿಸುವಂತೆ ಸಂಪ್ರದಾಯ ಪರಂಪರೆಯಲ್ಲಿ ಬಂದ ಹಾಡುಗಳೇ ಸಂಪ್ರದಾಯದ ಹಾಡುಗಳು. ಇವು ರೂಪುಗೊಂಡದ್ದು ಸಂಪ್ರದಾಯದಲ್ಲೇ. ನಮ್ಮ ನಾಡಿನ ಎಲ್ಲ ವಿಧವಾಗಿ ಸಂಗೀತಕ್ಕೂ ಸಂಪ್ರದಾಯದ ಸುಭದ್ರವಾದ ಅಡಿಪಾಯವಿದ್ದೇ ಇದೆ. ಮನೆಯಲ್ಲಿ

ಹೆಂಗಸರು ಪೂಜೆ ಮಾಡುವಾಗ, ವ್ರತ ಮಾಡುವಾಗ, ವ್ರತದ ಕಥೆಗಳನ್ನೂ, ರಾಮಾಯಣ, ಮಹಾಭಾರತ ಮುಂತಾದ ಪೌರಾಣಿಕ ಕಥೆಗಳನ್ನೂ ಹೇಳಿಕೊಳ್ಳುವಾಗ, ಮಕ್ಕಳನ್ನು ತೂಗುವಾಗ, ಸುಪ್ರಭಾತಸಮಯದಲ್ಲಿ, ಮದುವೆ ಮಂಗಳ ಕಾಯ್ದಲ್ಲಿ, ಹಾಡುವ ಹಾಡುಗಳೇ ಸಂಪ್ರದಾಯ ಹಾಡುಗಳೆಂದು ಹೆಸರಾಗಿದೆ. ಈ ಹಾಡುಗಳಲ್ಲಿ ಹೆಚ್ಚಿನ ಸಂಖ್ಯೆ ಅವುಗಳ, ಕರ್ತೃಗಳು ಯಾರು? ಇದರ ರಚನೆ ಹೇಗೆ ಪ್ರಾರಂಭವಾಯಿತು ಮುಂತಾದ ವಿಷಯಗಳು ತಿಳಿದಿಲ್ಲ. ಹತ್ತಾರು ಕಡೆಗಳಲ್ಲಿ ಚಲಾವಣೆಗೊಳ್ಳುತ್ತಿರುವ ಈ ಹಾಡುಗಳನ್ನು ಚಾರಿತ್ರಿಕ ರೂಪದಲ್ಲಿ, ಭೌಗೋಳಿಕ ರೂಪದಲ್ಲಿ ಗುರುತಿಸಬಹುದು. ಜನಪದ ಸಾಹಿತ್ಯಕ್ಕೆ ಸಹಜವಾದ ಪ್ರಸರಣ ಗುಣವನ್ನು ಸಾಧಿಸಿಕೊಂಡಿದೆ ಎಂದೋ ಯಾರಿಂದಲೋ ಸೃಷ್ಟಿಯಾಗಿ ಕಾಲಕ್ರಮದಲ್ಲಿ ಸಾಮೂಹಿಕ ಪುನಸ್ಸೃಷ್ಟಿಯಾದ ರಚನೆಗಳೇ ಆಗಿವೆ. ಇವುಗಳ ಭಾಷೆ ಸರಳವಾಗಿದೆ. ಸಂಸ್ಕೃತ ಶಬ್ಧಗಳ ಬಳಕೆ ವಿರಳವಾಗಿದೆ.ಪ್ರೌಢ ಸಾಹಿತ್ಯದಿಂದ ಪ್ರಭಾವಿತವಾದಂತೆ ತೋರಿದರೂ, ಜನಪದ ಸಾಹಿತ್ಯದ ಸರ್ವಗುಣಗಳನ್ನೂ ಹೊಂದಿರುವ ಈ ಸಂಪ್ರದಾಯದ ಹಾಡುಗಳು ಒಂದು ವರ್ಗದ ಜನಪದ ಸಾಹಿತ್ಯವೇ ಆಗಿವೆ.

ನಮ್ಮ ಕರ್ನಾಟಕದಲ್ಲಿ ಮೂರು ಬಗೆಯ ಪ್ರಮುಖ ಸಂಪ್ರದಾಯ ಸಾಹಿತ್ಯ ಪ್ರವಾಹಗಳನ್ನು ಗುರುತಿಸಬಹುದು.(೧) ಆದಿವಾಸಿ ಅಥವಾ ಬುಡಕಟ್ಟು ಜನಾಂಗಗಳ ಜನಪದ ಸಾಹಿತ್ಯ (೨) ಗ್ರಾಮೀಣ ಪ್ರದೇಶಗಳಲ್ಲಿನ ಹಿಂದುಳಿದ- ವರ್ಗಗಳಲ್ಲಿ ಕಂಡುಬರುವ ಗ್ರಾಮೀಣ ಜನಪದ ಸಾಹಿತ್ಯ (೩) ನಗರ ಹಾಗೂ ಗ್ರಾಮಾಂತರ ಮುಂದುವರೆದ ಸಮಾಜಗಳಲ್ಲಿನ ಸಂಪ್ರದಾಯ ಸಾಹಿತ್ಯ- ಈ ಮೇಲಿನ ಮೂರು ಸ್ತರಗಳಲ್ಲಿ ಕಂಡುಬರುವ ಜನಪದ ಸಾಹಿತ್ಯ ಆದಿವಾಸಿ, ಗ್ರಾಮೀಣ, ಬ್ರಾಹ್ಮಣ ಎಂಬ ಪ್ರಭೇದಗಳಲ್ಲಿ ನಿಂತುಕೊಳ್ಳುತ್ತದೆ. ಇವು ಭೌಗೋಳಿಕ ಹಾಗೂ ಸಾಮಾಜಿಕ ಕಾರಣಗಳಿಗಾಗಿ ಪರಸ್ಪರ ಪ್ರಭಾವಕ್ಕೆ ಒಳಗಾಗದೆ ಉಳಿದು ಬಂದಿವೆ.

ಬುಡಕಟ್ಟು ಜನಾಂಗಗಳು ಕಾಡು ಮೇಡುಗಳಲ್ಲಿ ವಾಸಿಸುತ್ತ ತಮ್ಮದೇ ಆದ ಜೀವನಕ್ರಮಗಳನ್ನು ರೂಢಿಸಿಕೊಂಡಿರುತ್ತವೆ. ಬಯಲು ಅಥವಾ ಮಲೆನಾಡಿನ ಕೃಷಿ ಪ್ರಧಾನ ಸಮಾಜದೊಡನೆ ಹೆಚ್ಚಾಗಿ ಬೆರೆಯುವ ಅವಕಾಶಗಳು ಈ ಜನಾಂಗಕ್ಕೆ ಕಡಿಮೆಯಿರುತ್ತದೆ. ಕೂಲಿನಾಲಿಗಳಿಗೂ ಇವರು ಗ್ರಾಮಾಂತರ ಪ್ರದೇಶಗಳಿಗೆ ಬರುವ ಆವಶ್ಯಕತೆಯನ್ನು ಹೊಂದಿರುವುದಿಲ್ಲ. ಬೇಟೆಯನ್ನೋ. ಸರಳ ಕೃಷಿಯನೋ ಅನುಸರಿಸಿ ಬದುಕುವ ಈ ಜನ ಕಾಡುಕಣಿವೆಗಳಲ್ಲಿಯೇ ಉಳಿದು ಹೋಗುತ್ತಾರೆ. ಈ ಕಾರಣದಿಂದ ಜನಪದ ಸಾಹಿತ್ಯದಲ್ಲಿ ಕೊಳು-ಕೊಡುಗೆ ಇಲ್ಲಿ ನಡೆಯಲು ಸಾಧ್ಯವಾಗಿಲ್ಲ. ಆದರೆ ಗ್ರಾಮೀಣ ಜನಪದ ಸಾಹಿತ್ಯ ಮತ್ತು ಬ್ರಾಹ್ಮಣ ಸಾಹಿತ್ಯ ಎರಡೂ ಪ್ರತ್ಯೇಕ ವಾಹಿನಿಗಳಾಗಿಯೇ ಉಳಿಯಲು ಸಾಮಾಜಿಕ ಸಂಗತಿಗಳು ಕಾರಣವಾದವು. ಗ್ರಾಮೀಣ ಜನಪದ ಸಾಹಿತ್ಯವೆಂಬುದು ಹಿಂದುಳಿನ ಸಮಾಜಗಳಲ್ಲಿ ಹೊಲ ಬಯಲು ಊರು ಕೇರಿಗಳಲ್ಲಿ, ಮನೆ ಮಂದಿರಗಳಲ್ಲಿ ಬೆಳೆದು ಅಲ್ಲಿಯೇ ಉಳಿದು ಬಂದರೆ, ಬ್ರಾಹ್ಮಣ ಸಾಹಿತ್ಯ, ಬ್ರಾಹ್ಮಣ ಸಮಾಜದಲ್ಲಿ ಮನೆಮನೆಯ ಅಂಗಳಗಳಲ್ಲಿ ಮಾತ್ರ ಅರಳಿ ಅಲ್ಲೇ ತನ್ನ ಕಂಪನ್ನು ಬೀರಿತು. ಇದರಲ್ಲಿ ಸಾಮೂಹಿಕ ಹಾಗೂ ಸಾರ್ವತ್ರಿಕ ಗುಣ ಕಡಿಮೆಯಾಯಿತು. ನಾಲ್ಕು ಗೋಡೆಗಳ ಚೌಕಟ್ಟು ಈ ಹಾಡಿನ ಒರತೆಗೆ ಬಂದು ತನ್ನ ಪರಿಧಿಯನ್ನು ನಿರ್ಮಿಸಿಕೊಂಡಿತು. ಆದ್ದರಿಂದ ಗ್ರಾಮೀಣ ಜನಪದ ಸಾಹಿತ್ಯದ ಮೇಲೆ ಇದು ಪ್ರಭಾವವನ್ನು ಬೀರಲಿಲ್ಲ. ಅದರಿಂದಲೂ ಯಾವ ಸ್ವೀಕಾರವನ್ನೂ ಮಾಡಲಿಲ್ಲ. ಒಂದು ವರ್ಗದ ಸ್ತ್ರೀಯರಲ್ಲಿ ಮಾತ್ರ ಉಳಿದು. ಅಲ್ಲೇ ಪ್ರಸಾರಗೊಂಡು ಗುಪ್ತಗಾಮಿನಿಯಾಗಿ ಉಳಿಯಿತು. ಬ್ರಾಹ್ಮಣರ ಮನೆಗಳಲ್ಲಿ ನಡೆಯುವ ಅನೇಕ ವ್ರತಗಳ ಜೊತೆಯಲ್ಲಿ ಸಂಪ್ರದಾಯಗಳ ಜೊತೆಯಲ್ಲಿ ಅವಿನಾಸಂಬಂಧಿಗಳಾಗಿ ಬಂದ ಈ ಹಾಡುಗಳೇ ಸಂಪ್ರದಾಯ ಗೀತೆಗಳೆನಿಸಿಕೊಂಡವು. ಸಂಪ್ರದಾಯ ಎನ್ನುವುದು ಸಂಸ್ಕೃತಿಯ ಪರಂಪರೆಗೆ ಸಂಬಂಧಿಸಿದ ವಿಷಯವಾದ್ದರಿಂದ ಇದು ಬಹಳ ಹಿಂದೆಯೂ ಇತ್ತು. ಈಗಲೂ ಇದೆ. ಮುಂದೆಯೂ ಇರುವಂತಹುದು. ಧಾರ್ಮಿಕ ಸಂಪ್ರದಾಯಗಳನ್ನು ಪ್ರತಿನಿಧಿಸುವ ಈ ಸಾಹಿತ್ಯ ನಮ್ಮ ಗ್ರಾಮೀಣ ಪ್ರದೇಶಗಳ ಹೊಲಗದ್ದೆ ತೋಟಗಳಲ್ಲಿ ಹುಲುಸಾಗಿ ಬೆಳೆದು ನಳನಳಿಸುವ ಸಾಹಿತ್ಯಕ್ಕಿಂತ ಭಿನ್ನವಾಗಿದೆ. 'ಬ್ರಾಹ್ಮಣ ಸಂಪ್ರದಾಯ ಪದಗಳು ಮನೆಯ ಹಿತ್ತಲಲ್ಲಿ ಬೆಳೆದ ಕೈತೋಟದ ಮಲ್ಲಿಗೆ ಜಾಜಿಗಳಾದರೆ, ಗ್ರಾಮೀಣ ಪ್ರದೇಶದ ಜನಪದ ಸಾಹಿತ್ಯ ಬಯಲು ವಿಸ್ತಾರದಲ್ಲಿ ಹರಡಿಕೊಂಡ ತೆಂಗಿನ ಬನದಂತೆ"ಎಂದ ಜೀ.ಶಂ. ಪರಮಶಿವಯ್ಯನವರ ಮಾತು ಅರ್ಥಪೂರ್ಣವಾಗಿದೆ.

ವೈದಿಕ ಸಂಪ್ರದಾಯಕ ಉನ್ನತ ಸಾಂಸ್ಕೃತಿಕ ಪ್ರೌಢ ಆವರಣದಲ್ಲಿ, ವಿದ್ಯಾವಂತ ಸಮಾಜದಲ್ಲಿ ಸಾವಿರಾರು ವರ್ಷಗಳಿಂದ ಇಂತ ಒಂದು ಸಾಹಿತ್ಯ ಪರಂಪರೆ ಹೆಣ್ಣು ಮಕ್ಕಳಲ್ಲಿ ಉಳಿದು ಬಂದಿರುವುದು ಅಚ್ಚರಿಯ ವಿಷಯವಾಗಿದೆ. ಜನಪದ ಸಾಹಿತ್ಯದಲ್ಲಿ ಕಂಡುಬರುವ ಪ್ರಕಾರಗಳೇ ಇಲ್ಲಿಯು ಢಾಳಾಗಿ ಕಂಡುಬರುತ್ತವೆ. ಮೌಖಿಕ ಪರಂಪರೆ, ಅಜ್ಞಾನಕರ್ತೃತ್ವ, ಪ್ರಸರನಗುಣ, ಸಾಮೂಹಿಕ ಪುನಃಸೃಷ್ಟಿ, ಗೇಯತೆ ಮತ್ತು ಕಥಾಪ್ರಕಾರಗಳು-ಸಂಪ್ರದಾಯ ಹಾಡುಗಳು, ಈ ಎಲ್ಲ ಗುಣಗಳಿಂದ ಶುದ್ಧ ಜನಪದ ಸಾಹಿತ್ಯದ ಸೊಗಡನ್ನೇ ಉಳಿಕೊಂಡು ಬಂದಿದೆ.

ಒಂದು ಕಾಲಕ್ಕೆ ಗೃಹಿಣಿಯರ ಪ್ರತಿಷ್ಠೆ ಗೌರವಗಳನ್ನು ಹೆಚ್ಚಿಸುವ ಸಾಧನವೂ ಆಗಿದ್ದ ಈ ಸಂಪ್ರದಾಯಪದಗಳು ಮನೆಯ ಅಂಗಳವನ್ನು ಮಂಗಳಮಯ ಮಾಡುತ್ತಾ ಸದಾಚಾರ, ಸದ್ಭಾವನೆಲ, ಶಾಂತಿ, ನೆಮ್ಮದಿ ಹಾಗೂ ಆತ್ಮ ಸಂತೋಷದ ದ್ಯೋತಕವಾಗಿ ಉಳಿದುಬಂದವು. ಸುಂದರ ಭಾವಗೀತೆಗಳಂತೆ ಮೂಡಿ ಬಂದ ಈ ಹಾಡುಗಳ ವೈವಿಧ್ಯ ವ್ಯಾಪ್ತಿ ಅಪೂರ್ವವಾದವು. ನಮ್ಮ ನವೋದಯ ಸಾಹಿತ್ಯದ ಬ್ರಾಹ್ಮಣ ಕವಿಗಳನೇಕರ ರಚನೆಗಳಲ್ಲಿ ಸಂಪ್ರದಾಯಹಾಡುಗಳ, ಪ್ರಭಾವವನ್ನು ಕಾಣಬಹುದು. ವೀ.ಸೀ. ಅವರು ರಚಿಸಿದ 'ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು 'ನಿಮ್ಮ ಮನೆಯೊಳಗಿಡಲು ತಂದಿರುವೆವು'- ಎನ್ನುವ ಗೀತೆಯಂತೂ ಪ್ರತಿಯೊಂದು ಮದುವೆ ಸಮಾರಂಭದಲ್ಲಿ ತಪ್ಪದೇ ಹಾಡುತ್ತಿದ್ದ ಹಾಡಾಗಿತ್ತು. ಗಂಡಿನವರಿಗೆ 'ಹೆಣ್ಣೊಪಿಸುವ ಶಾಸ್ತ್ರ' ಮಾಡುವಾಗ ಈ ಗೀತೆಯನ್ನು ಕೇಳಿ ಬಂಧು ಬಾಂಧವರ ಕಣ್ಣಲ್ಲಿ ನೀರು ಸುರಿಯುವುದು ಸಾಮಾನ್ಯವಾಗಿತ್ತು. ಬ್ರಾಹ್ಮಣ ಸಂಸ್ಕೃತಿ, ಜೀವನ ಸಂಪ್ರದಾಯವನ್ನು ಅನುಸರಿಸಿ ಅನೇಕ ಸಾಂದರ್ಭಿಕ ಗೀತೆಗಳನ್ನು ರಚಿಸಿದವರಲ್ಲಿ ಕೆ.ಎಸ್. ನರಸಿಂಹಸ್ವಾಮಿ, ಅತ್ಯಂತ ಪ್ರಸಿದ್ಧರಾದರು. ಅವರ 'ಮೈಸೂರುಮಲ್ಲಿಗೆ' ಬ್ರಾಹ್ಮಣ ಸಂಸ್ಕೃತಿಯ ಬ್ರಾಹ್ಮಣ ಸಂಪ್ರದಾಯ ಕುಟುಂಬದ ಎಲ್ಲಾ ಮಜಲುಗಳನ್ನೂ ಚಿತ್ರವತ್ತಾಗಿ ಕಟ್ಟಿಕೊಟ್ಟಿತ್ತು. ಬ್ರಾಹ್ಮಣರ ಮನೆಯ ಮುಂದಿರುವ ತುಳಸಿ ಬೃಂದಾವನದಿಂದ, ಅಂಗಳದ ರಂಗೋಲೆಯಿಂದ ಹಿಡಿದು ಗಂಡಹೆಂಡತಿಯರ ದಾಂಪತ್ಯಜೀವನದ ಸಾಂಸ್ಕೃತಿಕ ಸೌರಭವನ್ನು, ಸಂಪ್ರದಾಯದೊಡನೆ ಮಿಳಿತವಾಗಿದ್ದ ಜೀವನ ಚಿತ್ರವನ್ನು ರಂಗುರಂಗಾಗಿ ಬಿಡಿಸಿತೋರಿಸಿತು. ಜೀವನದ ಸಂಸ್ಕೃತಿಯ ಜೊತೆಗೆ ವ್ಯಕ್ತಿತ್ವದ ಭಾವ ಸೂಕ್ಷ್ಮತೆಯನ್ನೂ ಚಿತ್ರಸಿತು. ಸಂಪ್ರದಾಯ ಹಾಡುಗಳು ಕೌಟುಂಬಿಕ ಸಾಮರಸ್ಯವನ್ನು ಎತ್ತಿತೋರಿಸುತ್ತ, ಆಚಾರಿ ವಿಚಾರಗಳನ್ನು ಎತ್ತಿಹಿಡಿಯುತ್ತಿದ್ದವೆಂಬುದಕ್ಕೆ ಕೆ.ಎಸ್.ಎನ್. ಅವರ 'ಬಳೆಗಾರ'ನ ಪಾತ್ರವನ್ನು ಉದಾಹರಿಸಬಹುದು. ಹೆಣ್ಣಿನ ಸೌಭಾಗ್ಯ ಚಿಹ್ನೆಯಾದ 'ಬಳೆ' ತನ್ನ ಅರ್ಥದ ಪರಿಮಿತಿಯನ್ನು ಭಾವಗೀತೆಯಲ್ಲಿ ಹಿಗ್ಗಿಸಿಕೊಂಡು ಪ್ರೇಮದ ಸಂದೇಶವನ್ನು ಸಾರುವವರೆಗೆ, ಅರಳಿಕೊಳ್ಳುತ್ತದೆ. ಗಂಡನ ಮನಸ್ಸಿಗೂ ಹೆಂಡತಿಯ ಮನಸ್ಸಿಗೂ ಸೇತುವೆಯಾಗಿ 'ಬಳೆಗಾರ' ಪ್ರೇಮದೂತನಾಗುತ್ತಾನೆ. ಸಂಸ್ಕೃತಿಯ ಸಂಕೇತವಾದ, ಸಂಪ್ರದಾಯವೇ 'ಬಳೆ' ಇಲ್ಲಿ ಪ್ರಧಾನಪಾತ್ರವಹಿಸುತ್ತದೆ. ಬಸಿರಿಗೆ ಬಳೆತೊಡಿಸುವ ಸಂಪ್ರದಾಯವೇ 'ಭಾವಗೀತೆ'ಗೆ ಮಣೆ ಹಾಕಿಕೊಟ್ಟಿದೆ.

ಸರಳವಾದ ಸಾಹಿತ್ಯ, ಲಲಿತವಾದ ರಾಗಗಳು ಹಾಗೂ ಸುಲಭಗ್ರಾಹ್ಯವಾದ ಧಾಟಿಗಳಲ್ಲಿರುವ ಈ ಹಾಡುಗಳೆಲ್ಲ ದಾಸರ ಪಂಥದವರ ಹಾಡುಗಳನ್ನು ಹೋಲುತ್ತದೆ. ಸಾಹಿತ್ಯದ ಬಂಧದಲ್ಲಿಯೂ ಮತ್ತು ಹಾಡಿನ ಸಂಗೀತದ ಧಾಟಿಯಲ್ಲಿಯೂ ಇವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಶ್ರೀಪುರಂದರದಾಸರೇ ಮೊದಲಾದ ದಾಸರುಗಳು ರಚಿಸಿದ ಅಸಂಖ್ಯಾತ ದೇವರನಾಮಗಳು, ದಕ್ಷಿಣದಲ್ಲಿಲ್ಲಾ ಬಹಳ ಪ್ರಚಲಿತವಾಗಿದ್ದ ಕಾಲದ ಧಾಟಿಗಳು ಇಲ್ಲಿ ಬೆಳೆದು ಬಂದಿವೆ. ಸಂಗೀತ ತ್ರಿಮೂರ್ತಿಗಳಾದ ತ್ಯಾಗರಾಜರು, ಶ್ಯಾಮಾಶಾಸ್ತ್ರಿಗಳು, ದೀಕ್ಷಿತರಿಗೂ ಮುಂಚೆ ಇಡೀ ಉಳಿದು ಬಂದಿವೆ. ತಮಿಳುನಾಡು ಮತ್ತು ತೆಲುಗು ದೇಶಗಳಲ್ಲಿ ಹೆಂಗಸರು ಹಾಡುವ ಅನೇಕ ಸಂಪ್ರದಾಯದ ಹಾಡುಗಳು, ಅವುಗಳ ಧಾಟಿಗಳು, ನಮ್ಮ ಕನ್ನಡದ ಸಂಪ್ರದಾಯದ ಹಡುಗಳ ಮಟ್ಟುಗಳು, ಧಾಟಿಗಳನ್ನು ಬಹುಮಟ್ಟಿಗೆ ಹೋಲುತ್ತವೆ. "ನಮ್ಮ ಸಂಪ್ರದಾಯ ಹಾಡುಗಳೇ ರಂಗಗೀತೆಗಳಿಗೆ" ಅಡಿಪಾಯ ಎಂದು ಡಾ||ಹೆಚ್.ಕೆ. ರಂಗನಾಥ್ ಅವರು ಅಭಿಪ್ರಾಯಪಟ್ಟಿದ್ದಾರೆ.

ದಾಸಸಾಹಿತ್ಯಕ್ಕೂ ಹಿಂದೆ ಜಾನಪದ ಶೈಲಿಯಲ್ಲಿ ಕರ್ನಾಟಕ ಸಂಗೀತದ ಅಡಿಗಟ್ಟಿನ ಮೇಲೆ ರಚಿತವಾದ ಈ ಹಾಡುಗಳು ಮಹಿಳೆಯರಲ್ಲಿ ಪರಸ್ಪರ ಸಾಮೀಪ್ಯ ಹೆಚ್ಚಿಸಿ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ಸಾಮೂಹಿಕವಾಗಿ ಸಂತೋಷ ಉಂಟುಮಾಡಬಲ್ಲ ಸಾಧನವಾಗಿತ್ತು. ಅಂದು ಮಹಿಳೆಯರು ಸಂಪ್ರದಾಯ ಮತ್ತು ಸಂಸ್ಕೃತಿಯ ಸಂಘಟಕರಾಗಿ ಸಮಾಜದಲ್ಲಿ ಶಕ್ತರಾಗಿದ್ದರೆಂಬುದಕ್ಕೆ ಸಂಪ್ರದಾಯ ಹಾಡುಗಳೇ ಸಾಕ್ಷಿಯಾಗಿವೆ.

ಕರ್ನಾಟಕ ಸಂಗೀತದ ನೆಲೆಗಟ್ಟಿನ ಮೇಲೆ ನಿರ್ಮಿತವಾದ ಈ ಹಾಡುಗಳಲ್ಲಿ. ಒಂದು ಗತಿ, ಗತ್ತುಗಳ ಜೊತೆಗೆ ರಗ ತಾಳಗಳ ಮೇಳವಿರುವುದನ್ನು ನೋಡಬಹುದು. ಆದರೆ ಈ ಹಾಡುಗಳನ್ನು ಹಾಡುವರ್‍ಯಾರಿಗೂ ಸಂಗೀತಸಾಸ್ತ್ರದ ಅರಿವು ಇರಲಿಲ್ಲವಾದ್ದರಿಂದ ಮಟ್ಟಿನ ಜಾಡು ಹಿಡಿದು ಇಂಪಾಗಿ ಹಾಡಿಕೊಂಡು ಹೋಗುತ್ತಿದ್ದರು. ರಾಗದ ಹೆಸರು ತಿಳಿಯದಿದ್ದರೂ, ಗಂಟಲಲ್ಲಿ ಧಾಟಿ ಹುದುಗಿ ಕುಳಿತುಕೊಳ್ಳುತ್ತಿತ್ತು. ತಾಳದ ಲೆಕ್ಕಾಚಾರ ತಿಳಿಯದಿದ್ದರೂ ಮನರಗೆಲಸದ ಸಮಯದಲ್ಲಿ ಹಾಡಿಕೊಳ್ಳುವಾಗ ಅರಿವಿಲ್ಲದೆಯೇ ಸಾಹಿತ್ಯಾಕ್ಷರಗಳ ಕಾಲ ಪ್ರಮಾಣ ಸಂಗೀತಾಕ್ಷರಗಳನ್ನು ಹೊಂದಿಕೊಂಡು ಸಹಜವಾಗಿರುತ್ತಿತ್ತು. ಕಷ್ಟಸಾಧ್ಯವಾದ ಶಾಸ್ತ್ರೀಯ ಸಂಗೀತದ ಕಟ್ಟುಪಾಡು, ಬಂಧನಗಳಿಲ್ಲದೆ ಇದ್ದುದರಿಂದ ಎಲ್ಲ ಗೃಹಿಣಿಯರು ಭಯ, ಸಂಕೋಚವಿಲ್ಲದೆ, ಸಂಪ್ರದಾಯ ಹಾಡುಗಳನ್ನು ಕಲಿತು ಉಳಿಸಿಬೆಳೆಸಿದರು.

ಕಾಲಕ್ರಮೇಣ ಸಂಪ್ರದಾಯ ಹಾಡುಗಳ ಮೇಲೆ ಸಂಗೀತ ಮತ್ತು ನವೀನತೆಯ ಪ್ರಭಾವವು ಬಿದ್ದು ಕೆಲವು ವೇಳೆ ಕೀರ್ತನೆಗಳ ಧಾಟಿಯಲ್ಲೂ, ಅವುಗಳ ಪಡಿಯಚಿನಂತೆಯೂ, ಕೆಲವು ವೇಳೆ ನಾಟಕದ ಮಟ್ಟಿನಂತೆಯೂ ರಚಿತವಾದದ್ದು ಕಂಡುಬರುತ್ತದೆ.

ಕನ್ನಡದಲ್ಲಿರುವ ಇತರ ಜಾನಪದ ಗೀತಗಳ ಹಾಗೆಯೇ 'ಶೋಭಾನೆಗಳು' ಹೆಚ್ಚಾಗಿ ಕಿವಿಯಿಂದ ಕಿವಿಗೆ ಧಾಟಿ, ಧಾಟಿ ಸೊಬಗನ್ನುಳಿಸಿಕೊಂಡು ಬಂದವು. ಇವು ಹೆಂಗಸರು ಹಾಡುವ ಹಾಡುಗಳಾರಿಂದ ಇವನ್ನು ಹೆಣ್ಣು ಮಕ್ಕಳು ಚಿಕ್ಕಂದಿನಲ್ಲಿ ತಮ್ಮ ತಾಯಂದಿರಿಂದ ಕಲಿಯುತ್ತಿದ್ದರು. ಕಲಿಸಿಕೊಡುವಾಗ ಇವುಗಳ ಧಾಟಿಗೆ ಲಕ್ಷ್ಯವಿಡುತ್ತಿದ್ದರು, ಹೀಗೆ ಕಲಿತ ಬಾಲೆಯರು ಸಂದರ್ಭ ಬಂದಾಗ, ಸಾಮಾಜಿಕ ಶುಭಕಾರ್ಯಗಳಲ್ಲಿ ಹಾಗೂ ಪೂಜೆ, ಹೋಮ, ಸಮಾರಭಗಳಲ್ಲಿ ಹಿರಿಯ ಮುತ್ತೈದೆಯರ ಜೊತೆಗೂಡಿ ಹಾಡುತ್ತಿದ್ದರು. ಪೂಜೆಗಳಲ್ಲಿ ಆರತಿ, ಮಂತ್ರಪುಷ್ಪ ಪ್ರಾರ್ಥನೆ, ಪ್ರಸಾದ, ಹೂ ಕೊಡುವುದು ಮುಂತಾದ ಸಂದರ್ಭಗಳಲ್ಲಿ ಕನ್ಯಾಮಣಿಯರಿಂದ ಶೋಭಾನೆಗಳನ್ನು ಹಾಡಿಸಲಾಗುತ್ತಿತ್ತು. ಇತ್ತೀಚಿನವರೆಗೂ ವಿವಾಹಯೋಗ್ಯ ಕನ್ಯೆಗೆ 'ಶೋಭಾನೆ' ಹಾಡಲು ಬರುವುದೆಂದರೆ ಯೋಗ್ಯವರನನ್ನು ಪಡೆಯಲು ಆಕೆಗೆ ಅದೊಂದು ಹೆಚ್ಚಿನ ಅರ್ಹತೆ ಎನಿಸುತ್ತಿತ್ತು. ಕನ್ಯೆಯನ್ನು ನೋಡಲು ಬಂದ ವರನ ಕಡೆಯವರು ಆಕೆಗೆ 'ಶೋಭಾನೆ' ಹಾಡಲು ಬರುತ್ತದೆಯೇ ಎಂದು ಹೇಳುತ್ತಿದ್ದರು. ಅವರು ಹಾಡುವ ಶೋಭಾನೆಗಳಲ್ಲಿ ರಾಮಾಯಣ, ಮಹಾಭಾರತಗಳ ಹಾಗೂ ಬೇರೆ ಬೇರೆ ಪುರಾಣಗಳ ಕಥೆಗಳು ಹಾಡಿನ ರೂಪದಲ್ಲಿದ್ದು ಭಗವಂತನ ಅವತಾರ ಲೀಲೆಗಳು, ಭಕ್ತರ ಆದರ್ಶ ಜೀವನದ ಘಟನೆಗಳು, ಉದಾತ್ತ ಸಾಹಸಮಯ ರಮ್ಯ ಜೀವನ ಚಿತ್ರಗಳು ಇದ್ದು ನೀತಿ ಪ್ರತಿಪದಾನೆ- ಇದ್ದುದರಿಂದ ನಮ್ಮ ಉಜ್ವಲ ಸಂಸ್ಕೃತಿಯ ಪರಿಜ್ಞಾನ, ಅನುಸರಣೆ, ರಕ್ಷಣೆ, ಪೋಷಣೆಗಳಿಗೆ ಇವು ಸಹಕಾರಿಗಳಾಗುತ್ತಿದ್ದವು. ಇವುಗಳ ಅಭ್ಯಾಸಕ್ಕೆ ಎಲ್ಲರೂ ಪ್ರೋತ್ಸಾಹ ಕೊಡುತ್ತಿದ್ದರು. ತಮಗೆ ಗೌರವವೆಂದು, ಮರ್ಯಾದೆಯೆಂದು ಭಾವಿಸಿ ಕಲಿತುಕೊಳ್ಳುತ್ತಿದ್ದರು. ಸಮರ್ಥರಾದ ಹಾಡುಗಾರ್ತಿಯರಿಗೆ ಹಾಡಲು ಅಡಕೆ ವೀಳ್ಯವನಿತ್ತು ವಿನಂತಿಸಿ ಕೊಳ್ಳುತ್ತಿದ್ದರು. ಶೋಭಾನೆ ಹಾಡುವ ಮರ್ಯಾದೆಗೆ ಮದುಮಗನ ಹಾಗೂ ಮದುಮಗಳ ಅಕ್ಕತಂಗಿಯರು ಹಾಗೂ ಸೋದರತ್ತೆ ಮಾತ್ರ ಅರ್ಹರಾಗಿದ್ದರು.

ಶ್ರುತಿ-ಸ್ಮೃತಿ ವೈಧಾನಿಕ ಸಂಸ್ಕಾರ ಕ್ರಮವನ್ನು ಯಾವದೋ ಪರಿಸ್ಥಿತಿಯಿಂದ ಬಿಟ್ಟವರು ಕೂಡ ಮಂತ್ರೋಚ್ಚಾರಣೆಯನ್ನು ಮಾತ್ರ ಬಿಟ್ಟಿರಬಹುದಲ್ಲದೆ, ಶಾಸ್ತ್ರಕ್ರಮವನ್ನು ಬಿಟ್ಟಿರಲಿಲ್ಲ. ಅಂಥವರ ಆಚಾರಕ್ರಮವನ್ನು 'ಜಾನಪದ' ಎಂದು ಹೆಸರಿಸಲಾಗಿದೆ. ಶೋಭಾನೆಯನ್ನು ಹಾಡುವ ಪದ್ಧತಿ ಈ ಎರಡು ವರ್ಗದವರಲ್ಲೂ (ಮಂತ್ರ ಸಹಿತರಲ್ಲಿ ಮತ್ತು ಮಂತ್ರರಹಿತರಲ್ಲಿ) ಆಚರಣೆಯಲ್ಲಿತ್ತು. ಹವ್ಯಕರಲ್ಲಿ ಹಾಗೂ ಇನ್ನೂ ಕೆಲವು ವೈದಿಕಮಾರ್ಗದವರಲ್ಲಿ ಶುಭಕಾರ್ಯಗಳು ವೇದ ಮಂತ್ರೋಕ್ತವಾಗೆ, ಶಾಸ್ತ್ರ ವಿಹಿತವಾಗಿ, ನಡೆಯುತ್ತಿರುವಾಗ

ಮುತ್ತೈದೆಯರು ಶೋಭಾನೆ ಹಾಡುವುದು ಸಂಪ್ರದಾಯವಾಗಿತ್ತು. ಆ ಹಾಡುಗಳ ಅರ್ಥವೂ ಸಂಸ್ಕೃತದ ಮಂತ್ರಾರ್ಥವೂ ಒಂದೇ ಆಗಿರುತ್ತಿತ್ತು. ಸಂಸ್ಕೃತದ ಮಂತ್ರಗಳ ಅರ್ಥವನ್ನೇ ಆ ಹಾಡುಗಳು ಒಳಗೊಂಡಿರುತ್ತಿತ್ತು. ಎಷ್ಟೋ ವೇಳೆ ಪುರೋಹಿತರು ಶುಭಕಾರ್ಯಗಳನ್ನು ಮಾಡಿಸುವಾಗ, ಮಂತ್ರ ಸಂದರ್ಭವನ್ನು ಮರೆತಾಗ ಶೋಭಾನೆಗಳಿಂದಲೇ ಕ್ರಿಯಾತಂತ್ರದ ದಿಗ್ದರ್ಶನ ಪಡೆಯುತ್ತಿದ್ದರೆಂದು ತಿಳಿದುಬರುತ್ತದೆ.

ಯಾವುದೇ ಕಲಾಸಂಪ್ರದಾಯವೆಂದರೆ, ನಮಗಿಂತ ಪೂರ್ವದಲ್ಲಿದ್ದ ಕಲಾವಿದರು ಸೃಷ್ಟಿಸಿ ಬೆಳೆಯಿಸಿಕೊಂಡ ತಂತ್ರವಿಧಾನಗಳು. ಆ ಪೂರ್ವಿಕರು ತಮ್ಮ ಮನಸ್ಸಿನ ಭಾವನೆಗಳನ್ನು ತೋಡಿಕೊಳ್ಳುವುದಕ್ಕೆ ಯಾವ ರೀತಿಯ ತಂತ್ರ ಸಹಜ, ಸುಂದರ ಎಂದು ತಿಳಿದರೋ, ಅವುಗಳನ್ನು ಮುಂದಿನವರು ಕಾಯ್ದುಕೊಂಡು, ಅನುಕರಿಸುತ್ತಾ ಹೋಗುವುದೇ ಸಂಪ್ರದಾಯವಾಗುತ್ತದೆ. ಸಂಪ್ರದಾಯ ಹಾಡುಗಳು ಈ ಸೂತ್ರದಿಂದ ಮುಂದೆ ಮುಂದೆ ಸಾಗುತ್ತಾ ಉಳಿದುಕೊಂಡು ಬಂದವು. ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದ್ದ ಬ್ರಾಹ್ಮಣಕವಿಗಳ ಕವಿತೆಯ ವಸ್ತುವಾದವು. ಅವರು ನಂಬಿ ಆಚರಣೆಯಲ್ಲಿಟ್ಟುಕೊಂಡಿದ್ದ ಪದ್ಧತಿಗಳೂ, ಸಂದರ್ಭಗಳೂ, ವಿಚಾರಗಳೂ, ಹೊಸಕವಿತೆಯ ಉಡುಗೆಯಲ್ಲಿ ವಿನೂತನವಾದ ಅನುಭವಗಳನ್ನು ನೀಡಿದವು. ಹೊಸ ಕವಿತಾ ಪ್ರಕಾರಕ್ಕೆ ಪ್ರೇರಣೆಯನ್ನು ನೀಡಿದವು. ಕವಿತೆ ತನ್ನ ವಸ್ತು ಪ್ರತಿಪಾದನೆಯಲ್ಲಿ ಸಂಕೀರ್ಣತೆಯನ್ನು ಕಂಡುಕೊಂಡಿತು. ವೈವಿಧ್ಯತೆಗಳನ್ನು ಪಡೆಯಿತು. ಕವಿತಾ ಗಾಯಕ್ಕನುರೂಪವಾದ ಗಾಯನಪ್ರಕಾರವೊಂದು ಹುಟ್ಟಿಕೊಂಡಿತು. ಅದೇ ಕಾಲಾಂತರದಲ್ಲಿ 'ಸುಗಮಸಂಗೀತ'ವೆಂದು ಜನಪ್ರಿಯವಾಯಿತು.

* * *

## ಅಧ್ಯಾಯ ೬ - ಕವಿತೆ ಸುಗಮಸಂಗೀತವಾದಾಗ

ಕಾವ್ಯ ಮುಖ್ಯವಾಗಿ ಎಲ್ಲ ಕಾಲಗಳಲ್ಲೂ ಎಲ್ಲ ದೇಶಗಳಲ್ಲೂ ಹೆಚ್ಚೂ ಕಡಿಮೆ ಒಂದೇ ರೀತಿಯ ಇಂದ್ರಿಯಗಳು, ಮನಸ್ಸು, ವಿವೇಚನೆ, ಕನಸು, ಇವುಗಳಿಂದ ಕೂಡಿದ ಒಂದೇ ಆದ ಮಾನವನ ಅಂತರಂಗಕ್ಕೆ ಸಂಬಂಧಪಟ್ಟಿದ್ದು. ದೇಶ; ಧರ್ಮ, ಜಾತಿ, ಕಾಲ, ಪಂಥ, ಭಾಷೆ, ಈ ಎಲ್ಲವನ್ನೂ ಮೀರಿ ನಿಲ್ಲುವಂಥದ್ದು. ಮೂಲದಲ್ಲಿರುವ ಭಾವನೆಗಳು, ಆಕಾಂಕ್ಷೆಗಳು, ಸುಖದುಃಖಗಳು, ಜನನ ಮರಣಗಳು, ಬಡತನ, ಶ್ರೀಮಂತಿಕೆಗಳು, ಆರೋಗ್ಯ, ಅನಾರೋಗ್ಯ, ಉನ್ಮಾದ, ಮನಸ್ವಾಸ್ಥ್ಯ, ಸಮಚಿತ್ತ, ಮನೋಗ್ರಂಥಿಗಳು ಈ ಎಲ್ಲವೂ ಆನುಷಂಗಿಕವೇ ಹೊರತು ಮೂಲವಲ್ಲ. ಮೂಲವಾದದ್ದು ಎಲ್ಲ ಕಾಲಕ್ಕೂ, ದೇಶಕ್ಕೂ, ಜನಕ್ಕೂ, ಸಲ್ಲುವ ಮಾನವ ಹೃದಯ, ಅಂತರಂಗದ ತುಮುಲ. ಇವು ಕಾಲಾತೀತವಾದದ್ದು. ಹಾಗೆಯೇ ಸಾರ್ವಕಾಲಿಕವೂ ಹೌದು. ಕಾವ್ಯ ನಿರ್ಮಾಣದಲ್ಲಿ ಇವು ಮಾನವ ಸಹಜವಾದ ಅಂಶಗಳಾಗಿ ಸೇರಿಕೊಳ್ಳುತ್ತವೆ. ಸಂಸ್ಕೃತಿ ವಿಶಿಷ್ಟವೂ, ಸಂದರ್ಭ ವಿಶಿಷ್ಟವೂ ಆದುದಲ್ಲದೆ, ಕವಿಯ ಮನೋಧರ್ಮದ ವೈಶಿಷ್ಟ್ಯವನ್ನು ಹೇಳುವಂತಹುದು. ಇದರ ಪರಿಣಾಮವಾಗಿ ಕಾವ್ಯದ ಹಲವು ಮಾದರಿಗಳು ಹಲವು ಸಂಸ್ಕೃತಿಗಳ ಹಲವು ಸಂದರ್ಭಗಳಲ್ಲಿ ಹುಟ್ಟಿಕೊಂಡವು ಕಾವ್ಯ ರಸಗ್ರಹಣಕ್ಕೋಸ್ಕರ ಬೇರೆ, ಬೇರೆ ದಾರಿಗಳು ಆವಿಷ್ಕಾರವಾದವು.

ನವೋದಯ ಸಾಹಿತ್ಯ ಭಾವಗೀತೆಯಾಗಿ ಮೂಡಿ ಹೊಸ ವ್ಯಕ್ತಿತ್ವವನ್ನು ಕಟ್ಟಿಕೊಂಡಿತು. ತನ್ನದೇ ಆದ ಹೊಸ ಭಾಷೆ, ಹೊಸ ವೈಚಾರಿಕ ಆಕೃತಿಗಳನ್ನು ಮೂಡಿಸಿ ರೂಪಿಸಿಕೊಂಡಿತು. ನಾದಲೀಲೆಯೇ ಇದರ ವ್ಯಕ್ತಿತ್ವದ ಮುಖ್ಯಾಂಗವೂ ಕೇಂದ್ರಬಿಂದುವೂ ಆಯಿತು. ಬೇಂದ್ರೆ, ಕುವೆಂಪು, ಪು.ತಿ.ನ. ರಂತಹ ಹಿರಿಯ ಕವಿಗಳು ನವೋದಯ ಕಾವ್ಯದ ರತ್ನತ್ರಯರೆಂದೇ ಖ್ಯಾತರಾದರು. ಇವರು ನವೋದಯ ಕಾವ್ಯಕ್ಕೆ ಪ್ರತ್ಯೇಕವಾದ ವಿಶಿಷ್ಟ ವ್ಯಕ್ತಿತ್ವವನ್ನು ತಂದುಕೊಟ್ಟರು ಭಾವುಕತೆ, ಗೇಯತೆಯ ಜೊತೆಯಲ್ಲಿ ಕೈ ಕೈ ಹಿಡಿದು ಸಾಗಿತು. ಮಾಸ್ತಿ, ವೀಸೀ, ರಾಜರತ್ನಂ, ಡಿ.ವಿ.ಜಿ. ಆನಂದ ಕಂದ, ಮಧುರಚೆನ್ನ, ಡಿ.ಎಸ್.ಕರ್ಕಿ ಮೊದಲಾದ ಹಲವಾರು ಕವಿಗಳ ಗೀತೆಗಳು ಸುಗಮಸಂಗೀತದ ಮೂಲಕ ಬಹುಸಂಖ್ಯಾತರನ್ನು ತಲುಪಿದವು. ಕವಿತೆ ಪ್ರದರ್ಶಕ ಕಲೆಯಾಗಿ ರೂಪುಗೊಂಡಿತು. ಕವಿತೆಗೆ ಹಾಡುಗಾರಿಕೆಯಿಂದ ಶಕ್ತಿ

ವರ್ಧಿಸಿತು. ಶಬ್ದಗಳು, ಅವುಗಳ ಹಿಂದೆ ಇರುವ ಸಂವೇದನೆಗಳು, ಲೋಕದೃಷ್ಟಿಗಳು, ಹಾಡಿನ ರಾಗ, ಲಯ, ತಾಳಗಳ ಮೂಲಕ ಹನಿಹನಿಯಾಗಿ ಕೇಳುಗನೊಳಗೆ ಇಳಿದು ಅವನೇ ಹಾಡುಗಾರನಾಗುವಂತೆ, ಅವನೊಳಗೆ ಅವನೇ ಹಾಡಿಕೊಳ್ಳುವಂತಾಯಿತು. ಅವನ ವ್ಯಕ್ತಿತ್ವದ ಅಂಗವಾಯಿತು. ಅವನ ಉಸಿರಾಟದ ಭಾಗವಾಯಿತು. ಕವಿತೆ ಹೀಗೆ ಗೀತೆಯಾಗಿ ಗಾಯಕರ ಕೊರಳಿನಲ್ಲಿ ಮಧುರವಾಗಿಯೇ ಉಳಿದುಬರುವಾಗ ನವ್ಯ ಕಾವ್ಯ ಈ ಸಂಪ್ರದಾಯವನ್ನು ಕಡಿದುಹಾಕಿತು. ಕವಿತೆಗೆ ಬೇರೆ ಯಾವುದೇ ಕಲೆಯ ಹಂಗುಬೇಕಿಲ್ಲವೆಂದು ಸಮರವನ್ನೇ ಸಾರಿತು. ಗಾಯನಕ್ಕೆ ವಿರೋಧಿಯಾಯಿತು. ನವೋದಯ ಕವಿತೆ ಹಾಡಲಿಕ್ಕೆ ಬರೆದ ಕವಿತೆ ಎಂದೂ, ಕವಿತೆ ಹಾಡಿನ ರೂಪಕ್ಕೆ ಬರುವಾಗ ಅದರ ಸಾಹಿತ್ಯಮೌಲ್ಯ ಕುಗ್ಗಿಹೋಗುತ್ತದೆ, ಜಾಳಾಗುತ್ತದೆ. ಎಂಬ ಅಪವಾದವೂ ಹುಟ್ಟಿಕೊಂಡಿತು. ನವ್ಯ ಕವಿಗಳು 'ಗೀತಕಾವ್ಯ'ವನ್ನು ಖಂಡಿಸುತ್ತಾ, 'ಬುದ್ಧಿಪರವಾದ' ಕಾವ್ಯ ರಚನೆಯನ್ನು ಪ್ರಾರಂಭಿಸಿದರು. ಅದುವರೆವಿಗೂ ಬಂದ ಕಾವ್ಯ ಉದ್ದಕ್ಕೂ ಸಂಗೀತದ ಜೊತೆ ಸಂಬಂಧವಿಟ್ಟುಕೊಂಡೇ ಬಂದಿದ್ದರೂ, 'ನವ್ಯ ಕವಿತೆ'ಯೊಂದೇ ಮೊದಲಬಾರಿಗೆ ನಿಯತಲಯವನ್ನು ಬಿಟ್ಟು ಆಡುಮಾತಿನ ಲಯವನ್ನು ಬಳಸಿ ಗೇಯತೆಗೆ ವಿರೋಧಿಯಾಗಿ ನಿಂತಿತು. ಉತ್ತಮ ಕವಿತೆಗಳು ಸೃಷ್ಟಿಯಾದರೂ, ಹಾಡುಗಳು ಇಲ್ಲವಾದವು. ನವೋದಯ ಕಾವ್ಯದಲ್ಲಿದ್ದ ಪ್ರಬೇಧಗಳು ಬಹುಮುಖಿಯಾಗಿದ್ದವು. ಸಮಾಜದ ನಾನಾ ಅಭಿರುಚಿಯ ಜನರಿಗೆ ಮುದ ನೀಡುತ್ತಾ, ಕಾವ್ಯದ ಒಂದು ಮುಖದಿಂದ ಅಲ್ಲದಿದ್ದರೆ, ಮತ್ತೊಂದು, ಮಗದೊಂದು ಮುಖದಿಂದ ಜನರನ್ನು ಅವು ತಣಿಸುತ್ತಿದ್ದವು. ಹೊಸಗನ್ನಡದ ಮೊದಲ ಮಜಲೇ ನವೋದಯ ಕಾವ್ಯದಲ್ಲಿತ್ತು. ಭಾವಗೀತೆಯೇ ನವೋದಯ ಕಾವ್ಯದ ಆತ್ಮವಾಗಿತ್ತು. ಅದಕ್ಕೆ ಕಥನಕವನ, ಗೀತರೂಪಕ, ಮಕ್ಕಳ ಕವನ, ಸಾನೆಟ್, ಪ್ರಗಾಥ ಹೀಗೆ ಹಲವು ಟಿಸಿಲು, ಉಪಟಿಸಿಲುಗಳಿದ್ದವು. ಹಲವು ಶಾಖೆಗಳಿದ್ದವು. ಓದುವ ಕವಿತೆ, ಹಾಡುವ ಕವಿತೆ, ಕಥನಗೀತೆ, ಎಲ್ಲವೂ ಸಮೃದ್ಧಿಯಾಗಿದ್ದವು. ಆದರೆ ನವ್ಯ ಬಂದ ಮೇಲೆ ಇದು ಪೂರ್ಣವಾಗಿ ಬದಲಾಯಿತು. ನವ್ಯಕವಿತೆ ನವೋದಯ ಕವಿತೆಗಿಂತ, ಅರ್ಥದಲ್ಲಿ, ಧ್ವನಿಯಲ್ಲಿ ದಟ್ಟವಾಗಿ, ಭಾಷೆಯಲ್ಲಿ ಬಿಗಿ ಸಾಧಿಸಿತಾದರೂ, ಗಾಯನ, ನಾಟಕಗಳ ಹಂಗಿಲ್ಲದೆ, ಪ್ರತ್ಯೇಕಗೊಂಡಿತು. ತಾನೇ ಪ್ರತ್ಯೇಕವಾಗಿ ಬೇರೆ ಯಾವ ಕಲೆಗಳೊಡನೆ ಹೊಂದಾವಣಿಕೆ ಮಾಡಿಕೊಳ್ಳದೆ ಏಕಾಂಗಿಯಾಯಿತು. ಇದರಿಂದ ಅದು ತನ್ನ ವೈವಿಧ್ಯತೆಯನ್ನು, ಬಹುರುಚಿ ಪೂರೈಕೆಗಳನ್ನು ಕಳೆದುಕೊಂಡಿತು. ಭಾಷೆಯ ಅತಿ ಬಿಗಿ, ವಿಶೇಷ ಪ್ರತೀಕಾತ್ಮಕತೆಗಳಿಂದ ಅದರ ಕ್ಷೇತ್ರ ವಿಪರೀತವಾಗಿ ಕುಗ್ಗಿಹೋಯಿತು. ಪರಿಧಿ ಸೀಮಿತವಾಯಿತು. ಆರಾಧಿಸುವ ಸಹೃದಯರ ಕ್ಷೇತ್ರವೂ ತೀರ ಚಿಕ್ಕದಾಗಿ ಹೋಯಿತು. ಸಮಾಜದ ಎಲ್ಲ ಅಭಿರುಚಿಗಳಿಗೆ ಪೂರೈಕೆಯಾಗುತ್ತಿದ್ದ ಕಾವ್ಯ ಕೇವಲ ಹಿಡಿಯಷ್ಟು ಜನರಿಗೆ, ಕಾವ್ಯವನ್ನೇ ವಿಶೇಷ ಅಧ್ಯಯನ ಮಾಡಿದ್ದವರಿಗೆ ಮಾತ್ರ ಮಿತವಾಯಿತು. ವಿದ್ಯಾವಂತರಾದ ಸಾಮಾನ್ಯ ಸಹೃದಯರು ಅದರಿಂದ ದೂರವಾಗಿಬಿಟ್ಟರು. ನವ್ಯದ ಅರಂಭದಲ್ಲಿ ಅದರ ಕೊರತೆ, ಮಿತಿಗಳು, ಯಾರಿಗೂ ಗೊತ್ತಾಗಲಿಲ್ಲ. ಆದರೆ ಇಪ್ಪತ್ತು ಇಪ್ಪತ್ತೈದು ವರುಷಗಳ ಹೊತ್ತಿಗೆ ನವ್ಯ ಕವಿತೆ ನಿಷ್ಠುರ ಕವಿತೆಯಾಗುತ್ತಾ ನಡೆಯಿತು. ಕವಿಗಳು ಬರೆದಿದ್ದು ಕವಿಗಳಿಗೇ ಗೊತ್ತಾಗದ ಸ್ಥಿತಿ ಬಂತು. ಅಡಿಗರ ಕಾವ್ಯ, ರಾಮಚಂದ್ರ ಶರ್ಮರ ಕಾವ್ಯ, ರಾಮಾನುಜರ ಕಾವ್ಯಗಳು ಈ ಸ್ಥಿತಿಗೆ ಹೊರತಾಗಲಿಲ್ಲ.

ನವೋದಯದ ಕವಿಗಳಾದ ಕೆ.ಎಸ್. ನರಸಿಂಹಸ್ವಾಮಿ, ಜಿ.ಎಸ್. ಶಿವರುದ್ರಪ್ಪ, ಚೆನ್ನವೀರಕಣವಿ, ಮುಂತಾದವರು ಕನ್ನಡ ಭಾವಗೀತೆಯ ಉತ್ಸಾಹದ ಮತ್ತು ಸಮೃದ್ಧಿಯ ಯುಗದಲ್ಲೇ ತಮ್ಮ ಕಾವ್ಯಕೃಷಿಯನ್ನು ಪ್ರಾರಂಭಿಸಿದ್ದರು. ನವ್ಯಯುಗ ಬಂದಾಗ ಕಾವ್ಯವು ಗದ್ಯಲಯದ ಕಡೆ, ಸಂಕೀರ್ಣತೆಯ ಕಡೆ ಬಂದಾಗಲೂ ತಾವು ಭಾವನಿಷ್ಠವೂ ಲಯಬದ್ಧವೂ ಆದ ಭಾವಗೀತೆಗಳನ್ನು ತಮ್ಮ ಸಂಕೀರ್ಣ ಕಾವ್ಯದ ಜೊತೆಜೊತೆಯಲ್ಲೇ ಬರೆದುಕೊಂಡು ಬಂದರು. ಅವರ ಮನಸ್ಸಿನ ಭಾವದೀಪ್ತ ಲಲಿತ ಕ್ಷಣಗಳನ್ನು ದಾಖಲಿಸಿಕೊಟ್ಟ ಅವರು ನವ್ಯದ ಸಂಪರ್ಕದಿಂದ, ಅವುಗಳ ಭಾಷೆ, ಭಾವ, ವಸ್ತು ಪ್ರಪಂಚಗಳಲ್ಲಿ ಸಾಕಷ್ಟು ಭಿನ್ನತೆಯನ್ನು ಸಾಧಿಸಿದರು. ನವ್ಯದ ಹೊಸ ವಿಚಾರಗಳೂ ಅವರ ಕಾವ್ಯಕ್ಕೆ ನುಗ್ಗಿದವು.

ನವ್ಯ ಕಾವ್ಯದ ಸಮೃದ್ಧಿಯ ಕಾಲದಲ್ಲೇ ತಮ್ಮ ಕಾವ್ಯ ರಚನೆ ಪ್ರಾರಂಭಿಸಿದಂತಹ ನಿಸ್ಸಾರ್ ಅಹಮದ್, ಲಕ್ಷ್ಮೀನಾರಾಯಣಭಟ್ಟ ಮುಂತಾದವರು ಗೋಪಾಲಕೃಷ್ಣ ಅಡಿಗರಿಂದ ನವ್ಯ ಕವಿತಾ ದೀಕ್ಷೆಯನ್ನು ಪಡೆದರು. ಕವಿ ಗೋಪಾಲಕೃಷ್ಣ ಅಡಿಗರು 'ನವ್ಯ ಕಾವ್ಯದ' ಮಹತ್ವದ ಕವಿಯಾಗಿ ಕಾವ್ಯಕ್ಕೆ ಹೊಸ ವ್ಯಕ್ತಿತ್ವವನ್ನು ನೀಡಿದರು. ಗೇಯತೆಯನ್ನು ನಿರಾಕರಿಸುವ, ಆಂತರಿಕ ಲಯಯುಕ್ತ ಗದ್ಯಗ್ರಂಥಿಯಾದ

ಮುಕ್ತ ಛಂದದ 'ಚಂಡೆಮದ್ದಳೆ' ಗೆಜ್ಜೆಕಟ್ಟಿ ಜೀವಂತಿಕೆಯಿಂದ ಕುಣಿಯತೊಡಗಿತು. ನವೋದಯದ ವಿರುದ್ಧ ಕಿಡಿಕಾರಿದ ಅಡಿಗರ ಆರಂಭದ ಗೀತೆಗಳನ್ನು ಬಿಟ್ಟರೆ ಅಡಿಗರಾಗಲಿ ಅಥವಾ ರಾಮಚಂದ್ರ ಶರ್ಮರಾಗಲಿ ಮುಂತಾದವರು ಹಾಡಲಿಕ್ಕಾಗಿ ಗೀತೆಗಳನ್ನು ಬರೆಯಲಿಲ್ಲ. ಅವರಿಗೆ ಅದು ಮುಖ್ಯವೆನಿಸಲಿಲ್ಲ. ಆ ನಂತರ ಬಂದ ಪ್ರಗತಿಶೀಲ ರೀತಿಯ ಬಂಡಾಯ ಪ್ರಾರಂಭವಾಯಿತಾದರೂ, ಸಿದ್ಧಲಿಂಗಯ್ಯನಂತಹವರ ಗೀತೆಗಳನ್ನು ಬಿಟ್ಟರೆ ಬೇರೆ ಯಾವುವೂ ಯಶಸ್ವಿಯಾಗಲಿಲ್ಲ. ಆದರೆ ಲಕ್ಷ್ಮಿನಾರಾಯಣಭಟ್ಟ, ನಿಸ್ಸಾರ್‌ಅಹಮದ್, ಈ ಇಬ್ಬರು ಕವಿಗಳು ಈ ಎಲ್ಲ ವಿರೋಧ, ಹಿನ್ನೆಳೆತಗಳ ನಡುವೆಯೂ ಮತ್ತೆ ಭಾವಗೀತೆಗಳ ರಚನೆಗೆ ತೊಡಗಿದ್ದು ಸುಗಮಸಂಗೀತಕ್ಕೆ ಅದೃಷ್ಟ ತಂದಿತು. ಪ್ರವಾಹದ ವಿರುದ್ಧ ಈಜಿದ ಕವಿಗಳಾದ ಇವರುಗಳು ಹೆಸರು ಸುಗಮಸಂಗೀತ ಹಾದಿಯಲ್ಲಿ ಸುವರ್ಣಾಕ್ಷರವನ್ನು ಬರೆಯಿತು. ನಿಸ್ಸಾರ್‌ರವರು ಬರೆದ 'ನಿತ್ಯೋತ್ಸವ' ಗೀತೆಗಳು ಏಕತಾನತೆಯಿಂದ ತಲ್ಲಣಿಸುತ್ತಿದ್ದ ನವ್ಯ ಕಾವ್ಯಮಾರ್ಗಕ್ಕೆ ಹೊಸದಿಗಂತವನ್ನು ತೋರಿಸಿ, ಗೇಯತೆಯ ಸ್ಪರ್ಶವನ್ನು ಮಾಡಿಸಿತು. ಕಾವ್ಯದ ಒಲವಿನೊಂದಿಗೆ ಸಂಗೀತದ ಬಗೆಗೆ ಒಲವಿದ್ದ ಕವಿಗಳೂ ಆದ ನಿಸ್ಸಾರರ 'ನಿತ್ಯೋತ್ಸವ' ಗೀತೆಗಳು ಅನಕ್ಷರಸ್ಥರನ್ನೂ ತಲಪಿ ಜನಪ್ರಿಯವಾದವು. ಎಂ.ಎಸ್.ಐ.ಎಲ್. ಗೀತೆಗಳಾಗಿ ಆಕಾಶವಾಣಿಯಲ್ಲಿ ಪ್ರಸಾರವಾಗಿ ನಾಡಿನ ಮೂಲೆಮೂಲೆಯಲ್ಲಿ ಹಳ್ಳಿ ಹಳ್ಳಿಗಳಲ್ಲಿ ಗುಣುಗುಣಿಸತೊಡಗಿದವು. 'ನಿತ್ಯೋತ್ಸವ' ಸುಗಮಸಂಗೀತದ ಇತಿಹಾಸದಲ್ಲಿ ಮೈಸೂರು ಅನಂತಸ್ವಾಮಿಯವರ ಸಂಗೀತ ನಿರ್ದೇಶನದಲ್ಲಿ ಪ್ರಪ್ರಥಮ ಧ್ವನಿಸುರುಳಿಯಾಗಿ ಶಾಶ್ವತವಾಯಿತು. ತನ್ನ ಹೆಸರಿಗೆ ಅನ್ವರ್ಥನಾಮವಾಗಿ 'ಸುಗಮಸಂಗೀತ'ದ ಹಾದಿಯಲ್ಲಿ ನಿತ್ಯೋತ್ಸವದೇ ಮೆರವಣಿಗೆಯಾಯಿತು.

ನವ್ಯ ಮಾರ್ಗದಲ್ಲಿಯೇ ಕಾವ್ಯವನ್ನು ಆರಂಭಿಸಿದ ಲಕ್ಷ್ಮೀನಾರಾಯಣಭಟ್ಟರಿಗೆ ಕ್ರಮೇಣ 'ಒಂದು ಸಂಸ್ಕೃತಿಗೆ ಬುದ್ಧಿ ಪ್ರಧಾನವಾದ ಪ್ರೌಢ ಕಾವ್ಯದ ಅಗತ್ಯ ಇರುವಂತೆಯೆ ಸರಳವೂ, ಸುಂದರವೂ, ಗಾಯನದ ಜೊತೆ ಬೆರೆಯಬಲ್ಲದ್ದೂ ಆದ ಗೀತಕಾವ್ಯದ ಅಗತ್ಯ ಇದೆ' ಎನ್ನಿಸಿತು. ಸಾಕಷ್ಟು ನವ್ಯಕಾವ್ಯವನ್ನು ಬರೆದು ಹೆಸರು ಮಾಡಿದ ಲಕ್ಷ್ಮೀನಾರಾಯಣಭಟ್ಟರು ಅದರ ಜೊತೆಯಲ್ಲಿಯೇ ಭಾವಗೀತೆಗಳನ್ನು ಬರೆಯಲು ಆರಂಭಿಸಿದರು. ನವ್ಯದ ಉಚ್ಛ್ರಾಯ ಕಾಲದಲ್ಲಿ ಭಾವಗೀತೆಗಳನ್ನು ಬರೆಯುತ್ತಾ ಅದೂ ಹಾಡಬಹುದಾದ ಶುದ್ಧಾಂಗ ಭಾವಗೀತೆಗಳನ್ನು ಅಧಿಕ ಪ್ರಮಾಣದಲ್ಲಿ ಬರೆದರು. ಬೇರೆ ಬೇರೆ ಕವಿಗಳಿಗೆ ಬರೆಯಲು ಪ್ರೋತ್ಸಾಹಿಸಿದರು. ಕವಿತೆಯ ಹಾಡುಗಾರಿಕೆಗೆ ವಿರುದ್ಧವಾಗಿ ಮೂಗೆಳೆಯುತ್ತಾ ಟೀಕೆ ಮಾಡುತ್ತಿದ್ದವರ ಎದುರಿನಲ್ಲಿಯೇ ಶ್ರದ್ಧೆ ಉತ್ಸಾಹಗಳಿಂದ ಭಾವಗೀತೆಗಳ ಒಂದು ಚಳುವಳಿಯನ್ನೇ ನಡೆಸಿದರು. ಭಾವಗೀತೆಗಳ ಮರುಸೃಷ್ಟಿಗೆ ಕಾರಣರಾದದ್ದೇ ಅಲ್ಲದೆ, ಸುಗಮಸಂಗೀತದ ಮುನ್ನಡೆಗಾಗಿ ಎಲ್ಲಾ ರೀತಿಯಲ್ಲಿಯೂ ಪಾತ್ರವಹಿಸಿದರು. ನವೋದಯದ ಒಲವು, ನವ್ಯದ ಸಂಸ್ಕಾರ, ಕವಿಯ ವ್ಯಕ್ತಿ ವಿಶೇಷತೆಯ ಪಾಕದಲ್ಲಿ ಎರಕೆ ಹೊಯ್ದು ಕೊಟ್ಟ ಇವರ ಕವಿತೆಗಳು ಸುಗಮಸಂಗೀತಗಾರರಿಗಂತೂ ಹಬ್ಬವನ್ನೆ ತಂದಿತು. 'ದೀಪಿಕಾ' - 'ಭಾವಸಂಗಮ', 'ನೀಲಾಂಜನ' 'ನಡೆದಿದೆ ಪೂಜಾರತಿ' 'ಬಂದೇ ಬರತಾವಕಾಲ' - ಗೀತ ಸಂಕಲನಗಳು ನೂರಾರು ಗೀತೆಗಳಾಗಿ, ಗಾಯಕರಿಗೆ ಸಂಭ್ರಮವನ್ನು ತಂದುಕೊಟ್ಟವು. ನೆಮ್ಮದಿಯನ್ನುಮಟುಮಾಡಿದವು. ಮೈಸೂರು ಅನಂತಸ್ವಾಮಿಯವರು ಹೇಳಿದಂತೆ "ನವ್ಯ ಕವಿಗಳು ಬಂದ ಮೇಲೆ ಹಾಡಬಹುದಾದ ಹೊಸ ಕವನಗಳೇ ಇಲ್ಲದೆ ಕಾವ್ಯಗಾಯನ ಕ್ಷೇತ್ರದಲ್ಲಿ ಕತ್ತಲು ಆವರಿಸಿ ಮಂಕು ಕವಿದಿದ್ದ ಕಾಲದಲ್ಲಿ ನಮಗೆ ಭರವಸೆಯ ಬೆಳಕಾಗಿ ಬಂದವರು ಕವಿ ಲಕ್ಷ್ಮೀನಾರಾಯಣಭಟ್ಟರು. ಭಟ್ಟರ ಗೀತೆಗಳು ಪ್ರಕೃತಿಯಂತೆ ಸೆಳೆಯುತ್ತಾ, ಹಕ್ಕಿಯಂತೆ ಉಲಿಯುತ್ತಾ, ಗಾಳಿಯಂತೆ ಸುಳಿಯುತ್ತಾ, ಜೀವರಸ ಹರಿಸಿದವು.

ಸಿ. ಅಶ್ವಥ್ ಅವರು ಹೇಳಿದಂತೆ ಭಟ್ಟರು ಗೀತೆಗಳ ರಚನೆಗಿದ್ದ ಎಲ್ಲ ಆತಂಕಗಳನ್ನೂ ಗೆದ್ದು ಭಾವಗೀತೆಗಳ ರಚನೆಗೆ ಮತ್ತೆ ಚಾಲನೆ ಕೊಟ್ಟರು.

ಭಟ್ಟರ ಕವಿತೆಗಳಲ್ಲಿ ಕವಿಯ ವ್ಯಕ್ತಿಗತ ಆಶೆ, ಆಶಯಗಳ ಅಭಿವ್ಯಕ್ತಿಯೊಂದಿಗೆ ಪ್ರೀತಿಯ ಹಂಬಲ, ವಿರಹದ ನೋವು, ಶೃಂಗಾರ ತೃಪ್ತಿ, ಮಿಲನದ ಕಾತರ ಮುಂತಾದ ಭಾವನೆಗಳಿಗೆ ತಕ್ಕದಾದ ಪದಲಾಲಿತ್ಯಲಯದ ನಡಿಗೆಗಳ ಕೌಶಲದ ಚಿತ್ರಣಗಳಿಂದ, ಗೀತೆಗಳು ವೈವಿಧ್ಯಮಯವಾಯಿತು.

ಸುಗಮಸಂಗೀತದ ಪ್ರಪ್ರಥಮ ಧ್ವನಿಸುರುಳಿ ನಿಸ್ಸಾರರ 'ನಿತ್ಯೋತ್ಸವ' ಜನಪ್ರಿಯವಾದಂತೆ, ಲಕ್ಷ್ಮೀನಾರಾಯಣಭಟ್ಟರು ಸಂಗ್ರಹಿಸಿ ಸಂಪಾದಿಸಿದ 'ಕಲ್ಲುಸಕ್ಕರೆ ಕೊಳ್ಳಿರೋ' ಎಂಬ ಕೀರ್ತನ ಸಂಗ್ರಹದಿಂದ ಆರಿಸಿ 'ಶಿಶುನಾಳ ಷರೀಫರ' ಧ್ವನಿಸುರುಳಿ ಅತ್ಯಂತ ಜನಪ್ರಿಯವಾಯಿತು. ಸಂಗೀತಾ ಧ್ವನಿಸುರುಳಿ ಸಂಸ್ಥೆ ತಯಾರಿಸಿದ ಈ ಧ್ವನಿಸುರುಳಿ ಕರ್ನಾಟಕದಾದ್ಯಂತ ತನ್ನ ಕೀರ್ತಿ ಪತಾಕೆಯನ್ನು ಹಾರಿಸಿತು. ಸಿ. ಅಶ್ವಥ್ ಸಂಗೀತ ನೀಡಿದ, ಈ ಧ್ವನಿಸುರಳಿಯಲ್ಲಿ ಶಿವಮೊಗ್ಗ ಸುಬ್ಬಣ್ಣ, ಸುಲೋಚನ ಮತ್ತು ಅಶ್ವಥ್ ಅವರು ಹಾಡಿದ್ದರು. ಶಿಶುನಾಳ ಷರೀಫರ ಕಾವ್ಯವನ್ನು ಇಡೀ ಕರ್ನಾಟಕದ ತುಂಬ ಪ್ರಚಾರ ಮಾಡಿದ ಹಿರಿಮೆ ಲಕ್ಷ್ಮಿನಾರಾಯಣ ಭಟ್ಟರಿಗೆ ಸಂದಿತು. ಧಾರವಾಡದ ಸುತ್ತಮುತ್ತಲಿನವರಿಗೆ ಮಾತ್ರ ತಿಳಿದಿದ್ದ ಅವರ ಕಾವ್ಯ ಕರ್ನಾಟಕದ ಉದ್ದಗಲಕ್ಕೂ ಅತ್ಯಂತ ಆಕರ್ಷಕವಾಗಿ ತಲಪಿತು. ಅದಾಗಲೇ 'ತರವಲ್ಲತಗಿ ನಿನ್ನ' ಮತ್ತು 'ಅಳಬೇಡತಂಗಿ' ಎಂಬ ಗೀತೆಗಳು-ಎಂ.ಎಸ್.ಐ.ಎಲ್.ನ ಮೂಲಕ ಆಕಾಶವಾಣಿಯಲ್ಲಿ ಬಿತ್ತರಗೊಂಡು ಪ್ರಸಿದ್ಧವಾಗಿತ್ತು. ಮೊದಲ ಧ್ವನಿಸುರುಳಿಯ ಜನಪ್ರಿಯತೆಯ ಹುಚ್ಚು ಹೊಳೆಯಲ್ಲಿ ಇನ್ನೂ ಐದು ಧ್ವನಿ ಸುರುಳಿಗಳು ಹೊರಬಂದವು. ಷರೀಫರ ಬಗೆಗೆ ದೀರ್ಘವಾದ ಅಧ್ಯಯನ ನಡೆಯಿಸಿ ಅವರ ಕವಿತೆಗಳಿಗೆ ಟಿಪ್ಪಣಿ ಬರೆದು ಪರಿಷ್ಕರಿಸಿ, ಮುನ್ನುಡಿ ಬರೆದು ಪ್ರಕಟಿಸಿದ ಭಟ್ಟರು ಷರೀಫ್ ಭಟ್ಟರೆಂದೇ ಪ್ರಸಿದ್ಧಿಯಾದರು. ಭಾವಗೀತೆಗಳನ್ನುಬರೆದು ಸುಗಮಸಂಗೀತಕ್ಕೆ ಮತ್ತಷ್ಟು ಗೀತೆಗಳನ್ನು ಕೊಟ್ಟವರು ಸುಮತೀಂದ್ರ ನಾಡಿಗ್-ಚಂದ್ರಶೇಖರ ಪಾಟೀಲ ಸಿದ್ಧಲಿಂಗ ಪಟ್ಟಣಶೆಟ್ಟಿ, ಚಂದ್ರಶೇಖರ ಕಂಬಾರ, ಸುಬ್ರಾಯಚೊಕ್ಕಾಡಿ ಮುಂತಾದವರು, ಕನ್ನಡ ಕಾವ್ಯ ಸಂಪ್ರದಾಯದಲ್ಲಿ ಬಂದ ಕವಿಗಳು ಸಂಗೀತದ ಬಗೆಯೂ ಒಲವು ಮೂಡಿಸಿಕೊಂಡಿದ್ದರಿಂದ ಅವರ ಗೀತೆಗಳು ಮೂಲಕ ಅವರ ಮುಕ್ತ ಮನಸ್ಸಿನಲ್ಲಿಯೂ ಭಾವಗೀತೆಗಳ ಗೀತಗುಣಗಳೂ ಕಂಡುಬಂದವು. ಕಂಬಾರರು ಜಾನಪದ ಮೂಲದ ಹೊಸಭಾವ ಗೀತೆಗಳ ಕವಿಯಾದರೆ, ನಿಸಾರ್ ಮತ್ತು ಲಕ್ಷ್ಮೀನಾರಾಯಣಭಟ್ಟರು, ನಾಡಿಗ್ ಮುಂತಾದವರು ಶಿಷ್ಟ ಭಾವಗೀತೆಗಳನ್ನು ಬರೆದರು. ಸುಮತೀಂದ್ರನಾಡಿಗರು ತಮ್ಮ ಹೊಸಭಾವಗೀತೆಗಳಲ್ಲಿ ಹಾಸ್ಯ-ವ್ಯಂಗ್ಯ, ಪ್ರಾಸಗಳ ಲಾಸ್ಯದಿಂದ ವಿಶಿಷ್ಟವಾದರು. ಚಿಂತಾಮಣಿ ಕೂಡ್ಲೆಕೆರೆ, ದುಂಡಿರಾಜ್, ಮಹಾಬಲಮೂರ್ತಿ ಕೊಡ್ಲೆಕೆರೆ, ಎಲ್.ಎನ್. ಪುಷ್ಪಾ, ಕಮಲಾ ಹೆಮ್ಮಿಗೆ, ಎಂ.ಆರ್. ಕಮಲ, ಸವಿತಾ ನಾಗಭೂಷಣ ಮೊದಲಾದವರೂ ಭಾವಗೀತೆಗಳನ್ನು ಗೀತೆಗಳಿಗಾಗಿಯೇ ಬರೆದರು. ಕವಿಗಳಾದ ಎಚ್.ಎಸ್. ವೆಂಕಟೇಶ್ ಮೂರ್ತಿ, ಎಂ.ಎನ್. ವ್ಯಾಸರಾವ್-ಸಿದ್ದಲಿಂಗಯ್ಯ ಸ.ಶಿ. ಮರುಳಯ್ಯ, ದೊಡ್ಡರಂಗೇಗೌಡ, ಬಿ.ಆರ್. ಲಕ್ಷ್ಮಣರಾವ್ ಮುಂತಾದವರು ಸುಗಮಸಂಗೀತಕ್ಕೆ ತಮ್ಮ ನೂರಾರು ಗೀತೆಗಳ ಮೂಲಕ ಸಮೃದ್ಧಿಯನ್ನು ತಂದರು. ನವ್ಯಕಾವ್ಯದ ಜಾಡನ್ನು ಬಿಟ್ಟು ಸಮರ್ಥ ಪದಗಳ ಶೋಧನೆಯ ಹಾದಿ ಹಿಡಿದ ನಂತರ ತಾವು ಅದ್ಭುತ ಯಶಸ್ಸನ್ನು ಕಂಡುದಾಗಿ ಹೇಳಿದ ದೊಡ್ಡರಂಗೇಗೌಡರು ಅನೇಕ ಭಾವಗೀತೆಗಳನ್ನು ಬರೆದರು.

ಬಿ.ಎಂ.ಶ್ರೀ ಅವರಿಂದ ಆರಂಭಗೊಂಡ ಭಾವಗೀತಾ ಪ್ರಕಾರ ಪಂಜೆ ಮಂಗೇಶರಾವ್, ಎಂ. ಗೋವಿಂದಪೈ, ಟಿ.ಪಿ. ಕೈಲಾಸಂ, ಡಿ.ವಿ. ಗುಂಡಪ್ಪ, ಮಾಸ್ತಿ ವೆಂಕಟೇಶಯ್ಯಂಗಾರ್, ದ.ರಾ.ಬೇಂದ್ರೆ, ವೀ. ಸೀತಾರಾಮಯ್ಯ ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ, ಕುವೆಂಪು, ಪು.ತಿ.ನರಸಿಂಹಚಾರ್, ಜಿ.ಪಿ. ರಾಜರತ್ನಂ, ಎಸ್.ವಿ. ಪರಮೇಶ್ವರಭಟ್ಟ, ಕೆ.ಎಸ್. ನರಸಿಂಹ ಸ್ವಾಮಿ, ಎಂ. ಗೋಪಾಲಕೃಷ್ಣ ಅಡಿಗ, ಸಿದ್ಧಯ್ಯ ಪುರಾಣಿಕ, ಜಿ.ಎಸ್. ಶಿವರುದ್ರಪ್ಪ ಚೆನ್ನವೀರ ಕಣವಿ, ಸುಮತೀಂದ್ರ ನಾಡಿಗ್, ಕೆ.ಎಸ್. ನಿಸಾರ್ ಅಹಮದ್, ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ, ಚಂದ್ರಶೇಖರ ಕಂಬಾರ, ಎಚ್.ಎಸ್. ವೆಂಕಟೇಶಮೂರ್ತಿ, ಎಂ.ಎನ್. ವ್ಯಾಸರಾವ್, ದೊಡ್ಡರಂಗೇಗೌಡ, ಸುಬ್ರಾಯಚೊಕ್ಕಾಡಿ, ಬಿ.ಆರ್. ಲಕ್ಷ್ಮಣರಾವ್ ಮುಂತಾದ ಕವಿಗಳಿಂದ ಹಂತ ಹಂತವಾಗಿ ಅರಳುತ್ತಾ ಸುಗಮಸಂಗೀತಕ್ಕೆ ಹೊಸ ಆಯಾಮಗಳನ್ನು ಕಟ್ಟಿಕೊಟ್ಟವು. ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯೋತ್ತರದ ಗೀತೆಗಳು ಕೇವಲ ದೇಶಭಕ್ತಿಯನ್ನೇ, ಕನ್ನಡ ಪ್ರೇಮವನ್ನೇ ತೋರಿಸಿದವಾದರೂ, ನಂತರ ಕ್ರಮೇಣ ವಸ್ತು, ಶೈಲಿ, ರೂಪಗಳಲ್ಲಿ, ಆಲೋಚನೆಗಳಲ್ಲಿ ವೈವಿಧ್ಯತೆಯನ್ನು ತೋರುತ್ತಾ ಬಂದವು. ಇವು ಸುಗಮಸಂಗೀತ ವಾಹಿನಿಯಾದ ಕೂಡಲೇ ಸುಲಭವಾಗಿ ಸಾಹಿತ್ಯವನ್ನು ಜನರಿಗೆ ತಲಪಿಸಿತು. ಒಮ್ಮೆಲೆ ಕೇಳುಗರಲ್ಲಿ ಸಾಹಿತ್ಯಾಭಿರುಚಿಯನ್ನು ಬೆಳೆಸುತ್ತಾ ಬಂದಿತು. ಸುಗಮಸಂಗೀತದಲ್ಲಿ ಗೀತೆ, ಕವಿತೆಯನ್ನು ಗಾಯನದ ಮೂಲಕ ವ್ಯಾಖ್ಯಾನಿಸಿತು. ಕವಿತೆಯ ಅಂತರಂಗವನ್ನು ಅನುಸರಿಸಿದ ಸಂಗೀತ ಸಂಯೋಜನೆ ಮತ್ತು ಗಾಯನಗಳು ತಾವು ನಿರೂಪಿತವಾಗುವ ರೀತಿಯಿಂದಲೇ ಕವಿತೆಯನ್ನು ವ್ಯಾಖ್ಯಾನಿಸಿತು. ತಮ್ಮ ಮಾಧ್ಯರ್ಯದಿಂದ ಕೇಳುಗರಿಗೆ ಪ್ರಿಯವಾಗುತ್ತ ಕಾವ್ಯವನ್ನು ಅಸಂಖ್ಯಾತ ಜನರಿಗೆ ತಲಪಿಸಿದವು.

ಮನೆಮನೆಗೆ ಹೂವು ಮಾರುವ ಹೂವಾಡಗಿತ್ತಿಯರ ಹಾಗೇ ಅರಿವು ಆನಂದ ಎರಡನ್ನೂ ಒಮ್ಮೆಲೇ ಹಂಚುವ, ಬೆಳೆಸುವ, ಮಾಧ್ಯಮವಾಯಿತು. ಅರಿವನ್ನು ಮೂಡಿಸಿ, ಜನರನ್ನು ಒಲಿಸಿಕೊಳ್ಳುತ್ತ, ಒಲಿಸಿಕೊಳ್ಳುತ್ತಲೇ, ಅವರ ಬದುಕನ್ನು ತಿದ್ದುವ ಮಧುರ ಕಾಂತಸಮ್ಮಿತವಾಯಿತು.

ಭಾವಗೀತೆಯನ್ನು ಬರೆಯುವವರು ಸಂಪ್ರದಾಯಕ್ಕೆ ಹತ್ತಿರವಾಗುತ್ತಾ ಸಹಜತೆಯಿಂದ ಸಮಾಜ ಮುಖಿಗಳಾಗುತ್ತಾ ಬಂದರು. ಕವಿತೆ ಸುಗಮಸಂಗೀತವಾದಾಗ ಭಾವ ಪ್ರಧಾನವಾದ ಗೀತೆಗಳಾಗಿ ಬದಲಾದವು. ಗೀತೆಯ ಮಾಧುರ್ಯ-ಕವಿತೆಯ ಭಾವಶಬ್ದ ಸೌಂದರ್ಯ ಎರಡೂ ಉದ್ದೀಪನಗೊಂಡವು. ಕೇಳುಗನನ್ನು ಕಾವ್ಯಾರ್ಥಕ್ಕೆ, ಭಾವ ಸ್ಪಂದನಕ್ಕೆ ರಸಸ್ವಾದನೆಗಳ ಹತ್ತಿರಕ್ಕೆ ಗೀತೆ ಕರೆದೊಯ್ಯಿತು. ಸಂಗೀತದ ಸತ್ವವೆಲ್ಲ ಕಾವ್ಯದ ಅರ್ಥ ಶ್ರೀಮಂತಿಕೆಯ ಸಮೃದ್ಧಿಗಾಗಿಯೇ ಸಂದಿತು. ಜನಾಂತರಂಗಗಳನ್ನು ತಟ್ಟಿ ಅದಮ್ಯವಾದ ಹೊಸ ಅಲೆಯನ್ನೇ ಉಕ್ಕಿಸಿತು. ಕಿವಿಯ ಮೂಲಕ ತಲಪಿ ನೇರವಾಗಿ ಹೃದಯವನ್ನೇ ಪ್ರವೇಶಿಸಿತು. ಕವಿತೆ ಸಾರ್ಥಕವೂ, ಜನಪ್ರಿಯವೂ, ಜನರಪರವೂ ಆಯಿತು. ಜನಹಿತವೂ ಆಯಿತು.

ನವ್ಯಕಾವ್ಯವನ್ನು ಆರಂಭಿಸಿ ಬೆಳೆಸಿದ ಅಡಿಗರೇ 'ಆಕಾಶವಾಣಿ'ಯ 'ನವಸುಮ'ಕ್ಕಾಗಿ 'ಭೂಮಿಗೀತ'ವನ್ನು ಬರೆದುಕೊಟ್ಟರು. ನವ್ಯಕವಿತೆ ತಿರಸ್ಕರಿಸಿದ ಗೇಯತೆಯೇ ಮತ್ತೆ ಕವಿತೆಯಲ್ಲಿ ಆವಿರ್ಭಾವವಾಯಿತು. ಕಾರಣ ಬಹುಜನರಿಗೆ ಅದು ತಲಪಬೇಕೆನ್ನುವ ಒಂದೇ ಆಸೆಯಿಂದ. ಹೃದಯಕ್ಕೆ ಹಾಯೆನಿಸುವ ಕವಿತೆ ಯಾವ ಕಾಲದಲ್ಲೂ ಇತ್ತು. ಕಾವ್ಯ ಸಂಗೀತಗಳ ಸಂಲಗ್ನದಿಂದ ಜನಕ್ಕೆ ಹೆಚ್ಚು ಸಂತೋಷವನ್ನು ಕೊಡಬೇಕೆನ್ನುವುದು ಹೊಸಪೀಳಿಗೆಯ ಕವಿಗಳ ಹಾದಿಯಾಯಿತು. ನವೋದಯ ನವ್ಯವನ್ನು ದಾಟುತ್ತಾ ಹಿಂದಿನ ಭಾವಗೀತೆಗಳಿಗಿಂತ ಹೆಚ್ಚು ಸ್ಪಷ್ಟವಾದ ರಾಗಾಶಯಗಳನ್ನು ಹೊಂದಿದ್ದ ಭಾವನಿಷ್ಠಕಾವ್ಯ ಸೃಷ್ಟಿಯಾಯಿತು. ಸಂಗೀತ ಮತ್ತು ಸಾಹಿತ್ಯಗಳ ವಿಷಯದಲ್ಲಿ ಜನಸಾಮಾನ್ಯರ ತಿಳುವಳಿಕೆ ಹಾಗೂ ಅಭಿರುಚಿಯ ಮಟ್ಟ ಏರಿದ ಬಗೆಯನ್ನು ಇಂತಹ ಭಾವಗೀತೆಗಳು ಮನದಟ್ಟು ಮಾಡಿಸಿದವು. ಕವಿಗಳ ಕಾವ್ಯವನ್ನು ಕೈಯಿಂದಲೂ ಮುಟ್ಟದ ಅನಕ್ಷರಸ್ಥರ ಮನೆ ಗುಡಿಸಿಲಿನಲ್ಲಿಯೂ ಕವಿತೆ ಸುಗಮಸಂಗೀತದ ಗೀತೆಯ ಮೂಲಕ ನೆರೆಯಂತೆ ನುಗ್ಗಿ ಆತ್ಮೀಯತೆ, ಪ್ರೀತಿಯಿಂದ ಉಳಿದು ಒಗ್ಗಿಕೊಂಡಿತು. ಕವಿ ಲಕ್ಷ್ಮೀನಾರಾಯಣಭಟ್ಟರು, ಹೆಚ್.ಎಸ್. ವೆಂಕಟೇಶಮೂರ್ತಿ, ನಿಸಾರ್ ಅಹಮದ್, ಬಿ.ಆರ್. ಲಕ್ಷ್ಮಣ್‌ರಾವ್ ಮುಂತಾದವರು ನವ್ಯ ಮಾರ್ಗದಲ್ಲಿ ಕಾವ್ಯ ಬರೆದರೂ ನವ್ಯದ ಮೂಲಕ ಹೊಸ ಮಾರ್ಗದ ಸಂಸ್ಕಾರದಿಂದ ಕೂಡಿದ ಗೇಯವೂ ಭಾವನಿಷ್ಠವೂ ಆದ ಕವಿತೆಗಳನ್ನು ಬರೆದರು. ಕೇಳುಗರ ಪ್ರಬುದ್ಧತೆಯನ್ನು ತಲಪಬಲ್ಲ ಅವರಲ್ಲಿ ಸಂವಾದಿಯಾದ ಭಾವಾವರಣವನ್ನು ಮಿಡಿಯಬಲ್ಲ ನೂರಾರು ಗೀತೆಗಳು ಜನ ಸಮುದಾಯವನ್ನು ಸೇರುವ ಮಹಾಪ್ರವಾಹವಾಗಿ ಹರಿದವು.

ನವೋದಯ ಕಾಲದ ಕವಿತೆಗಳ ವಸ್ತು ಮುಖ್ಯವಾಗಿ, ಪ್ರಣಯ ಪ್ರಕೃತಿ ಪ್ರೇಮ, ದಾಂಪತ್ಯದ ಒಲವು, ದೇಶಾಭಿಮಾನ ಮೊದಲಾದವುಗಳಾಗಿದ್ದವು. ಸಾಮಾಜಿಕ ಪ್ರಜ್ಞೆ, ಸಾಮಾಜಿಕ ಕಾಳಜಿ, ಸಾಮಾಜಿಕ ನ್ಯಾಯ ಮೊದಲಾದ ವಸ್ತುಗಳು ನಂತರದ ಆಧುನಿಕ ಕವಿತೆಗಳಲ್ಲಿ ಕಂಡುಬಂದವು. ಕೌಟುಂಬಿಕ ಹಾಗೂ ಸಾಮಾಜಿಕ ಬದುಕಿನ ಸುಖ ಶಾಂತಿ-ನೆಮ್ಮದಿಗಳಿಗೆ, ವ್ಯಕ್ತಿಯ ಮನೋಧರ್ಮ ಮತ್ತು ಜೀವನದೃಷ್ಟಿಗಳೇ ಕಾರಣವಾದವು. ಇತರರ ಭಾವನೆ-ವಿಚಾರಗಳ ಬಗೆಗೆ ಸಂವೇದನೆ, ಸ್ಪಂದನ, ನಿಸ್ವಾರ್ಥನಡೆ, ಸತ್ಯನಿಷ್ಠೆ, ನ್ಯಾಯಪರತೆ, ಪ್ರಾಮಾಣಿಕತೆ, ಜೀವನದ ಬಗೆಗೆ ಪ್ರೀತಿ, ಸರ್ವಭೂತಾನುಕಂಪ, ಸ್ನೇಹ-ಸೌಂದರ್ಯಯುಕ್ತವಾದ ಮಾನವೀಯ ಸಂಬಂಧ, ಸೌಜನ್ಯಯುಕ್ತ ನಡೆ, ನುಡಿ-ಮುಂತಾದ ಶ್ರೇಷ್ಠ ಮೌಲ್ಯಗಳನ್ನೊಳಗೊಂಡ ಕವಿತೆಗಳು, ಧೈರ್ಯ-ಸಹನೆ, ಪ್ರಸನ್ನತೆಗಳನ್ನು ಕಳೆದುಕೊಳ್ಳದ ಮನೋಸ್ಥೈರ್ಯವನ್ನು ಬೆಳೆಸಿಕೊಳ್ಳುವ ವ್ಯಕ್ತಿತ್ವ ವಿಕಾಸದ ಕವಿತೆಗಳು ಹುಟ್ಟಿಕೊಂಡವು.

ಸಂಗೀತ-ಸಾಹಿತ್ಯ ಎರಡೂ ತಮ್ಮ ತಮ್ಮ ಅತ್ಯುನ್ನತ ನೆಲೆಯಲ್ಲಿ ಸ್ವತಂತ್ರವಾಗಿ ನಿಲ್ಲುವಂತಹವು. ಸ್ವತಂತ್ರವಾಗಿ ಸಂಸ್ಕಾರವನ್ನು ನೀಡುವಂತಹವು. ಸಂಗಿತದ ಮಾಧುರ್ಯ ಸಾಹಿತ್ಯದ ಅರ್ಥಪೂರ್ಣತೆ ಎರಡೂ ಸೇರಿದಾಗ ಅವುಗಳ ಸತ್ವಗುಣ ದ್ವಿಗುಣವಾಯಿತು.

ಹೊಸ ಅಭಿರುಚಿಯ, ಸಂಸ್ಕೃತಿಯು ಸೃಷ್ಟಿಯಾಯಿತು. ಆಪಾತ ಮಧುರವಾದ ಸಂಗೀತ, ಆಲೋಚನಾಮೃತವಾದ ಸಾಹಿತ್ಯದೊಂದಿಗೆ ಸೇರಿ ಅಪೂರ್ವ ಗೀತಗಾಯನ ರೂಪುಗೊಂಡಿತು. ಅದೇ 'ಸುಗಮ ಸಂಗೀತ' ವಾಯಿತು.

**ಸುಗಮಸಂಗೀತದ ಇತಿಹಾಸ**

ಇಂದು ಸುಗಮಸಂಗೀತವೆಂದು ಜನಪ್ರಿಯವಾಗಿರುವ ಗಾಯನ ಪದ್ಧತಿಗೆ ಎಂಟು ದಶಕಗಳ ಇತಿಹಾಸವಿದೆ. ಭಾವಗೀತೆ ಎಂದು ತನ್ನ ದನಿ ತೆರೆಯಿತೋ, ಭಾವದಹಕ್ಕಿ ಎಂದು ತನ್ನ ಗರಿಗಳನ್ನು ಬಿಚ್ಚಿಕೊಂಡು ಹಾರಲು ಸಜ್ಜಾಯಿತೋ, ಅಂದೇ ಸುಗಮಸಂಗೀತ ಹುಟ್ಟಿಕೊಂಡಿತು. ಸುಗಮಸಂಗೀತವೆಂಬ ಹೆಸರು ಪಡೆಯದ ಮುನ್ನ 'ಲಘುಸಂಗೀತ' ಅಥವಾ 'Light music' ಎಂದು ಕರೆಯಲ್ಪಡುತ್ತಿತ್ತು. ಶಾಸ್ತ್ರೀಯ ಸಂಗೀತದಲ್ಲಿರುವ ಶಾಸ್ತ್ರದ ನಿಯಮ, ಶಿಸ್ತು, ಬಿಗಿ, ಚೌಕಟ್ಟನ್ನು ದಾಟಿ, ಹೊರಗೆ ಬಂದದ್ದು, ಎಂಬುದನ್ನು ವ್ಯಕ್ತಪಡಿಸಲು 'ಲಘು' ಎಂಬ ಹೆಸರು ಪಡೆದಿತ್ತು. ಲಘುವಾದದ್ದು ಎಂಬುದಕ್ಕೆ ಹಗುರವಾದದ್ದೂ ಕೂಡ, ಎಂಬ ಅರ್ಥ ಸಂದಿತ್ತು.

'ಲಘು ಸಂಗೀತ' ಎಂಬ ತಲೆಯ ಬರಹದಿಂದ ಇದು ಸಂಗೀತ ಪ್ರಕಾರಕ್ಕೆ ಸೇರಿದ ಗಾಯನಕ್ರಮವಾಗಿತ್ತು. ಸಂಗೀತವೇ ಇದರ ಜೀವನಾಡಿಯಾಗಿತ್ತು. ಅಂದರೆ ಶಾಸ್ತ್ರೀಯ ಸಂಗೀತಕ್ಕಿಂತ ಭಿನ್ನವಾದ ಸ್ವಚ್ಛಂದರಾಗಭಾವಗಳಿಂದ ಕೂಡಿದ ಪ್ರಕಾರವಾಗಿತ್ತು. ಸಂಗೀತದ ಮೂಲಕ ರಂಜಿಸುವುದನ್ನೇ ಗುರಿಯಾಗಿಟ್ಟುಕೊಂಡಿತ್ತು. ಈ ಸಂಗೀತ ಪ್ರಕಾರಕ್ಕೆ ನಿರ್ದಿಷ್ಟವಾದ ವಸ್ತುವೇ ಇರಲಿಲ್ಲ. ಶಾಸ್ತ್ರೀಯ ಸಂಗೀತಕ್ಕಿದ್ದ ರೀತಿಯೇ ಇಲ್ಲಿ ಗಣ್ಯವಾಗಿ ವಸ್ತುಗೌಣವಾಗಿತ್ತು. ನಿರ್ದಿಷ್ಟವಾದ ಭಾಷೆಯೂ ಇರಲಿಲ್ಲ. ದೇವರನಾಮ, ಗಝಲ್, ದೇಶಭಕ್ತಿಗೀತೆ, ಜನಪದಗೀತೆ, ವಚನ, ಕನ್ನಡಗೀತೆ, ಮೀರಾಭಜನೆಗಳು, ಅಭಂಗಗಳು, ಹೀಗೆ ಯಾವುದೇ ಪ್ರಕಾರವೂ ಲಘು ಸಂಗೀತದ ವಸ್ತು ವಿಚಾರಗಳಾಗಿದ್ದವು. ಸಂಗೀತದ ನಿರೂಪಣೆಯಲ್ಲಿ ನಾವೀನ್ಯತೆಯನ್ನು ಶ್ರೋತೃಗಳು ಬಯಸುತ್ತಿದ್ದರು. ಸಾಹಿತ್ಯ ಗೌಣವಾಗಿ ಸಂಗೀತವೇ ಗಣ್ಯವಾಗಿತ್ತು. ಹಾಡುಗಾರಿಕೆಗೆ ಪ್ರಾಧಾನ್ಯತೆಯಿತ್ತು. ಶಾಸ್ತ್ರೀಯ ಸಂಗೀತದ ಹಾಡುಗಾರರಿಗೆ ಲಘು ಸಂಗೀತದ ಬಗೆಗೆ ತಾತ್ಸಾರ ಭಾವನೆಯಿದ್ದರೂ, ತಮ್ಮ ಸಂಗೀತ ಕಛೇರಿ ಕಾರ್ಯಕ್ರಮಗಳಲ್ಲಿ ಶ್ರೋತೃಗಳ ಬೇಡಿಕೆಯ ಮೇರೆಗೆ, ದಾಸರಪದ, ವಚನ, ಭಜನ್‌ಗಳನ್ನು ಹಾಡುತ್ತಿದ್ದರು. 'ಜಾವಳಿ ಅಂತಹ ಲಘು ಶೃಂಗಾರದ ಗೀತೆಗಳನ್ನುಹಾಡುವುದೇ ಒಂದು ಆಕರ್ಷಣೆಯಾಗಿತ್ತು. 'ಲಘು ಸಂಗೀತ' ಎಂದರೆ ಹೊಣೆಗಾರಿಕೆ ಇಲ್ಲದ ಬೇಜವಾಬ್ದಾರಿಯ ಅಥವಾ ಪ್ರಾಮುಖ್ಯವಲ್ಲದ ಸಂಗೀತವೆಂಬ ಅರ್ಥವೂ ಇತ್ತು. ಶಾಸ್ತ್ರೀಯ ಸಂಗೀತದ ಕೊನೆಯಲ್ಲಿ ಹಾಡುವ ಲಘುವಾದ ಗೇಯ ಪ್ರಕಾರಗಳಾಗಿಯೂ ಆಚರಣೆಗೆ ಬಂದಿತ್ತು.

'ಶ್ರೀ' ಅವರ 'ಇಂಗ್ಲಿಷ್ (೧೯೨೧) ಗೀತಗಳು' ಪ್ರಕಟವಾದ ಕೂಡಲೇ ಕನ್ನಡತನದ ತೇಜಸ್ಸು ಸಾವಿರಾರು ಹೃದಯಗಳಲ್ಲಿ ಒಮ್ಮೆಲೆ ಹರಿಯತೊಡಗಿತು. ಕಾವ್ಯ ಸೃಷ್ಟಿಯೊಡನೆ ಕವಿಗಳ ಸೃಷ್ಟಿಯಾಯಿತು. ಮಬ್ಬಿನ ಮುಸುಕು ಸರಿದು ಬೆಳಗುಮೂಡಿತು. ಕಾವ್ಯದ ವಸ್ತು, ರೀತಿ, ಭಾವ, ವರ್ಣನೆ, ಶೈಲಿ, ರೂಪ, ಇವುಗಳ ಸಾಕ್ಷಾತ್ಕಾರವಾಯಿತು. ಇವುಗಳ ಅಭಿವ್ಯಕ್ತಿಗೆ ಸಂಗೀತ ಮಾಧ್ಯಮವಾಗಲು ಪ್ರಾರಂಭಿಸಿತು. ಇಂಗ್ಲಿಷಿನ 'ಲಿರಿಕ್' ಮಾದರಿಯನ್ನು ಅನುಸರಿಸಿ, ಕನ್ನಡದ ಕವಿಗಳು ರಚಿಸತೊಡಗಿದ ಭಾವಗೀತೆಗಳು ಸಾಂಪ್ರದಾಯಿಕ ಗೀತ, ಕೀರ್ತನೆ, ಪದಗಳಗಿಂತ ಭಿನ್ನವೂ, ವಿಶಿಷ್ಟವೂ ಆಗಿದ್ದು, ತಾವು ತಾಳಿದ ಧೋರಣೆಗಳಿಂದ. ಈ ಭಾವಗೀತೆಗಳು ಮತ, ಧರ್ಮ, ಸಾಂಪ್ರದಾಯಿಕ ಭಕ್ತಿಶ್ರದ್ಧೆಗಳಿಂದ ಮುಕ್ತವಾಗಿದ್ದವು. ಇವು ಭಾವಗೀತಾಕಾರನ ವೈಯಕ್ತಿಕ ಭಾವನೆಗಳ ಅನಿಸಿಕೆಗಳ ವಾಹಕಗಳಾಗಿದ್ದವು. ನಿಸರ್ಗದ ಅನೂಹ್ಯ ಶಕ್ತಿ ಸೌಂದರ್ಯ, ವೈಯುಕ್ತಿಕ ಹಂಬಲ, ದುಃಖ, ಆನಂದಗಳ ಅಭಿವ್ಯಕ್ತಿಗಾಗಿ ಬಳಕೆಯಾದ ಕವಿತೆಯೇ ಭಾವಗೀತೆಯಾಯಿತು. ಶ್ರೀ ಅವರಿಂದ ಪ್ರಾರಂಭಿಸಿದ ಈ ಕಾವ್ಯಜ್ಯೋತಿ ಅವರ ಶಿಷ್ಯರಾದ, ಮಾಸ್ತಿ, ಕುವೆಂಪು, ಪು.ತಿ.ನ ಮುಂತಾದ ಎಳೆಯ ಕವಿಗಳಿಂದ ಬೆಳಗುತ್ತ ಬೆಳಗುತ್ತಾ ನಿರಂತರವಾದ ಉಜ್ವಲ ಬೆಳಕಾಯಿತು. ಭಾವಗೀತೆಯ ಹರಿಕಾರರಾದ ಬಿ.ಎಂ.ಶ್ರೀ ಅವರ ಬಗೆಗೆ ಮಾಸ್ತಿಯವರು ತಮ್ಮ 'ಮಲಾರ' (೧೯೩೪)ದಲ್ಲಿ ಹೇಳಿರುವ ಮಾತು ಅರ್ಥಪೂರ್ಣವಾಗಿತ್ತು. 'ಎಳೆಯರೆದೆಯಲಿ ಹಾಡುವಾಸೆಯ ಸುಳಿಸಿದಿರಿ' ಎಂಬಲ್ಲಿ 'ಶ್ರೀ' ಅವರ ಹಿರಿಯತನದ ಸಾರಥ್ಯದಲ್ಲಿ ಅವರ ಶಿಷ್ಯರು ಪ್ರಭಾವಿತರಾದದ್ದು ಪ್ರೇರಣೆಯನ್ನು ಪಡೆದಿದ್ದು, ಎಲ್ಲವೂ

ಎದ್ದು ಕಾಣುವ ಅಂಶವಾಗಿತ್ತು. ಶ್ರೀ ಅವರಿಂದ ಕಾವ್ಯದೀಕ್ಷೆ ಪಡೆದ ಕಿರಿಯ ಕವಿಗಳು ಸಂಪೂರ್ಣವಾಗಿ ಹೊಸಹಾದಿಯಲ್ಲಿ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿದರು.

ಇಂಗ್ಲಿಷ್ ಕವಿತೆಯ ರುಚಿಯನ್ನು ಕನ್ನಡಿಗರಿಗೆ ಒದಗಿಸುವುದರಲ್ಲಿ ಪ್ರಾರಂಭದ ಪ್ರಯತ್ನಮಾಡಿ ಮುಂದುವರೆಸಿದ ಹಿರಿಯರಲ್ಲಿ ದಿವಂಗತ ಹಟ್ಟಿಯಂಗಡಿ ನಾರಾಯಣರಾಯರು ಒಬ್ಬರು. (ಇವರು ಅನುವಾದ ಮಾಡುತ್ತಿದ್ದ ವಿಷಯವನ್ನು ಶ್ರೀ ಗೋವಿಂದ ಪೈ ಅವರು ೧೮೯೯-೧೯೦೦ರಲ್ಲಿ ಎಂ.ಎ. ತರಗತಿಯಲ್ಲಿದ್ದಾಗಲೇ ತಮ್ಮ ಗುರುಗಳಾದ ಪಂಜೆಯವರಿಂದ ತಿಳಿದಿದ್ದರಂತೆ) ಆದರೆ ಹಟ್ಟಿಯಂಗಡಿ ನಾರಾಯಣರಾಯರ ಕವನಗಳು ಬಹಳ ಕಾಲ ಬೆಳಕಿಗೆ ಬರಲಿಲ್ಲ. ಇವರ ನಂತರ ಹೊಸಗನ್ನಡದ ಕವಿತೆಗಳನ್ನು ಬರೆದು ಪ್ರಕಟಿಸಿದವರು ಪಂಜೆ ಮಂಗೇಶರಾಯರು. ಮಕ್ಕಳಿಗಾಗಿಯೇ ಸರಳವಾಗಿಯೂ, ಸುಲಲಿತವಾಗಿಯೂ ಇರುವ ಕೆಲವು ಕವಿತೆಗಳನ್ನು ಬರೆದು ಕೆಲವನ್ನು ಅನುವಾದಿಸಿ 'ಕನ್ನಡದ ಮೊದಲನೆಯ ಪದ್ಯಪುಸ್ತಕ' (೧೯೧೨)ದಲ್ಲಿ ಪ್ರಕಟಿಸಿದರು. ಸ್ವತಂತ್ರ ಕವನಗಳಿಂದ 'ಹಾವಿನ ಹಾಡು' - 'ನಾಗಣ್ಣನ ಕನ್ನಡಕ' - 'ಹೊಗೆಯಗಾಡಿ' ಮುಂತಾದವುಗಳಲ್ಲದೆ, ಕವನವನ್ನು 'ನಕ್ಷತ್ರ' ಎಂಬ ಶೀರ್ಷಿಕೆಯಿಟ್ಟು ಅನುವಾದಿಸಿದರು. ೧೯೧೯ರಲ್ಲಿ 'ಕನ್ನಡ ಎರಡನೆಯ ಪದ್ಯಪುಸ್ತಕವೂ ಪ್ರಕಟವಾಯಿತು. ಇಂಗ್ಲಿಷ್ ಮಾರ್ಗಗಳ ಅನುಸರಣದಿಂದ ಕವಿಗಳು ಪಾರಮಾರ್ಥಿಕ ವಿಷಯಗಳಿಗಿಂತ, ರಾಷ್ಟ್ರೀಕ, ಸಾಮಾಜಿಕ, ಚಾರಿತ್ರಿಕ, ಲೌಕಿಕ ವಿಷಯಗಳನ್ನು ಕವಿತೆಯ ವಸ್ತುವಾಗಿಸಿಕೊಂಡರು. ದೀರ್ಘ ಪುರಾಣಗಳಿಗೆ ಬದಲಾಗಿ ಹ್ರಸ್ವ ಕವಿತೆಗಳು ಹುಟ್ಟಿಕೊಂಡವು. ಛಂದಸ್ಸಿನಲ್ಲಿ ಬಗೆಬಗೆಯ ಹೊಸ ಮಾದರಿಗಳು ಕಣ್ಣು ತೆರೆದವು. ಕವಿತೆಗಳನ್ನು ಗೀತೆಗಳನ್ನಾಗಿ ಹಾಡುವುದು ಪ್ರಾರಂಭವಾಯಿತು. ಪ್ರಾರಂಭದಲ್ಲಿ ಮೊದಲೇ ಸಿದ್ಧವಾಗಿ, ಪ್ರಸಿದ್ಧವಾಗಿದ್ದ ಧಾಟಿಗೆ ಕವಿಗೀತೆಗಳನ್ನು ಹೊಂದಿಸಿಕೊಂಡು ಹಾಡುವ ಪ್ರಕ್ರಿಯೆ ಕಂಡುಬಂದವು. ಜನಪ್ರಿಯವಾಗಿದ್ದ ಧಾಟಿಗೆ ತಮಗೆ ಪ್ರಿಯವಾದ ಸಾಹಿತ್ಯವನ್ನು ಹೊಂದಿಸಿಕೊಂಡು ಗಾಯಕರು ಅಲ್ಲಿ ಇಲ್ಲಿ ಹಾಡಲು ತೊಡಗಿದರು. ಶಾಸ್ತ್ರೀಯ ಬಲ್ಲವರು ಶಾಸ್ತ್ರೀಯ ರಾಗಳ ಬಂಧದಲ್ಲಿಯೇ ಹಾಡಲು ತೊಡಗಿದರು. ಕವಿತೆಯ ಪ್ರಸ್ತುತಿಗಿಂತಾ, ಸಂಗೀತದ ಅಬ್ಬರ ಭರಾಟೆಯೇ ಹೆಚ್ಚಾಗುತ್ತಿದ್ದ ಪ್ರಕರಣಗಳೂ ಇದ್ದವು. ಹಿಂದೂಸ್ತಾನೀ ಸಂಗೀತಗಾರರು ತಾವು ಹಾಡುತ್ತಿದ್ದ ಚೀಜ್‌ನ್ನು ಕವಿತೆಗೆ ಆರೋಪಿಸಿದ್ದರೆ, ಕರ್ನಾಟಕೀ ಸಂಗೀತಗಾರರು ಕೀರ್ತನೆಗಳ ಬಂಧದಲ್ಲಿಯೇ ಕವಿತೆಯನ್ನು ಕಟ್ಟಿ ಹಾಕುತ್ತಿದ್ದರು. ಇತ್ತ ಕಟ್ಟಾ ಶಾಸ್ತ್ರೀಯ ಸಂಗೀತಗಾರರು ಲಘುಸಂಗೀತವನ್ನು ಹಾಡುವುದೇ ಅವಮಾನವೆಂದು ತಿಳಿದು ಅದರತ್ತ ಅಸಡ್ಡೆ ತೋರುತ್ತಾ ಅನಾದರಣೆ ತೋರಿಸುತ್ತಿರುವಾಗಲೇ, ನವಿರಾದ ಹೊಸರಾಗವನ್ನು ಹೊತ್ತ ಕಾವ್ಯಕನ್ನಿಕೆ ಹೆಜ್ಜೆ ಮೇಲೆ ಹೆಜ್ಜೆ ಇಟ್ಟು ಕಠಿಣರಾಗದ ಮೇಲ್ಮುಸುಕವನ್ನು ತೆರೆದು ತನ್ನ ಅಪೂರ್ವ ಸೌಂದರ್ಯವನ್ನು ತೋರಿಸುತ್ತಾ ಬಂದಳು. ಅವಕುಂಠನ ಮೂಲಕ ಮಬ್ಬಾಗಿ ತೋರುತ್ತಿದ್ದ ಅವರ ಸೊಬಗು, ಬೆಡಗು, ಒಮ್ಮೆಲೆ ಪ್ರಕಾಶಗೊಂಡಿತು.

ಸುಗಮಸಂಗೀತದ ಕಲ್ಪನೆ ಮೊದಲು ಮೂಡಿಬಂದುದು ಪ್ರಾಯಶಃ 'ರವೀಂದ್ರನಾಥ ಠಾಕೂರ್' ಅವರ ಗೀತೆಗಳಲ್ಲಿ ಎನ್ನಬಹುದು. ಅವರ ಗೀತೆಗಳೆಲ್ಲಾ ರಾಗಪ್ರಧಾನ, ಕಾವ್ಯ ಪ್ರಧಾನ ರಚನೆಗಳು. ಅನೇಕ ಗೀತೆಗಳಲ್ಲಿ ಶಾಸ್ತ್ರೀಯ ಸಂಗೀತದ ರಾಗಗಳನ್ನು ಬಳಸಿದ್ದರೂ, ಗೀತೆಯ ಭಾವಕ್ಕನುಗುಣವಾಗಿ ರಾಗವನ್ನು ತಿಳಿಯಾದ ಮತ್ತು ಸರಳವಾದ ರೂಪದಲ್ಲಿ ಪ್ರಯೋಗಿಸಿದ್ದಾರೆ. ರವೀಂದ್ರನಾಥಠಾಕೂರರು ನಮ್ಮ ಭಾರತೀಯ ಸುಗಮಸಂಗೀತ ಹರಿಕಾರರಾಗಿದ್ದಾರೆ. ಅವರ 'ಗೀತಾಂಜಲಿ' ಬಂಗಾಳಿ ಭಾವಗೀತಾ ಸಂಕಲನ ಅಪೂರ್ವವಾಗಿದೆ. ಸಾಧಕನೊಬ್ಬನ ಮನೋಗತವನ್ನು ನಿವೇದನೆ ಮಾಡುವ ಈ ಸಂಕಲನದಲ್ಲಿ ಯಾವುದೇ ಒಂದು ಮತ, ಜಾತಿಯ ನಂಬಿಕೆ ಶ್ರದ್ಧೆ, ಅಥವಾ ಪಕ್ಷ, ದೈವದ ಚಿತ್ರಣ ಅಥವಾ ಅವಲಂಬನವಿಲ್ಲ. ಕೇವಲ ಆತ್ಮದ ಒಂದು ಅವಲೋಕನ, ಪ್ರಾಮಾಣಿಕ ನಿವೇದನೆ, ಸೃಷ್ಟಿಕರ್ತನ ಆರಾಧನೆ, ಮನಸ್ಸಿನ ಕಾತರ, ಕಳವಳ 'ಆತ್ಮಭಾವದ ಚಿತ್ರಣವಿದೆ. ರವೀಂದ್ರರು ಸಂಗೀತಗಾರರಾಗಿದ್ದರಿಂದ ಆಧುನಿಕ ಸ್ವರೂಪದ ಶುದ್ಧಹಾಡುಗಳೇ ಇಲ್ಲಿ ಸುಗಮಸಂಗೀತಕ್ಕೆ ಮಾದರಿಯಾದವು.

ಮುಂದೆ ಈ ಜಾಡನ್ನೇ ಹಿಡಿದು ತೆಲುಗು, ಮರಾಠಿ ಮುಂತಾದ ಭಾಷೆಗಳಲ್ಲಿಯೂ ಈ ರೀತಿಯ ಕಾವ್ಯದ ಸೊಗಸನ್ನು ಎತ್ತಿತೋರುವ ಕಾವ್ಯ ಪ್ರಧಾನ ಭಾವಗೀತೆಗಳು ಬೇಕಾದಷ್ಟು ರಚಿತವಾದವು. ಕರ್ನಾಟಕದಲ್ಲಿಯೂ ಈ ಬಗೆಯ ಸರಳ ಛಾಯೆಯನ್ನು ಒಳಗೊಂಡ

ಭಾವಗೀತೆಗಳು ಪ್ರಚಾರಕ್ಕೆ ಬರಲು ಆರಂಭವಾಯಿತು. ಕವಿಗಳು ಅರ್ಥ ಮತ್ತು ಭಾವಪೂರ್ಣವಾದ ಕವಿತೆಗಳನ್ನು ಆರಿಸಿ ಅದಕ್ಕೆ ರಾಗ ಸಂಯೋಜನೆ ಮಾಡುವ ಸಂಗೀತಗಾರರು ಬೆಳಕಿಗೆ ಬಂದರು. ರಾಗಸಂಯೋಜನೆಯಲ್ಲಿ ಅನ್ಯ ಸ್ವರಗಳ ಸಂಯೋಜನೆಯ ಹೊಸತನವೂ ಕಂಡುಬಂದಿತು.

**ದಕ್ಷಿಣ ಕರ್ನಾಟಕ ಮತ್ತು ಹಳೇ ಮೈಸೂರು ಪ್ರಾಂತ್ಯಗಳಲ್ಲಿ ಸುಗಮಸಂಗೀತ**

ಕನ್ನಡದಲ್ಲಿ ಭಾವಗೀತೆಯ ಸ್ವರೂಪ ಇನ್ನೂ ಖಚಿತಗೊಳ್ಳುವ ಮೊದಲೇ ಹೊಸ ಕವಿತೆಗೆ ಮನಸ್ಸು ತೆತ್ತ ಹಿರಿಯ ತಲೆಮಾರಿನ ಕವಿಗಳಲ್ಲಿ ವೀ. ಸೀತಾರಮಯ್ಯ ಮುಖ್ಯವಾದವರು. "ಆಚಾರ್ಯ ಶ್ರೀ ಅವರ ಶಿಷ್ಯರಾಗಿ ಪ್ರತ್ಯಕ್ಷ ಪ್ರಭಾವದಲ್ಲಿ ಸ್ಫೂರ್ತಿ ಪಡೆದು ಕಾವ್ಯ ರಚನೆಯಲ್ಲಿ ತವರಿಗೆ ಸಹಜವಾದ, ನೇರವಾದ ಹಾದಿಯನ್ನು ಹಿಡಿದು ಧೀರರಾಗಿ ನಡೆದವರು. ವಿಷಯ, ರೀತಿ, ಛಂದಸ್ಸುಗಳಲ್ಲಿ ಯಾವುದೇ ಅತಿರೇಕಕ್ಕೆ ಹೋಗದೇ, ಆ ಕಾಲದ ಪ್ರವೃತ್ತಿಗೆ, ಮನೋಭಾವಕ್ಕೆ ತಕ್ಕಂತೆ, ಒಂದು ನಿರ್ಬಂಧದಲ್ಲಿಯೇ ಒಳಮನೆ ತಿಳಿವನ್ನು, ಶುಚಿಯನ್ನು, ಅದಕ್ಕೆ ಧಾರೆ ಎರೆದವರು" ಎಂದ ಚನ್ನವೀರ ಕಣವಿಯವರ ಮಾತು ವೀಸೀ ಅವರ ಒಳ ಹೊರಗಿನ ವ್ಯಕ್ತಿತ್ವವನ್ನು ಬಣ್ಣಿಸುತ್ತದೆ. ತಮ್ಮಕವನಗಳ ಸರಳ ಮಧುರ ಶೈಲಿಯಿಂದ ಹಿರಿತನವನ್ನು ಎತ್ತಿ ತೋರಿದವರು ಅವರು. ಯಾರು ಸರಳವಾಗಿ ಸುಲಭವಾಗಿ ಹೇಳಬಲ್ಲರೋ ಅವರು ಹೆಚ್ಚು ತಿಳಿದವರಾಗಿರುತ್ತಾರೆ ಎಂದು ಒಬ್ಬ ಆಂಗ್ಲ ವಿಮರ್ಶಕ ಹೇಳಿದ್ದಾನೆ. ವೀಸೀ ಅವರ ಪರಿಪೂರ್ಣವಾದ ಆಹ್ಲಾದಕರವಾದ ಸರಳ ಸುಭಗ ಬರವಣಿಗೆಯಲ್ಲಿ ಗಾಢವಾದ ಚಿಂತನೆಗಳು ಎದ್ದು ಕಾಣುತ್ತವೆ. ಪದ ಸಮಾಸಗಳ ದೊಂಬರಾಟವಿಲ್ಲದ ಪ್ರಸನ್ನ ಲಲಿತ ಪದಗಳು ಅವರ ವ್ಯಕ್ತಿತ್ವದ ಮುದ್ರೆಯನ್ನೊತ್ತುತ್ತವೆ. ವೀಸೀ ಅವರ 'ಗೀತಗಳು' ಕವಿತಾ ಸಂಕಲನದಿಂದ (೧೯೩೧) ಹಳೆ ಮೈಸೂರು ಪ್ರಾಂತ್ಯದಲ್ಲಿ ಸುಗಮಸಂಗೀತ ತನ್ನ ದನಿ ತೆರೆಯಿತು. ನಮ್ಮ ಕರ್ನಾಟಕದ ಗಮಕಿಗಳು ಹೊಸಗನ್ನಡದ ಪದ್ಯಗಳನ್ನು ವಾಚಿಸಲು ಉತ್ಸುಕರಾದರು. ಶಾಸ್ತ್ರೀಯ ಸಂಗೀತದ ಮೂಲಧಾಟಿಯನ್ನು ಹಿಡಿದುಕೊಂಡೇ ಹೊಸಗಾಯನ ಪದ್ಧತಿ ಆವಿಷ್ಕಾರಗೊಂಡಿತು.

ಕರ್ನಾಟಕದಲ್ಲಿ 'ಶ್ಲೋಕ ಸಂಗೀತ ಪಟು' ಎಂದೇ ಬಿರುದಾಂಕಿತರಾಗಿದ್ದ ಕಳಲೆ (ನಂಜನಗೂಡಿನ ಬಳಿ) ಸಂಪತ್ಕುಮಾರಾಚಾರ್ಯರು 'ಆಧುನಿಕ ಕವಿತೆಗಳ ಪ್ರತ್ಯೇಕ ಕಾರ್ಯಕ್ರಮಗಳನ್ನು ಪಕ್ಕವಾದ್ಯದೊಂದಿಗೆ ನಡೆಸಿದ್ದರು. ಸಾಹಿತ್ಯ ಶುದ್ಧವಾಗಿ ಭಾವಪೂರಿತವಾಗಿ ದೇವರನಾಮಗಳನ್ನು ಹಾಡುವುದರಲ್ಲಿ ಸಿದ್ಧಹಸ್ತರೆನಿಸಿದ್ದ ಆಚಾರ್ಯರು, ಭಾವಗೀತೆಗಳನ್ನು ಸಹ ತಮ್ಮ ಭಾವಪೂರ್ಣಕಂಠದಿಂದ ಹಾಡುವಲ್ಲಿ ವಿಶೇಷ ಪಾಂಡಿತ್ಯ ಹೊಂದಿದ್ದರು. ಬಿ.ಎ. ಬಿ.ಟಿ. ಪದವಿ ಗಳಿಸಿ ಅಧ್ಯಾಪಕ ವೃತ್ತಿ ಹಿಡಿದಿದ್ದ ಆಚಾರ್ಯರು ಕರ್ನಾಟಕ ಮತ್ತು ಹಿಂದೂಸ್ತಾನೀ ಎರಡೂ ಪದ್ಧತಿಗಳನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದ್ದರು. ತಮ್ಮ ಗಂಡುದನಿಯ ಗಾಯನಕ್ಕೆ ಹೆಸರಾದಂತೆ, ಭಾವಪೂರ್ಣ ಗಾಯನಕ್ಕೂ ಹೆಸರಾಗಿದ್ದರು. ೧೯೦೨ ರಲ್ಲಿ ಹುಟ್ಟಿ ೧೯೪೫ ರವರೆಗೆ ಮಾತ್ರ ಜೀವಿಸಿದ್ದ ಆಚಾರ್ಯರು ಸ್ವಾತಂತ್ರ್ಯಾಂದೋಲನಕ್ಕೆ ಸ್ಫೂರ್ತಿಯಾಗಿದ್ದರು.

**'ನಿನ್ನ ನಾಡೀ ನಾಡು ನಿನ್ನ ಮಕ್ಕಳು ನಾವು**
**ಎಮ್ಮನು ನೀ ನಡೆಸು ದಿಗ್ವಜಯಕ್ಕೆ-**
**ಕಣ್ತುಂಬ ನೋಡೆಮ್ಮ ಹರಸು ತಾಯಿ**
**ಭಾರತ ಭಾಗ್ಯೇಶ್ವರಿ'**

ಎಂದು ವೀ.ಸಿ. ಯವರ ಗೀತೆಗಳನ್ನು ಹಾಡುತ್ತಾ ಎಲ್ಲೆಲ್ಲೂ ಸ್ವಾತಂತ್ರ್ಯ ಗೀತೆಯನ್ನು ಹಾಡಿ, ಆಂದೋಲನಕ್ಕೆ ಉತ್ತೇಜಿಸುತ್ತಿದ್ದ ಆಚಾರ್ಯರು ದೇಶಕ್ಕೆ ಸ್ವಾತಂತ್ರ್ಯ ಬಂದದ್ದನ್ನು ನೋಡಲೇ ಇಲ್ಲ. ಅದಕ್ಕೆ ಮುನ್ನವೇ ನೇಪಥ್ಯಕ್ಕೆ ತೆರಳಿದರು. ಹಳೆಯ ಮೈಸೂರಿನಲ್ಲಿ 'ಭಾವಗೀತೆಯನ್ನು ಹಾಡುವ ಸಂಪ್ರದಾಯವನ್ನು ಮೊದಲು ಪ್ರಾರಂಭಿಸಿದವರು ನಮ್ಮ ಸಂತ್ಕುಮಾರಾಚಾರ್ಯರು. ಅವರು ಹಾಡುತ್ತಿದ್ದ ವಿಸೀ ಅವರ 'ಮನೆ ತುಂಬಿಸುವ ಹಾಡು ಎಲ್ಲ ಮದುವೆ ಮನೆಗಳಲ್ಲೂ ಸಂಪ್ರದಾಯಗೀತೆಯಾಗಿಬಿಟ್ಟಿತ್ತು. 'ಎಮ್ಮ ಮನೆಯಂಗಳದಿ

ಬೆಳೆದೊಂದ ಹೂವನ್ನು ನಿಮ್ಮ ಮಡಿಲೊಳಗಿಡಲು ತಂದಿರುವೆವು' - ಎನ್ನುವಾಗ ಸಂತೋಷ, ಸಡಗರ, ಸಂಭ್ರಮದಿಂದ ತುಳುಕಾಡುತ್ತಿದ್ದ ಮದುವೆ ಮನೆಯಲ್ಲಿ ದುಃಖದ ನೆರೆ ನುಗ್ಗುತ್ತಿತ್ತು.

ಬಿ.ಎಂ.ಶ್ರೀ ಅವರ 'ಕರುಣಾಳು ಬಾ ಬೆಳಕೇ', ಡಿವಿಜಿಯವರ 'ವನಸುಮದೊಳೆನ್ನ ಜೀವನವು, ವಿ.ಸೀ. ಅವರ 'ಹರಸುತಾಯೆ' ಹುಯಿಲಗೋಳರ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಮುಂತಾದ ಗೀತೆಗಳು, ಆಚಾರ್ಯರು ಸುಗಮಸಂಗೀತ ಪ್ರಕಾರಕ್ಕೆ ಹಾಕಿಕೊಟ್ಟ ಆರೋಹಣ ಗೀತೆಗಳಾದವು. ಪುರಂದರದಾಸರ ದೇವರನಾಮವನ್ನು ಭಜನೆಗಳಲ್ಲಿ ಅಲ್ಲದೆ, ಶಾಸ್ತ್ರೀಯ ಸಂಗೀತ ಕಛೇರಿಯಲ್ಲಿ ಹಾಡುವುದು ಹೀನಾಯವೆಂದು ತಿಳಿದಿದ್ದ ಅಂದಿನ ಸಮಾಜಕ್ಕೆ ಮಾರ್ಗದರ್ಶಕರಾಗಿದ್ದ ಆಚಾರ್ಯರು ಆಧುನಿಕ ಕವಿತೆಗಳ ಕಾರ್ಯಕ್ರಮವನ್ನು ಪ್ರತ್ಯೇಕವಾಗಿ ನೀಡುತ್ತಿದ್ದರು. 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' 'ಆಚಾರ್ಯರ ಕಾರ್ಯಕ್ರಮದ ನಾಂದಿಗೀತೆಯಾಗಿತ್ತು. ಹಾಗೆಯೇ ಹೆಣ್ಣೊಪ್ಪಿಸುವಾಗ ಹಾಡುತ್ತಿದ್ದ 'ಎಮ್ಮ ಮನೆಯಂಗಳದಿ' ಗೀತೆಯನ್ನು ಕೇಳಿ ಬಂಧು ಬಾಂಧವರ ಕಣ್ಣಲ್ಲಿ ನೀರು ಸುರಿಯುವುದು ಸಾಮಾನ್ಯವಾಗಿತ್ತು. ಸುಗಮಸಂಗೀತ ತನ್ನ ಆರಂಭಕಾಲದಿಂದಲೇ ಜನರಿಗೆ ಪ್ರಿಯವಾಗಿದ್ದಕ್ಕೆ ಇವೇ ಸಾಕ್ಷಿಗಳಾಗಿದ್ದವು.

ಒಂದು ಕಡೆ ಬ್ರಿಟಿಷ್ ರೆಸಿಡೆನ್ಸಿ ಆಡಳಿತ ಜೀವನಕ್ರಮ, ಇನ್ನೊಂದೆಡೆ ಸದಾ ಹೊಸತನ ಬಯಸುತ್ತಿದ್ದ ಮೈಸೂರಿನ ಅರಸರ ಕಾವ್ಯ ನಾಟಕಗಳ ಆಸಕ್ತಿ, ಇತ್ತಲಾಗಿ ಹರಿದು ಬರುತ್ತಿದ್ದ ಪಾಶ್ಚಾತ್ಯರ ಹೊಸ ಸಾಹಿತ್ಯದ ಪ್ರಭಾವ, ಇವೆಲ್ಲದರ ಹೊಸಕಾಟದಲ್ಲಿ ಕನ್ನಡ ಆಧುನಿಕ ಸಾಹಿತ್ಯ ಹೊಸತನ ಕಂಡು, ಸ್ವಚ್ಛಂದವೂ, ಸ್ವತಂತ್ರವೂ ಆಯಿತು. ಆದರೆ ಸುಗಮಸಂಗೀತದ ಹಾಡುಗಾರಿಕೆ ಮತ್ತು ಸಂಯೋಜನೆಯ ಶೈಲಿಯಲ್ಲಿ ಹೊಸತನವೇನೂ ಬರಲಿಲ್ಲ. ಶಾಸ್ತ್ರೀಯ ಸಂಗೀತದ ಪರಿಮಿತಿಯಲ್ಲೆ ಹೊಸಗನ್ನಡ ಸಾಹಿತ್ಯವು ಹಾಡತೊಡಗಿತು. ಕರ್ನಾಟಕ ಗಮಕಿಗಳೇ ಹಾಡಲು ಪ್ರಾರಂಭಿಸಿದರು.

ಕಳಲೆ ಸಂಪತ್ಕುಮಾರಾಚಾರ್ಯರು ತಂದ ಆಕರ್ಷಣೆ ಶ್ರೋತೃಗಳಲ್ಲಿ ಕಾವ್ಯದ ಆಸಕ್ತಿ ಮೂಡಿಸಿತು. ಇವರು ಹಾಕಿದ ಹಾದಿಯಲ್ಲೇ ನಡೆದವರು ಗುಡಿಬಂಡೆ ರಾಮಾಚಾರ್ ಎನ್ನುವ ಮತ್ತೊಬ್ಬ ಗಮಕಿ. ೧೯೧೭ರಲ್ಲಿ ಕೋಲಾರ ಜಿಲ್ಲೆಯ ಗುಡಿಬಂಡೆಯಲ್ಲಿ ಜನಿಸಿದ ರಾಮಾಚಾರ್ ಕಾವ್ಯಗಾಯನ ಕಲೆಯಲ್ಲಿ ವಿಶೇಷ ಪರಿಣತಿ ಪರಿಶ್ರಮ ಪಡೆದಿದ್ದರು. ೧೯೩೮ ರಲ್ಲಿ ಕುವೆಂಪು ಅವರ 'ದೋಣಿಸಾಗಲಿ' ಗೀತೆಯೊಂದಿಗೆ ಸುಗಮಸಂಗೀತ ಯಾನವನ್ನು ಪ್ರಾರಂಭಿಸಿದ ಆಚಾರ್ಯರು ಬೇಂದ್ರೆಯವರ 'ಗಂಗಾವತರಣ' ಗೀತೆಯ ಗಾಯನದ ಮೂಲಕ ಕವಿ ದ.ರಾ.ಬೇಂದ್ರೆಯವರಿಂದಲೇ ಶಹಭಾಸ್‌ಗಿರಿ ಪಡೆದು ಪ್ರಸಿದ್ಧರಾದರು. ಕರ್ನಾಟಕದ ಇತರ ಗಮಕಿಗಳು ಇವರ ಹಾದಿಯಲ್ಲಿಯೇ ಕವಿತಾ ಗಾಯನವನ್ನು ಮುನ್ನಡೆಸಿದರು.

**ಉತ್ತರ ಕರ್ನಾಟಕದಲ್ಲಿ ಸುಗಮಸಂಗೀತ**

ಉತ್ತರ ಕರ್ನಾಟಕದಲ್ಲಿ ಹಿಂದೂಸ್ತಾನೀ ಸಂಗೀತ, ಮೊದಮೊದಲು ಶ್ರೀಮಂತರ ಮನೆಯಲ್ಲಿ ನಡೆಯುತ್ತದ್ದ ಪ್ರತಿಷ್ಠಿತ ಕಛೇರಿಗಳಾಗಿ ನೆಲೆಗೊಂಡಿತ್ತು. ಶಾಸ್ತ್ರೀಯ ಸಂಗೀತವನ್ನು ಕೇಳಬೇಕೆಂದು ಆಸೆಪಡುತ್ತಿದ್ದ ಸಾಮಾನ್ಯರಿಗೆ ಅದು ಅಪರೂಪವಾಗಿತ್ತು. ನಾಟಕಗಳು ಈ ಆಸೆಯನ್ನು ಪೂರೈಸಲೆಂದೇ ಶಾಸ್ತ್ರೀಯ ಸಂಗೀತವನ್ನು ನಾಟಕಗಳಲ್ಲಿ ಅಳವಡಿಸಿಕೊಂಡರು. ಅಂದು ಜನರು ಸಂಗೀತ ಕೇಳಲು ನಾಟಕಗಳನ್ನು ಅವಲಂಬಿಸಿಕೊಂಡರು. ಉತ್ತರ ಕರ್ನಾಟಕದ ರಂಗ ಸಂಗೀತ ಹಿಂದೂಸ್ತಾನಿ ಪದ್ಧತಿಯ ಮರಾಠೀ ಹಾಡುಗಳನ್ನು ಅವಲಂಬಿಸಿ ಇನ್ನು ಒಂದು ಹೆಜ್ಜೆ ಮುಂದೆ ಹೋಯಿತು. ಮರಾಠಿಯಲ್ಲಿ 'ಗೋಡಗಾಣ' ಎಂಬ ರಸಾಲ ರಚನೆಗಳು ಸಂಗೀತಮಯವಾಗಿದ್ದು ಮಂಜುಳ ಲಲಿತ ಶಬ್ದಗಳಿಂದ ಕೂಡಿ ಅತಿ ಮಧುರವಾದ ಗೀತೆಗಳಾಗಿದ್ದವು. ಇವು ಸಾಹಿತ್ಯಕವಾಗಿ ಭಿನ್ನಶೈಲಿಯಲ್ಲಿದ್ದು ಬೆಲ್ಲದಂತೆ ಸವಿಯಾಗಿದ್ದವೆಂದು (ಗೋಡ=ಬೆಲ್ಲ, ಗಾಣ=ಗೀತೆ) ಗೋಡಗಾಣವೆಂಬ ಹೆಸರು ಪಡೆದಿತ್ತು. ಸರಳವಾದ ಸಾಹಿತ್ಯ ಸಂಗೀತ ಶೈಲಿಯಿಂದ ಅತ್ಯಂತ ಜನಪ್ರಿಯವಾಗಿತ್ತು. ಸುಮಧುರ ಶೈಲಿಯ, ಮೋಹಕ ಲಯವಿನ್ಯಾಸದ ಸೂಕ್ಷ್ಮತೆಗಳನ್ನು, ಪದಲಾಲಿತ್ಯಗಳನ್ನೂ ತುಂಬಿಕೊಂಡು

ನಾದದ ಗುಂಗಿನಿಂದ ಹುಟ್ಟಿಕೊಂಡಿದ್ದ ಈ ರಸಾಲಗೀತೆಗಳು ನಾಲಿಗೆ ಚಪ್ಪರಿಸುವಂತೆ ಸವಿಯಾದ, ಆರೋಗ್ಯಕ್ಕೆ ಹಿತಕಾರಿಯಾದ ಸಾಹಿತ್ಯವನ್ನು ಒಳಗೊಂಡಿದ್ದವು. ಮರಾಠಿ 'ಗೋಡಗಾಣ'ದಲ್ಲಿ ಪ್ರಸಿದ್ಧ ಹೆಸರು ಮಾಡಿದ್ದ ಹೀರಾಬಾಯಿ ಬಡೋದೆಕರ, ಸುಶಿಲಾಟೇಂಬೆ, ಸೀತಾಮುಲ್ಕಿ' ಮುಂತಾದ ಗಾಯಕರಿಯರು ಮರಾಠಿ ಗೋಡಗಾಣದ ಧಾಟಿಯಲ್ಲಿಯೇ ಬರೆದ ಕನ್ನಡದ ಗೀತೆಗಳನ್ನು ಹಾಡು ಪ್ರಸಿದ್ಧಗೊಳಿಸಿದರು. ಹೀರಾಬಾಯಿ ಬಡೋದೆಕರ ಅವರಿಂದ ಪ್ರಾರಂಭವಾದ ಭಾವಗೀತೆಗಳನ್ನು (ಮರಾಠಿಧಾಟಿಯ) ಹಾಡುವ ಪರಿಪಾಠ ಸುಗಮಸಂಗೀತಕ್ಕೆ ಮತ್ತೊಂದು ಆಯಾಮ ತಂದುಕೊಟ್ಟಿತು. ಮರಾಠಿ ಧಾಟಿಯ ಕನ್ನಡ ಭಾವಗೀತೆಗಳು ಹೊಸ ಆಕರ್ಷಣೆಯನ್ನು ಬೀರತೊಡಗಿದವು. ಮರಾಠಿ ಭಾಷೆಯನ್ನು ಅರಿತಿದ್ದ ಉತ್ತರ ಕರ್ನಾಟಕದ ಪ್ರಮುಖ ಕವಿಗಳಲ್ಲಿ ಇದರ ಪ್ರಭಾವ ತಿಳಿದೋ, ತಿಳಿಯದೆಯೋ ಅವರ ಶೈಲಿಯಲ್ಲಿ ಅಂತರ್ಗತವಾಯಿತು. ಉತ್ತರ ಕರ್ನಾಟಕದ ಕನ್ನಡ ಭಾವಗೀತೆಗಳು 'ಗೋಡಗಾಣ'ದ ನೆರಳಿನಲ್ಲಿಯೇ ಹುಟ್ಟಿ ಬಂದವು.

ಹೀರಾಬಾಯಿ ಬಡೊದೆಕರ ಅವರಿಂದ ಪ್ರಾರಂಭವಾದ ಭಾವಗೀತೆಗಳನ್ನು (ಮರಾಠಿ) ಹಾಡುವ ಪರಿಪಾಠ ಸುಗಮಸಂಗೀತಕ್ಕೆ ದಿಕ್ಸೂಚಿಯಾಯಿತು. ಮಾಧವ ಜ್ಯೂಲಿಯನ್ ಅವರ 'ಪಾಕವ ಮಧುಬೋಲ ಕೋಕಿಲ' ಮತ್ತು 'ಉಪವನಿಗಾತಕೋಕಿಳಾ' ಅಂದು ಅತ್ಯಂತ ಪ್ರಚಲಿತವಾದ ಹಾಡುಗಳಾಗಿದ್ದವು. 'ಹೀ ಏಕ್ ಆಸಮಸಿ ಮುರಳೀ ಕನ್ಹಯ್ಯ' 'ಬಜಾವ್ ಬಜಲಾವ್ ಮುರಲಿ' ಎಂಬ ಗೀತೆ ೧೯೩೭ರಲ್ಲಿಯೇ ಧ್ವನಿಮುದ್ರಿತವಾಗಿತ್ತು. ಹೀರಾಬಾಯಿ ಅವರ ಶಿಷ್ಯೆಯಾದ 'ಸೀತಾಮುಲ್ಕಿ'ಯವರು ಮುಂಬಯಿಯಲ್ಲಿ ಶಾಸ್ತ್ರೀಯ ಸಂಗೀತ ಮತ್ತು ಮರಾಠಿ ಗೋಡಗಾಣದಲ್ಲಿ ದೊಡ್ಡ ಹೆಸರು ಮಾಡಿದ್ದರು. ೧೯೪೬ರಲ್ಲಿ ಎನ್ಕೆ ಕುಲಕರ್ಣಿಯವರು ಮುಂಬಯಿ ಆಕಾಶವಾಣಿಗೆ ಸೇರಿದಾಗ ಗುರುಗಳನ್ನು ಭೇಟಿ ಮಾಡಲು ಬಂದರು. ನಿಲಯದ ಕಲಾವಿದರಾಗಿದ್ದ ಸೀತಾ ಮುಲ್ಕಿಯವರನ್ನು 'ನೀವು ಕನ್ನಡದ ಹಾಡುಗಳನ್ನು ಯಾಕೆ ಹಾಡುವುದಿಲ್ಲ' ಎಂದಾಗ 'ನಾನು ಹೇಳುವ ಧಾಟಿಗೆ ನೀವು ಗೋಡಗೀತ ರಚಿಸಿಕೊಟ್ಟರೆ ಹಾಡುತ್ತೇನೆ! ಎಂದರು. ಆ ಒಂದು ಸಂಭಾಷಣೆ, ಆಲೋಚನೆ, ಸುಗಮಸಂಗೀತದ ಪಾಲಿಗೆ ಅಮೃತ ಸಿಂಚನವಾಯಿತು. ಸೀತಾಮುಲ್ಕಿಯವರು ಮುಂಬಯಿಯಲ್ಲಿ ಶಾಸ್ತ್ರೀಯ ಸಂಗೀತ ಮತ್ತು ಮರಾಠಿ ಗೋಡಗಾಣದಲ್ಲಿ ದೊಡ್ಡ ಹೆಸರು ಮಾಡಿದ್ದರು. ೧೯೪೬ ರಲ್ಲಿ ಎನ್ಕೆ ಕುಲಕರ್ಣಿಯವರು ಮುಂಬಯಿ ಆಕಾಶವಾಣಿಗೆ ಸೇರಿದಾಗ ಗುರುಗಳನ್ನು ಭೇಟಿ ಮಡಲು ಬಂದರು. ನಿಲಯದ ಕಲಾವಿದರಾಗಿದ್ದ ಸೀತಾ ಮುಲ್ಕಿಯವರನ್ನು 'ನೀವು ಕನ್ನಡದ ಹಾಡುಗಳನ್ನು ಯಾಕೆ ಹಾಡುವುದಿಲ್ಲ' ಎಂದಾಗ 'ನಾನು ಹೇಳುವ ಧಾಟಿಗೆ ನೀವು ಗೋಡೆಗೀತ ರಚಿಸಿಕೊಟ್ಟರೆ ಹಾಡುತ್ತೇನೆ' ಎಂದರು. ಆ ಒಂದು ಸಂಭಾಷಣೆಗೆ, ಆಲೋಚನೆ, ಸುಗಮಸಂಗೀತದ ಪಾಲಿಗೆ ಅಮೃತ ಸಿಂಚನವಾಯಿತು. ಸೀತಾಮುಲ್ಕಿಯವರು ಹಾಡುತ್ತಿದ್ದ 'ತುಮಬಿನ ಮೋರಿಕೋನ ಖಬರಲೆ ಗೋವರಧನ ಗಿರಿಧಾರಿ' ಎನ್ನುವ ಯಮನ್ (ಕಲ್ಯಾಣಿರಾಗ) ರಾಗದ ಹಿಂದಿ ಭಜನೆ - 'ಗಿಡಗಿಡದಲಿ ಹಾರಾಡುವ ಗಿಳಿಯೆ ನುಡಿನುಡಿ ಕನ್ನಡವ' ಎಂಬ ಸುಂದರ ರೂಪ ಪಡೆಯಿತು. ಅಂದಿನ ತುರ್ತಾಗಿದ್ದ ಕನ್ನಡಾಭಿಮಾನವನ್ನು ಮೂಡಿಸಿದ ಈ ಗೀತೆ ಕನ್ನಡ ವಿಭಾಗದ ಸವಿಕಟ್ಟಾಗಿ, ಸೊಗಸಾಗಿ, ಹೊಸರುಚಿಯನ್ನು ಸೃಷ್ಟಿಮಾಡಿತು. ಹಾಗೆಯೇ ಮುಂದುವರೆದು 'ವಿನವಿತ ಶಬರೀ ರಘುರಾಮೋ ತುಜಸಾಠಿ ವೇಚಲೆ ಬೋರೆ' ಎಂದು ಸೀತಾಮುಲ್ಕಿಯವರು ಹಾಡಿದ ಧಾಟಿಗೆ - 'ನುಡಿದಳು ಶಬರೀ ರಘುವರಗೆ' ಎಂಬ ಮತ್ತೊಂದು ರಸಾಲಗೀತೆ ವಿನ್ಕೆಯವರಿಂದ ಸೃಷ್ಟಿಯಾಯಿತು. ವೀಸೀಯವರ 'ಕಾದಿರುವಳು ಶಬರಿ'ಯಂತೆ ಈ ಹಾಡೂ ಜಗಜನಿತವಾಯಿತು. ಸೀತಾಮುಲ್ಕಿಯವರ ಈ ಕನ್ನಡ ಸುಗಮ ಲಲಿತ ಗೀತರಚನೆಗಳ ಗಾಯನದ ಜನಪ್ರಿಯತೆ ಎಷ್ಟಾಯಿತೆಂದರೆ ಕನ್ನಡೇತರರಿಗೂ ಕನ್ನಡದ ಹಾಡುಗಳನ್ನು ಹಾಡುವ ಬಯಕೆ ಅದಮ್ಯವಾಯಿತು. ಮರಾಠೀ ಗಾಯನದ ಮತ್ತೊಬ್ಬ ಕಲಾವಿದೆ ವಿಜಯಾದೇಸಾಯಿ ಆಕಾಶವಾಣಿಗೆ ಬಂದು ಎನ್ಕೆಯವರಿಗೆ, 'ನೀವೇ ಗೀತ ರಚಿಸಿಕೊಡಿರಿ ನಾನು ಚಾಲೀ ಹಚ್ಚುತ್ತೇನೆ' - ಎಂದು ದುಂಬಾಲು ಬಿದ್ದರು. ಎನ್ಕೆಯವರು ಕನ್ನಡರಾಜರ, ಕವಿಗಳ ವರ್ಣನೆಗಳುಳ್ಳ ಸರಳಗೀತವೊಂದನ್ನು ರಚಿಸಿಕೊಟ್ಟರು.

**ನಾಡ ಗುಡಿಯನೆರಿಸುವ | ಹಾರಿಸುವ ಬಾನಿಗೆ**

**ದುಡಿದು ದಣಿದು ಹಾಡಿ ತಣಿದು ಮುಡಿಸುವ ನುಡಿರಾಣಿಗೆ ||**

ಎಂಬ ಗೀತೆ H.M.V. ಗ್ರಾಮಾಫೋನ್ ಕಂಪನಿಯ ಎ.ಪಿ. ನಾರಾಯಣ ಗಾಂವಕರರ ಸಂಗೀತ ನಿರ್ದೇಶನದಲ್ಲಿ ಧ್ವನಿಮುದ್ರಿತವಾಯಿತು. ಪಕ್ಕವಾದ್ಯಗಳ ಜೊತೆ ಒಳ್ಳೆಯ ಉತ್ಸಾಹಭರಿತವಾಗಿದ್ದ ಆ ಗೀತೆಯನ್ನು H.M.V. ಕಂಪನಿಯ ಮುಖ್ಯಸ್ಥರಾಗಿದ್ದ ಶ್ರೀ ಜಿ.ಎನ್.ಜೋಶಿ ಅವರು ಮೆಚ್ಚಿಕೊಂಡು ಎನ್ಕೆಯವರಿಂದ ಮತ್ತೊಂದು ಗೀತವನ್ನು ಆ ಹಾಡಿಗೆ ಜೋಡಾಗಿ ಬರೆಸಿದರು.

**'ಕಾಡಿನ ಎಡೆಯಲಿ, ತಿಳಿಗೊಳ ತಡಿಯಲಿ**
**ಮಲ್ಲಿಗೆ ಅರಳುತಿದೆ'**

ಎಂಬ ಮತ್ತೊಂದು ಮಧುರ ಕನ್ನಡಗೀತೆ (ಕನ್ನಡ ಗೋಡಗಾಣ) ಸೃಷ್ಟಿಯಾಯಿತು. ಇವು H.M.V. ಕಂಪನಿಯಿಂದ ಹೊರಬಿದ್ದಾಗ - ಉತ್ತರ ಕರ್ನಾಟಕದ ಮೂಲೆಮೂಲೆಗಳಲ್ಲೆಲ್ಲಾ ಬಿಸಿಬಿಸಿ (ಗಾನದೋಸೆ) ದೋಸೆಗಳಂತೆ ಖರ್ಚಾದವು. ವಿಜಯದೇಸಾಯಿ ಅವರು ಅನಂತರವೂ ಅನೇಕ ಕನ್ನಡ ಗೀತಗಳನ್ನು ಧ್ವನಿ ಮುದ್ರಿಸಿದರು.

ಸೀತಾಮುಲ್ಕಿಯವರು ಹಾಡಿದ -

**'ಕ್ಷಣದ ಪ್ರಣಯ ಭಾವನಾ'**
**ಭಜಿಸೋ ರಾಮ ದಯಾಘನಾ**

ಎಂಬ ಧ್ವನಿಮುದ್ರಿಕೆ, ಸುಶೀಲಾಟೇಂಬೆ ಅವರು ಹಾಡಿದ ಅನೇಕ ಮುದ್ರಿಕೆಗಳೊಡನೆ 'ಬೇಡ ಕೃಷ್ಣ ಗೋಕುಳ ಚೆನ್ನಾ' ಎಂಬ ರೆಕಾರ್ಡುಗಳಂತೂ ಮುಂಬಯಿಯಿಂದ ಧಾರವಾಡಕ್ಕೆ ಏಕೆ? ಮೈಸೂರು, ದಕ್ಷಿಣ ಕನ್ನಡ ಪ್ರಾಂತ್ಯದ ಕೊನೆಯವರೆವಿಗೂ ಹಬ್ಬಿಹೋಗಿತ್ತು. ಅದುವರೆವಿಗೂ ಇರದ ಹೊಚ್ಚಹೊಸದಾದ ಗೀತ ಮತ್ತು ಸಾಹಿತ್ಯಗಳ ಪಾಕ, ಗಾಯನ ನಿರೂಪಣಾ ಸುಭಗಶೈಲಿ, ಜೊತೆಗೆ ಮಧುಮಧುರ ಹೊಸಗನ್ನಡದ ಪದಗಳ ಪ್ರಯೋಗ, ಇವೆಲ್ಲಾ ಸೇರಿ ಪರಿಶುದ್ಧವಾದ ಹಾಲಿಗೆ ಪರಿಮಳ ರುಚಿ ಬಣ್ಣಗಳು ಸೇರಿದಂತಾಯಿತು. ಮರಾಠೀ ಗೋಡಗಾಣದ ಸಂಗೀತ ಶೈಲಿಯ, ಲಯ ವಿನ್ಯಾಸದಲ್ಲಿದ್ದ ಸೂಕ್ಷ್ಮತೆಗಳನ್ನು, ಪದಲಾಲಿತ್ಯಗಳನ್ನು, ನಾದದ ಗುಂಗನ್ನು ಕನ್ನಡ ಭಾವಗೀತೆಗಳು ಮೈದುಂಬಿಕೊಂಡು ಮತ್ತಷ್ಟು ಚಂದವಾದವು. ಅದರ ಜನಪ್ರಿಯತೆ ಎಷ್ಟು ಹೆಚ್ಚಾಯಿತೆಂದರೆ ಅವುಗಳ ಅನುಕರಣೆಯ ರೂಪಗಳೂ ಇನ್ನೊಂದು ಭಾಗದಲ್ಲಿ ಎಡೆಬಿಡದೆ ಮೂಡತೊಡಗಿದವು. ಸುಶೀಲಾಟೇಂಬೆಯವರು ಹಾಡಿದ 'ಬೇಡ ಕೃಷ್ಣಾಗೋಕುಳ ಚೆನ್ನಾ' ಎಂಬ ಧ್ವನಿ ಮುದ್ರಿಕೆಯಂತೂ ಕನ್ನಡ ಚಲನಚಿತ್ರ' ಸಂತ ತುಕಾರಾಂ'ನಲ್ಲಿ ಮೂಲಧಾಟಿಯನ್ನೇ ಉಳಿಸಿಕೊಂಡು - 'ಬೇಡಕೃಷ್ಣಾರಂಗಿನಾಟ ಎಂಬ ಪಲ್ಲವಿಯಿಂದ, ಜನಪ್ರಿಯವಾದ ಗೀತೆಯಾಯಿತು. ಹೆಚ್.ಎಂ.ವಿ. ಕಂಪನಿಯಲ್ಲಿ ಕನ್ನಡದ ಹಾಡುಗಬ್ಬಗಳ ಒಂದು ಹಬ್ಬವೇ ಪ್ರಾರಂಭವಾಯಿತು. ಕವಿ ಬೇಂದ್ರೆಯವ 'ತುಂತುಂ ತುಂಬಿ ಬಂದಿತ್ತು', 'ಉತ್ತರಧ್ರುವದಿಂ', 'ನನ್ನ ಹರಣ ನಿನಗೆ ಶರಣ' - 'ನಾನು ಬಡವಿ ಆತ ಬಡವ' - 'ಬಂತಿದೋಶೃಂಗಾರಮಾಸ' ಕೀರ್ತಿನಾಥ ಕುರ್ತಕೋಟಿಯವರ 'ಅರಳದು ಪ್ರೇಮದ ಮೃದು ಕುಸುಮ' ಅಂದು ಅತ್ಯಂತ ಜನಪ್ರಿಯವಾದ ಗೀತೆಗಳಾಗಿದ್ದವು.

ಹಿಂದೂಸ್ತಾನಿ ಸಂಗೀತ ವಿದ್ವಾಂಸರಾದ ಭೀಮಸೇನ ಜೋಶಿಯವರು ಹಾಡಿದ್ದ 'ನಾನು ಬಡವಿ' ಶೃಂಗಾರಮಾಸ - 'ಅರಳದು ಪ್ರೇಮದ ಮೃದು ಕುಸುಮ' ಗೀತೆಗಳು ಅಂದಿನ ರಸಿಕರ ಕವಿಗೆ ಹಬ್ಬದೌತಣವಾಗಿತ್ತು. ಮಲ್ಲಿಕಾರ್ಜುನ ಮನ್ಸೂರರು ಹಾಡಿದ 'ತೇರನೆಳೆಯುತಾರ ತಂಗಿ' - ಎಂಬ ಶಿಶುನಾಳ ಷರೀಫರ ಪದವಂತೂ ಕರ್ನಾಟಕವನ್ನು ದಾಟಿ ಮಹಾರಾಷ್ಟ್ರದಲ್ಲೂ ಸುಮಾರು ೧೯೩೩ ರ ಹೊತ್ತಿಗೆ ಜಗಜ್ಜನಿತವಾಗಿ ಹುಚ್ಚು ಹಿಡಿಸಿತ್ತು.

* * *

# ಅಧ್ಯಾಯ ೭ - ಸುಗಮ ಸಂಗೀತ ಮತ್ತು ಆಕಾಶವಾಣಿ

**ಮೈಸೂರು ಆಕಾಶವಾಣಿ**

ನಮ್ಮ ಇಂದಿನ ಸುಗಮಸಂಗೀತಕ್ಕೆ ಭದ್ರವಾದ ಬುನಾದಿ ಹಾಕಿಕೊಟ್ಟ ಮಾಧ್ಯಮಗಳಲ್ಲಿ ಮೊದಲನೇಯ ಸ್ಥಾನದಲ್ಲಿ ಆಕಾಶವಾಣಿ ನಿಲ್ಲುತ್ತದೆ. ಇದಕ್ಕೂ ಸುಗಮಸಂಗೀತಕ್ಕೂ ಇರುವ ಬೆಸುಗೆ ನಿರಂತರವಾದದ್ದು. ಪ್ರಾಚೀನವಾದದ್ದೂ ಕೂಡ. ಆಕಾಶವಾಣಿಯಿಂದ ಬಿತ್ತರಗೊಂಡ ಶಾಸ್ತ್ರೀಯ ಸಂಗೀತದ ಮರುಹುಟ್ಟೇ ಇಂದಿನ ಸುಗಮಸಂಗೀತವಾಯಿತೆಂಬುದಕ್ಕೆ ಅನೇಕ ಆಧಾರಗಳು ದೊರೆಯುತ್ತವೆ.

ಈಗ ಮನೆ ಮಾತಾಗಿರುವ ರೇಡಿಯೋ ಮೂಲತಃ ಸಂಗೀತ ಪ್ರಸಾರಕ್ಕಾಗಿ ಸೃಷ್ಟಿಯಾದ ಸಾಮಗ್ರಿಯಲ್ಲದಿದ್ದರೂ, ಅದು ಜನ್ಮ ತಾಳಿ ಎರಡು ಮೂರು ದಶಕಗಳೊಳಗಾಗಿ ಈ ಶತಮಾನದಲ್ಲಿ ಜನತೆ ಸಂಗೀತವನ್ನು ಮನದಣಿಯುವ ಪ್ರಮಾಣದಲ್ಲಿ ಸವಿಯಲು ಅವಕಾಶ ಮಾಡಿಕೊಟ್ಟ ಅತ್ಯಂತ ಪ್ರಭಾವಶಾಲಿ ಸಾಧನವಾಗಿ ಬೆಳೆದಿದೆ.

೧೯೩೫ ರಲ್ಲಿ ಡಾ|| ಎನ್. ಗೋಪಾಲಸ್ವಾಮಿ ಎಂಬುವರು ಹವ್ಯಾಸಕ್ಕಾಗಿ ತಮ್ಮ ಮನೆಯಲ್ಲಿ ಪ್ರಾರಂಭಿಸಿದ ಪ್ರಸಾರ ಕೇಂದ್ರವೇ ಸರ್ಕಾರದ ತೆಕ್ಕೆಗೆ ಸೇರಿ 'ಆಕಾಶವಾಣಿ' ಎಂಬ ಹೆಸರನ್ನು ಪಡೆಯಿತು. ಆಟಕ್ಕಾಗಿ ಇದ್ದಂತಹ ೨೦೫ ಟ್ರಾನ್ಸ್‌ಮೀಟರ್‌ನ ಶಕ್ತಿ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡಿತು.

ಬ್ರಿಟಿಷ್ ಆಳ್ವಿಕೆಯ ಕಾಲದಲ್ಲೂ ನಮ್ಮ ರೇಡಿಯೋ ಕಾರ್ಯಕ್ರಮಗಳಲ್ಲಿ ಸಂಗೀತಕ್ಕೆ ಹೆಚ್ಚು ಸಮಯ ಮೀಸಲಾಗಿತ್ತು. ಆದರೆ ಸುಗಮಸಂಗೀತವೆಂಬ ಹೆಸರೇ ಆಕಾಶವಾಣಿಯಲ್ಲಿ ಕೇಳಿ ಬಂದಿರಲಿಲ್ಲ; ಸಂಗೀತ ಕಾರ್ಯಕ್ರಮಗಳನ್ನು, ಶಾಸ್ತ್ರೀಯ ಸಂಗೀತ, ಲಘು ಶಾಸ್ತ್ರೀಯ ಸಂಗೀತ, ಲಘು ಸಂಗೀತ, ಚಲನಚಿತ್ರ ಸಂಗೀತವೆಂದು ನಾಲ್ಕು ಭಾಗಗಳಾಗಿ ವರ್ಗೀಕರಿಸಲಾಗಿತ್ತು. ಶಾಸ್ತ್ರೀಯ ಸಂಗೀತದಲ್ಲಿ ರಾಗ, ಚೀಜ್, ಕೀರ್ತನೆ ಮುಂತಾದ ಶಾಸ್ತ್ರೀಯ ಕೃತಿಗಳು ಪ್ರಸಾರವಾಗುತ್ತಿದ್ದರೆ, ಲಘು ಶಾಸ್ತ್ರೀಯ ಸಂಗೀತದಲ್ಲಿ, ಠುಮರಿ, ದಾದರಾ, ಟಪ್ಪ, ಹೋರಿ, ಜಾವಳಿ, ಪದ, ತಿಲ್ಲಾನಗಳು ಪ್ರಸಾರವಾಗುತ್ತಿದ್ದವು. 'ಲಘು ಸಂಗೀತ'ದಲ್ಲಿ ಭಕ್ತಿ ಸಂಗೀತ, ರಂಗ ಗೀತೆ, ಜನಪದ ಗೀತೆಗಳು ಪ್ರಸಾರವಾಗುತ್ತಿದ್ದವು. ಪ್ರಾರಂಭಿಕ ದಿನಗಳಲ್ಲಿ ಆಕಾಶವಾಣಿಯಲ್ಲಿ ಹೀಗೆ ವರ್ಗೀಕರಿಸಲ್ಪಟ್ಟು ಶಾಸ್ತ್ರೀಯ ಸಂಗೀತದ ನಿಯಮಗಳಾದ 'ಶ್ರುತಿ-ರಾಗ-ತಾಳ-ಲಯ ಇತ್ಯಾದಿಗಳನ್ನು ಅನುಸರಿಸಿಕೊಂಡು, ಹಾಡಿನ ಭಾವಾರ್ಥ ಪದಲಾಲಿತ್ಯಗಳಿಗೆ ಹೆಚ್ಚಿನ ಒತ್ತು ಕೊಟ್ಟಿದ್ದ ನವಜಾತ 'ಲಘು ಸಂಗೀತ' ಶಾಸ್ತ್ರೀಯ ಸಂಗೀತದ ಜೊತೆ ಜೊತೆಯಲ್ಲಿಯೇ - ಆಕಾಶವಾಣಿಯಲ್ಲಿ ಬೆಳೆದು ಬಂದಿತು.

೧೯೪೦ರ ನಂತರ 'ಲಘು ಸಂಗೀತ' ಶಾಸ್ತ್ರೀಯ ಸಂಗೀತದ ನೆರಳು ಹುಟ್ಟಿಕೊಂಡಿತು. ಇದಕ್ಕಾಗಿ ತಮ್ಮ ಕೊರಳು ಕೊಟ್ಟವರೆಲ್ಲ ಪ್ರಖ್ಯಾತ ಸಂಗೀತ ವಿದ್ವಾಂಸರುಗಳೇ ಎಂಬುದು ಗಮನಿಸಬೇಕಾದ ಸಂಗತಿ. ಕುವೆಂಪು, ಬೇಂದ್ರೆ, ಪು.ತಿ.ನ, ಮುಂತಾದ ಎಲ್ಲ ಮಹನೀಯ ಕವಿಗಳ ಕವಿತೆಯನ್ನು ಹಾಡುವುದಕ್ಕೆ ತೋರಿಸಿಕೊಟ್ಟವರು. ಪ್ರಸಿದ್ಧ ಹಿಂದೂಸ್ತಾನಿ ಮತ್ತು ಕರ್ನಾಟಕ ವಿದ್ವಾಂಸರುಗಳಾದ 'ಭೀಮಸೇನ ಜೋಶಿ', ಜಯವಂತಿ ದೇವಿ ಹೀರೇಬೆಟ್, ಬಿ.ಜಿ. ರಾಮನಾಥ್, ಭಾಗವತ್, ಎಂ.ಎಲ್. ವಸಂತಕುಮಾರಿ, ಕುಮಾರ ಗಂಧರ್ವ, ಮುಂತಾದವರು. ಈ ವೇಳೆಗಾಗಲೇ ಇವರು ಹಾಡಿದ ಊ.ಒ.ಗಿ. ದನಿ ತಟ್ಟೆಗಳು ಧ್ವನಿಮುದ್ರಿತವಾಗಿ ಜನಪ್ರಿಯಗಳಿಸಿದ್ದವು. ಕರ್ನಾಟಕ ಸಂಗೀತದಲ್ಲಿ ದಿಗ್ಗಜರೆನಿಸಿದವರೂ, ಹಿಂದೂಸ್ತಾನಿ ಸಂಗೀತದಲ್ಲಿ ಅದ್ವಿತೀಯರೆನಿಸಿದವರ ಅನೇಕ ಗೀತೆಗಳು ಆಕಾಶವಾಣಿಯಲ್ಲಿ ಪ್ರಸಾರವಾದವು. ಕವಿಗಳಿಗೆ ಒಮ್ಮೆ ನೂರು ರೂಪಾಯಿ ಕೊಟ್ಟರೆ ಅವರ ಎಲ್ಲ ಹಾಡುಗಳೂ ಆಕಾಶವಾಣಿಯ ಪ್ರಸಾರಕ್ಕೆ ಒಳಪಡುವ ಗುತ್ತಿಗೆ ಕ್ರಮವಿದ್ದು ನಂತರ ಅದನ್ನು ಬದಲಾಯಿಸಲಾಯಿತು. ಆಕಾಶವಾಣಿ ಸ್ವಾಯತತ್ತೆಯನ್ನು ಪಡೆಯದ ಮುನ್ನ ಹಾಡುವ ಕಲಾವಿದರಿಗೆ ಅರಿಶಿನ, ಕುಂಕುಮ, ಪುರುಷ ಕಲಾವಿದರಿಗೆ ತೆಂಗಿನಕಾಯಿ ತಾಂಬೂಲದ ಮರ್ಯಾದೆ ಮಾಡಲಾಗುತ್ತಿತ್ತು. ಎ.ಎನ್. ಮೂರ್ತಿರಾವ್, ನಾ. ಕಸ್ತೂರಿ, ಮುಂತಾದವರು ನಿಲಯಕ್ಕೆ ಬಂದು ಸೇರಿದ ಮೇಲೆ ನಿಲಯದ ಕಾರ್ಯಕ್ರಮಗಳು ಮತ್ತಷ್ಟು ಚುರುಕಾದವು.

ಸಿತಾರ್ ವಾದನ ತಾಂತ್ರಿಕ ರವಿಶಂಕರ್ ಜನಪದ ಮಟ್ಟುಗಳನ್ನು ಹಿಡಿದು ಆಕಾಶವಾಣಿಗಾಗಿ ಅನೇಕ ಲಲಿತ ಗೀತೆಗಳನ್ನು ರಚಿಸಿದರು. ವಾದ್ಯವೃಂದದಲ್ಲಿ ನುಡಿಸಲೆಂದು ಅವರು ಕಲ್ಪಿಸಿರುವ ರಮಣೀಯ ರಾಗಸಂಯೋಜನೆಗಳು ಅನುಕರಣೀಯವಾದಂಥವು. ದಕ್ಷಿಣ ಕರ್ನಾಟಕದ ಶಾಸ್ತ್ರೀಯ ಸಂಗೀತ ಛಾಯೆಯಲ್ಲಿ ಸುಗಮಸಂಗೀತ ರೂಪುಗೊಳ್ಳಲು ಸಹಾಯ ಮಾಡಿದ ಅನೇಕ ವಿದ್ವಾಂಸರ ಪೈಕಿ ಇಬ್ಬರು ಶ್ರೇಷ್ಠ ವೈಣಿಕರ ಹೆಸರು ಅಮರವಾದವು. ಅವು 'ಈಮನಿ ಶಂಕರ ಶಾಸ್ತ್ರಿ' ಮತ್ತು ವೀಣಾ ದೊರೆಸ್ವಾಮಿ ಅಯ್ಯಂಗಾರ್ ಅವರದು. ಆಕಾಶವಾಣಿ ಪ್ರಸಾರ ಮಾಡಿದ ಅನೇಕ ಗೀತಮುದ್ರೆಗಳು ಇವರ ಹೆಸರನ್ನು ಅನನ್ಯವಾಗಿಸಿತು. ಕರ್ನಾಟಕ ಶಾಸ್ತ್ರೀಯ ಸಂಗೀತದ ಪಿಟೀಲುವಾದಕರಾಗಿ, ಆಕಾಶವಾಣಿಯ ನಿಲಯದ ಕಲಾವಿದರಾಗಿ, ತಾವೂ ಕಲಾವಿದರಾಗಿ ಬೆಳೆಯುತ್ತಾ ತಮ್ಮ ಪರಿಸರವನ್ನೂ ಬೆಳಗಿಸಿದವರು. ಎ.ವಿ. ಕೃಷ್ಣಮಾಚಾರ್ ಅವರು. 'ಸುಗಮಸಂಗೀತ' ಪ್ರಕಾರಕ್ಕೆ ಅತ್ಯಂತ ಶ್ರೇಷ್ಠವಾದ ಗೀತೆಗಳನ್ನು ಕೊಟ್ಟು 'ಪದ್ಮಚರಣ್' ಎಂದೇ ಸುಗಮಸಂಗೀತ' ವಲಯದಲ್ಲಿ ಪ್ರಸಿದ್ಧರಾದರು. ಸುಗಮಸಂಗೀತಕ್ಕೆ ತಮ್ಮದೇ ಆದ ಶ್ರೇಯಸ್ಸನ್ನು ತಂದು ಕೊಟ್ಟರು.

೧೯೪೫ರ ಪ್ರಾರಂಭದಲ್ಲಿಯೇ ಕನ್ನಡದ ಕೋಗಿಲೆ ಎನಿಸಿದ ಪಾಂಡೇಶ್ವರದ ಕಾಳಿಂಗರಾಯರು ಮೈಸೂರು ಆಕಾಶವಾಣಿಯಲ್ಲಿ ಪ್ರತಿಸ್ಥಾಪಿಸಿದ್ದರು. 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಅದಾಗಲೇ ಧ್ವನಿಮುದ್ರಿತವಾಗಿ ಜನಪ್ರಿಯವಾಗಿತ್ತು. ಜನಪ್ರಿಯತೆ ಎಷ್ಟಿತ್ತೆಂದರೆ ಆಕಾಶವಾಣಿ ಪ್ರತಿದಿನವೂ ಪ್ರಾರಂಭದ ಹಾಡಾಗಿ ಈ ಹಾಡನ್ನು ಬಿತ್ತರಿಸುತ್ತಿತ್ತು. ಕಾಳಿಂಗರಾಯರ ಹಾಡಿನ ನಂತರ ಪ್ರಾರ್ಥನೆ ಮಿಕ್ಕ ಕಾರ್ಯಕ್ರಮಗಳು ಬಿತ್ತರಗೊಳ್ಳುತ್ತಿದ್ದವು. ಪ್ರತಿದಿನ ಮುಂಜಾನೆ ರಾಯರ ಹಾಡಿನಿಂದಲೇ ಆಕಾಶವಾಣಿಯು ಪ್ರಾರಂಭವಾಗಿ ರಾಯರ 'ಉದಯವಾಗಲಿ' ಹಾಡು ಆಕಾಶವಾಣಿಯ ಸಿಗ್ನೇಚರ್ ಟ್ಯೂನಾಗಿತ್ತು. ಕಾಳಿಂಗರಾಯರಿಲ್ಲದೆ ಆಕಾಶವಾಣಿಯ ಯಾವ ಕಾರ್ಯಕ್ರಮವೂ ಸಪ್ಪೆ ಎನಿಸುವ ಮಟ್ಟಿಗೆ ರಾಯರು ಆಕಾಶವಾಣಿಯ ಅವಿಭಾಜ್ಯ ಅಂಗವಾಗಿದ್ದರು. ಅವರಿಗೂ ಆಕಾಶವಾಣಿಗೂ ಇದ್ದ ಸಂಬಂಧ ಕಡೆಯವರೆಗೂ ಮಧುರ ಸ್ಪರ್ಶಿಯಾಗಿಯೇ ಇತ್ತು.

ಈ ಮಧ್ಯೆ 'ಹೂವಿನಕೋರಿಕೆ' - ಎಂಬ ವಿನೂತನ ಕಾರ್ಯಕ್ರಮವೊಂದನ್ನು ಆಕಾಶವಾಣಿ ಹಮ್ಮಿಕೊಂಡಿತು. ಕವಿಯ ಕವಿತೆಗೆ ಪ್ರಸಿದ್ಧ ಗಾಯಕರು ರಾಗ ಸಂಯೋಜಿಸಿ ಹಾಡುವುದು. ಅಂದರೆ ಒಂದೇ ಗೀತೆಯನ್ನು ಹಲವಾರು ಗಾಯಕರು ರಾಗ ಸಂಯೋಜಿಸಿ ಹಾಡುವುದು. ಕವಿಯ ಎದುರಿನಲ್ಲಿಯೇ ಪ್ರಸ್ತುತ ಪಡಿಸುವುದು. ಹಲವಾರು ಗಾಯಕರ ಸಂಯೋಜನೆಗಳಲ್ಲಿ ಕವಿ ತನಗೆ ಪ್ರಿಯವಾದ ರಾಗಸಂಯೋಜನೆಯೊಂದನ್ನು ಆರಿಸಿ ಮೆಚ್ಚುಗೆ ಸೂಚಿಸುವುದು. ಈ ಕಾರ್ಯಕ್ರಮ ಅತ್ಯಂತ ಜನಪ್ರಿಯವಾಯಿತಲ್ಲದೆ, ಹತ್ತಾರು ವರುಷ ಆಕರ್ಷಣೆ ಕಳೆದುಕೊಳ್ಳದೆ ನಡೆದು ಬಂದಿತು. ಈ ಕಾರ್ಯಕ್ರಮದಲ್ಲಿ ಪಂಡಿತ್ ಭೀಮಸೇನ್ ಜೋಶಿ, ಟಿ.ರುಕ್ಮಿಣಿ, ಸಿ.ಕೆ.ತಾರಾ, ವಸುಮತಿ, ಎಂ.ಎನ್.ರತ್ನ, ಆರ್.ಕೆ. ಶ್ರೀಕಂಠನ್, ವರಾಹಸ್ವಾಮಿ, (ಗಿಟಾರ್ ಮತ್ತು ಗೋಟುವಾದ್ಯ ವಾದಕರು) ಶೆಲ್ಲುಪಿಳ್ಳೈ ಅಯ್ಯಂಗಾರ್, ದೊರೆಸ್ವಾಮಿ, ದಿಂಡಿಗಲ್ ನಟರಾಜನ್, ಎಮ್.ವಿ.ನಾಗೇಂದ್ರಪ್ಪ (ಕ್ಲಾರಿಯೋನೆಟ್ ಮತ್ತು ಡಬ್ಬಲ್ ಬೇಸ್ ವಾದಕರು) ಮುಂತಾದ ಕಲಾವಿದರು ಭಾಗವಹಿಸಿದ್ದರು. ಕುವೆಂಪು, ಡಿ.ವಿ.ಜಿ. ಮುಂತಾದ ಕವಿಗಳು ಭಾಗವಹಿಸಿ ಈ ಕಾರ್ಯಕ್ರಮಕ್ಕೆ ಪ್ರಮುಖ ಕೇಂದ್ರ ವ್ಯಕ್ತಿಗಳಾದರು. ಈ ಕಾರ್ಯಕ್ರಮದಲ್ಲಿ ಎಲ್ಲಾ ಕಲಾವಿದರೂ ಶಾಸ್ತ್ರೀಯ ಸಂಗೀತಜ್ಞರೇ ಆಗಿದ್ದು, ಹಾಡುಗಾರರೆಲ್ಲ ಶಾಸ್ತ್ರೀಯ ಸಂಗೀತಗಾರರೇ ಆಗಿದ್ದರು - ಆಕಾಶವಾಣಿಯಲ್ಲಿ ಬಿತ್ತರಗೊಳಿಸುತ್ತಿದ್ದ ಹಾಡುಗಳು 'ಕನ್ನಡ ಗೀತೆ, ದೇಶಭಕ್ತಿ ಗೀತೆ, ಭಾವಗೀತೆಯ ಎಲ್ಲಾ ಪ್ರಕಾರಗಳೂ ಆಗಿದ್ದವು.

ಪು.ತಿ.ನ. ಅವರ ಗೀತರೂಪಕ್ಕೆ ಪ್ರಸಿದ್ಧ ವಾಗ್ಗೇಯಕಾರರಾದ ಮೈಸೂರು ವಾಸುದೇವಾಚಾರ್ಯರು ಹಾಡಿದ್ದುದು, 'ಸುಗಮಸಂಗೀತದ ಇತಿಹಾಸಕ್ಕೆ ವಿಶೇಷವಾದ ಮೈಲಿಗಲ್ಲಾಯಿತು. ಹಾಗೆಯೇ ಕರ್ನಾಟಕ ಸಂಗೀತ ವಿದ್ವಾಂಸರೂ ಗಾಯಕರೂ ಆಗಿದ್ದ ಚೆಟ್ಟೈ ಕೃಷ್ಣಯ್ಯಾಂಗಾರ್ ಅವರೂ ಗೀತ ರೂಪಕ ಹಾಡುಗಳನ್ನು ಹಾಡಿ ಇತಿಹಾಸ ಸೃಷ್ಟಿ ಮಾಡಿದರು. ಇದು ಸುಗಮಸಂಗೀತ ಕ್ಷೇತ್ರಕ್ಕೆ ಮೈಸೂರು ಆಕಾಶವಾಣಿ ನೀಡಿದ ಹೆಮ್ಮೆಯ ದಾಖಲೆಯಾಯಿತು.

**ಬೆಂಗಳೂರು ಆಕಾಶವಾಣಿ**

೧೯೫೫ರ ನಂತರ ಮೈಸೂರು ಆಕಾಶವಾಣಿ ಬೆಂಗಳೂರಿಗೆ ಬಂದು ನೆಲೆಸಿತು. ಕವಿಗಳು ಕವನಗಳನ್ನು ಉತ್ಸಾಹದಿಂದ ಕಳಿಸುವುದು ಮತ್ತು ಕಲಾವಿದರು ಬಂದು ಸಂತೋಷದಿಂದ ಹಾಡುವುದು ನಡೆದೇ ಇತ್ತು. ಈ ಮಧ್ಯೆ ಕೇಂದ್ರ ವಾರ್ತಾಮಂತ್ರಿಯಾಗಿದ್ದ ಡಾ|| ಬಿ.ಎ. ಕೇಸ್ಕರ್ ಅವರು ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಿದ್ದ ಹಿಂದಿ ಭಾಷೆಯ ಚಲನಚಿತ್ರ ಗೀತೆಗಳನ್ನು ನಿಲ್ಲಿಸಿ ಅದರ ಜಾಗಕ್ಕೆ ಭಾವಗೀತೆಗಳನ್ನು ಪ್ರಸಾರ ಮಾಡಬೇಕೆಂದು ಆದೇಶ ಕಳಿಸಿದರು. ನವಷಾದ್, ಶಂಕರ್ ಜೈಕಿಷನ್‌ರಂತಹ ಮಹಾನ್ ಕಲಾವಿದರ ಸಂಗೀತ, ಮನ್ನಾಡೆ, ಆಶಾ, ಲತಾ ಮಂಗೇಶ್ಕರ್, ಮುಖೇಶ್‌ರಂತಹವರ ಹಾಡುಗಾರಿಕೆ ನಿಂತುಹೋಯಿತು. ಅದಕ್ಕೆ ಸಮಾನಂತರವಾಗಿ ಅಷ್ಟೇ ಜನಪ್ರಿಯತೆ ಬೇಡುವ ಹಾಡುಗಳ ಪ್ರಸಾರಣ ಅಗತ್ಯವಾಯಿತು. ಜನಪ್ರಿಯ ಹಿಂದಿ ಹಾಡುಗಳು ಪ್ರಸಾರವಾಗುತ್ತಿದ್ದ ಸಮಯದಲ್ಲಿ ಕವಿತಾಗಾಯನ ಪ್ರಾರಂಭವಾಯಿತು. ಸಾಮಾಜಿಕ ಸಂಸ್ಕೃತಿಯ ಕಾಳಜಿಯಿಂದ ಉತ್ಕೃಷ್ಟವಾದ ಕವಿತೆಗಳನ್ನೆ ಆರಿಸಿ ಹಾಡಲಾಯಿತು.

ಬೆಂಗಳೂರು ಆಕಾಶವಾಣಿಯಲ್ಲಿ ಯಾವಾಗ ಹಿಂದಿ ಹಾಡುಗಳು ನಿಂತವೋ ಕೂಡಲೇ ಈ ಸಮಯವನ್ನು ಶ್ರೀಲಂಕಾ ಬ್ರಾಡ್‌ಕಾಸ್ಟಿಂಗ್ ಕಂಪನಿಯು ಉಪಯೋಗಿಸಿಕೊಂಡು 'ಬಿನಾಕಾ ಗೀತಮಾಲೆ' ಯನ್ನು ಎಂದರೆ ಮತ್ತೇ ಹಳೆಯ ಹಿಂದಿ ಹಾಡುಗಳ ಪ್ರಸರಣವನ್ನು ಆರಂಭಿಸಿತು. 'ಅಮೀನ್ ಸಯಾನಿ'ಯಂತಹ ಪ್ರಸಿದ್ಧ ನಿರೂಪಣಾಕಾರನ ಪ್ರಭಾವದಿಂದ ಹಿಂದಿ ಹಾಡುಗಳ ಬಿನಾಕಾಮಾಲೆಯು ಬಹು ಬೇಡಿಕೆಯ ಕಾರ್ಯಕ್ರಮವಾಯಿತು. ಅತ್ಯುತ್ತಮ ಹತ್ತು ಹಾಡುಗಳಲ್ಲಿ - ಶ್ರೋತೃಗಳು ಮೆಚ್ಚಿದ ಹಾಡುಗಳಿಗೆ ಬಹುಮಾನ ನೀಡುವ ಆಮಿಷವೂ ಸೇರಿಕೊಂಡು ಜನಪ್ರಿಯತೆಯ ತುತ್ತತುದಿಗೇರಿತು. ಈ ಸಮಯದಲ್ಲಿ 'ಶ್ರೀಲಂಕಾ ಪ್ರಸರಣಕ್ಕೆ ಸಂವಾದಿಯಾಗಿ' ಬೆಂಗಳೂರು ಆಕಾಶವಾಣಿ 'ವಿವಿಧ ಭಾರತಿ' ಎಂಬ ವಾಣಿಜ್ಯೋದ್ಯಮದ ಪ್ರಣಾಳಿಕೆಯನ್ನು ಹೊಸದಾಗಿ ತೆರೆದು ಮತ್ತೆ ಹಿಂದಿ ಹಾಡುಗಳನ್ನು ಪ್ರಸಾರ ಮಾಡಲು ತೊಡಗಿತು. ಆಗ ಎಂ.ಡಿ. ಪಾರ್ಥಸಾರಥಿ ಎನ್ನುವವರು ಮದ್ರಾಸಿನ ಹೆಚ್.ಎಂ.ವಿ. ಯಿಂದ ಬೆಂಗಳೂರು ಆಕಾಶವಾಣಿಗೆ ಬಂದು ಸೇರಿದರು. ೧೯೫೭ರಲ್ಲಿ ಬೆಂಗಳೂರಿನಲ್ಲಿ ವಿವಿಧ ಭಾರತಿ ಪ್ರಾರಂಭವಾದಾಗ 'ಸುಗಮಸಂಗೀತ' ಎಂದು ನಾಮಕರಣ ಮಾಡಿತು. ಶಾಸ್ತ್ರೀಯ ಸಂಗೀತವಲ್ಲದ ಪ್ರಕಾರಗಳನ್ನು ಸುಗಮಸಂಗೀತವೆಂದು ಕರೆಯಿತು. ಆಕಾಶವಾಣಿಯಲ್ಲಿ ತಮ್ಮ ಕವಿತೆ ಬಿತ್ತರಿಸಲು, ತಮ್ಮ ಕೊರಳು ಕೇಳಲು ಕವಿ ಕಲಾವಿದರ ಹಾತೊರೆಯುತ್ತಿದ್ದುದು ಸರ್ವೇಸಾಮಾನ್ಯವಾಗಿತ್ತು. ಇದು ಭಾರತದ ಎಲ್ಲಾ ಭಾಷೆಯಲ್ಲೂ ಹೆಚ್ಚು ಕಡಿಮೆ ಒಂದೇ ಸಮಯದಲ್ಲಿ ಬೆಳೆಯುತ್ತ ಬಂದಿತೆನ್ನಬಹುದು.

ಆಕಾಶವಾಣಿ ಸುಬ್ರಹ್ಮಣ್ಯ ಭಾರತಿ, ರವೀಂದ್ರನಾಥ ಠಾಕೂರ್, ನಜರುಲ್ ಇಸ್ಲಾಂ ಮುಂತಾದ ಮಹಾಕವಿಗಳ ಕೃತಿಗಳನ್ನು ತಮ್ಮ ಲಲಿತ ಸಂಗೀತದ ಸಾಮಗ್ರಿಯಾಗಿ ಬಳಸುತ್ತಾ, ಶ್ರೋತೃವರ್ಗವನ್ನು ಹಿಡಿದಿಟ್ಟುಕೊಳ್ಳುವ ಪ್ರಯತ್ನದಲ್ಲಿ ಅತ್ಯಂತ ಯಶಸ್ಸನ್ನು ಪಡೆದಿತ್ತು. ಮದರಾಸಿನ ಎಂ.ಎಲ್. ವಸಂತಕುಮಾರಿ ಕರ್ನಾಟಕ ಸಂಗೀತದಲ್ಲಿ ದೊಡ್ಡ ಹೆಸರು ಮಾಡಿದ್ದರು. ಅವರು ಹಾಡಿದ 'ಬಾರೋ ಕೃಷ್ಣಯ್ಯ ದೇವರನಾಮ - ಮಲ್ಲಿಕಾರ್ಜುನ ಮನ್ಸೂರರು ಹಾಡಿದ 'ಅಕ್ಕ ಕೇಳವ್ವ ನಾನೊಂದ ಕನಸ ಕಂಡೆ' ವಚನ - ಭೀಮಸೇನ ಜೋಶಿಯವರು ಹಾಡಿದ 'ದೇವ ವಿಠ್ಠಲ' ಎಂಬ ಅಭಂಗ್, ಇವೆಲ್ಲಾ ಸುಗಮಸಂಗೀತದತ್ತ ಶ್ರೋತೃಗಳನ್ನು ಸೆಳೆಯುವುದರಲ್ಲಿ ಪರಿಣಾಮ ಕಾರಿಯಾಗಿದ್ದವು. ಇವು ಸುಗಮಸಂಗೀತದ ಶ್ರೀಮಂತಿಕೆಯನ್ನು ಹೆಚ್ಚಿಸಿದವು. ಕನ್ನಡದ ದೇವರನಾಮಗಳು, ವಚನ, ನಾಡಪದಗಳು, ಶಿಶುನಾಳ ಷರೀಫರ ಅನುಭಾವ ಗೀತೆಗಳು ಬಾಳಪ್ಪ ಹುಕ್ಕೇರಿ, ಭಾಗವತ್ ಮುಂತಾದವರಿಂದ ಪ್ರಸ್ತುತಿಯಾಗುತ್ತಾ ಸುಗಮಸಂಗೀತದ ಸರಕುಗಳಾಗಿದ್ದವು. ಹೀಗೆಯೇ ಹಿಂದಿ ಭಾಷೆಯಲ್ಲಿ ಭಜನ್‌ಗಳೂ, ಮರಾಠಿಯಲ್ಲಿ ಅಭಂಗ್‌ಗಳೂ, ಬಂಗಾಲಿಯಲ್ಲಿ ಬಾವುಲ್‌ಗಳೂ, ಪಂಜಾಬಿಯಲ್ಲಿ 'ಭಾಂಗ್ರ'ಗಳೂ ಅಸ್ಸಾಮಿಯಲ್ಲಿ 'ಬಹುಗೀತ್'ಗಳೂ ಸುಗಮಸಂಗೀತದ ಪ್ರವಾಹದಲ್ಲಿ ಬೆರೆತು ಜನಪ್ರಿಯವಾಗಿದ್ದವು.

ಸುಗಮಸಂಗೀತಕ್ಕೆ ಹರಯ ಬಂದಂತೆ, ಎಲ್ಲ ಕಡೆಯಲ್ಲೂ ಶ್ರೋತೃಗಳ ಪ್ರೋತ್ಸಾಹ, ಜನಪ್ರಿಯತೆಗಳು ದುಪ್ಪಟ್ಟಾದವು. ಆಕಾಶವಾಣಿಯ ಕಾರ್ಯಕ್ರಮಕ್ಕಾಗಿ ಜನರು ಹಾತೊರೆಯುತ್ತಿದ್ದರು. ಲಘು ಸಂಗೀತವೆಂದು, ಲಲಿತ ಸಂಗೀತವೆಂದು, ಭಾವ-ಗೀತಾ ಗಾಯನವೆಂದು ಕರೆಸಿಕೊಳ್ಳುತ್ತಿದುದು 'ಸುಗಮಸಂಗೀತ' ವೆಂದು ಕರೆದುಕೊಂಡಿತು. 'ಸರಳವಾಗಿ', 'ಸರಾಗವಾಗಿ' ಎಲ್ಲ ವರ್ಗದ ಶ್ರೋತೃಗಳನ್ನು ರಂಜಿಸಬಲ್ಲದ್ದು ಎಂಬ ಕಾರಣದಿಂದ 'ಸುಗಮಸಂಗೀತ' ಎಂದೆನಿಸಿತು.

ಮೈಸೂರಿನಿಂದ ಬೆಂಗಳೂರಿಗೆ ಆಕಾಶವಾಣಿ ೧೯೫೮ರಲ್ಲಿ ಬಂದಾಗ, ಸುಗಮಸಂಗೀತದ ಮೊದಲ ನಿರ್ಮಾಪಕರಾಗಿದ್ದವರು ಎಂ.ಡಿ. ಪಾರ್ಥಸಾರಥಿಯವರು, ಶಾಸ್ತ್ರೀಯ ಸಂಗೀತದಲ್ಲಿ ಅನನ್ಯತೆಯನ್ನು ಸಾಧಿಸಿದ್ದ ಪಾರ್ಥಸಾರಥಿಯವರು 'ಸುಗಮಸಂಗೀತ'ದ ಬಗೆಗೆ ವಿಶೇಷ ಕಾಳಜಿ ವಹಿಸಿದ್ದರು. ಗೀತೆಯ ಸಾಹಿತ್ಯ-ಸಂಗೀತದ ಹೊಂದಾಣಿಕೆಯ ಬಗೆಗೆ ತಮಗೆ ಖಚಿತವೆನಿಸಿದಾಗ ಮಾತ್ರ ಆಕಾಶವಾಣಿಯಲ್ಲಿ ಪ್ರಸಾರ ಮಾಡುತ್ತಿದ್ದರು. ಕಲಾವಿದರಿಗೆ ತಾಲಿಮು ಕೊಡದೆ ಧ್ವನಿಮುದ್ರಿಸುತ್ತಿರಲಿಲ್ಲ. ಅವರ ಅನೇಕ ರಾಗ ಸಂಯೋಜನೆಗಳು ಆಕಾಶವಾಣಿಯಲ್ಲಿ ಪ್ರಸಾರವಾದುವು. ಇದೇ ಪರಂಪರೆಯನ್ನು ಅನುಸರಿಸಿದವರು ಡಾ|| ವಿ.ದೊರೆಸ್ವಾಮಿ ಅಯ್ಯಂಗಾರ್, ವಿ.ಸೀತಾರಾಮಯ್ಯ, ನಾ.ಕಸ್ತೂರಿ, ಶ್ರೀರಂಗ ಮುಂತಾದ ಸಂಗೀತ ಸಾಹಿತ್ಯ ವಿದ್ವಾಂಸರುಗಳು.

ಸಿ.ಕೆ. ತಾರ, ಎಂ.ವಿ. ಮಾಲತಿ, ಎಸ್.ಕೆ. ವಸುಮತಿ, ಸರೋಜಾದೇವಿ, ಎನ್.ಎನ್. ರಾಮನ್, ಎಂ.ಎನ್.ರತ್ನ, ಕಮಲ, ಎಂ. ಪ್ರಭಾಕರ್, ದೇವಕಿರಾವ್, ವೈ.ಎನ್. ಇಂದಿರಾ, ಹೆಚ್.ಆರ್. ಲೀಲಾವತಿ, ಶ್ಯಾಮಲಾ ಭಾವೆ, ಹೆಚ್.ಕೆ. ನಾರಾಯಣ್, ಶ್ಯಾಮಲಾ ಜಾಗೀರ್‌ದಾರ್, ಮುಂತಾದವರು ಆಕಾಶವಾಣಿಯಲ್ಲಿ ಪ್ರಸಿದ್ಧರಾದರು. ಆಕಾಶವಾಣಿ ಪ್ರಸಾರ ಮಾಡುತ್ತಿದ್ದ 'ಗೀತ ರೂಪಕ' ಗಳಿಗೆಲ್ಲಾ ಇವರೇ ದನಿಯಾದರು. ಅನೇಕ ಸಂಗೀತ ರೂಪಕಗಳು ಬಾನುಲಿಯ ಕವಿಶ್ರೇಷ್ಠರಿಂದ ರಚಿಸಲ್ಪಟ್ಟು ಬಾನುಲಿಯಲ್ಲಿನ ಸಂಗೀತ ನಿರ್ದೇಶಕರಿಂದ ಸಂಯೋಜಿಸಲ್ಪಡುತ್ತಿತ್ತು. ಎ.ವಿ. ಕೃಷ್ಣಮಾಚಾರ್ಯರು ಬಾನುಲಿಯಲ್ಲಿ ಪಿಟೀಲು ವಿದ್ವಾಂಸರಾಗಿದ್ದರು. ಸುಗಮಸಂಗೀತದ ಸಂಗೀತ ನಿರ್ದೇಶಕರಾದ ನಂತರ 'ಪದ್ಮಚರಣ್' ಎಂದೇ ಪ್ರಖ್ಯಾತರಾಗಿ ಅನೇಕ ಭಾವಗೀತೆಗಳಿಗೆ ಗೀತರೂಪಕಗಳಿಗೆ ಸಂಗೀತ ನಿರ್ದೇಶನ ನೀಡಿ, ಕವಿತೆಯ ಅರ್ಥವನ್ನು ಚೆನ್ನಾಗಿ ಮನಗಂಡು, ಕವಿ ಹೃದಯದ ಆಳವನ್ನು ಅರಿತು ಸೂಕ್ತವಾದ ಸಂಯೋಜನೆ ಮಾಡಿ ಅತ್ಯಂತ ಜನಪ್ರಿಯರಾದರು. ಗೀತರೂಪಕಗಳು ಹುಚ್ಚೆಬ್ಬಿಸುವಷ್ಟು ಪ್ರಸಿದ್ಧಿಗಳಿಸಿದ್ದವು. ಎಸ್. ಕೃಷ್ಣಮೂರ್ತಿ (ವಾಗ್ಗೇಯಕಾರರಾದ ವಾಸುದೇವಾಚಾರ್ಯರ ಮೊಮ್ಮಗ) ವೀಣೆ ದೊರೆಸ್ವಾಮಿ ಅಯ್ಯಂಗಾರ್ ಮುಮತಾದವರು ಕಾರಂತರ 'ಕಿಸಾಗೌತಮ', ಪು.ತಿ.ನರಸಿಂಹಚಾರ್‌ರವರ ಎಲ್ಲಾ ಗೀತ ರೂಪಕಗಳನ್ನು ಸಂಗೀತಕ್ಕೆ ಅಳವಡಿಸಿ ಪ್ರಸಾರ ಮಾಡಿದರು. ಆಕಾಶವಾನಿಯಲ್ಲಿ ಗೋಟು ವಾದ್ಯದ ವರಾಹ ಸ್ವಾಮಿ, ವೀಣೆ ವೆಂಕಟ ಸುಬ್ಬರಾವ್, ಕ್ಲಾರಿಯೋನೆಟ್ ನಾಗೇಂದ್ರಪ್ಪ, ಪಿಟೀಲು ಎ.ವಿ. ಕೃಷ್ಣಮಾಚಾರ್, ಕೊಳಲು ರಂಗಪ್ಪ, ತಬಲ ಶೀನಪ್ಪ ಇವರು ಆರು ಜನರಿದ್ದ ವಾದ್ಯಮೇಳ ಅತ್ಯಂತ ಯಶಸ್ವಿ ಕಾರ್ಯಕ್ರಮವಾಗಿತ್ತು. ಭಾವಗೀತೆ, ಗೀತರೂಪಕಗಳ ಕಾರ್ಯಕ್ರಮಗಳಲ್ಲಿ ಇವು ಅದ್ಭುತವಾಗಿ ಮೇಳೈಸಿ ಹೆಸರು ಮಾಡಿತ್ತು. ಅನೇಕ ಗೀತ ರೂಪಕಗಳಲ್ಲಿ ಆರ್.ಕೆ. ಶ್ರೀಕಂಠನ್, ಡಾ|| ಬಾಲಮುರಳಿಕೃಷ್ಣ, ಶೆಲ್ವಪಿಳ್ಳೈ ಐಯ್ಯಂಗಾರ್, ಶ್ರೀರಂಗಂ ಗೋಪಾಲರತ್ನಂ, ಸೀತಾಲಕ್ಷ್ಮಿವೆಂಕಟೇಶ್, ಸಿ.ಕೆ.ತಾರಾ, ಮುಂತಾದ ಘನ ವಿದ್ವಾಂಸರುಗಳೇ ಭಾಗವಹಿಸಿ ಅನೇಕ ಗೀತೆಗಳನ್ನು ಹಾಡಿದರು. ೧೯೭೫ ರವರೆಗೆ ಇದು ನಿರಂತರವಾಗಿ ನಡೆದು 'ಸುಗಮಸಂಗೀತ' ಬಹುಮುಖಿಯಾಗಲು ತೊಡಗಿತು.

೧೯೭೫ರಲ್ಲಿ 'ನವಸುಮ' ಎಂಬ ಕಾರ್ಯಕ್ರಮ ಪ್ರಾರಂಭವಾಯಿತು. ತಿಂಗಳ ಹೊಸ ಹಾಡಾಗಿ ಒಬ್ಬ ಕವಿಯ ಕವಿತೆಯನ್ನು ಆಯ್ಕೆ ಮಾಡಿ ಸಂಯೋಜನೆ ಮಾಡಿ ಹಾಡುವುದು ಆರಂಭವಾಯಿತು. ಈ ಕಾರ್ಯಕ್ರಮದ ಮುಲಕ ಸಮೃದ್ಧವಾದ ಕವಿತೆಗಳ ಸೃಷ್ಟಿಯಾಯಿತು. ಹಾಡುವುದಕ್ಕಾಗಿಯೇ ಗೀತೆಗಳು ಬರೆಯಲ್ಪಟ್ಟವು. ರಾಮಚಂದ್ರ ಶರ್ಮ, ಗೋಪಾಲಕೃಷ್ಣ ಅಡಿಗ, ದ.ರಾ.ಬೇಂದ್ರೆ, ಡಿ.ವಿ. ಗುಂಡಪ್ಪ, ವೀ. ಸೀತಾರಾಮಯ್ಯ, ಕುವೆಂಪು, ಪು.ತಿ. ನರಸಿಂಹಾಚಾರ್, ಜಿ.ಪಿ. ರಾಜರತ್ನಂ ಮುಂತಾದವರು ಆಯಾ ಸಂದರ್ಭದ ಕೋರಿಕೆಗೆ ತಕ್ಕಂತೆ ಬರೆಯಲು ಪ್ರಾರಂಭಿಸಿದರು. ನವಸುಮ ಕವಿತಾ ಮಲೆ ಘಮ ಘಮಿಸುವ ರಾಗ ಕುಸುಮಗಳಿಂದ ಅಲಂಕೃತಗೊಂಡವು. ಹಿರಿಯ ಕವಿಗಳಿಂದ ಆರಂಭವಾದ ಈ ಸಂಪ್ರದಾಯಕ್ಕೆ ಕಿರಿಯ ಕವಿಗಳೂ ಸೇರಿಕೊಂಡರು.

ಮುಖ್ಯವಾಗಿ ಕವಿ ಲಕ್ಷ್ಮಿನಾರಾಯಣ ಭಟ್ಟರು ಆಕಾಶವಾಣಿಯ ಬಾನುಲಿ ರೂಪಕಗಳ ಮೂಲಕ ನವ್ಯದಿಂದ, ನವೋದಯ ಅಂಶವನ್ನು ಮೈಗೂಡಿಸಿಕೊಂಡ ಗೇಯ ಕವಿತೆಗಳನ್ನು ಬರೆದರು. ನವ್ಯ ಕವಿತೆಗಳನ್ನು ಬರೆಯುತ್ತಿದ್ದ ಭಟ್ಟರಿಗೆ ನವ್ಯ ಕವಿತೆಗಳಲ್ಲಿ 'ಗೇಯತೆ' ಕಳೆದುಹೋದ ಅನುಭವವಾಯಿತು. ನವ್ಯ ಕಾವ್ಯದ ರಾಗ ವಿರೋಧಿ ಭಾವದಿಂದ ಹೊರಬಂದು ಜನಪರ ಅಗತ್ಯಕ್ಕೆ ತಕ್ಕಂತೆ, ಹಿಂದಿನ

ಭಾವಗೀತೆಗಳಿಗಿಂತ ಹೆಚ್ಚು ಸ್ಪಷ್ಟವಾದ ರಾಗಾಶಯಗಳನ್ನು ಅಪೇಕ್ಷಿಸುವ ಗೀತೆಗಳನ್ನೆ ಬರೆದುರ. ಅವು ನವ್ಯ ಕವಿತೆಯಂತೆ ವಿರುದ್ಧ ಭಾವಗಳು ಹಾಸುಹೊಕ್ಕಾಗಿ ಸೇರಿದ ಸಂಕೀರ್ಣ ಹೆಣಿಗೆಯಾಗದೆ, ಭಾವಲಹರಿಯಲ್ಲಿ ತನ್ನೆಲ್ಲ ತೀವ್ರತೆಯನ್ನು ಹೊಮ್ಮಿಸುವ ಹಾಡಾಗಿ ಸೃಷ್ಟಿಯಾಯಿತು. 'ಯುಗಾದಿ', 'ದೀಪಾವಳಿ', 'ಸ್ವಾತಂತ್ರ್ಯೋತ್ಸವ' 'ಸಂಕ್ರಾಂತಿ', ಮುಂತಾದ ವಿಶೇಷ ಸಂದರ್ಭಗಳಲ್ಲಿ 'ಆಕಾಶವಾಣಿ'ಯಿಂದ ಆಹ್ವಾನಿತರಾದ ಭಟ್ಟರು ಅನೇಕ ಗೀತರೂಪಕಗಳನ್ನು ಸಿದ್ಧಪಡಿಸಿಕೊಟ್ಟರು. ಹಾಗೆ ಸಿದ್ಧಪಡಿಸುವಾಗ ಅನೇಕ ಕವಿಗಳ ಗೀತೆಗಳನ್ನು ಸಾಂದರ್ಭಿಕವಾಗಿ ಬಳಸಿಕೊಳ್ಳುತ್ತಿದ್ದರು. ಅಂತಹ ಗೀತೆಗಳು ದೊರೆಯದಿದ್ದಾಗ, ಅನಿವಾರ್ಯವಾಗಿ ತಾವೇ ಬರೆದು ಗೀತರೂಪಕದಲ್ಲಿ ಬಳಸಿಕೊಳ್ಳುತ್ತಿದ್ದರು. ಬಾನುಲಿಯ ನಿಲಯದ 'ನವಸುಮ' ಕಾರ್ಯಕ್ರಮದ ನಿರ್ವಾಹಕರಾಗಿದ್ದ ಎನ್.ಎಸ್. ಕೃಷ್ಣಮೂತಿಯವರ ಸಂಗೀತ, ಸಾಹಿತ್ಯ ಪ್ರೇಮಾಸಕ್ತಿಗಳಿಂದ 'ನವಸುಮ' ಅನ್ವರ್ಥನಾಮವಾಗಿ ತನ್ನ ಹೆಸರು ಸಾರ್ಥಕ ಪಡಿಸಿಕೊಂಡಿತು. 'ನವಸುಮ' ಕಾರ್ಯಕ್ರಮದಲ್ಲಿ ಹೊಸ ಹೊಸ ಹೊಚ್ಚ ಹೊಸ ಹೂಗಳನ್ನು, ಹೂಗೊಂಚಲುಗಳನ್ನು ತುಂಬಿಸಿಕೊಂಡಿತು. ಭಟ್ಟರು ರಚಿಸಿದ 'ಬಾರೋ ವಸಂತ' - 'ಕಳೆದ ಕಾಲವ ಗುಣಿಸಿ', 'ಮತ್ತೆ ಮತ್ತೆ ಕಳಚಿದರೂ', 'ಯಾಕೆ ಕಾಡುತಿದೆ', 'ಎಲ್ಲಿರುವೆ ಕಾಣಿಸದೆ ಕರೆವ ಕೊರಳೇ' ಮುಂತಾದ ಹಾಡುಗಳು ಅರಳುತ್ತಾ ಬಂದವು. ಬಾನುಲಿಯ ನಿಮಿತ್ತದಿಂದ ಕವಿ ಹೃದಯದ ಗೀತ ರಚನಾಕಾರನೊಬ್ಬ ಉದಿಸಿದ. ಹಿರಿಯ ಕವಿಗಳೂ, ಶ್ರೋತೃವರ್ಗದವರೂ ಕಿರಿಯ ಕವಿಯನ್ನು ಆದರದಿಂದ ಬರಮಾಡಿಕೊಂಡರು. ಇದೇ ಸಾಲಿನಲ್ಲಿ ಕವಿ ನಿಸಾರ್ ಅಹಮದ್‌ರ ಹೆಸರನ್ನೂ ನೆನೆಯಬೇಕು. ಅರವತ್ತರ ದಶಕದ ಕೊನೆಯ ಹೊತ್ತಿಗೆ ನಾಲ್ಕು ನವ್ಯ ಕಾವ್ಯ ಸಂಕಲನಗಳನ್ನು ಹೊರತಂದು ಕೆಲವು ಪ್ರಯೋಗಶೀಲ ಪ್ರಯತ್ನಗಳನ್ನು ಮಾಡಿದ ನಿಸಾರ್ ಅವರು ನವ್ಯ ಕವಿಯೆಂದೇ ಗುರುತಿಸಿಕೊಂಡಿದ್ದರು. ಆದರೆ ವೈಚಾರಿಕತೆಯ ದೊಂಬರಾಟ, ಪೆಡಸುಗಳಿಂದ ಗತಿಗೇಡಿಯಾಗುತ್ತಿದ್ದ ನವ್ಯ ಕಾವ್ಯಕ್ಕೆ ಮತ್ತೊಮ್ಮೆ ಗೇಯತೆ, ಭಾವಗೀತಾತ್ಮಕತೆಯ ಮಂತಸ್ಪರ್ಶ ಅಗತ್ಯವೆಂಬ ಅರಿವು ಅವರಲ್ಲಿ ಮೂಡಿ ಉತ್ಕಟವಾಯಿತು. ಕವಿತೆ ಜನಪದ ಧೋರಣೆಯನ್ನು ಮೈಗೂಡಿಸಿಕೊಂಡು ಸಮಾಜದ ಬೇರೆ ಬೇರೆ ಪದರುಗಳ ತನಕ ವ್ಯಾಪಿಸಬೇಕಾದ ಅಗತ್ಯವಿದೆ ಎಂದೆನಿಸಿತು. ಮುಕ್ತವಿಲಾಸದಲ್ಲಿ ತನಗೆ ತಾನೇ ನಲಿಯುವ ಅರ್ಥ ಸಮೃದ್ಧಗೇಯ ಕವಿತೆಗಳು ಮತ್ತೊಮ್ಮೆ ಮೆರೆಯಬೇಕೆಂಬ ಹಂಬಲದಿಂದ ಭಾವಗೀತಾ ರಚನೆಗೆ ಕೈಹಾಕಿದರು. ಸತತ ಪ್ರಯೋಗಶೀಲರೂ, ಸಹೃದಯರೂ ಆಗಿದ್ದ ನಿಸಾರರು ಬಾನುಲಿಗಾಗಿ ಅನೇಕ ಗೀತೆಗಳನ್ನು, ಗೀತ ರೂಪಕಗಳನ್ನು ಬರೆದುಕೊಟ್ಟರು. ೧೯೬೩ ರಲ್ಲಿ ಭಾರತದ ಮೇಲೆ ಚೀನಾದ ಆಕ್ರಮಣವಾದಾಗ ಆಕಾಶವಾಣಿಯ ನಿರ್ದೇಶಕರು ದೇಶಭಕ್ತಿ ಪ್ರಚೋದಕವೂ, ಅಂದಿಗೆ ಪ್ರಕೃತವೂ ಆಗಿದ್ದು ಸಂದರ್ಭಕ್ಕೆ ಸರಿಯಾದಂತಹ ಗೀತ ರೂಪಕಗಳನ್ನು ಬಿತ್ತರಿಸುತ್ತಿದ್ದರು. 'ನಿಸಾರ್‌ಅಹಮದ್'ರ 'ಆತ್ಮಾರ್ಪಣ' ಎಂಬ ಗೀತ ರೂಪಕವನ್ನು ಆಕಾಶವಾಣಿ ಬಿತ್ತರಿಸಿತು. 'ಪದ್ಮಚರಣ್' ಸಂಗೀತ ನಿರ್ದೇಶನ ಮಾಡಿದ್ದ ಆ ಸಂಗೀತ ರೂಪಕದಲ್ಲಿ ಅಂದಿನ ಪ್ರಸಿದ್ಧ ಗಾಯಕರಾಗಿದ್ದ ಪಿ. ಕಾಳಿಂಗರಾವ್‌ಮತ್ತು ಶ್ರೀಮತಿ ಎಂ.ಎನ್. ರತ್ನ ಪ್ರಧಾನ ಪಾತ್ರಗಳಿಗೆ ತಮ್ಮ ದನಿಗೂಡಿಸಿದ್ದರು. ನಿಸಾರ್‌ರು ಈ ರೂಪಕಕ್ಕಾಗಿ ಬರೆದ ಅನೇಕ ಹಾಡುಗಳು ಅತ್ಯಂತ ಜನಪ್ರಿಯವಾಗಿ ಮನೆ ಮನೆ ಮಾತಾದವು.

ಸುಮಾರು ಎರಡು ಮೂರು ವರುಷಗಳವರೆಗೆ ನಿಸಾರರ ಈ ಗೀತ ರೂಪಕದ ಹಾಡುಗಳು ಬಾನುಲಿಯಲ್ಲಿ ಪ್ರತಿದಿನ ಉಲಿಯತೊಡಗಿದವು. 'ಜಲ ನಮ್ಮದು ನೆಲ ನಮ್ಮದು' - 'ನಾಡದೇವಿಯ ಕಂಡೆ ನಿನ್ನ ಮಡಿಲಲ್ಲಿ' - 'ನುಗ್ಗಿನಡೆ' - 'ಗಿರಿನೆತ್ತಿಯ ಎತ್ತರದಲ್ಲಿ' - 'ಸದಾ ಉರಿಯುತ್ತಿರುವ ಹಾಗೆ' - ಮುಂತಾದ ಹಾಡುಗಳು ತಮ್ಮ ನಾದದ ಗುಂಗಿನಿಂದ, ಭಾವದ ಆತ್ಮೀಯತೆಯಿಂದ ಜನಪ್ರಿಯತೆಯ ತುತ್ತತುದಿಗೇರಿದವು. ಆಕಾಶವಾಣಿಯಿಂದ ಹಿಡಿದು ಸಾರ್ವಜನಿಕ ಸಮಾರಂಭಗಳಲ್ಲಿಯೂ ಈ ಹಾಡುಗಳು ಗಾಯಕರ ಕೊರಳಲ್ಲಿ ಸೆರೆಯಾದವು.

ಕನ್ನಡದ 'ಪ್ರಪ್ರಥಮ ಯುದ್ಧ ಗೀತಕಾರ'ರೆಂಬ ಪ್ರಶಂಸೆಗೆ ಪಾತ್ರರಾಗಿದ್ದ, ಸಿದ್ದಯ್ಯ ಪುರಾಣಿಕ, ಜೆ.ಪಿ. ರಾಜರತ್ನಂ, ಕೆ.ಎಸ್. ನರಸಿಂಹಸ್ವಾಮಿ ಇವರುಗಳ ಜೊತೆಗೆ ನಿಸಾರರ ಹೆಸರೂ ಸೇರಿಕೊಂಡಿತು.

ಆಕಾಶವಾಣಿ ಶ್ರೋತೃಗಳಿಗೆ ಮನರಂಜನೆಯ ಜೊತೆ ಜೊತೆಗೆ ವೈಚಾರಿಕ ಸಂದೇಶಗಳನ್ನೂ ಬಿತ್ತರಿಸುತ್ತಾ, ವಾಸ್ತವ ಸ್ಥಿತಿಗೆ ಸ್ಪಂದಿಸುತ್ತಾ ಸಂಸ್ಕೃತಿಯ ಪ್ರಸಾರ, ಪ್ರಚಾರ ಮಾಡಿತು ಎಂಬುದು ಗಮನಿಸಬೇಕಾದದ್ದು. ಮನೋರಂಜನೆಯ ಮಾಧ್ಯಮವೊಂದು ಜನಪ್ರಿಯವಾಗಿ ಜನರ ಮನವನ್ನು ಗೆದ್ದು ಅವರಿಗೆ ಚಿಂತನ ಶೀಲತೆಯನ್ನು ತಂದುಕೊಟ್ಟಿತು. ಜೊತೆಗೆ ಹಳ್ಳಿ ಹಳ್ಳಿಗೆ ಸಂಸ್ಕೃತಿಯನ್ನು ಪ್ರಸಾರ ಮಾಡಿತು. ಉತ್ತಮ ಅಭಿರುಚಿಯನ್ನು ಬಿತ್ತಿತು. ಕರ್ಣರಂಜನೆಯ, ಮನರಂಜನೆಯ ಏಕೈಕ ಮಾಧ್ಯಮವಾಗಿದ್ದ ಆಕಾಶವಾಣಿಗೆ ಅವಶ್ಯಕವಾದ, ಗೀತ ರಚನೆ ಮಾಡಲು ಅನೇಕ ಪ್ರಸಿದ್ಧ ಕವಿಗಳು, ರಚನಾಕಾರರು ಸಿದ್ಧರಿದ್ದರು. ರಚನೆಗಳನ್ನು ಸುಶ್ರಾವ್ಯವಾಗಿ ಅರ್ಥವತ್ತಾಗಿ ಹಾಡಲು ಹಲವಾರು ಕಲಾವಿದರು ಸಿದ್ಧರಾಗಿದ್ದರು. ಇದಕ್ಕೆ ಕಾರಣ ಶಾಸ್ತ್ರೀಯ ಸಂಗೀತದ ಮುಂಚೂಣಿಯಲ್ಲಿದ್ದ ಅನೇಕ ಕಲಾವಿದರು ಸುಗಮಸಂಗೀತದ ಅಲೆಯನ್ನು ಉಕ್ಕಿಸಿದ್ದರು.

**ಮುಂಬೈ ಆಕಾಶವಾಣಿ**

೧೯೪೬ರಲ್ಲಿ ಮುಂಬೈನ ಆಕಾಶವಾಣಿಯಲ್ಲಿ ಕನ್ನಡ ವಿಭಾಗ ಆರಂಭವಾಯಿತು. ಎನ್.ಕೆ. ಕುಲಕರ್ಣಿ ಮತ್ತು ಕೈಲಾಸಂರವರ ಶಿಷ್ಯರಾದ ಬಿ.ಎಸ್. ರಾಮರಾವ್ ಇಬ್ಬರೂ ನಿಲಯದ ಮೊಟ್ಟಮೊದಲನೆಯ ಕಲಾವಿದ ಸಿಬ್ಬಂದಿಗಳಾಗಿದ್ದರು. ಕನ್ನಡ ಗೀತೆಗಳನ್ನು ಪ್ರಸಾರ ಮಾಡಲು ಕವಿಗಳೊಂದಿಗೆ ಕರಾರು (ಕಾಪಿರೈಟ್) ಮಾಡಿಕೊಂಡಿರದಿದ್ದರಿಂದ ಮೊದಲಿಗೆ ದಾಸರಪದಗಳನ್ನು ತತ್ವಪದಗಳನ್ನೂ ಬಿತ್ತರಿಸುವಂತೆ ಆದೇಶವಿತ್ತು. ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಶಿವಶರಣರು, ಹರಿದಾಸರು ಇವರ ರಚನೆಗಳೇ ಮುಂಬೈ ಆಕಾಶವಾಣಿ ಪ್ರಸಾರ ಮಾಡಿದ ಮೊದಲ ಸುಗಮಸಂಗೀತವಾಯಿತು.

ಎನ್ಕೆಯವರು ಗದುಗಿನಲ್ಲಿದ್ದಾಗ ಅವರ ಶಿಷ್ಯೆಯಾಗಿದ್ದ ದಕ್ಷಿಣ ಕರ್ನಾಟಕದ ಮುಲ್ಕಿಯವರಾದ ಸೀತಾಮುಲ್ಕಿ ಮದುವೆಯಾಗಿ ಮುಂಬೈಗೆ ಬಂದು ನೆಲೆಸಿದ್ದರು. ಮುಂಬೈಯಲ್ಲಿ ಹಿಂದೂಸ್ಥಾನಿ ದೊಡ್ಡ ಹೆಸರು ಮಾಡಿದ್ದ 'ಹೀರಾಬಾಯಿ ಬಡೋದೆಕರ್' ಅವರ ಶಿಷ್ಯೆಯಾಗಿದ್ದರು. ಮುಂಬೈಯಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಮತ್ತು ಮರಾಠೀ ಗೋಡಗಾಣ್ ಗಾಯಕಿ ಎಂದೇ ಹೆಸರು ಮಾಡಿದ್ದ ಸೀತಾಮುಲ್ಕಿಯವರು ಮುಂಬಯಿ ಆಕಾಶವಾಣಿಯಲ್ಲಿ ಎನ್ಕೆಯವರ ಹಾಡೊಂದನ್ನು ಹಾಡುವುದರ ಮೂಲಕ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದರು. ಕನ್ನಡದ ಹಾಡು ಬರೆದು ಕೊಟ್ಟರೆ ಹಾಡುತ್ತೇನೆ ಎಂದ ಸೀತಾ ಅವರಿಗೆ ಎನ್ಕೆಯವರು ಹಿಂದಿ ಭಜನೆಯೊಂದರ ಮಟ್ಟಿಗೆ ಕನ್ನಡ ಗೀತೆಯೊಂದನ್ನು ಬರೆದುಕೊಟ್ಟರು. ಹಿಂದಿ ಮೀರಾ ಭಜನೆಯ ಮೂಲ ಧಾಟಿಯೊಂದಕ್ಕೆ ಕನ್ನಡದಲ್ಲಿ ಗೀತೆ ಸೃಷ್ಟಿಯಾಯಿತು. 'ತುಮಬಿನ ಮೋರಿಕೋನ ಖಬರಲೆ ಗೋವರಥನ ಗಿರಿಧಾರೆ' - ಎಂಬ ಹಾಡೇ - 'ಗಿಡ ಗಿಡದಲಿ ಹಾರಾಡುವ ಗಿಳಿಯೆ ನುಡಿ ನುಡಿ ಕನ್ನಡವ' - ಎಂದು ಕನ್ನಡ ಪ್ರೇಮವನ್ನು ಉಕ್ಕಿಸುವ ಹಾಡಾಯಿತು. ಕನ್ನಡದ ನವೋದಯದ ಸಾಹಿತ್ಯ ಬೆಳೆದು ಬಂದಾಗ ಭಾರತ ತನ್ನ ಸ್ವಾತಂತ್ರ್ಯ ಹೋರಾಟದ ತೀವ್ರ ಸ್ಥಿತಿಯಲ್ಲಿ ಇತ್ತು. ದೇಶದ ಮಹಾ ಮುಕ್ತಿಗಾಗಿ ಜನಗಳನ್ನು ಪ್ರೇರಿಸುವ ಅಮೂಲ್ಯ ಹೊಣೆಯನ್ನು ನಮ್ಮ ಕವಿಗಳು ಹೊತ್ತಿದ್ದರಿಂದ ಆ ಹೊತ್ತಿನ ಕಾವ್ಯವೆಲ್ಲಾ ದೇಶಪ್ರೇಮ, ಭಾಷಾ ಪ್ರೇಮದ ಜೊತೆಗೆ ಸ್ವಾತಂತ್ರ್ಯದ ಹಂಬಲವನ್ನು ಮಡಿಲಲ್ಲಿ ಕಟ್ಟಿಕೊಂಡೇ ಹುಟ್ಟಿತ್ತು. ಸೀತಾಮುಲ್ಕಿಯವರು ಹಾಡಿದ ಈ ಕನ್ನಡ ಗೀತೆಯ ಮೋಡಿ ಎಷ್ಟಾಯಿತೆಂದರೆ ಕನ್ನಡೇತರರೂ ಮರಾಠೀ 'ಗೋಡಗಾಣ'ದ ಮಟ್ಟಿನ ಧಾಟಿಗೆ ಎನ್ಕೆಯವರಿಂದ ಕನ್ನಡದ ಗೀತೆಗಳನ್ನು ಬರೆಯಿಸಿಕೊಂಡು ಬಾನುಲಿಯಲ್ಲಿ ಬಂದು ಹಾಡತೊಡಗಿದರು. ವಿಜಯಾದೇಸಾಯಿ, ಸುಶೀಲಾಟೇಂಬೆ, ತಾರಾಬಾಯಿ ಗದಗಕರ, ಅಮೀರ್‌ಬಾಯಿ ಕರ್ನಾಟಕಿ, ಮುಂತಾದ ಕನ್ನಡೇತರರು ಮತ್ತು ಕನ್ನಡಿಗರು ಅನೇಕ 'ಗೋಡಗಾಣ' ಗೀತೆಗಳನ್ನು ಕನ್ನಡಕ್ಕೆ ತಂದರು.

ಭೀಮಸೇನ ಜೋಶಿಯವರು ಹಾಡಿದ ಬೇಂದ್ರೆಯವರ 'ಉತ್ತರ ಧ್ರುವದಿಂ ಕನ್ನಡ ಧ್ರುವಕು', 'ನನ್ನ ಹರಣ ನಿನಗೆ ಶರಣ', ಮೊದಲಾದ ಗೀತೆಗಳು ಬೆಂಗಳೂರು ಕೇಂದ್ರದ 'ನವಸುಮ'ದ ಹೊಸ ಹಾಡುಗಳಂತೆ ವಿಶೇಷ ಮಾಸದ ಹಾಡುಗಳಾಗಿ ಬಿತ್ತರಗೊಂಡವು. ಇದಕ್ಕಾಗಿ ಹೊಸ ಬಗೆಯ ಒಪ್ಪಂದವನ್ನು ಮುಂಬೈ ಆಕಾಶವಾಣಿ ಮಾಡಿಕೊಂಡಿತು. ಭೀಮಸೇನ ಜೋಶಿಯವರ 'ನಾನು ಬಡವಿ ಆತ ಬಡವ ಒಲವೇ ನಮ್ಮ ಬದುಕು'- ಅತ್ಯಂತ ಜನಪ್ರಿಯತೆ ಗಳಿಸಿತು. ಕೃಷ್ಣಾ ಹಾನಗಲ್, ಭೀಮಸೇನ ಜೋಶಿ, ಶಾರದಾ ಈ ಮೂವರೂ ಸೇರಿ

ಹಾಕಿದ 'ಉದಯವಾಲಿನಮ್ಮ ಚೆಲುವ ಕನ್ನಡ ನಾಡು', ೧೯೪೭ರಲ್ಲಿ ಮಂಬಯಿಯಲ್ಲಿ ಧ್ವನಿಮುದ್ರಿವಾದ ಅತ್ಯತ ಜನಪ್ರಿಯ ಗೀತೆಯಾಗಿತ್ತು. ಕಾಳಿಂಗರಾಯರ ಇದೇ ಗತೆ ಮೈಸೂರು ಆಕಾಶವಾಣಿಯಲ್ಲಿ ಪ್ರತಿದಿನದ ಪ್ರಾರಂಭ ಗೀತೆಯಾಗಿದರೂ, ಕೆಲವು ಕಾರಣಗಳಿಂದ ಮುಂಬಯಿಯಲ್ಲಿ ಆಧ್ವಿಮುದ್ರಿಕೆಯನ್ನು ಪ್ರಸಾರ ಮಾಡುವಂತಿರಲಿಲ್ಲ. ಕೀರ್ತಿನಾಥ ಕುರ್ತಕೋಟಿಯವರ 'ಅರಳದು ಪ್ರೇಮದ ಮೃದು ಕುಸುಮ' - ಎಂಬ ಗೀತೆಯೂ ಭೀಮಸೇನ ಜಶಿಯವರ ಕೊರಳಲ್ಲಿ ಉಲಿದ ಜನಪ್ರಿಯವಾಯಿತು. ಹೆಚ್.ಎಂ.ವಿ. ಧ್ವನಿಮುದ್ರಣ ಸಂಸ್ಥೆಯ ನೆರವಿನಿಂದ ಹತ್ತಾರು ಧ್ವನಿ ತಟ್ಟಗಳು ಬಂದು ಮುಂಬೈ ಆಕಾಶವಾಣಿಯಲ್ಲಿ ಅನುರಣನಗೊಂಡವ. ಹಿಂದೂಸ್ತಾನೀ ಶಾಸ್ತ್ರೀಯ ಸಂಗೀತದ ಮಲ್ಲಿಕಾರ್ಜುನ ಮನ್ಸೂರರು ಹಾಡಿದ 'ತೇರನೇಳೆಯುತಾರ ತಂಗಿ' ಎಂಬ ಶಿಶುನಾಳ ಷರೀಫರ ಪದವಂತೂ, ಕರ್ನಾಟಕವ್ನು ದಾಟಿ, ಮಹಾರಾಷ್ಟ್ರದಲ್ಲೂ ೧೯೩೩ರ ಸುಮಾರಿಗೆ ಅತ್ಯಂತ ಜನಪ್ರಿಯವಾಗಿತ್ತು.

**ಧಾರವಾಡ ಆಕಾಶವಾಣಿ**

೧೯೫೦ರ ಜನವರಿ ಎಂಟರಂದು ಧಾರವಾಡದಲ್ಲಿ ಆಕಾಶವಾಣಿ ಕೇಂದ್ರ ಪ್ರಾರಂಭವಾಯಿತು. ಉತ್ತರಕರ್ನಾಟಕದ ಕವಿಗಳೆಲ್ಲ A.I.R. ೬೫ ಕರಾರಿನಿಂದ ಬದ್ಧರಾದರು. ಕವಿಗಳಾದ ದ.ರಾ. ಬೇಂದ್ರೆ, ವಿನಾಯಕ, ರಸಿಕರಂಗ, ಆನಂದಕಂದ, ಚೆನ್ನವೀರಕಣವಿ, ಡಿ.ಎನ್. ಕರ್ಕಿ, ಆರ್.ಸಿ. ಹಿರೇಮಠ, ಜಿ.ವಿ. ಕುಲಕರ್ಣಿ, ಚಂದ್ರಶೇಖರ ಪಾಟೀಲ, ದೇವೇಂದ್ರ ಕುಮಾರ ಹಕಾರಿ, ಇಂಚಲ, ಎಕ್ಕುಂಡಿ, ಅಕ್ಬರ್ ಅಲಿ, ದಿನಕರ ದೇಸಾಯಿ, ಗೌರೀಶ ಕಾಯ್ಕಿಣಿ, ಸಿದ್ಧಣ್ಣ ಮೊಸಳಿ, ಮೊದಲಾದವರೆಲ್ಲಾ ಧಾರವಾಡ ನಿಲಯದ ಕವಿಗಳು ಒಪ್ಪಂದಕ್ಕೆ ಸಹಿ ಹಾಕಿದ್ದರು. ಮುಂಬಯಿ ಗಾಯಕಿಯರಲ್ಲದೆ ಧಾರವಾಡ ಕೇಂದ್ರದ ಕೃಷ್ಣಾ ಹಾನಗಲ್, ನೀಲಮ್ಮ ಕೊಡ್ಲಿ (ನೀಲಮ್ಮ ಮನ್ಸೂರ್) ಬಾಳಪ್ಪ ಹುಕ್ಕೇರಿ, ಅನುರಾಧಾ ಧಾರೇಶ್ವರ್, ಉಷಾ ಖಾಡಿಲಕರ್, ಆರ್.ಎಸ್. ಜಂತ್ಲಿ - ಎಸ್.ಕೆ.ದೇಶಪಾಂಡೆ, ಸಿದ್ಧರಾಮ ಜಂಬಲಿದಿನ್ನಿ, ಶಾರದಾ ಹಾನಗಲ್, ಸೋನುಬಾಯಿ ದೊಡ್ಡಮನಿ, ದೇವೇಂದ್ರ ಪತ್ತಾರ್, ಈಶ್ವರಪ್ಪ ಮಿಣಜಿ, ಎ.ಜಿ. ನೀಲಗಾರ ಮೊದಲಾದ ಕಲಾವಿದರೆಲ್ಲಾ ಧಾರವಾಡದ ಬಾನುಲಿಗೆ ಸುಗಮಸಂಗೀತದ ರಂಗು ತುಂಬಿದರು. ಅನುರಾಧ ದಾರೇಶ್ವರ ಹಾಡಿದ, ಸಿದ್ಧಣ ಮೊಸಳಿಯವರ 'ಹೊಸಬಾಳಿನ ಹೊಸತಿನಲಿ ಝಗಝಗಿಸುವ ಬೆಳಕು' ಎಂಬ ಗೀತೆ ಅತ್ಯಂತ ಅರ್ಥಪೂರ್ಣವಾಗಿ ಜನಪ್ರಿಯವಾಗಿತ್ತು.

ಬೇಂದ್ರೆಯವರ 'ಗಂಗಾವತರಣ', ಆನಂದಕಂದರ 'ಬುತ್ತಿಗೊಂಡು ಹೋಗ್ತೀನಿ ಹೊಲಕ', 'ನಮ್ಮೂರು ನಮಗ ಬಲುಪಾಡ', – 'ನಾ ಸಂತಿಗೆ ಹೋಗಿದ್ನಿ' ಮೊದಲಾದ ಜಾನಪದ ಭಾವಗೀತಗಳನ್ನು ರೋಮಾಂಚಕಾರಿಯಾಗಿ ಜನಪ್ರಿಯಗೊಳಿಸಿದವರು, 'ಜನಪದ ರತ್ನ' ಎಂದೇ ಪ್ರಖ್ಯಾತರಾಗಿದ್ದ ಬಾಳಪ್ಪ ಹುಕ್ಕೇರಿ. ಆನಂದಕಂದರ 'ಬಾಳಿದು ಕನಸಲ್ಲ ನೋವಿನ ತಿನಿಸಲ್ಲ ನನ್ನ ಹಿಗ್ಗಿನ ಹೊಸಲೋಕ' - ಎಂಬ ಗೀತೆಯನ್ನು ಜನಪ್ರಿಯಗೊಳಿಸಿ, ತಾವೂ ಹೆಸರು ಮಾಡಿಕೊಂಡವರು ಇಂದುಮತಿ ಮುಂಡೇವಾಡಿ. ಗೌರೀಶ್ ಕಾಯ್ಕಿಣಿಯವರ ಗೀತರೂಪಕವನ್ನು ಬಹಳ ಸುಂದರ ಸುಗಮ ಧಾಟಿಯಲ್ಲಿ ಲೋಕಪ್ರಿಯಗೊಳಿಸಿದವರು. ಪಿ.ಆರ್.ಭಾಗವತ, ಎನ್ಕೆಯವರ 'ಆಷಾಡದ ಪ್ರಥಮ ದಿನ, ಬೇಂದ್ರೆಯವರ 'ಪಾವನ ಪರಂಪತೆ', ಚೆನ್ನವೀರ ಕಣವಿಯವರ 'ಯುಗಾದಿ' ಮತ್ತು 'ಎಳ್ಳುಬೆಲ್ಲ' - ಗಣಪತಿರಾವ್ ಪಾಂಡೇಶ್ವರ ಅವರ 'ಬಲಿವಾಮನ' ಧಾರವಾಡ ಆಕಾಶವಾಣಿಯಲ್ಲಿ ಯುಗಾದಿ, ಸಂಕ್ರಾಂತಿ, ದೀಪಾವಳಿ ಗೀತ ರೂಪಕಗಳಲ್ಲಿ ಪಿ.ಆರ್. ಭಾಗವತ ಮತ್ತು ಅವರ ಸೋದರ ಸೊಸೆಯಾದ ಕುಮುದಿನಿ ಇಬ್ಬರೂ ಹಾಡಿ ಯಶಸ್ಸು ಪಡೆದಿದ್ದರು. ಉತ್ತರ ಕರ್ನಾಟಕದಲ್ಲೂ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಗಾರರೇ ಸುಗಮಸಂಗೀತವನ್ನು ಜನಪ್ರಿಯತೆಯತ್ತ ಬೆಳೆಸಲು ಆಧಾರದ ಅಡಿಗಲ್ಲಾದರು. (ಮೈಸೂರು – ಬೆಂಗಳೂರು ಆಕಾಶವಾಣಿಗಳಲ್ಲಿ ಇದನ್ನು ಮೊದಲೇ ಗುರುತಿಸಲಾಗಿದೆ) ಶ್ರೋತೃಗಳಿಗೂ, ಕಲಾವಿದರಿಗೂ, ಕವಿಗಳಿಗೂ, ರಸ ಸೇತುವೆಯಂತೆ ಕೆಲಸ ಮಾಡಿದ ಆಕಾಶವಾಣಿ ಸುಗಮ ಸಂಗೀತವನ್ನು ಆತಂಕವಿಲ್ಲದಂತೆ ಮುನ್ನಡೆಸಿ ಬೆಳೆಸಿತು. ಗಿಡವಾಗಿ ಹುಟ್ಟಿ ಮಾಮರವಾಗಿ ಬೆಳೆದು ನೂರಾರು ಟಿಸಿಲು, ಟಸಿಲಾಗಿ ಒಡೆದ 'ಸುಗಮಸಂಗೀತ' ಸುತ್ತಲೂ ತನ್ನ ಹೂಗೊಂಚಲನ್ನು ಚಾಚಿತು. ಜನಪ್ರಿಯತೆಯನ್ನು ಬಾಚಿತು. ಮದರಾಸು ನಿಲಯದಿಂದ ಹಾಡುತ್ತಿದ್ದ ಜಯವಂತಿ ದೇವಿ ಹಿರೇಬೆಟ್, ಮುಂಬಯಿಯಿಂದ ಹಾಡುತ್ತಿದ್ದ ಬಿ.ಜಿ. ರಾಮನಾಥ್, ಬೆಂಗಳೂರಿನಿಂದ ಹೆಚ್.ಆರ್. ಲೀಲಾವತಿ, ಪಿ. ಕಾಳಿಂಗರಾವ್, ಎಂ.ಎನ್. ರತ್ನಾ, ಶ್ಯಾಮಲಾಭಾವೆ, ಎಚ್.ಕೆ.

ನಾರಾಯಣ, ಸಿ.ಕೆ. ತಾರಾ, ಎನ್.ಕೆ. ವಸುಮತಿ, ಬಿ.ಕೆ. ಸುಮಿತ್ರಾ, ಶ್ಯಾಮಲಾ ಜಾಗಿರ್‌ದಾರ್, ಎಂ. ಪ್ರಭಾಕರ್, ಎನ್.ಎಸ್. ರಾಮನ್, ರತ್ನಮಾಲ ಪ್ರಕಾಶ್, ಮಾಲತಿಶರ್ಮ, ಕಸ್ತೂರಿ ಶಂಕರ್, ಎಂ.ಕೆ. ಜಯಶ್ರಿ, ಮುಂತಾದ ಅನೇಕ ಗಾಯಕ ಗಾಯಕಿಯರು ಸುಗಮಸಂಗೀತದ ಮಾಮರದಲ್ಲಿ ಕುಕಿಲುವ ಕೋಗಿಲೆಗಳಾದರು.

ಈ ಮಧ್ಯೆ ಬೆಂಗಳೂರಿನ ಪ್ರಭಾತ್ ಕಲಾವಿದರು ತಮ್ಮ ನೃತ್ಯ ನಾಟಕಗಳ ಮೂಲಕ, ಶ್ರಾವ್ಯವೂ, ನಯನಮನೋಹರವೂ ಆದ ಹೊಸ ಪ್ರಯೋಗಗಳಿಂದ ಗಮನಾರ್ಹವಾದ ಬೆಳವಣಿಗೆಯನ್ನು ತಂದರು. ಗೀತ ನೃತ್ಯ ನಾಟಕಗಳಲ್ಲಿ ಕವಿಗಳ ಕವಿತೆಗಳನ್ನು ಅಳವಡಿಸಿಕೊಂಡು ಹೊಸ ಹಾದಿಗೆ ತೋರಣ ಕಟ್ಟಿದರು. ಇವರ ಗೀತ ರೂಪಕಗಳಿಗೆ ಸಂಗೀತ ನೀಡುವ ಮೂಲಕ ಹೊಸ ತಾರೆಯೊಂದು ಉದಯವಾಯಿತು. ಅವರೇ ಮೈಸೂರು ಅನಂತಸ್ವಾಮಿ. ಅವರ ಸಂಗೀತ ಸಂಯೋಜನೆಯಲ್ಲಿ ಪ್ರಭಾತ್‌ಕಲಾವಿದರ ಗೀತ ರೂಪಕಗಳು ಹೊಸ ಆಯಾಮ ಪಡೆದವು. ವಸ್ತು, ರೀತಿ, ಶೈಲಿಗಳಲ್ಲಿ ವಿನೂತನವಾಗುತ್ತಲೇ, ಪೌರಾಣಿಕ ನಾಟಕಗಳಿಂದ ಸಾಮಾಜಿಕ - ಜಾನಪದ, ಐತಿಹಾಸಿಕ ಮತ್ತು ಮಕ್ಕಳ ನೃತ್ಯನಾಟಕಗಳವರೆಗೆ ಇದರ ಹರಹು ಹರಡಿತು. ಜನಪದ ಆಧಾರಿತ ಪುಣ್ಯಕೋಟಿ, ಕೆರೆಗೆ ಹಾರ, ಕುವೆಂಪು ಅವರ ಕಿಂದರ ಜೋಗಿ, ಪಾಶ್ಚಾತ್ಯ ಕಥೆಯ ಸಿಂಡ್ರೆಲಾ (ಮಕ್ಕಳ ಗೀತ ನೃತ್ಯ ನಾಟಕ) ಮುಂತಾಗಿ ಸುಮಾರು ಮೂವತ್ತೆಂಟು ರೂಪಕಗಳನ್ನು ಪ್ರಭಾತ್ ಸಂಸ್ಥೆ ರಂಗಕ್ಕೇರಿಸಿತು. ಹೊಸ ಹೊಸ ಸುಗಮಸಂಗೀತ ಗಾಯಕರು ಈ ಗೀತ ರೂಪಕಗಳಿಂದ ಬೆಳಕಿಗೆ ಬಂದರು. ಎಂ.ಕೆ. ಜಯಶ್ರೀ, ಪುಷ್ಪ ಜಗದೀಶ್, ಸುಲೋಚನ ವೆಂಕಟೇಶ್, ರತ್ನಮಾಲ ಪ್ರಕಾಶ್, ಮುಂತಾದ ಗಾಯಕರು ಮೈಸೂರು ಅನಂತಸ್ವಾಮಿಯವರ ಸಂಯೋಜನೆಗಳ ಮೂಲಕ ಜನಪ್ರಿಯರಾದರು.

## **M.S.I.L.** ಗೀತೆಗಳು

೧೯೭೭ರ ನಂತರ ನವೋದಯ ಸಂಭ್ರಮ ಎಲ್ಲಾ ಗಾಯಕರ ಕೊರಳಲ್ಲೂ ಝೇಂಕರಿಸುತ್ತಿತ್ತು. ಹಳೆಯ ಮೈಸೂರಿನಲ್ಲಿ ಹೆಚ್.ಆರ್. ಲೀಲಾವತಿ, ಎಸ್.ಕೆ. ವಸುಮತಿ, ಪದ್ಮಚರಣ್ (ಸಂಗೀತ ಸಂಯೋಜಕರು) ಪಿ. ಕಾಳಿಂಗರಾವ್, ಮೈಸೂರು ಅನಂತಸ್ವಾಮಿ, ಎಂ.ಕೆ. ಜಯಶ್ರೀ, ಧಾರವಾಡ ದತ್ತ, ಬಾಳಪ್ಪ ಹುಕ್ಕೇರಿ, ಭಾಗವತ, ಅನುರಾಧ ಧಾರೇಶ್ವರ್ ಮುಂತಾದವರು ರಸಿಕರ ಹೃದಯದಲ್ಲಿ ಸ್ಥಾಪಿತರಾಗಿದ್ದರು. ಭರಾಟೆಯಿಂದ ಹಬ್ಬುತ್ತಿದ್ದ ಭಾವಗೀತೆಗಳೋ ಛಾಪುಗಾಲನಿಕ್ಕುವಂತಹ ಸಂದರ್ಭ. ಆದರೆ ಹಿಂದಿ ಚಿತ್ರಗಳ ಸೆಳೆತದಿಂದ ತಪ್ಪಿಸಿಕೊಂಡು ಬರುವುದು ಅಷ್ಟು ಸುಲಭವಾಗಿರಲಿಲ್ಲ. ಸಾಲದ್ದಕ್ಕೆ ಹಿಂದಿಯ ಗಾಯಕರು ಮಹಾನ್ ಮೇರುಸ್ಥಿತಿಯಲ್ಲಿದ್ದವರು. ಈ ಪರಿಸ್ಥಿತಿಯಲ್ಲಿ ಕುವೆಂಪು, ಬೇಂದ್ರೆ, ನರಸಿಂಹಸ್ವಾಮಿ, ಶಿವರುದ್ರಪ್ಪ, ಮುಂತಾದ ಶ್ರೇಷ್ಠ ಕವಿಗಳು ಬರೆದಂತ ಹತ್ತಾರು ಹಾಡುಗಳು ಆದಾಗಲೇ ಪ್ರಸಿದ್ಧವಾಗಿದ್ದವು. 'ಇಳಿದು ಬಾ ತಾಯಿ', 'ರಾಯರು ಬಂದರು', 'ಹೌದೇನೇ ಉಮಾ', 'ಅಳುವ ಕಡಲಲಿ', 'ಬಾಗಿಲೊಳು ಕೈಮುಗಿದು', ಹೃದಯ ಕಮಲದಿ ಮಧುರ ಪ್ರೇಮ ಮಕರಂದ', ಮುಂತಾದ ಭಾವಗೀತೆಗಳು ಸಾಹಿತ್ಯ ಸಂಗೀತ ಪ್ರಿಯರ ಹೃದಯಕ್ಕೆ ಆಗಲೇ ಲಗ್ಗೆ ಹಾಕಿದ್ದವು.

ಭರಾಟೆಯಿಂದ ಹಬ್ಬುತ್ತಿದ್ದ ಈ ಭಾವಗೀತೆಯ ಬಳ್ಳಿಗೆ ಒಂದು ಆಸರೆಯಾಗಿ ಒದಗಿ, ಅದನ್ನು ನಾಡಿನ ಎಲ್ಲ ದಿಕ್ಕಿಗೆ ಹಬ್ಬಿಸಿದ ಕೀರ್ತಿ, ಎಂ.ಎಸ್.ಐ.ಎಲ್. ಸಂಸ್ಥೆಯದು ಈ ಸಂಸ್ಥೆ ಬೆಂಗಳೂರು ಮತ್ತು ಧಾರವಾಡ ಆಕಾಶವಾಣಿ ವಾಣಿಜ್ಯ ಕೇಂದ್ರಗಳಿಂದ (ಸುಮಾರು ಮೂರು ವರುಷ) ಪ್ರತಿ ಬುಧವಾರ ಮೂರು ಮೂರು ಭಾವಗೀತೆಗಳನ್ನು ಎಂ.ಎಸ್.ಐ.ಎಲ್. ಗೀತೆಗಳು ಎಂಬ ಹೆಸರಿನಲ್ಲಿ ಪ್ರಸಾರ ಮಾಡಿತು. ಇವುಗಳಿಗೆ ಸಂಗೀತ ಸಂಯೋಜನೆ ಮಾಡಿದ ಮತ್ತು ಹಾಡಿದ ಪ್ರತಿಭೆಗಳು ಎಷ್ಟು ಉತ್ತಮ ಮಟ್ಟದಲ್ಲಿದ್ದವೆಂದರೆ ಒಂದು ವರ್ಷ ಕಳೆಯುವುದರೊಳಗಾಗಿ ಹಿಂದಿ ಚಿತ್ರಗೀತೆಗಳ ದಾಸರಾಗಿದ್ದ ಸಾವಿರಾರು ಕನ್ನಡ ರಸಿಕರು ಕನ್ನಡದ ಕವಿಶ್ರೇಷ್ಠರ ಭಾವ ಗೀತೆಗಳನ್ನು ಗುಣುಗುಣಿಸಲಾರಂಭಿಸಿದರು. ಇದಕ್ಕೂ ಮೊದಲು ಪ್ರತೀ ಬುಧವಾರ ವಾರ್ತೆಯ ಅನಂತರ 'ಗೀತಲಹರಿ' ಎನ್ನುವ ಶೀರ್ಷಿಕೆಯಲ್ಲಿ ಕನ್ನಡ ಚಲನಚಿತ್ರ ಗೀತೆಗಳು ಪ್ರಸಾರವಾಗುತ್ತಿತ್ತು. ಇದಕ್ಕೆ ಪ್ರೇರಣೆ ಎಂದರೆ ಶ್ರೀಲಂಕಾ ಬ್ರಾಡ್‌ಕಾಸ್ಟಿಂಗ್‌ನ ಬಿನಾಕಾ ಹಿಂದಿ ಚಿತ್ರಗೀತೆಗಳು. ಪೋಸ್ಟ್‌ಕಾರ್ಡಿನಲ್ಲಿ ಶ್ರೋತೃಗಳು ತಮಗೆ ಪ್ರಿಯವಾದ ಹಾಡುಗಳನ್ನು ಬರೆದು ಕಳಿಸಿದರೆ ಆಯ್ಕೆ ಪಟ್ಟಿಯಲ್ಲಿ ಆ ಹಾಡಿದ್ದರೆ, ಆ ಹಾಡು

ಕಳಿಸಿದವರಿಗೆ ಬಹುಮಾನ ಕಳಿಸಲಾಗುತ್ತಿತ್ತು. ಸುಮಾರು ಒಂದೂವರೆ ವರುಷ ಹೀಗೆ ನಡೆದು ಹಳೆಯ ಹಾಡುಗಳನ್ನೇ ಮತ್ತೆ ಮತ್ತೆ ಕೇಳಿ ಬೇಸರವಾಗಿತ್ತು.

ಎಂ.ಎಸ್.ಐ.ಎಲ್. ಸಂಸ್ಥೆಯಲ್ಲಿ 'ಗೀತಲಹರಿ' ಯೋಜನೆಯ ಹೊಣೆ ಹೊತ್ತ ಜಯದೇವರು ಸಂಗೀತ-ಸಾಹಿತ್ಯ ಅಭಿರುಚಿಯುಳ್ಳವರಾಗಿದ್ದರು. ಮನೆಯಲ್ಲಿದ್ದ ಹಲವಾರು ಕನ್ನಡದ ಪುಸ್ತಕಗಳನ್ನು ಆಗಾಗ ಓದುವ ಹವ್ಯಾಸ ಅವರಿಗಿತ್ತು. ಅವರ ಸ್ನೇಹಿತ ಶ್ರೀನಿವಾಸಾಚಾರ್ ಮತ್ತು ಪ್ರಭಾತ್ ಕಲಾವಿದ ಜಗನ್ನಾಥ್ ಅವರ ನೆರವಿನೊಂದಿಗೆ (ಜಯಸಿಂಹದಾಸರ ಹಿರಿಯ ಮಗ) 'ಗೀತಲಹರಿ'ಯ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದರು. 'ಗೀತಲಹರಿ'ಯ ಧ್ವನಿ ಮುದ್ರಣ ಕಾರ್ಯವನ್ನು ಜಗನ್ನಾಥರು ವಹಿಸಿಕೊಂಡಿದ್ದರು. ಜಾಹೀರಾತುಗಳನ್ನು ತಯಾರಿಸಿಕೊಡುತ್ತಿದ್ದ ಜಗನ್ನಾಥರ ಪ್ರಭಾತ್ ಧ್ವನಿಮುದ್ರಣ ಕೇಂದ್ರ, ಕೋಣೆಯೊಳಗೆ ಆಗಷ್ಟೇ ಕಣ್ಣು ಬಿಟ್ಟಿತ್ತು.

'ಗೀತಲಹರಿ'ಯ ಏಕತಾನತೆಯನ್ನು ಅಳಿಸಿ ಹಾಕಲು 'ಭಾವಗೀತೆಗಳನ್ನು ಯಾಕೆ ಧ್ವನಿ ಮುದ್ರಿಸಿ ಪ್ರಸಾರಕ್ಕೆ ನೀಡಬಾರದು ಎಂದು ಈ ಮೂವರು ಗೆಳೆಯರು ಆಲೋಚಿಸಿ ತೀರ್ಮಾನಿಸಿದರು. ಆಗ ಮೈಸೂರು ಅನಂತಸ್ವಾಮಿಯವರದ್ದು ದೊಡ್ಡ ಹೆಸರಾಗಿತ್ತು. ಪ್ರಭಾತ್ ಸಂಸ್ಥೆಯವರಾಗಿ ತಮ್ಮ ಗೀತನೃತ್ಯ ರೂಪಕಗಳಲ್ಲಿ ಆದಾಗಲೇ ಅನೇಕ ಭಾವಗೀತೆಯನ್ನು ಬಳಸಿ ಯಶಸ್ಸನ್ನು ಗಳಿಸಿದ್ದ ಜಗನ್ನಾಥರು ತಮ್ಮ ಸಂಸ್ಥೆಯ ಕಲಾವಿದರೇ ಆಗಿದ್ದ ಅನಂತಸ್ವಾಮಿಯವರ ನೆರವಿನೊಂದಿಗೆ 'ಭಾವಗೀತಾ' ಧ್ವನಿಮುದ್ರಣದ ಯೋಜನೆಯನ್ನು ಹಾಕಿಕೊಂಡರು. ಮೈಸೂರು ಅನಂತಸ್ವಾಮಿಯವರ ಸಂಗೀತ ಸಂಯೋಜನೆಗೆ ಕವಿಗಳು ಹಾತೊರೆಯುವ ಕಾಲವದಾಗಿತ್ತಾದ್ದರಿಂದ ಎಲ್ಲ ಕವಿಗಳ ಅನುಮತಿ ತಕ್ಷಣವೇ ದೊರೆಯಿತು. ಒಂದು ಹಾಡಿನ ಪ್ರಸಾರಕ್ಕೆ ಕವಿಗಳಿಗೆ ೨೫ ರೂ.ಗಳನ್ನು ಕೊಡುವ ಒಪ್ಪಂದವಾಯಿತು. ಆಗಿನ ಕಾಲದಲ್ಲಿ ಇದು ನಂಬುವುದಕ್ಕೆ ಸಾಧ್ಯವಾಗದ ಸಂಗತಿಯಾಗಿತ್ತು. ಸಂಭಾವನೆಯೇ ಕೊಡದ ಕಾಲದಲ್ಲಿ ಇಪ್ಪತ್ತೈದು ರೂಪಾಯಿಗಳು ಹೆಚ್ಚು ಮೌಲ್ಯವುಳ್ಳದ್ದಾಗಿತ್ತು. ಗಾಯಕರು ಸಂಯೋಜಕರಿಗೆ ದಿನಕ್ಕೆ ನಾಲ್ಕು ಅಥವಾ ಆರು ಹಾಡು ಮಾಡಿಕೊಡುವ ಒಪ್ಪಂದವಾಯ್ತು. ಈ ಕಾರ್ಯಕ್ರಮ ಜನಪ್ರಿಯವಾಗುತ್ತಿದ್ದಂತೆ, ಸಿ.ಅಶ್ವಥ್, ಚಂದ್ರಶೇಖರ ಕಂಬಾರ, ಪರ್ವತವಾಣಿ, ಶ್ಯಾಮಲಭಾವೆ ಹೀಗೆ ದಿನದಿಂದ ದಿನಕ್ಕೆ ಕಲಾವಿದರ ಸೇರ್ಪಡೆಯಾಗುತ್ತಲೇ ಹೊಸ ಹೊಸ ಆಯಾಮ ಪಡೆದುಕೊಳ್ಳುತ್ತಿತ್ತು. ಕವಿ ಲಕ್ಷ್ಮೀನಾರಾಯಣ ಭಟ್ಟರು ಜಯದೇವ ಅವರಿಗೆ ಸಾಹಿತ್ಯ ಸಲಹೆಗಾರರಾಗಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಸಿ.ಆರ್.ಸಿಂಹ, ಆರ್.ನಾಗೇಶ್, ಒಮ್ಮೊಮ್ಮೆ ಲಕ್ಷ್ಮೀ ನಾರಾಯಣ ಭಟ್ಟ ಅವರೂ ಮಾಡುತ್ತಿದ್ದರು. ಕುವೆಂಪು, ಬೇಂದ್ರೆ ಮುಂತಾದ ಕವಿಗಳ ಹಾಡುಗಳೂ ಧ್ವನಿಮುದ್ರಿತವಾದವು. ಕವಿಗಳು ಅವರ ಕವಿತೆಯನ್ನು ಓದುವುದು ಗಾಯಕರು ಆ ಕೂಡಲೆ ಆ ಹಾಡನ್ನು ಹಾಡುವುದು. ಇದು ಪರಿಪಾಠವಾಗಿತ್ತು. ಕವಿಗಳು ಹೆಸರನ್ನು ಹೇಳಿ ಅವರಿಂದ ಎಂ.ಎಸ್.ಐ.ಎಲ್. ಗೀತೆಗಳು ಎಂದು ಪ್ರಸಾರವಾಗುತ್ತಿತ್ತು.

ಸುಮಾರು ಎರಡುವರ್ಷ ಪು.ತಿ.ನ. ರಾಜರತ್ನಂ, ಅಡಿಗ, ಮುಂತಾದ ಎಲ್ಲ ಕವಿಗಳ ಗೀತೆಗಳೂ ಈ ಸ್ಥಾನವನ್ನು ಅಲಂಕರಿಸಿದವು. ಹೊಸತನ ಬೇಕೆನಿಸಿತು. ಆಗ ತರಿಕೆರೆ ಲಿಂಗಪ್ಪನವರಿಂದ ಜಾನಪದ ಗೀತೆಗಳನ್ನು ಹಾಡಿಸಲಾಯಿತು. ಗೋವಿನ ಹಾಡು, ಕೆರೆಗೆ ಹಾರ, ಕೈಲಾಸಂ ಗೀತೆಗಳು, ನೋಡಿದ್ರಾ ನಂ ನಂಜೀನ, ನಮ್‌ತಿಪ್ಪಾರಳ್ಳೀ ಬಲುದೂರ, ಕೋಳೀಕೆರಂಗ, ಮುಂತಾದ ಹಾಡುಗಳೆಲ್ಲಾ ಏಕತಾನತೆಯನ್ನು ನೀಗಿಸಲು ಹೊಸದಾಗಿ ಬಂದು ಸೇರಿದವು.

ಈ ಮಧ್ಯೆ ಉದಯವಾಣಿ ದಿನಪತ್ರಿಕೆಯಲ್ಲಿ ಕಾಳಿಂಗರಾಯರ ಬಗೆಗೆ ಒಂದು ಲೇಖನ ಬಂದಿತು. 'ಕನ್ನಡದ ಕೋಗಿಲೆಯ ಕಣ್ಣಲ್ಲಿ ನೀರು' ಎನ್ನುವ ಶೀರ್ಷಿಕೆಯಲ್ಲಿ ಕಾಳಂಗರಾಯರು ಆರ್ಥಿಕವಾಗಿ ಸಂಕಷ್ಟದಲ್ಲಿರುವ ಬಗೆಗೆ ತಿಳಿಸಲಾಗಿತ್ತು. ಜಯದೇವ್ ಅವರು ಕಾಳಿಂಗರಾಯರನ್ನು ಭೇಟಿಮಾಡಿ ಸ್ಟುಡಿಯೋಗೆ ಕರೆದುಕೊಂಡು ಬರುವಂತೆ ಲಕ್ಷ್ಮೀನಾರಾಯಣ ಭಟ್ಟರಿಗೆ ದುಂಬಾಲು ಬಿದ್ದರು. ಸ್ಟುಡಿಯೋಗೆ ಬಲು ಕಷ್ಟದಿಂದಲೇ ಬಂದ ಕಾಳಿಂಗರಾಯರಿಂದ ಎರಡು ಮಾತನಾಡಿಸಿ ಅದನ್ನೇ ಧ್ವನಿಮುದ್ರಿಸಿ, ಹಿಂದೆ ಅವರು ಹಾಡಿದ ಹಾಡನ್ನೇ ಮತ್ತೇ ಪ್ರಸಾರ ಮಾಡಿ ಸಂಭಾವನೆಯ ರೂಪದಲ್ಲಿ ನಿಯಮಕ್ಕಿಂತಾ ಹೆಚ್ಚು ಹಣವನ್ನು ಕೊಟ್ಟರು.

ಎಂ.ಎಸ್.ಐ.ಎಲ್. ಕಾರ್ಯಕ್ರಮದ ಮೂಲಕ ಹತ್ತಾರು ಮಂದಿ ಹೊಸ ಗಾಯಕರು ಬಂದರು. ರತ್ನಮಾಲಾ, ಬಿ.ಕೆ. ಸುಮಿತ್ರ, ಕಸ್ತೂರಿ ಶಂಕರ್, ಶಿವಮೊಗ್ಗ ಸುಬ್ಬಣ್ಣ, ಮಾಲತಿ, ಪುಷ್ಪಾ ಜಗದೀಶ್, ಟಿ.ಆರ್. ಶ್ರೀನಿವಾಸನ್, ಜಯಪಾಲ್, ಮುಂತಾದ ಗಾಯಕರು ಪ್ರಕಾಶಮಾನಕ್ಕೆ ಬಂದರು. ಎಂ.ಎಸ್.ಐ.ಎಲ್. ತನ್ನ ಹೆಸರನ್ನು ಪ್ರಸಿದ್ಧಿಗೊಳಿಸಲು ಒಂದು ಜಾಹೀರಾತಿನ ತಂತ್ರವಾಗಿ ಆರಂಭಿಸಿದ ಈ ಯೋಜನೆ ಒಂದು ಹೊಸ ಸಂಸ್ಕೃತಿಯನ್ನು ಒಂದು ಗಾಯನ ಕಲಾ ಪ್ರಕಾರವನ್ನು ಬೆಳಕಿಗೆ ತಂದಿತು. ತಾನೂ ಬೆಳಗಿ ಇತರರನ್ನೂ ಬೆಳಗಿಸಿತು.

ಅದೇ ಸಂಸ್ಥೆಯ ಎಚ್.ಜಯದೇವ್ ಅವರ ಸದಭಿರುಚಿ, ದೂರದೃಷ್ಟಿ, ನಿಸ್ವಾರ್ಥ ಸೇವೆಗಳಿಂದ ಒಂದು ಜನಪ್ರಿಯ ಸಂಗೀತ ಪ್ರಕಾರ ಪ್ರಸಿದ್ಧಿಗೆ ಬಂದಿತು.

ಈ ಕಾರ್ಯಕ್ರಮ ನಡೆಯುತ್ತಿದ್ದ ಅವಧಿಯಲ್ಲಿಯೇ ಕವಿ ಲಕ್ಷ್ಮೀನಾರಾಯಣ ಭಟ್ಟರು ಶಿಶುನಾಳ ಷರೀಫರು ಎರಡು ಗೀತೆಗಳನ್ನು ಅಶ್ವಥ್ ಅವರಿಗೆ ನೀಡಿ ಷರೀಫರ ವ್ಯಕ್ತಿತ್ವದ ಬಗ್ಗೆ, ಪದ್ಯಗಳ ಬಗ್ಗೆ ತಿಳಿಸಿ, ಆ ಎರಡು ಗೀತೆಗಳಿಗೆ ರಾಗಸಂಯೋಜಿಸಲು ಕೊಟ್ಟರು. 'ತರವಲ್ಲ ತಗಿ ನಿನ್ನ ತಂಬೂರಿ', 'ಅಳಬೇಡ ತಂಗಿ' ಎಂಬ ಎರಡೂ ಗೀತೆಗಳೂ ಅದ್ಭುತವಗಿ ಸಂಯೋಜಿಸಲ್ಪಟ್ಟು ಅಶ್ವಥ್ ಮತ್ತು ಶಿವಮೊಗ್ಗ ಸುಬ್ಬಣ್ಣ ಅವರ ಕಂಠದಲ್ಲೇ ಜನಪ್ರಿಯವಾಯಿತು. ೧೯೮೦ರಲ್ಲಿ ಜಯದೇವ್ ಸಂಸ್ಥೆಯನ್ನು ಬಿಟ್ಟಾಗ ಎಂ.ಎಸ್.ಐ.ಎಲ್. ಗೀತೆಗಳೂ ಅದರೊಂದಿಗೆ ನಿಂತುಹೋದವು.

* * *

## ಅಧ್ಯಾಯ ೮ - ಸುಗಮಸಂಗೀತದ ಮೊದಲ ಧ್ವನಿಸುರುಳಿ

ಎಂ.ಎಸ್.ಐ.ಎಲ್.ನಿಂದ ಭಾವಗೀತೆಗಳ ಬೆಳೆ ಹುಲುಸಾಯಿತು. ಮನೆ ಮನೆಯಲ್ಲೂ ರೇಡಿಯೋ ಕಾರ್ಯಕ್ರಮಗಳೇ ಮಾತಿಗೆ ಗ್ರಾಸವಾಗಿದ್ದವು. ಯಾವುದೇ ಹೊಸತನವಾಗಲಿ, ಹಬ್ಬ ಸಂದರ್ಭವಾಗಲಿ, ಆಕಾಶವಾಣಿಯ ಮೂಲಕವೇ ವ್ಯಕ್ತವಾಗುತ್ತಿತ್ತು. ಬುಧವಾರದ ಕಾರ್ಯಕ್ರಮಕ್ಕೋಸ್ಕರ ರೇಡಿಯೋವಿಗೆ ಕಿವಿಯಿಟ್ಟು ಕಾಯುವ ಸರದಿ ಕವಿಗಳದ್ದೂ ಆಗಿತ್ತು. ಹಾಡುವರದ್ದೂ ಆಗಿತ್ತು. ಶ್ರೋತೃಗಳದ್ದೂ ಆಗಿತ್ತು. ಎಂ.ಎಸ್.ಐ.ಎಲ್.ಗಾಗಿ ಧ್ವನಿ ಮುದ್ರಿಸಿದ ಗೀತೆಗಳಲ್ಲಿ ನಿಸಾರರ, 'ಕುರಿಗಳು ಸಾರ್ ಕುರಿಗಳು', ಬೆಣ್ಣೆ ಕದ್ದ ನಮ್ಮ ಕೃಷ್ಣ, ಎಲ್ಲ ಮರೆತಿರುವಾಗ, ಮುಂತಾದ ಗೀತೆಗಳು ಜನಪ್ರಿಯವಾಗಿದ್ದವು. ಇವುಗಳನ್ನು ಧ್ವನಿಸುರುಳಿಯಲ್ಲಿ ಹಿಡಿದಿಟ್ಟುಕೊಳ್ಳುವ ಕೆಲಸ ಮಾಡಿದವರು ಕವಿ ನಿಸಾರ್ ಅಹಮದ್ ಮತ್ತು ಸಂಗೀತ ಸಂಯೋಜಕ ಮೈಸೂರು ಅನಂತಸ್ವಾಮಿ.

ಅರವತ್ತರ ದಶಕದ ಕೊನೆಯಲ್ಲಿ ನಾಲ್ಕು ನವ್ಯ ಕಾವ್ಯ ಸಂಕಲನಗಳನ್ನು ಹೊರತಂದು ಕೆಲವು ಪ್ರಯೋಗಶೀಲ ಪ್ರಯತ್ನಗಳನ್ನು ಮಾಡಿದ ನಿಸಾರರು ಬಳಿಕ ಭಾವಗೀತೆಗಳ ರಚನೆಗೆ ಕಯ ಹಾಕಿದರು. ಅವರೇ ಹೇಳಿರುವಂತೆ ಕನ್ನಡ ಕಾವ್ಯ ಜಗತ್ತಿನ ಮೋಜುಗಳಲ್ಲಿ ಒಂದು ವೈಚಾರಿಕತೆಯ ದೊಂಬರಾಟ, ಪೆಡಸುಗಳಿಂದ ಗತಿಗೇಡಿಯಾಗುತ್ತಿದ್ದ ಕಾವ್ಯಕ್ಕೆ, ಮತ್ತೊಮ್ಮೆ ಗೇಯತೆ, ಭಾವಗೀತಾತ್ಮಕತೆಯ ಮಂತ್ರಸ್ಪರ್ಶ ಅಗತ್ಯವೆಂಬ ಅರಿವು ಅವರಲ್ಲುಂಟಾಯಿತು. ಅದು ಉತ್ಕಟಗೊಂಡಿತು. ಜನಪದದಿಂದ ಗಾವುದ ದೂರ ಸಿಡಿದು ಯೂನಿವರ್ಸಿಟಿ ಕಾಲೇಜು ವಲಯಗಳಲ್ಲಿ ತೊಂಡಲೆಯುವ ಕಾವ್ಯ ಮರಳಿ ಜನಪದ ಧೋರಣೆಯನ್ನು ಮೈಗೂಡಿಸಿಕೊಂಡು ಸಮಾಜದ ಬೇರೆ ಬೇರೆ ಪದರುಗಳತನಕ ವ್ಯಾಪಿಸಬೇಕಾದ ಅಗತ್ಯ ತೋರಿಬಂದಿತ್ತು. ನಾಟಕೀಯತೆ, ವೈಯಕ್ತಿಕ ಸಂಕೇತ ಪ್ರತಿಮೆಗಳ ಭಾರದಿಂದ ಬಿಡುಗಡೆಗೊಂಡು ಮುಕ್ತ ವಿಲಾಸದಲ್ಲಿ ನಲಿಯುವ ಅರ್ಥ ಸಮೃದ್ಧ ಗೇಯ ಕವಿತಾ ರಚನೆ ಮತ್ತೊಮ್ಮೆ ಮೆರೆಯಬೇಕಿತ್ತು. ಈ ಕಾರಣಕ್ಕಾಗಿ 'ನಿತ್ಯೋತ್ಸವ' ಗೀತಸಂಕಲನವನ್ನು (೧೯೭೬) ಪ್ರಕಟಿಸಿದರು. ನಿತ್ಯೋತ್ಸವ ಗೀತಸಂಕಲನ ಹೀಗೆ ನವ್ಯ ಮಾರ್ಗದಿಂದ ಗೇಯಮಾರ್ಗಕ್ಕೆ ಸಾಹಿತ್ಯವನ್ನು ತಂದಿತು. ಶಾಸ್ತ್ರೀಯ ಸಂಗೀತ ಮಾರ್ಗದಿಂದ ಸುಗಮ ಮಾರ್ಗಕ್ಕೆ ಭಾವಗೀತೆಯನ್ನು ಎಳೆತಂದಿತು.

ಏಕತಾನತೆಯಿಂದ ತಲ್ಲಣಿಸುತ್ತಿದ್ದ ನವ್ಯಕಾವ್ಯ ಮಾರ್ಗಕ್ಕೆ ಹೊಸದಿಗಂತವನ್ನು ತೋರಿಸಿ ಗೇಯತೆಯ ಸ್ಪರ್ಶವನ್ನು ಮಾಡಿಸಿದ ಕೀರ್ತಿ ನಿಸಾರರಿಗೆ ಸಲ್ಲುತ್ತದೆ. ಸಾಹಿತ್ಯ ವಲಯದಲ್ಲಿ ಕವಿತೆಯ ಶೈಲಿ ಸರಳವೂ ಮನೋಹರವೂ ಆದಂತೆ, ಸಂಗೀತ ಪದ್ಧತಿಯಲ್ಲೂ ಕವಿತಾ ಗಾಯನ, ಸರಳ ಸುಂದರವಾದ ಸಂಗೀತ ಶೈಲಿಯಾಗಲು ನಿಸಾರರಿಗಿದ್ದ ಘಜಲ್ ಸಂಗೀತದ ತುಡಿತವೇ ಕಾರಣವಾಯಿತು. ಗುಲಾಂಅಲಿ, ಮೆಹಂದಿಹಸನ್, ತಲತ್ ಮಹಮೂದ್, ಪಂಕಜ್ ಉದಾಸ್, ಚಿತ್ರಾಸಿಂಗ್, ಜಗದೀಪ್‌ಸಿಂಗ್ ಮುಂತಾದವರ ಘಜಲ್ ಗಾಯನದಿಂದ ಪ್ರಭಾವಿತರಾಗಿದ್ದ ನಿಸಾರರಿಗೆ ಕನ್ನಡದಲ್ಲಿ ಈ ತೆರನಾದ ಕವಿತೆ ಏಕೆ ಬರೆಯಬಾರದು ಎಂಬ ಹಠ ಬಂದಿತು. ತಲತ್ ಮಹಮೂದ್ ಹಾಡಿದ ಫಿರ್‌ವಹೀ ಶ್ಯಾಮ್ ಘಜಲ್ ನಿಸಾರ್‌ರ ಪ್ರಿಯಗೀತೆಯಾಗಿತ್ತು. ಆ ಘಜಲ್‌ನ ಮೊದಲನೇ ಸಾಲನ್ನಿಟ್ಟುಕೊಂಡು 'ಮತ್ತದೇ ಬೇಸರ ಅದೇ ಸಂಜೆ ಅದೇ ಏಕಾಂತ', ಎಂದು ಕನ್ನಡಕ್ಕೆ ಅನುವಾದ ಮಾಡಿದರು. ಆಗಷ್ಟೇ ಎಲ್.ಪಿ.ಗಳ ಭರಾಟೆ ಹುಚ್ಚು ಹೊಳೆಯಂತೆ ಹರಿಯುತ್ತಿತ್ತು. ಹಿಂದಿ ಭಾಷೆಯ ಕ್ಯಾಸೆಟ್ ಪ್ರಾರಂಭವಾಗಿ ಮಾರಾಟವಾಗುತ್ತಿತ್ತು. ಘಜಲ್ ಗಾಯಕರ ಧ್ವನಿಸುರಳಿಗಳಿಂದ ಪ್ರಭಾವಿತರಾಗಿ ನಿಸಾರ್ ಅವರಿಗೆ ಕನ್ನಡದಲ್ಲೂ ಅದನ್ನು ತರಬಾರದೇಕೆ ಎಂಬ ಮನಸ್ಸಾಯಿತು. ಆಗ ಈಗಿನಂತೆ ಕ್ಯಾಸೆಟ್ ತಯಾರಿಕೆಯ ಸಂಸ್ಥೆಗಳಾಗಲಿ, ಅದನ್ನು ಧ್ವನಿಮುದ್ರಿಸುವ ಸ್ಟುಡಿಯೋಗಳಾಗಲಿ ಇರಲಿಲ್ಲ. ಬೆಂಗಳೂರಿನಲ್ಲಿದ್ದ ಪ್ರಭಾತ್ ಕಲಾವಿದರು ತಮ್ಮ ಸ್ವಂತ ಅಗತ್ಯ ಕೆಲಸಗಳಿಗಾಗಿ ರೇಡಿಯೋಗೆ ಮಾಡಿಕೊಡುತ್ತಿದ್ದ ಸಣ್ಣಪುಟ್ಟ ಧ್ವನಿಮುದ್ರಣ ಕಾರ್ಯಕ್ರಮಗಳಿಗಾಗಿ ಕೇವಲ ಪ್ರಾರಂಭಿಕ ಸೌಲಭ್ಯಗಳನ್ನು ಒಳಗೊಂಡ ಸ್ಟುಡಿಯೋ ಒಂದನ್ನು ಹೊಂದಿದ್ದರು. ಧ್ವನಿಮುದ್ರಣದ ಜವಾಬ್ದಾರಿ ಪ್ರಭಾತ್ ಸಂಸ್ಥೆಯ ಜಗನ್ನಾಥ್ ಅವರದ್ದಾಗಿತ್ತು. ನಿಸಾರರು ಕನ್ನಡದ ಕವಿತೆಗಳನ್ನೊಳಗೊಂಡ ಧ್ವನಿಸುರುಳಿಯನ್ನು ತಯಾರಿಸುವ ಕನಸು ಹೊತ್ತು ಶಿವಮೊಗ್ಗದಿಂದ ಬೆಂಗಳೂರಿಗೆ ಬಂದು ಹೋಗುತ್ತಾ, ಕಡೆಗೂ ಧ್ವನಿಸುರುಳಿಯನ್ನು ತಯಾರು ಮಾಡುವ ನಿರ್ಧಾರ ತೆಗೆದುಕೊಂಡರು ಎಂದೂ ಸಾಹಿತ್ಯದ, ಸಂಗೀತದ, ಗುಣಮಟ್ಟವನ್ನು ಕಾಪಾಡಿಕೊಂಡು ಬರುತ್ತಿದ್ದ ನಿಸಾರರು ಮೊದಲು ತಮ್ಮ ಧ್ವನಿಸುರುಳಿ ಹೇಗಿರಬೇಕೆಂದು ರೂಪುರೇಖೆ ಹಾಕಿಕೊಂಡರು. ಮೊದಲನೆಯದಾಗಿ ಸಿನಿಮಾದ ದಾಂಧಲೆಗಳಿಂದ ವಿಮುಕ್ತವಾಗಿದ್ದು, ಒಳ್ಳೆಯ ಸಾಹಿತ್ಯಗುಣದಿಂದ ಕೂಡಿದ್ದು, ಎಲ್ಲರೂ ಕುಳಿತು ಕೇಳುವಂತಹ ಸಾಹಿತ್ಯ ಶಕ್ತಿಯುಳ್ಳದ್ದಾಗಿರಬೇಕು. ಶಾಸ್ತ್ರೀಯ ಸಂಗೀತದ ಆಲಾಪಗಳು ಸಂಗೀತದ ಪೆಡಸುಗಳಿಂದ ದೂರವಿರಬೇಕೆಂದು ತೀರ್ಮಾನಿಸಿದರು. ಸುಮಾರು ಇಪ್ಪತ್ತೈದು ಹಾಡುಗಳನ್ನು ಆರಿಸಿಕೊಂಡು ಮೈಸೂರು ಅನಂತಸ್ವಾಮಿಯವರ ಸಂಯೋಜನೆಯ ಉತ್ಕೃಷ್ಟ ಕವಿತೆಗಳನ್ನು ಆರಿಸಿಕೊಂಡರು. ತಮ್ಮ ಗೆಳೆಯ ರಾಮಸ್ವಾಮಿ ಮತ್ತು ಬಿ.ಕೆ. ಪಾರ್ಥಸಾರಥಿಯವರೊಂದಿಗೆ ಸಮಾಲೋಚಿಸಿ ಬ್ಯಾಂಕಿನಿಂದ ಸಾಲ ತೆಗೆದು ನಿತ್ಯೋತ್ಸವ ಕ್ಯಾಸೆಟ್‌ನ ಧ್ವನಿಮುದ್ರಣಕ್ಕೆ ಅನಂತಸ್ವಾಮಿಯವರನ್ನು ಒಪ್ಪಿಸಿದರು. ಎ.ಎಸ್.ಮೂರ್ತಿ ಮತ್ತು ವಿಜಯ ಅವರ ವಶೀಲಿಯಿಂದ ಬ್ಯಾಂಕಿನಲ್ಲಿ ಸಾಲ ದೊರೆತು, ಕ್ಯಾಸೆಟ್ ತಯಾರಾಯಿತು. ೧೯೭೮ರ ನವೆಂಬರ್ ತಿಂಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವೇದಿಕೆಯಲ್ಲಿ ಕವಿ ಕೆ.ಎಸ್. ನರಸಿಂಹಸ್ವಾಮಿಯವರಿಂದ ನಿತ್ಯೋತ್ಸವ ಧ್ವನಿಸುರುಳಿ ಬಿಡುಗಡೆಗೊಂಡಿತು. ಅಂದು ಮಂತ್ರಿಯಾಗಿದ್ದ ಕೆ.ಎಚ್. ಶ್ರೀನಿವಾಸ್ ಅವರು ಮುಖ್ಯ ಅತಿಥಿಯಾಗಿ ಬಂದಿದ್ದು, ಕವಿ ಗೋಕಾಕ ಧ್ವನಿಸುರುಳಿ ಬಿಡುಗಡೆ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಕನ್ನಡದ ಮೊದಲನೆಯ ಸುಗಮಸಂಗೀತದ, ಪ್ರಾಯಾಶಃ ಭಾರತೀಯ ಭಾಷೆಯಲ್ಲೇ, ಕವಿತಾ ಸಂಗ್ರಹವೊಂದರಿಂದ ಆರಿಸಿದ ರಚನೆಗಳನ್ನೊಳಗೊಂಡ ಚೊಚ್ಚಲ ಧ್ವನಿಸುರುಳಿ ಬಿಡುಗಡೆಯಾಯಿತು. ರಚನಾರಾವ್ ಎಂಬುವವರು ಮುಂಬಯಿನಿಂದ ಬೆಂಗಳೂರಿಗೆ ಬಂದು ಜಾಹೀರಾತು ಕಂಪನಿಯನ್ನು ನಡೆಸುತ್ತಿದ್ದರು. ಡಾ. ವಿಜಯಾ ಅವರ ಮೂಲಕ ನಿಸ್ಸಾರ್ ಅವರಿಗೆ ರಚನಾರಾವ್ ಅವರ ಪರಿಚಯವಾಯಿತು. ನಿತ್ಯೋತ್ಸವ ಧ್ವನಿಸುರುಳಿಯ ಬಗೆಗೆ ಪ್ರಜಾವಾಣಿ ಮತ್ತಿತರರ ಪತ್ರಿಕೆಗಳಲ್ಲಿ ಪ್ರಚಾರಕೊಟ್ಟು ನಿತ್ಯೋತ್ಸವ ಧ್ವನಿಸುರುಳಿಯ ಪ್ರಸರಣಕ್ಕೆ ರಚನಾರಾವ್ ನೆರವಾದರು. ಅದು ಬಹುದೊಡ್ಡ ಉಪಕಾರವಾಯಿತು. ಆಗ ಸ್ಪೂಲ್ ಟೇಪ್ ರೆಕಾರ್ಡಿಂಗ್‌ನಲ್ಲಿ ಧ್ವನಿಮುದ್ರಣವಾದ ನಿತ್ಯೋತ್ಸವ ಧ್ವನಿಸುರುಳಿ ಡಬ್ ಆಗಬೇಕಾದರೆ ಮೂಲದಲ್ಲಿದ್ದ ಸಮಯವೇ ಬೇಕಾಗುತ್ತಿತ್ತು. ಒಂದು ಧ್ವನಿಸುರುಳಿ ಎಷ್ಟು ನಿಮಿಷ ಧ್ವನಿಮುದ್ರಣವಾಗಿದೆಯೋ, ಅದನ್ನು ಡಬ್ ಮಾಡಬೇಕಾದಾಗಲೂ ಅಷ್ಟು ಸಮಯ ಬೇಕಾಗುತ್ತಿತ್ತು. ದಿವಸಕ್ಕೆ ೧೦ ರಿಂದ ೧೫ ಧ್ವನಿಸುರುಳಿಗಳನ್ನು ಬಹಳ ಕಷ್ಟದಿಂದ ಡಬ್ ಮಾಡಬಹುದಿತ್ತು. ಅದರ ಬೆಲೆಯೂ ೭೫ ರೂ.ಗಳಷ್ಟು ತೆರಬೇಕಾಗಿತ್ತು. ಕೊಂಡುಕೊಳ್ಳುವ ಜನರಿಗೆ ಕ್ಯಾಸೆಟ್ ಎನ್ನಲು ತಿಳಿಯದೆ ಕ್ಯಾಸ್ಕೆಟ್ ಇದೆಯೇ ಎಂದು ಕೇಳತೊಡಗಿದರು. ಧ್ವನಿಸುರುಳಿಗಾಗಿ ಹೆಸರನ್ನು ಮುಂಗಡವಾಗಿ ಸಾಲಿನಲ್ಲಿ ನಿಂತು ಕಾದು

ಬರೆಯಿಸುವವರೂ ಇದ್ದರು. ರವೀಂದ್ರ ಸ್ಟೋರ್ಸ್, ಗಾಂಧಿಬಜಾರ್‌ನಲ್ಲಿ ಧ್ವನಿಸುರುಳಿಗಾಗಿ ಜನ ಮುಗಿಬೀಳುತ್ತಿದ್ದರು. ನಿತ್ಯೋತ್ಸವ ಕ್ಯಾಸೆಟ್ ಇದೆಯೇ? ಸಾರ್? ಎಂದು ಜನ ಬಂದು ಕೇಳಿ ಮುಂಗಡವಾಗಿ ಕಾದಿರಿಸಿ ತೆಗೆದುಕೊಂಡು ಹೋಗುತ್ತಿದ್ದರು. ಎಡೆಬಿಡದೆ ಒತ್ತಡದಿಂದ ಬೇಸತ್ತ ನಿಸಾರರಿಗೆ ಈ ಕೆಲಸದಿಂದ ವಿಮುಕ್ತಿ ನೀಡಿದವರು ಆಗ ಐ.ಬಿ.ಹೆಚ್.ನಲ್ಲಿದ್ದ ಜಿ.ಕೆ. ಅನಂತರಾಮ್ ಅವರು ಅಮರ್‌ನಾಥ್ ಸಂಸ್ಥೆಗೆ ಈ ಧ್ವನಿಸುರುಳಿಯ ಮಾರಾಟದ ಹಕ್ಕನ್ನು ನೀಡಲು ಸಲಹೆ ಕೊಟ್ಟರು. ಅಮರನಾಥ್‌ಮಾರಾಟದ ಹಕ್ಕನ್ನು ತೆಗೆದುಕೊಂಡ ಮೇಲೆ ನಿಸಾರರು ನೆಮ್ಮದಿಯಿಂದ ಉಸಿರಾಡುವಂತಾಯಿತು. ಅಲ್ಲಿಯವರೆಗೆ ಅವರೆ ಕ್ಯಾಸೆಟ್ ಡಬ್ ಆಗಲು ಶ್ರಮಿಸಿ ಶ್ರಮಿಸಿ ಸೊರಗಿ ಹೋಗಿದ್ದರು. ಅಮರ್‌ನಾಥ್ ಸಂಸ್ಥೆ ಸಾವಿರಾರು ಕ್ಯಾಸೆಟ್‌ಗಳ ಮಾರಾಟ ಮಾಡಿ ದಾಖಲೆಯನ್ನು ನಿರ್ಮಿಸಿತು. ನಿತ್ಯೋತ್ಸವ ಕ್ಯಾಸೆಟ್ ಬಿಡುಗಡೆಯಾಗುತ್ತಲೆ, ಹಲವು ಹೊಸ ಆಸಕ್ತಿ ಕಲೆ, ಕಲಾವಿದರನ್ನು, ಸಾಹಿತ್ಯದ ಹೊಸಮಾರ್ಗವನ್ನು ಒಮ್ಮೆಲೆ ಬಿಡುಗಡೆ ಮಾಡಿತು. ಕವಿ, ಸಂಯೋಜಕ, ಗಾಯಕರ ತ್ರಿವೇಣಿ ಸಂಗಮದ ನವಪರಂಪರೆಯ ಸಂಸ್ಕೃತಿಯ ನಿರ್ಮಾಣಕ್ಕೆ ಅಡಿಪಾಯ ಹಾಕಿಕೊಟ್ಟಿತು. ಆನಂತರ ಸಂಗೀತ 'ನಾದಲಹರಿ-ಲಹರಿ' ಮುಂತಾದ ಅನೇಕ ಕ್ಯಾಸೆಟ್ ಸಂಸ್ಥೆಗಳು ಪ್ರಾರಂಭವಾಗಿ ಧ್ವನಿಸುರುಳಿಗಳು ವರ್ಷಧಾರೆಯಾಗಿ ಸುರಿದು ಹರಿಯಿತು.

ನಿತ್ಯೋತ್ಸವ ಕ್ಯಾಸೆಟ್ ಬಂದ ಮೇಲೆ ಸುಗಮಸಂಗೀತದ ದಾರಿ ಸುಗಮವಾಗಿ ಹಲವಾರು ದಾರಿಗಳಾಗಿ ಸಾಗಿ ತನ್ನ ವಿಸ್ತೀರ್ಣವನ್ನು ಹತ್ತುಪಟ್ಟು ನೂರುಪಟ್ಟು ಹೆಚ್ಚಿಸಿಕೊಂಡಿತು. ಹತ್ತಾರು ಗಾಯಕರು ದಿನ ಬೆಳಗಾಗುವುದರಲ್ಲಿ ಕೇಳುಗರ ಕಣ್ಮಣಿಗಳಾದರು. ಜೋಗದ ಸಿರಿ ಬೆಳಕಿನಲ್ಲಿ, ಬೆಣ್ಣೆ ಕದ್ದ, ಕುರಿಗಳ್ ಸಾರ್, ಎಲ್ಲ ಮರೆತಿರುವಾಗನನ್ನ ನಲವಿನ ಬಳ್ಳಿ, ನೀ ನುಡಿಯದಿರಲೇನು, ಒಂದೊಂದು ಹಾಡು ಅನಂತಸ್ವಾಮಿಯವರ ಸಂಯೋಜನೆಗೆ ಸವಾಲಿನಂತೆ ಇದ್ದವು. ಭಾವಕ್ಕೆ ಪ್ರಾಶಸ್ತ್ಯ ಕೊಟ್ಟು ಕನ್ನಡಕ್ಕೆ ತಂದಿದ್ದ ಘಜಲ್ ಶೈಲಿಯ, ಮತ್ತದೇ ಬೇಸರ ಅದೇ ಸಂಜೆ ಗೀತೆ ಕೇಳುಗರ ಕಿವಿಯಲ್ಲಿ ರಿಂಗಣಿಸಿತು. ಕ್ಯಾಸೆಟ್ ಲೋಕ ಕಣ್ತೆರೆಯಿತು. ಸುಗಮಸಂಗೀತಕ್ಕೆ ಬೆಳಕಾಯಿತು. ಒಬ್ಬ ಪ್ರಜ್ಞಾವಂತಕವಿ ಮತ್ತು ಒಬ್ಬ ಭಾವುಕ ಸಂಗೀತ ಸಂಯೋಜಕನ ಸಾಹಸದಿಂದ ಒಂದು ಹೊಸ ದಿಗಂತದ ಸೃಷ್ಟಿಯಾಯಿತು.

ಈ ಧ್ವನಿಸುರುಳಿಯ ಜನಪ್ರಿಯತೆ ಎಷ್ಟು ಏರಿತೆಂದರೆ ಇದಕ್ಕೆ ಸಮನಾದ ಅಥವಾ ಇದನ್ನು ಮೀರಿಸುವಂತಹ ಎರಡನೇಯ ಧ್ವನಿಸುರುಳಿಯನ್ನು ತರುವುದು ನಿಸಾರರಿಗೆ ಸಾಧ್ಯವಾಗಲಿಲ್ಲ. ಕಾರಣ ಇಷ್ಟು ವೈವಿಧ್ಯತೆಯನ್ನು ಬೇರೊಂದು ಧ್ವನಿಸುರುಳಿ ನೀಡಲು ಸಾಧ್ಯವಾಗುತ್ತದೆ ಎಂಬ ಭರವಸೆ ಅವರಿಗೆ ಇರಲಿಲ್ಲ. 'ನಿತ್ಯೋತ್ಸವದ ಕವಿ' ಎಂದೇ ನಿಸಾರರು ಜನಪ್ರಿಯರಾದರು. ಕೆ.ಎಸ್. ನರಸಿಂಹಸ್ವಾಮಿಗಳು 'ಮೈಸೂರು ಮಲ್ಲಿಗೆ' ಕವಿಯಾದಂತೆ. ನಿಸಾರರು ನಿತ್ಯೋತ್ಸವ ಕವಿತೆಗಿಂತ ಉತ್ತಮ ಕವಿತೆಗಳನ್ನು ಬರೆದರೂ ಅವರಿಗೆ ನಿತ್ಯೋತ್ಸವ ಕವಿ ಎಂದೇ ಜನರು ಕರೆಯತೊಡಗಿದರು. ಸುಗಮಸಂಗೀತದ ಧ್ವನಿಸುರುಳಿಯ ಹರಿಕಾರರಾದ ನಿಸಾರ್ ಅವರು ೧೯೭೮ ರಲ್ಲಿ ತಮ್ಮ ಮೊದಲ ಧ್ವನಿಸುರುಳಿಯನ್ನು ತಯಾರಿಸುವುದರ ಮೂಲಕ ನವಪರಂಪರೆಯ ನಿರ್ಮಾಣ ಮಾಡಿದರು.

<u>ಸುಗಮ ಸಂಗೀತ</u>

**ಧ್ವನಿಸುರುಳಿಗಳ ಮಹಾಪೂರ**

ನಿತ್ಯೋತ್ಸವದ ಅನಂತರ ಧ್ವನಿಸುರುಳಿಗಳ ಸಾಲು ಸಾಲೇ ಹುಟ್ಟಿಕೊಂಡಿತು. ೧೯೮೦ ಮಾರ್ಚ್‌ತಿಂಗಳಲ್ಲಿ ಪ್ರಾರಂಭವಾದ ಹೆಚ್.ಎಂ.ಮಹೇಶ್ ಅವರ 'ಸಂಗೀತ' ಕ್ಯಾಸೆಟ್ ಕಂಪನಿ ಭಾವಗೀತೆಗಳ ಮಹಾಪೂರವನ್ನೇ ಉಕ್ಕಿಸಿತು. ಕವಿ ಲಕ್ಷ್ಮಿನಾರಾಯಣ ಭಟ್ಟರು ಸಂಗ್ರಹಿಸಿ ಪ್ರಕಟಿಸಿದ 'ಸಂತ ಶಿಶುನಾಳ ಷರೀಫ್' ಕ್ಯಾಸೆಟ್ ಅಶ್ವಥ್‌ಅವರ ಸಂಯೋಜನೆಯಲ್ಲಿ ಅತ್ಯಂತ ಜನಪ್ರಿಯವಾಯಿತು. ಶಿಶುನಾಳರ ಕಾವ್ಯಬಂಧಕ್ಕೆ ಅಶ್ವಥ್‌ನೀಡಿದ ಸಂಗೀತ ಅಭೂತಪೂರ್ವವಾಗಿತ್ತು. ಲಕ್ಷ್ಮಿ ನಾರಾಯಣ ಭಟ್ಟರ 'ಬಾರೋ ವಸಂತ', 'ದೀಪಿಕಾ', ಕೆ.ಎಸ್.ನರಸಿಂಹಸ್ವಾಮಿಗಳ 'ಮೈಸೂರು ಮಲ್ಲಿಗೆ' ಇರುವಂತಿಗೆ, 'ಕೆಂಗುಲಾಬಿ', 'ಅನುರಾಗ', 'ಮಾವು ಬೇವು', ಉಂಗುರ, ಶ್ರೀಮುಖ, ಕನ್ನಡವೇ ಸತ್ಯ ಮುಂತಾದ ಧ್ವನಿಸುರುಳಿಗಳಿಗೆ ಅಶ್ವಥ್ ಸಂಗೀತ ನೀಡಿದ್ದರು. ಅಶ್ವಥ್ ಅವರು ಷರೀಫರ ಪ್ರತಿನಿಧಿಯಾಗಿ

ನಾಡಿನಾದ್ಯಂತ ಜನಪ್ರಿಯರಾಗಿ ಹಬ್ಬಿಕೊಂಡರು. ಸುಗಮಸಂಗೀತದ ದಿಕ್ಕುಗಳನ್ನೇ ವಿಸ್ತರಿಸುತ್ತಾ ಹೋದರು. ನಾಡಿನ ಪ್ರಮುಖ ಕವಿಗಳ ಎಲ್ಲಾ ಗೀತೆಗಳೂ ಕ್ಯಾಸೆಟ್ ಮಾಧ್ಯಮದಲ್ಲಿ ಮಾತನಾಡತೊಡಗಿದವು. ಅದೂವರೆವಿಗೂ ಪುಸ್ತಕದಲ್ಲಿ ಅಡಗಿದ್ದ ಅನೇಕ ಭಾವಗೀತೆಗಳು ಮೇಲೆದ್ದು ಬಂದು ಜೀವಂತವಾದವು.

ಸಂಗೀತ ಧ್ವನಿಸುರುಳಿ ಸಂಸ್ಥೆ ತಯಾರಿಸಿದ ಮತ್ತೊಂದು ಅತ್ಯಂತ ಜನಪ್ರಿಯವಾದ ಧ್ವನಿಸುರುಳಿ ಎಂದರೆ ಮೈಸೂರು ಅನಂತಸ್ವಾಮಿಯವರು ಸಂಗೀತ ನೀಡಿದ್ದ 'ಭಾವ ಸಂಗಮ' - ಹಲವು ಕವಿಗಳ ಕವಿತೆಗಳನ್ನೊಳಗೊಂಡಿದ್ದ ಭಾವ ಸಂಗಮ ಧ್ವನಿಸುರುಳಿ ಅತ್ಯಂತ ವಿಶಿಷ್ಟವಾದದ್ದು ತನ್ನ ವೈವಿಧ್ಯತೆಯಿಂದ ಇಲ್ಲಿ ಒಂದೊಂದು ಹಾಡೂ ತನ್ನ ಅರ್ಥ ಶೈಲಿಯಿಂದ ಭಿನ್ನವಾಗಿ ನಿಂತಿತು. ಜಿ.ಎಸ್. ಶಿವರುದ್ರಪ್ಪನವರ 'ಎದೆ ತುಂಬಿ ಹಾಡಿದೆನು' - ಅಡಿಗರ 'ಯಾವ ಮೋಹನ ಮುರಲೀ' - ಮಾಸ್ತಿಯವರ 'ಬಾ ಸವಿತಾ' - ಕೆ.ಎಸ್. ನರಸಿಂಹಸ್ವಾಮಿಗಳ 'ಹೆಂಡತಿಯೊಬ್ಬಳು ಮನೆಯಲ್ಲಿದ್ದರೆ' - ಅತ್ತಿತ್ತ ನೋಡದಿರು, ಹೀಗೆ ಮುಂತಾಗಿ ಕವಿತೆಗಳು ಹಿರಿಯ ಭಾವನೆಗಳನ್ನು ಸರಳವಾಗಿ ಮುಟ್ಟಿಸಿದಕ್ಕೂ ಏನೋ, ಸಾಮಾನ್ಯರ ನಾಲಿಗೆಯಲ್ಲೂ ದಶಕಗಳು ಕಳೆದರೂ ನಾದದ ಗುಂಗಿನಿಂದ ಚಿರಂತನವಾದವು. ನಾಡಿನ ಪ್ರಖ್ಯಾತ ಕವಿಗಳ ಹಾಡುಗಳೆಲ್ಲಾ ಸುಗಮಸಂಗೀತದ ರೇಶಿಮೆ ತೊಡುಗೆಯಲ್ಲಿ ಚಂದ ಕಾಣುತ್ತಾ ಹೊಳೆದವು. ಕಾವ್ಯ ಮತ್ತು ಗೇಯದ ಬಲದಿಂದ ಅನಂತವಾದವು.

ಸಂಗೀತ ನಿರ್ದೇಶಕ ಎಚ್.ಕೆ. ನಾರಾಯಣರ ನಿರ್ದೇಶನದಲ್ಲಿ ಹಲವು ಜನಪ್ರಿಯ ಧ್ವನಿಸುರುಳಿಗಳು ಬಂದವು. ಲಕ್ಷ್ಮಿನಾರಾಯಣ ಭಟ್ಟರ 'ಬಾರೋ ವಸಂತ', 'ಮಾಧುರಿ', ವಿವಿಧ ಕವಿಗಳ 'ಸಂಜೆ ಮಲ್ಲಿಗೆ', ಕೆ.ಸಿ. ಶಿವಪ್ಪನವರ 'ಸಂಗಾತಿ' 'ಗೆಳತಿ' ಲಕ್ಷ್ಮಿನಾರಾಯಣ ಭಟ್ಟರ 'ನೀಲಾಂಜನ' ಧ್ವನಿಸುರುಳಿ ಮುಂತಾದವು ಜನಪ್ರಿಯವಾದವು. 'ನೀಲಾಂಜನ'ದ ಗೀತೆಗಳಂತೂ ಕನ್ನಡದ ಮೀರಾ ಭಜನೆಗಳಾಗಿ ನಾದದ ಗುಂಗನ್ನು ಹಬ್ಬಿಸಿದವು. ಶಾಸ್ತ್ರೀಯ ಸಂಗೀತ ವಿದ್ವಾಂಸರಾದರೂ ಸುಗಮಸಂಗೀತಕ್ಕೆ ಬಂದಾಗ ಸುಗಮವಾಗಿ ಗೀತೆಗಳನ್ನು ಹಾದು ಹೊಕ್ಕು ಸಂಯೋಜನೆ ಮಾಡಿದ ನಾರಾಯಣರ 'ನೀಲಾಂಜನ' ಧ್ವನಿಸುರುಳಿ ಅವರ ಹೆಸರನ್ನು ನೀಲಾಂಜನದಂತೆ ಬೆಳಗಿತು.

ಮದರಾಸಿನಲ್ಲಿ ನೆಲೆಯಾಗಿ ನಿಂತು ಕನ್ನಡದ ಭಾವಗೀತೆಗಳನ್ನು ತಯಾರು ಮಾಡಿದ ಮಂಗಳೂರು ಅಪ್ಪಟ ಕನ್ನಡಿಗ ಹೆಚ್.ಎಂ. ಮಹೇಶ್ ಅವರ ಸಂಗೀತ ಪ್ರೇಮ, ಆಸಕ್ತಿ - ಛಲಗಳಿಂದ ಕನ್ನಡ ಭಾವಗೀತೆಯ ಬೆಳೆ ಹುಲುಸಾಯಿತು. ಪ್ರಸಾರ ಮಾಧ್ಯಮಕ್ಕೆ ಆಕಾಶವಾಣಿಯ ನಂತರದಲ್ಲಿ, ಧ್ವನಿಸುರುಳಿಗಳೇ ಅತ್ಯಂತ ಪ್ರಭಾವಶಾಲಿಯಾಗಿದ್ದವು. ಕ್ಯಾಸೆಟ್ ಎನ್ನುವ ಹೆಸರೇ ಅಪರಿಚಿತವಾಗಿದ್ದ ಕಾಲದಲ್ಲಿ ಸಂಗೀತಾ ಸಂಸ್ಥೆ ಹೊರನಾಡಿನಲ್ಲಿದ್ದುಕೊಂಡೇ ತನ್ನ ಕನ್ನಡ ಸೇವೆಯನ್ನು ಸಲ್ಲಿಸಿತು. ಅವುಗಳ ಗುಣಮಟ್ಟದಲ್ಲಿ ಗೆದ್ದು ಜನಪ್ರಿಯವಾದವು. ಮೈಸೂರು ಅನಂತಸ್ವಾಮಿ ಅವರ 'ಭಾವಸಂಗಮ' - ದೀಪೋತ್ಸವ - 'ಎದೆತುಂಬಿ ಹಾಡಿದೆನು' - ಅನಂತನಮನ - ಹೆಚ್.ಕೆ.ನಾರಾಯಣ್ ಅವರ - 'ಬಾರೋ ವಸಂತ' ಸಂಜೆಮಲ್ಲಿಗೆ 'ಅರಳುಮಲ್ಲಿಗೆ' - ಕಾವ್ಯಸುಧೆ, ಶಿವಮೊಗ್ಗ ಸುಬ್ಬಣ್ಣ ಅವರ 'ಅಗ್ನಿಹಂಸ' 'ಗೀತಗಂಗಾ' - 'ಬಾರಿಸು ಕನ್ನಡ ಡಿಂಡಿಮವ' - ಡಾ|| ಬಾಲಮುರಳಿ ಕೃಷ್ಣ | ಮತ್ತು ರಮಾದೇವಿ ಅವರ 'ಭಾವಭೃಂಗ' - ಹೆಚ್.ಆರ್. ಲೀಲಾವತಿ ಅವರ 'ಭಾವಗೀತೆ' - ಕಸ್ತೂರಿ ಶಂಕರ್ಅವರ 'ಕಾವ್ಯಕಸ್ತೂರಿ' ಡಾ|| ಜಯಶ್ರೀ ಅರವಿಂದ್ ಅವರ 'ಮಧುಕೋಗಿಲೆ' ಇಂದು ವಿಶ್ವನಾಥ್ ಅವರ 'ಅಭಿಸಾರಿಕೆ' - ಮುದ್ದುಮೋಹನ್ ಅವರ 'ಅನಾದಿಗಾನ' ಹೀಗೆ ನೂರಾರು ಧ್ವನಿಸುರುಳಿಗಳು ಸಂಗೀತ ಸಂಸ್ಥೆ ಹೆಮ್ಮೆಯ ಬಿಡುಗಡೆಯಾಗಿವೆ. ಸಿ. ಅಶ್ವಥ್‌ರ 'ದೀಪಿಕಾ' - ಶಿಶುನಾಳಷರೀಫರ ಸುಮಾರು ಐದಾರು ಸಂಪುಟಗಳು ಕರ್ನಾಟಕದ ಮನೆ ಮನೆ ಮಾತಾಗಿವೆ.

'ಭಾವ ಸಂಗಮ' 'ಮೈಸೂರು ಮಲ್ಲಿಗೆ' - 'ಬಾರೋ ವಸಂತ' - 'ದೀಪಿಕಾ' - ಕ್ಯಾಸೆಟ್ಟುಗಳ ಜೊತೆಯಲ್ಲಿ ಜಾನಪದ ಗೀತೆಗಳ ಧ್ವನಿ ಸುರುಳಿಗಳನ್ನೂ ತಯಾರಿಸಿ, ಜನಪದ ಗೀತೆಗಳ ಅಲೆಯನ್ನೇ ಸೃಷ್ಟಿ ಮಾಡತೊಡಗಿತು. ಬಿ.ಕೆ. ಸುಮಿತ್ರಾ ಅವರ 'ಮೊದಲು ನೆನೆದೇವ', 'ನಿಂಬಿಯಾ ಬನದಲ್ಲಿ', 'ಮಾಯದಂತ ಮಳೆ ಬಂತಣ್ಣಾ', 'ಘಲ್ಲುಘಲ್ಲೆನುತಾ' ಮೊದಲಾದ ಗೀತೆಗಳು ಜನಪ್ರಿಯವಾಗಿ ಎಲ್ಲೆಲ್ಲೂ ಕೇಳತೊಡಗಿದವು. ಜನಪದ ಗೀತೆಗಳ ಹಲವಾರು ಸಂಪುಟಗಳನ್ನೇ 'ಸಂಗೀತ' ಸಂಸ್ಥೆ ತಯಾರಿಸಿತು. 'ಮತಿಘಟ್ಟ ಕೃಷ್ಣಮೂರ್ತಿ'

ಗಳಂತಹ ಜಾನಪದ ವಿದ್ವಾಂಸರುಗಳಿಗೆ ಪರಿಷ್ಕರಿಸಿ ಶೋಧಿಸಲ್ಪಟ್ಟ ಹಲವಾರು ಗೀತೆಗಳು ಸುಮಿತ್ರ ಅವರ ಗಾಯನದಲ್ಲಿ ಪೂನರ್ಭವವಾದವು. ಜನಪದ ಗೀತೆಗಳ ಒಂದು ಅಲೆಯೇ ಹುಟ್ಟಿಕೊಂಡಿತು. ಶಿವಮೊಗ್ಗದ ಗಾಯಕ ಯುವರಾಜ್ 'ಜೇನುಗೂಡು' 'ಮುತ್ತಿನ ತೆನೆ' - ಜನಪದ ಗೀತೆಗಳ ಧ್ವನಿಸುರುಳಿಗಳ ಮೂಲಕ ಜನಪ್ರಿಯರಾದರು. ಸಂಗೀತ ಸಂಸ್ಥೆ ಹೊರತಂದ ಈ ಜನಪದ ಗೀತೆಗಳು ಹೊಸ ರುಚಿಯನ್ನು ಸೃಷ್ಟಿಮಾಡಿದವು. ಜನಪದ ಗೀತೆಗಳ ಗಾಯನವನ್ನು ಪ್ರಾರಂಭಿಸಿ ಹುಚ್ಚೆಬ್ಬಿಸಿದ್ದ ಪಿ. ಕಾಳಿಂಗರಾವ್ ಮತ್ತು ಬಾಳಪ್ಪ ಹುಕ್ಕೇರಿಯವರ ಸಾಲಿಗೆ ಯುವ ಗಾಯಕ ಯುವರಾಜರೂ ಸೇರಿಕೊಂಡರು. ಅನೇಕ ಭಾವಗೀತೆಗಳು, ಎಡೆಯೂರು ಸಿದ್ದಲಿಂಗೇಶ್ವರ, ಮಲೆ ಮಾದೇಶ್ವರನನ್ನು ಕುರಿತ ಅನೇಕ ಭಕ್ತಿ ಗೀತೆಗಳು, ಧ್ವನಿ ಸುರುಳಿಗಳಾಗಿ ಹಬ್ಬಿಕೊಂಡವು.

ಭಾವಗೀತೆ, ಜನಪದಗೀತೆ, ಭಕ್ತಿಗೀತೆ, ವಚನಗಳು, ದಾಸರ ಪದಗಳೂ ಎಲ್ಲವೂ ನೂರಾರು ಸಂಖ್ಯೆಗಳಲ್ಲಿ ಪ್ರವಾಹದಂತೆ ಉಕ್ಕುತ್ತಾ ಬಂದವು. ದೇಶಭಕ್ತಿ ಗೀತೆಗಳು, ಪ್ರೇಮಗೀತೆಗಳೂ, ಇವುಗಳ ಜೊತೆ ಸೇರಿಕೊಂಡವು. ದಿನ ಬೆಳಗಾಗುವಲ್ಲಿ ಹತ್ತಾರು ಕಲಾವಿದರು ಹೊಸದಾಗಿ ಹುಟ್ಟಿಕೊಳ್ಳುತ್ತಾ, ಬೆಳಕಿಗೆ ಬರುತ್ತಿದ್ದರು. ಸಂಗೀತ ಸಂಸ್ಥೆಯು ತನ್ನ ಗಾತ್ರವನ್ನು ಹಿಗ್ಗಿಸಿಕೊಳ್ಳುತ್ತಾ, ವೈವಿಧ್ಯತೆಯನ್ನು ಹೆಚ್ಚಿಸಿಕೊಳ್ಳುತ್ತಾ ಬಂದಿತು.

ಹೆಚ್.ಎಂ. ಮಹೇಶ್ ಅವರು ಕಲಾಭಿಮಾನಿಗಳು, ಸುಸಂಸ್ಕೃತರೂ ಉತ್ತಮ ಅಭಿರುಚಿಯುಳ್ಳವರೂ ಆಗಿದ್ದರಿಂದ ಧ್ವನಿಸುರುಳಿಗಳ ಗುಣಮಟ್ಟ ಅತ್ಯಂತ ಉತ್ಕೃಷ್ಟವಾಗಿತ್ತು. ಎಲ್ಲಿಯೂ ಜೊಳ್ಳಾದ ಸಾಹಿತ್ಯ, ಸಂಗೀತಗಳ ಧ್ವನಿಸುರುಳಿಗಳು ಒಂದೂ ಅವರ ಸಂಸ್ಥೆಯಲ್ಲಿ ಸೇರ್ಪಡೆಯಾಗಲಿಲ್ಲ. ಹಾಡುಗಾರರಾಗಿದ್ದ ಅವರು ಕಲಾವಿದರೂ ಸಾಹಿತ್ಯಜ್ಞರೂ ಆಗಿದ್ದರಿಂದ, ನೂರಾರು ಭಾವಗೀತೆಯ ಧ್ವನಿಸುರುಳಿಗಳು ಹೊರಬಂದವು. ಕರ್ನಾಟಕದ ಎಲ್ಲಾ ಕಲಾವಿದರ ಕಂಠಸಿರಿಯೂ 'ಸಂಗೀತಾ' ಸಂಸ್ಥೆಯಲ್ಲಿ ದಾಖಲಾಯಿತು. 'ಸಂಗೀತಾ' ಸಂಸ್ಥೆ ಹೊಸ ಕಲಾವಿದರಿಗೆ ಪ್ರೋತ್ಸಾಹ ನೀಡಿತಲ್ಲದೆ ಪ್ರಚಾರ, ಪ್ರಸಿದ್ಧಿಗಳನ್ನೂ ಒದಗಿಸಿಕೊಟ್ಟಿತು. 'ಸಂಗೀತಾ' ಸಂಸ್ಥೆಯಲ್ಲಿ 'ತಮ್ಮ ಧ್ವನಿ ಇರುವುದೇ' ಕಲಾವಿದರಿಗೆ ಹೆಮ್ಮೆಯ ವಿಷಯವಾಗಿತ್ತು. ತಮ್ಮ ಸಂಸ್ಥೆಯಲ್ಲಿ ಹಾಡುವ ಕಲಾವಿದ, ಸಂಯೋಜಕರು ಬೇರೆ ಯಾವ ಕಂಪನಿಗೂ ಹಾಡಬಾರದೆಂಬ ಕರಾರಿಗೆ ಸಿದ್ಧವಾಗಿಯೇ ಬದ್ಧವಾಗಿಯೇ ಬೆಳೆದ ಕಲಾವಿದರು ತಾವೂ ಬೆಳೆದು ಸಂಸ್ಥೆಯ ಘನತೆ ಗೌರವಗಳನ್ನೂ ಬೆಳೆಸಿದರು. ದಕ್ಷಿಣ ಕನ್ನಡ ಎಲ್ಲ ಭಾಷೆಗಳಲ್ಲಿ ಭಾವಗೀತೆ - ಚಿತ್ರಗೀತೆ ಎಲ್ಲ ಪ್ರಕಾರವೂ ಸೇರಿ ಸುಮಾರು ೪೦೦೦ ಕ್ಕಿಂತಲೂ ಹೆಚ್ಚು ಧ್ವನಿಸುರುಳಿಗಳನ್ನು ಧ್ವನಿ ಮುದ್ರಿಸಿದ ಮಂಗಳೂರು ಕನ್ನಡಿಗ ಮಹೇಶ್ ಅವರು ಪ್ರಾಮುಖ್ಯತೆ ನೀಡಿದ್ದು ಕನ್ನಡ ಭಾವಗೀತೆಗಳ ಧ್ವನಿಸುರುಳಿಗಳಿಗೆ ನಾಡಗೀತೆಯಿಂದ, ತತ್ವಪದದವರೆವಿಗೆ, ಜನಪದ ಗೀತೆಯಿಂದ ಭಾವಗೀತೆ, ಭಕ್ತಿಗೀತೆಯವರೆವಿಗೆ, ವ್ಯಕ್ತಿ, ವಿಷಯ, ವಿಚಾರಗಳ ವೈವಿಧ್ಯತೆಯನ್ನು ತಮ್ಮ ನಿರ್ಮಾಣದಲ್ಲಿ ತಂದ ಮಹೇಶ್ ಅವರನ್ನು ಕರ್ನಾಟಕ ಸರ್ಕಾರ ೧೯೯೨-೯೩ರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಸನ್ಮಾನಿಸಿತು. ಇದು ಸುಗಮಸಂಗೀತಕ್ಕೆ ಅದರ ಪ್ರಸರಣಕ್ಕೆ ಸಂದ ಮೊಟ್ಟ ಮೊದಲನೆಯ ಗೌರವವಾಯಿತು.

೧೯೮೨ರ ನವೆಂಬರ್ ೧೬ ರಂದು 'ನಾದಲಹರಿ' ಎಂಬ ಮತ್ತೊಂದು ಸಂಸ್ಥೆ ಮಡಿಕೇರಿಯಿಂದ ಬೆಂಗಳೂರಿಗೆ ಬಂದು ಪ್ರಾರಂಭವಾಯಿತು. ತಮ್ಮು ಪೂವಯ್ಯ, ಅರವಿಂದ್ ಕಿಗ್ಗಾಲ್, ಜಯಶ್ರೀ ಅರವಿಂದ್ - ಈ ಮೂವರ ನಿರ್ದೇಶನದಲ್ಲಿ ಹಲವಾರು ಭಾವಗೀತೆಗಳ ಧ್ವನಿಸುರುಳಿಗಳು ನಿರ್ಮಾಣಗೊಂಡವು. ಅವುಗಳಲ್ಲಿ ಬಹುಮುಖ್ಯವಾದದ್ದು ಪದ್ಮಚರಣ್ ಸಂಗೀತ ನಿರ್ದೇಶನದ 'ನವೋದಯ' ಕ್ಯಾಸೆಟ್ ಆಕಾಶವಾಣಿಯಿಂದ ಜಿ.ಎಸ್. ಶಿವರುದ್ರಪ್ಪನವರ ಗೀತೆಗಳು ಅದಾಗಲೇ ಪ್ರಸಾರವಾಗಿ ಜನಪ್ರಿಯವಾಗಿತ್ತು. ಹೆಚ್.ಆರ್. ಲೀಲಾವತಿಯವರು ಅವುಗಳನ್ನೆಲ್ಲಾ ಅಲ್ಲಲ್ಲಿ ಹಾಡಿ ಪ್ರಚಾರ ಮಾಡಿದ್ದರು. 'ಉಡುಗಣವೇಷ್ಟಿತ' 'ಹೌದೇನೇ ಉಮಾ' ಮುಂತಾದ ಹಾಡುಗಳು ಐವತ್ತರ ದಶಕದಲ್ಲೇ ಪದ್ಮಚರಣ್ ಅವರ ಸಂಯೋಜನೆಯಲ್ಲಿ ಆಕಾಶವಾಣಿಯಲ್ಲಿ ಬಿತ್ತರಗೊಂಡಿತ್ತು. 'ನಾದಲಹರಿ' ಸಂಸ್ಥೆಯ ಮೂಲಕ ಇದು ಲೀಲಾವತಿಯವರ ಕಂಠದ ಬದಲು ಆಗ ಪ್ರವರ್ಧಮಾನದಲ್ಲಿದ್ದ 'ರತ್ನಮಾಲಾ ಪ್ರಕಾಶ್' ಅವರ ಕಂಠದಲ್ಲಿ ಮೂಡಿ ಬಂದಿತು. 'ಋತು ವಸಂತ ಬಂದ', 'ಓ ಎಲ್ಲಿದೆ ಬೃಂದಾವನ ತೋರಿರೋ', 'ನವೋದಯ ಕಿರಣ ಲೀಲೆ', 'ಅಧರದಿ ನಸು ನಗೆ', 'ನೀನು ನೆಲ ನಾನು ಜಲ' - ಮುಂತಾದ ಗೀತೆಗಳು ಪದ್ಮಚರಣರ ಸಂಯೋಜನೆಗಳಾಗಿ ಬಂದವು. ಸಾವಿರಾರು ಕ್ಯಾಸೆಟ್‌ಗಳು

ಖರ್ಚಾದವು. ಎಂ.ಎಸ್.ಐ.ಎಲ್.ನಿಂದ ಕೇಳುತ್ತಿದ್ದ ಹಾಡುಗಳು ಅದಾಗಲೇ ನಿಂತುಹೋಗಿದ್ದರಿಂದ ಇದು ಮತ್ತೆ ಅದೇ ಹಾಡುಗಳ ವಿಸ್ತರಣಾ ಕಾರ್ಯಕ್ರಮದಂತಾಯಿತು. ಕ್ಯಾಸೆಟ್ ಜನಪ್ರಿಯವಾಯಿತು. ಅದೇ ವರುಷದ ಮತ್ತೊಂದು ಕ್ಯಾಸೆಟೆಂದರೆ ಬೇಂದ್ರೆಯವರ ಕವನಗಳನ್ನಾಧರಿಸಿದ 'ನಾಕುತಂತಿ' ಕ್ಯಾಸೆಟ್. ಮೈಸೂರು ಅನಂತಸ್ವಾಮಿಯವರ ಸಂಗೀತ ನಿರ್ದೇಶನದೊಂದಿಗೆ ಬಿಡುಗಡೆಯಾಯಿತು. ಮೊದಲೇ ಪ್ರಸಿದ್ಧವಾಗಿದ್ದ ಎಂ.ಎಸ್.ಐ.ಎಲ್. ಗೀತಗಳೊಡನೆ ಮತ್ತಷ್ಟು ಗೀತೆಗಳು ಸೇರಿ ಅತ್ಯಂತ ಜನಪ್ರಿಯವಾಯಿತು. 'ನಾಕುತಂತಿ', 'ಏಲಾವನ', 'ನಾನು ಬಡವಿ', 'ಹಕ್ಕಿ ಹಾರುತಿದೆ ನೋಡಿದಿರಾ', 'ಅಂತರಂಗದಾ ಮೃದಂಗ', 'ಕಥೆಯಾದಳು ಹುಡುಗಿ', ಕುಣಿಯೋಣುbಬಾರಾs – ನಾರೀ ನಿನ್ನ ಮಾsರೀ ಮ್ಯಾಲೇs – ಮುಂತಾದವು ಅತ್ಯಂತ ಜನಪ್ರಿಯವಾದವು.

ಬೆಂಗಳೂರಿನ 'ಲಹರಿ' ಸಂಸ್ಥೆ ಜನಪದ ಗೀತೆ, ಭಕ್ತಿಗೀತೆಗಳ ದನಿಸುರುಳಿಯನ್ನು ನಿರ್ಮಿಸುತ್ತಾ ಭಾವಗೀತೆಯ ಧ್ವನಿ ಸುರುಳಿಯ ಪ್ರಕಾರಕ್ಕೂ ಕೈ ಹಾಕಿದುದರ ಪರಿಣಾಮ ಅನೇಕ ಭಾವಗೀತೆಯ ಧ್ವನಿಸುರುಳಿಗಳು ಬೆಳಕಿಗೆ ಬಂದವು. ಕುವೆಂಪು ರಚಿತ 'ಓಕುಳಿ' ಶಿವರುದ್ರಪ್ಪನವರು ರಚಿಸಿದ 'ಚೈತ್ರ', ಪು.ತಿ.ನ., ಕೆ.ಎಸ್.ನ., ಅಡಿಗ, ಶಿವರುದ್ರಪ್ಪ, ನಿಸಾರ್, ಲಕ್ಷ್ಮೀನಾರಾಯಣ ಭಟ್ಟ, ಕಂಬಾರ, ಹೆಚ್.ಎಸ್. ವೆಂಕಟೇಶಮೂರ್ತಿ, ಸಿದ್ಧಲಿಂಗಯ್ಯ, ಬಿ.ಆರ್. ಲಕ್ಷ್ಮಣರಾವ್, ಈ ಹತ್ತು ಖ್ಯಾತ ಕವಿಗಳು ತಾವು ರಚಿಸಿದ ಕವಿತೆಯೊಂದನ್ನು ತಾವೇ ಓದಿ ಅಭಿಮಾನಿಗಳಿಗೆ ತಿಳಿಸಿದ ವಿಶೇಷತೆ 'ಸಮ್ಮಿಲನ' ಧ್ವನಿ ಸುರುಳಿಯದು. ತನ್ನ ಕಾವ್ಯವನ್ನು ಕವಿ ತಾನು ಓದಿದಂತೆ, ತಾನು ಕಂಡಂತೆ ತಿಳಿಸುವುದೇ ಈ ಧ್ವನಿಸುರುಳಿಯ ಹಿರಿಮೆ, ಹಿರಿಯ ಕವಿಗಳ ಧ್ವನಿಯನ್ನು ಮುಂಬರುವ ಪೀಳಿಗೆಗಾಗಿ ಕಾದಿರಿಸುವುದು ಗಮನಾರ್ಹವಾದ ಕೆಲಸ. ಈ ಧ್ವನಿಸುರುಳಿಯ ಆರಂಭದಲ್ಲಿ ಮತ್ತೊಬ್ಬ ಸಾಹಿತಿ ಡಾ|| ಯು.ಆರ್. ಅನಂತಮೂರ್ತಿಯವರು 'ಮುನ್ನುಡಿ' ನುಡಿದಿದ್ದರು. ಕನ್ನಡ ಸುಗಮಸಂಗೀತದ ಧ್ವನಿಸುರುಳಿ ಪ್ರಕಾರದಲ್ಲಿ ಇದೊಂದು ಹೊಸ ರೀತಿಯ ಪ್ರಪ್ರಥಮ ಬಿಡುಗಡೆಯಾಯಿತು. ಮೈಸೂರು ಅನಂತಸ್ವಾಮಿಯವರು ಹಾಡಿರುವ 'ದುಂದುಭಿ' - ಭಾವೋತ್ಸವ, ರತ್ನನ ಪದಗಳು, ಮಂದಾರ, ಗೀತಲಹರಿ, ಮಿಂಚು, ಪ್ರಣಯೋತ್ಸವ ಧ್ವನಿಸುರುಳಿಗಳು ಸಿ.ಅಶ್ವಥ್‌ಅವರ ದನಿಯಿಂದ ಹೊರಬಂದ 'ಸಲ್ಲಾಪ, ಸ್ಪಂದನ, ಸೌರಭ, ಕವಿತಾ, ಪ್ರೇಯಸಿ, ಸುಬ್ಬಾಭಟ್ಟರ ಮಗಳೇ, ಪ್ರೇಮಧಾರೆ, ಮುಂತಾದ ಧ್ವನಿ ಸುರುಳಿಗಳು 'ಲಹರಿ' ರೆಕಾರ್ಡಿಂಗ್‌ಕಂಪನಿಯಿಂದ ಹೊರಬಂದು ಸುಗಮಸಂಗೀತಕ್ಕೆ ಸುಗ್ಗಿ ಬಂದಿತು.

ಸಾಲು ಸಾಲಾಗಿ ಭಾವಗೀತೆಗಳ ಕ್ಯಾಸೆಟ್‌ಗಳನ್ನು ತಯಾರಿಸಿದವರು ಸಿ.ಬಿ.ಎಸ್. ಸಂಸ್ಥೆಯಲ್ಲಿದ್ದ ಜಯಸಿಂಹ ಅವರು. ಅವರು ತೋರಿಸಿದ ಕಾವ್ಯಾಸಕ್ತಿಯಿಂದ ಸಿ.ಬಿ.ಎಸ್. ಸಂಸ್ಥೆ ತಯಾರಿಸಿದ ಅಶ್ವಥ್ ಅವರ ಸಂಗೀತ ನಿರ್ದೇಶನದ ವಾಸಂತಿ, ರೋಮಾಂಚ, ಆಲಿಂಗನ, ಜಯಶ್ರೀ ಅರವಿಂದ್ ಅವರ 'ಒಲುಮೆ', 'ಹೂಜೇನು' - ಬಿ. ಚಂದ್ರಶೇಖರರ 'ನಯನ' - ಸೊಗಸು ಮುಂತಾದ ಧ್ವನಿಸುರುಳಿಗಳು ಜನಪ್ರಿಯತೆಯಿಂದ ಮಿಂಚಿದವು.

ಕ್ಯಾಸೆಟ್ ಲೋಕದಲ್ಲಿ ಭಾವಗೀತಾ ಗಾಯನದ ಪ್ರವೇಶವಾದಂತೆ ಭಾವಗೀತೆ ಹಾಡುವವರು ನೂರಾರು ಮಂದಿಯಾದರು ಕೇಳುಗರು, ಅಭಿಮಾನಿಗಳು ಹತ್ತುಪಟ್ಟಾದರು. ಯುವ ಗಾಯಕರು, ಸಂಯೋಜಕರು ಯುವಕವಿಗಳು ಎಲ್ಲಾ ಉತ್ಸಾಹಿಗಳ ಸಮಾವೇಶವಾಗಿ ಸಾಮರ್ಥ್ಯವಿದ್ದವರು ಮಾತ್ರ ಉಳಿದುಕೊಂಡರು. ಕೇಳುಗರನ್ನು ತಮ್ಮ ಗಾಯನದಿಂದ ಗೆಲ್ಲಲಾರದವರು ಮಾತ್ರ ಹಿಂದಕ್ಕೆ ತೆರಳಿದರು. ತಮ್ಮ ಮಾಧುರ್ಯ ಗಾಯನಕ್ಕೆ ಹಸರಾದವರು ಗಾಯಕಿಯರಾದ ರತ್ನಮಾಲಪ್ರಕಾಶ್, ಕಸ್ತೂರಿ ಶಂಕರ್, ಬಿ.ಕೆ.ಸುಮಿತ್ರ, ಬಿ.ಆರ್. ಛಾಯಾ, ಮಾಲತಿ ಶರ್ಮಾ, ಜಯಶ್ರೀ, ಎಂ.ಕೆ.ಸುನೀತ ಅನಂತಸ್ವಾಮಿ, ಸರೋಜ, ಶೈಲಜ, ಇಂದು ವಿಶ್ವನಾಥ್, ಸುರೇಖಾ, ಮಂಜುಳಾ ಗುರುರಾಜ್ ಮುಂತಾದವರು. ಗಾಯಕರಾದ ಮೈಸೂರು ಅನಂತಸ್ವಾಮಿ, ಸಿ. ಅಶ್ವಥ್, ಶಿವಮೊಗ್ಗ ಸುಬ್ಬಣ್ಣ, ನರಸಿಂಹನಾಯಕ್, ಶ್ರೀನಿವಾಸ ಉಡುಪ, ಶಂಕರಶಾನಭಾಗ್, ರಾಜೂಅನಂತಸ್ವಾಮಿ, ರಮೇಶ್ಚಂದ್ರ ಮುಂತಾದವರು.

**ಸುಗಮಸಂಗೀತ ಮತ್ತು ದೂರದರ್ಶನ**

೧೯೮೬ರಲ್ಲಿ ಬೆಂಗಳೂರಿಗೆ ದೂರದರ್ಶನ ಬಂದಿತು. ಭಾವಗೀತೆಯನ್ನು ದೃಶ್ಯ ಮಾಧ್ಯಮಕ್ಕೆ ಅನ್ವಯಿಸಿ ತೋರಿಸುವ ಹೊಸ ಪ್ರಯತ್ನದ ಫಲವೇ 'ಗೀತಚಿತ್ರ'ವಾಗಿ ರೂಪುಗೊಂಡಿತು. ದೂರದರ್ಶನದ ಮೊದಲ ಗೀತಚಿತ್ರವೇ ಜಿ.ಎಸ್.ಶಿವರುದ್ರಪ್ಪನವರು ರಚಿಸಿದ 'ಎಲ್ಲೋ ಹುಡುಕಿದೆ ಇಲ್ಲದ ದೇವರ' ಮತ್ತು ಪ್ರೋ|| ಚೆನ್ನವೀರ ಕಣವಿಯವರ 'ಹೂವು ಹೊರಳುತಿದೆ' ಎಂಬು ಗೀತೆಗಳು. ಪದ್ಮಚರಣರ ರಾಗಸಂಯೋಜನೆಯಲ್ಲಿ ಈ ಕವನಗಳು ಸುಂದರ ಗೀತಚಿತ್ರಗಳಾಗಿ ಮೂಡಿದವು. ಭಾವಗೀತೆಗಳು ಶ್ರವ್ಯದಿಂದ ದೃಶ್ಯವಾಗಿ ಮೂಡಲು ಪ್ರಾರಂಭಿಸಿದವು. ಪ್ರಭಾತ್ ಕಲಾವಿದರು ಇದನ್ನು ವೇದಿಕೆಯ ಮೇಲೆ ದಶಕಗಳ ಹಿಂದೆಯೇ ಅಭಿನಯಿಸಲು ಪ್ರಾರಂಭಿಸಿದ್ದರು. ದೂರದರ್ಶನ ಭಾವಗೀತೆಗಳನ್ನು ಹನುಮಂತನಗರದ ಅರವಿಂದ್ ಸ್ಟುಡಿಯೋದಲ್ಲಿ ಧ್ವನಿಮುದ್ರಿಸಿ ಹಾಡಿಗೆ ಬೇಕಾದ ಅಬಿನಯವನ್ನು (ನೃತ್ಯವನ್ನಲ್ಲ) ಚಿತ್ರೀಕರಿಸಿಕೊಂಡಿತು. ಬೆಂಗಳೂರು ದೂರದರ್ಶನದಲ್ಲಿ ಮೊದಲ ಗೀತಚಿತ್ರದ ಸಂಗೀತ ನಿರ್ದೇಶಕರೆಂಬ ಹೆಮ್ಮೆ ಪದ್ಮಚರಣರದಾಯಿತು. ಅನಂತ ಹಲವಾರು ಭಾವಗೀತೆಗಳನ್ನು ಹಲವಾರು ಸಂಗೀತ ನಿರ್ದೇಶಕರ ನಿರ್ದೇಶನದಲ್ಲಿ ದೂರದರ್ಶನ ಚಿತ್ರೀಕರಿಸಿತು. ಅಶ್ವಥ್‌ರವರ 'ಬಣ್ಣದಹಕ್ಕಿ' ಮಕ್ಕಳ ಧ್ವನಿಸುರುಳಿ ದೂರದರ್ಶನದ ಚಿತ್ರೀಕರಣಕ್ಕೆ ಒಳಪಟ್ಟು ಜನಪ್ರಿಯವಾಯಿತು. ಡಾ|| ಲಕ್ಷ್ಮೀನಾರಾಯಣಭಟ್ಟರ 'ಬಾಳ ಒಳ್ಳೇರ್‌ನಮ್ ಮಿಸ್ಸು', 'ಗೇರ್‌ಗೇರ್ ಮಂಗಣ್ಣ' ಮುಂತಾದ ಶಿಶು ಗೀತೆಗಳು ಎ.ಆರ್. ಅಚ್ಚುತ ಅವರ ಸಂಗೀತದಿಂದ ಜನಪ್ರಿಯವಾಗಿದ್ದವು. ಡಾ|| ಎಚ್.ಎಸ್.ವೆಂಕಟೇಶ ಮೂರ್ತಿರವರ 'ಹಕ್ಕಿಸಾಲು' ಮಕ್ಕಳ ಗೀತ ಸಂಕಲನದಿಂದ ಆರಿಸಲಾದ ಗೀತೆಗಳು ಎಷ್ಟು ಜನಪ್ರಿಯವಾಯಿತೆಂದರೆ ದಿನಕ್ಕೊಮ್ಮೆಯಾದರೂ ಅದು ದೂರದರ್ಶನದಲ್ಲಿ ಪ್ರಸಾರವಾಗುತ್ತಿತ್ತು.

೧೯೯೦ರಲ್ಲಿ ರಾಜರತ್ನಂ ಅವರ 'ತುತ್ತೂರಿ' ಮಕ್ಕಳ ಗೀತೆಯಿಂದ ಮೂವತ್ತೆಂಟು ಮಕ್ಕಳ ಗೀತೆಗಳನ್ನಾಧರಿಸಿ 'ಕಂದನ ಕಾವ್ಯ' ಎಂಬ ದೂರದರ್ಶನ ಧಾರವಾಹಿ ಪ್ರಸಾರವಾಯಿತು. 'ಡಾ|| ಜಯಶ್ರೀ ಅರವಿಂದ್' ರವರ ಸಂಗೀತ ನಿರ್ದೇಶನದಲ್ಲಿ ಈ ಧಾರವಾಹಿ ಅತ್ಯಂತ ಜನಪ್ರಿಯವಾಗಿತ್ತು. 'ಬಣ್ಣದ ತಗಡಿನ ತುತ್ತೂರಿ', ಕುರಿಮರಿ ಬ್ಯಾ 'ಟಂಟಂ' ರೊಟ್ಟಿ ಅಂಗಡಿ ಕಿಟ್ಟಪ್ಪ' 'ಜುಟ್ಟು ಮೀಸೆ ಇಟ್ಟುಕೊಂಡು', 'ಕಾಳನ ಪೀಪಿ' 'ಹತ್ತು ಹತ್ತು ಇಪ್ಪತ್ತು' ಮುಂತಾದ ಅನೇಕ ಹಾಡುಗಳು ದೂರದರ್ಶನದಲ್ಲಿ ಜನಪ್ರಿಯವಾದವು. ದೃಶ್ಯ ಮಾಧ್ಯಮದಿಂದ ಭಾವಗೀತೆಗಳು ಬಣ್ಣ ಪಡೆದವು. ಪುಸ್ತಕದಲ್ಲಿರುವ ಕವಿತೆ ಓದುವ ಕವಿತೆಯಾಗಿರುತ್ತದೆ. ಕೇಳಿದಾಗ ಕೇಳುವ ಪುಸ್ತಕವಾಗುತ್ತದೆ. ನೋಡುವಾಗ ನೋಡುವ ಕವಿತೆಯಾಗುತ್ತದೆ. ದೃಶ್ಯಮಾಧ್ಯಮದಲ್ಲಿ ಈ ಮೂರು ಕ್ರಿಯೆಗಳೂ ಒಂದಾಗುತ್ತವೆ. ಓದುವ+ಕೇಳುವ+ನೋಡುವ ಈ ಮೂರು ಮಾಧ್ಯಮಗಳಿಂದ ಕವಿತೆ ಹೃದ್ಯವಾಗುತ್ತದೆ ವೇದ್ಯವಾಗುತ್ತದೆ. ಮನೋವೇಗದಲ್ಲಿ ಕವಿಯ ಮನಸ್ಸಿನೊಂದಿಗೆ, ಭಾವನೆಗಳೊಂದಿಗೆ ಬೆರೆತು ಹೋಗುತ್ತದೆ. ದೂರದರ್ಶನದಲ್ಲಿ ಇವು ಸಾಬೀತಾದವು.

೧೯೯೫-೯೬ರಲ್ಲಿ ಚಲನಚಿತ್ರ ನಿರ್ದೇಶಕರು ಸೃಜನಶೀಲ ನಿರ್ದೇಶಕರೂ ಆದ ನಾಗಾಭರಣ ಮತ್ತು ಅಶ್ವಥ್‌ರವರು ಸೇರಿ ಸುಗಮಸಂಗೀತ ವಸ್ತುವನ್ನೇ ಧಾರಾವಾಹಿಯಾಗಿ ಹದಿಮೂರು ಕಂತುಗಳಲ್ಲಿ ದೂರದರ್ಶನಕ್ಕಾಗಿ ಚಿತ್ರೀಕರಿಸಿದರು. ಸಿ. ಅಶ್ವಥ್, ಅನಂತಸ್ವಾಮಿ, ಡಾ|| ಜಯಶ್ರೀ ಅರವಿಂದ್, ಬಿ.ಕೆ. ಚಂದ್ರಶೇಖರ್ ರಾಗಸಂಯೋಜಿಸಿದ್ದ ಸುಮಾರು ೮೦ ಹಾಡುಗಳನ್ನು ದೃಶ್ಯ ಮಾಧ್ಯಮಕ್ಕೆ 'ನಾಗಾಭರಣ' ಅವರು ಅಳವಡಿಸಿದ್ದರು. ಹದಿಮೂರು ಕವಿಗಳ, ವಿವಿದ ಮನೋಭಾವ, ವ್ಯಕ್ತಿತ್ವವನ್ನು ನಿರೂಪಿಸುವ ಕವಿತೆಗಳನ್ನು ಆರಿಸಿ ಕವಿತೆಯ ಅಂತರಾಳದೊಳಗಿಳಿದು, ಚಿತ್ರೀಕರಿಸಿದ 'ಗೀತಮಾಧುರಿ' ತನ್ನ ಸವಿನೆನಪನ್ನು ಪ್ರೇಕ್ಷಕರಲ್ಲಿ ಬಹುಕಾಲ ಉಳಿಸಿತು. ಕುವೆಂಪು, ಬೇಂದ್ರೆ, ಪು.ತಿ.ನ., ಅಡಿಗ, ಶಿವರುದ್ರಪ್ಪ, ಲಕ್ಷ್ಮೀನಾರಾಯಣಭಟ್ಟ, ಕಂಬಾರ, ನಿಸಾರ್ ಅಹಮದ್, ಸಿದ್ಧಲಿಂಗಯ್ಯ, ಚೆನ್ನವೀರ ಕಣವಿ, ಬಿ.ಟಿ. ಲಲಿತಾನಾಯಕ್ ಅವರ ವ್ಯಕ್ತಿತ್ವ ಪರಿಚಯದೊಂದಿಗೆ ಅವರ ಕಾವ್ಯಪರಿಚಯವನ್ನೂ ಮಾಡಿಕೊಟ್ಟವು.

(೨೦೦೦) ಇಪ್ಪತ್ತು ವರ್ಷಗಳ ಅನಂತರ ಜಯದೇವ್ ಅವರಂತೆ ಆಸೆ ಹೊತ್ತ ಮತ್ತೊಬ್ಬ ಅಧಿಕಾರಿ ವಿಠಲಮೂರ್ತಿಯವರ ಆಗಮನದಿಂದ 'ನಿತ್ಯೋತ್ಸವ' ಎನ್ನುವ ಸುಂದರ ಶೀರ್ಷಿಕಯೊಡನೆ ಮತ್ತೊಮ್ಮೆ ಸುಗಮಸಂಗೀತ ದನಿ ತೆರೆಯಿತು. ಆದರೆ ಅದರ ರೂಪು ರೇಖೆಗಳು ಹೊಚ್ಚ ಹೊಸದಾಗಿದ್ದವು. ನಾಡಿನ ಎಲ್ಲೆಡೆ ಇರುವ ಯುವಗಾಯನದ ಪ್ರತಿಭಾನ್ವೇಷಣೆ ಮತ್ತು ಅವರಿಗೆ ಪ್ರೋತ್ಸಾಹ ಕೊಡಬೇಕೆಂಬುದೇ ವಿಠಲ ಮೂರ್ತಿಗಳ ಆಶಯವಾಗಿತ್ತು. ಬೆಂಗಳೂರು ದೂರದರ್ಶನದಲ್ಲಿ ಭಾವಗೀತಾ ಗಾಯನ ಸ್ಪರ್ಧೆಯನ್ನು ಯೋಜಿಸಲಾಯಿತು. ಅವರ

ನಿರೀಕ್ಷೆಗೂ ಮೀರಿ ಸುಮಾರು ಯುವಪ್ರತಿಭೆಗಳು ಬಂದರು, ಆಯ್ಕೆಯಾದವರಿಗಾಗಿ ವಿವಿಧ ಕವಿಗಳ ಆಯ್ದ ಕವಿತೆಗಳ ಧ್ವನಿ ಸುರುಳಿಯನ್ನು ತಯಾರಿಸಲಾಯಿತು. ಆರು ಮಂದಿ ಸಂಗೀತ ನಿರ್ದೇಶಕರಿಂದ ಆರು ಧ್ವನಿಸುರುಳಿಗಳು ಸಿದ್ಧವಾದವು ಅವು:

೧. ನಿನ್ನ ಬಾಂದಳದಂತೆ - ಸಂಗೀತ ಡಾ|| ಜಯಶ್ರೀ ಅರವಿಂದ್

೨. ಗುಡಿಸಲಿನಲ್ಲಿ ಅರಳುವ ಗುಲಾಬಿ - ಸಂಗೀತ ಸಿ.ಅಶ್ವಥ್

೩. ಹಸಿರ ಮೇಲ ಗುಲಾಬಿ - ಸಂಗೀತ ವಿ.ಮನೋಹರ್

೪. ಶತಮಾನದ ಹತಭಾಗ್ಯರು - ಸಂಗೀತ ಹೆಚ್.ಕೆ.ನಾರಾಯಣ

೫. ಎಲ್ಲಿಂದಿಳಿಯಿತು ಈ ಗೀತೆ - ಸಂಗೀತ ಬಿ.ವಿ.ಶ್ರೀನಿವಾಸ್

೬. ಬೆಳದಿಂಗಳು - ಸಂಗೀತ ರಾಜು ಅನಂತಸ್ವಾಮಿ

ಎಂ.ಎಸ್.ಐ.ಎಲ್. ೧೯೭೦ರ ದಶಕದಲ್ಲಿ ಆಕಾಶವಾಣಿಯಿಂದ ಪ್ರಸಾರಗೊಂಡ ಏಳು ಧ್ವನಿಸುರುಳಿಗಳು ೧) ಬಾಗಿಲೊಳು ಕೈಮುಗಿದು ೨) ಎದೆ ತುಂಬಿ ಹಾಡಿದೆನು ೩) ಹೇಳ್ಕೊಳ್ಳಾಕೊಂದೂರು ೪) ಕರುಣಾಳು ಬಾ ಬೆಳಕೆ ೫) ಕುರಿಗಳು ಸಾರ್ ಕುರಿಗಳು ೬) ತರವಲ್ಲ ತಗಿ ನಿನ್ನ ತಂಬೂರಿ ೭) ಯಾವ ಮೋಹನ ಮುರಳಿ - ಇವಿಷ್ಟೂ ಧ್ವನಿಸುರುಳಿಗಳನ್ನು 'ಲಹರಿ' ಸಂಸ್ಥೆ ಮಾರಾಟ ಮಾಡಿತು.

* * *

## ಅಧ್ಯಾಯ ೯ - ಸುಗಮಸಂಗೀತಕ್ಕೆ ದಿಕ್ಸೂಚಿಗಳಾದವರು

ಇದು ಸುಗಮಸಂಗೀತ ಹೆಮ್ಮರವಾಗಿ ಬೆಳೆಯುತ್ತ ನಾನಾ ಕೊಂಬೆ ರೆಂಬೆಗಳಾಗಿ ಒಡದು ಮೈತುಂಬಾ ಹೂಗೊಂಚಲುಗಳನ್ನು ತುಂಬಿಕೊಂಡಿದೆ. ಆದರೆ ಇದರ ಬೆನ್ನ ಹಿಂದೆ ಹಲವಾರು ಕವಿಗಳ, ಕಲಾವಿದರ, ಸಾಧಕರ ಕಾಣಿಕೆಯನ್ನು ನಾವು ಮರೆಯುವಂತಿಲ್ಲ. ಈ ಹಾದಿಯಲ್ಲಿ ಗಮನಾರ್ಹವಾದ ಕಾಣಿಕೆಗಳನ್ನು ನೀಡಿದವರು ನೂರಾರು ಮಂದಿಯಾದರೂ, ಸಾಂಕೇತಿಕವಾಗಿ ಕೆಲವರನ್ನು ಅವರ ಸಾಧನೆಯ ಮಹಾತ್ಮ್ಯತೆಯನ್ನು ನೆನೆಯುವುದು ಅತ್ಯವಶ್ಯಕವಾಗಿದೆ. ಸುಗಮಸಂಗೀತದಲ್ಲಿ ಇತಿಹಾಸ ನಿರ್ಮಿಸಿದ ಕವಿಗಳ ಪೈಕಿ ಕವಿ ಡಾ|| ಲಕ್ಷ್ಮೀನಾರಾಯಣ ಭಟ್ಟರ ಹೆಸರು ಮೊದಲು ನಿಲ್ಲುತ್ತದೆ. ನವೋದಯದ ನಂತರ ಅದನ್ನು ವಿರೋಧಿಸಿದ ನವ್ಯ, ನವ್ಯೋತ್ತರದ ಸಂದರ್ಭದಲ್ಲಿ ಸುಗಮಸಂಗೀತಗಾರರಿಗೆ ಬೆಳಕಾಗಿ ಬಂದವರು ಡಾ|| ಲಕ್ಷ್ಮೀನಾರಾಯಣ ಭಟ್ಟರು. ಕಾವ್ಯಗಾಯನ ಕ್ಷೇತ್ರಕ್ಕೆ ಕವಿತೆಗಳೇ ಇಲ್ಲದೆ ಕತ್ತಲು ಆವರಿಸಿ, ಮಂಕು ಕವಿದಿದ್ದ ಕಾಲದಲ್ಲಿ, ಗೀತೆಗಳ ರಚನೆಗಿದ್ದ ಎಲ್ಲ ಆತಂಕಗಳನ್ನೂ ಗೆದ್ದು ಭಾವಗೀತೆಗಳ ರಚನೆಗೆ ಮರುಜೀವ ಕೊಟ್ಟ ಕವಿ ಲಕ್ಷ್ಮೀನಾರಾಯಣ ಭಟ್ಟರು. ನಿಸಾರ್‌ರ 'ನಿತ್ಯೋತ್ಸವ' ಕ್ಯಾಸೆಟ್ ಬಂದಾಗ ಜನರಿಗೆ ಕ್ಯಾಸೆಟ್ ಎಂದು ಹೇಳಲು ತಿಳಿಯದೆ 'ಕ್ಯಾಸ್ಕೆಟ್' ಎಂದೇ ಕೇಳುತ್ತಿದ್ದರಂತೆ. ನಿಸ್ಸಾರ್‌ರು ಪ್ರಾರಂಭಿಸಿದ ಧ್ವನಿಸುರುಳಿ ಪರಂಪರೆಗೆ ಚಾಲನೆ ಕೊಟ್ಟವರು ಲಕ್ಷ್ಮಿನಾರಾಯಣ ಭಟ್ಟರು. 'ಬಾರೋ ವಸಂತ' 'ದೀಪಿಕಾ', ಷರೀಫರ ಹಾಡುಗಳ ಸಂಪುಟಗಳನ್ನು ಲೋಕಾರ್ಪಣೆ ಮಾಡುತ್ತ ಮುನ್ನುಗ್ಗಿದ ಭಟ್ಟರು, ಸುಗಮಸಂಗೀತಕ್ಕೆ ಆಧಾರಸ್ತಂಭವಾಗಿ ನಿಂತರು. ಒಮ್ಮೆ ಆಕಾಶವಾಣಿಯವರು ಆಕಾಶವಾಣಿಯ ವಾರ್ಷಿಕೋತ್ಸವದಲ್ಲಿ ಆಹ್ವಾನಿತ ಶ್ರೋತೃಗಳೆದುರು ಶಾಸ್ತ್ರೀಯ ಕಾರ್ಯಕ್ರಮಗಳನ್ನು ಯೋಜಿಸಿಕೊಂಡಿದ್ದು, ಸುಗಮಸಂಗೀತವನ್ನು ಅಲಕ್ಷಿಸಿದ್ದರಂತೆ. ಮೈಸೂರು ಅನಂತಸ್ವಾಮಿಯವರು ಸಂಬಂಬಂಧಪಟ್ಟವರನ್ನು ಹೋಗಿ ಕೇಳಿದಾಗ 'ಸುಗಮಸಂಗೀತಾನು ಒಂದು ಸಂಗೀತವೇನ್ರಿ'? ಬರೀ ಅಪಸ್ವರ, ಯಾವುದದು? ಸುಗಮಸಂಗೀತ. ಶುದ್ಧ ಶ್ರುತಿಯಲ್ಲಿರುವುದು ಶಾಸ್ತ್ರೀಯ ಸಂಗೀತ, ಅಪಸ್ವರ ಹಾಡುವುದೇ ಸುಗಮಸಂಗೀತ ಅಷ್ಟೇ ಎಂದರು. ನೊಂದ ಮೈಸೂರು ಅನಂತಸ್ವಾಮಿಯವರು ಭಟ್ಟರ ಬಳಿ ಬಂದು ಹೇಳಿಕೊಂಡು ವ್ಯಥೆಪಟ್ಟರು. ಸ್ವತಃ ಅನಂತಸ್ವಾಮಿಯವರೇ ಅದನ್ನು ಪ್ರತಿಭಟಿಸಲು ಹಿಂಜರಿಯುತ್ತಿದ್ದಾಗ ಭಟ್ಟರು ಅವರ ಪರವಾಗಿ, ಸುಗಮಸಂಗೀತ ಕಲಾವಿದರ ಪರವಾಗಿ

ಅದನ್ನು ಪ್ರತಿಭಟಿಸಿ, ಕಲಾವಿದರನ್ನು ಸಂಘಟಿಸಿ ಆಗಿನ ಆಕಾಶವಾಣಿ ನಿರ್ದೇಸಕರಿಗೆ ಸೌಜನ್ಯದಲ್ಲಿಯೇ ಪತ್ರ ಬರೆದರು. ಆದರೆ ಅದಕ್ಕೆ ಉತ್ತರ ಬಾರದ್ದರಿಂದ ಕೂಡಲೆ ಭಟ್ಟರು ಪ್ರಜಾವಾಣಿ, ಕನ್ನಡಪ್ರಭ ಪತ್ರಿಕೆಗಳಿಗೆ ಕಲಾವಿದರಿಗಾಗಿರುವ ಅನ್ಯಾಯ ಕುರಿತು ಬರೆದರು. ಕಲಾವಿದರಾದ ಬಿ.ಕೆ. ಸುಮಿತ್ರ, ಅಶ್ವಥ್, ಅನಂತಸ್ವಾಮಿ, ಕಸ್ತೂರಿ ಶಂಕರ್, ರತ್ನಮಾಲಪ್ರಕಾಶ್ ಮುಂತಾದವರೆಲ್ಲರೂ ಭಟ್ಟರೊಂದಿಗೆ ಕೈಬೆಸೆದರು. ಕಲಾವಿದರ ದಂಡೆಲ್ಲಾ ಭಟ್ಟರ ಮನೆಯ ಜಗಲಿಯಲ್ಲಿ ಬಂದು ಸೇರಿದರು. 'ಸಂಡೇ ಮಿಡ್‌ಡೇ' - ಪತ್ರಿಕೆಯ ವರದಿಯಲ್ಲಿ ಆ ಬಗ್ಗೆ ವಿವರವಾದ ಲೇಖನ ಬಂದಿತು. ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿದ್ದ ಎಷ್ಟೋ ಕಲಾವಿದರೇ ಆ ಲೇಖನದ ಅಭಿಪ್ರಾಯಕ್ಕೆ ಪರವಾಗಿದ್ದರು. ಕಡೆಗೆ ಆಕಾಶವಾಣಿ ತನ್ನ ನಿಲುವನ್ನು ಬದಲಿಸಿತು. 'ಸುಗಮಸಂಗೀತ' ಆಕಾಶವಾಣಿ ಆಹ್ವಾನಿತರ ವೇದಿಕೆಯನ್ನೇರಿ ಕುಳಿತಿತು. ಭಟ್ಟರು ಗೆದ್ದರು. 'ಸುಗಮಸಂಗೀತ'ವನ್ನು ಪ್ರಚಾರ ಮಾಡಿ ಅದರ ಬೆಳವಣಿಗೆಗೆ ಕಾರಣವಾಗಿದ್ದ ಆಕಾಶವಾಣಿಯೇ ಅದನ್ನು ತಿರಸ್ಕರಿಸಿ ಮೂಲೆಗೆ ತಳ್ಳಿದ ತಪ್ಪನ್ನು ಅರಿತು ಸರಿಪಡಿಸಿಕೊಂಡಿತು. ಲಕ್ಷ್ಮೀನಾರಾಯಣ ಭಟ್ಟರು ತಮಗೆ ನೇರವಾಗಿ ಸಂಬಂಧಪಡ ವಿಚಾರಗಳಲ್ಲೂ ಕೈಚೆಲ್ಲಿ ಕೂರದೆ ಸುಗಮಸಂಗೀತ ಪುರೋವೃದ್ಧಿಗಾಗಿ ಗಮನಾರ್ಹವಾಗಿ ಕೆಲಸ ಮಾಡಿದರು.

ನವ್ಯಕಾವ್ಯದ ಸಮೃದ್ಧಿಯ ಕಾಲದಲ್ಲೇ ತಮ್ಮ ಕಾವ್ಯರಚನೆಯನ್ನು ಪ್ರಾರಂಭಿಸಿದ ಲಕ್ಷ್ಮೀನಾರಾಯಣ ಭಟ್ಟರು ನವ್ಯೋತ್ತರದಲ್ಲಿ ಯಾರ ವಿರುದ್ಧ, ಕುಹಕ, ಪ್ರತಿಭಟನೆಗಳನ್ನು ಲೆಕ್ಕಿಸದೆ, ಶುದ್ಧ ಭಾವಗೀತೆಗಳನ್ನೆ ಬರೆದರು. ಡಾ|| ಹೆಚ್.ವೆಂಕಟೇಶ್‌ಮೂರ್ತಿಯವರು ಹೇಳುವಂತೆ ಪ್ರವಾಹದ ವಿರುದ್ಧ ಈಜಿದರು. 'ಹಾಡಬಹುದಾದ ಶುದ್ಧಾಂಗ ಭಾವಗೀತೆಗಳನ್ನು ಅಧಿಕ ಪ್ರಮಾಣದಲ್ಲಿ ಬರೆಯುತ್ತಾ, ಬೇರೆ ಬೇರೆ ಕವಿಗಳಿಗೆ ಬರೆಯಲು ಪ್ರೋತ್ಸಾಹಿಸುತ್ತಾ, ಕವಿತೆಯ ಹಾಡುಗಾರಿಕೆಗೆ ವಿರುದ್ಧವಾಗಿದ್ದವರ ಕಟುಟೀಕೆಗಳಿಗೆ ಗುರಿಯಾಗಿಯೂ ತಮ್ಮ ಶ್ರದ್ಧೆ ಮತ್ತು ಉತ್ಸಾಹವನ್ನು ಕಳೆದುಕೊಳ್ಳದೆ ಒಂದು ಚಳುವಳಿಯಂತೆ ಭಾವಗೀತೆಗಳ ಪುನರೋದಯಕ್ಕೆ ಕಾರಣರಾದವರು ಲಕ್ಷ್ಮೀನಾರಾಯಣಭಟ್ಟರು.

ಮೈಸೂರು ಅನಂತಸ್ವಾಮಿ, ಶ್ಯಾಮಲಭಾವೆ, ಆರ್.ಆರ್. ಕೇಶವಮೂರ್ತಿ, ಇವರನ್ನೆಲ್ಲಾ ಸಂಘಟಿಸಿದ ಭಟ್ಟರು, ಸುಗಮಸಂಗೀತ ಸೆಮಿನಾರ್, ಗೋಷ್ಠಿಗಳನ್ನು ಪು.ತಿ.ನ. ಅವರ ಅಧ್ಯಕ್ಷತೆಯಲ್ಲಿ ಯೋಜಿಸಿ ಸುಗಮಸಂಗೀತವೆಂಬುದು ಬರಿಯ ಡಿಪ್ಲೋಮೊ ಅಲ್ಲ, 'Post graduate Diploma' ಎಂಬ ಪ್ರಶಂಸೆಯನ್ನು ತಂದು ಕೊಟ್ಟರು.

ಮೈಸೂರು ಅನಂತಸ್ವಾಮಿಯವರು ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿದ್ದಾಗ, ಭಟ್ಟರು ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿದ್ದರು. ಅನಂತಸ್ವಾಮಿ ಅವರು ಭಟ್ಟರೊಂದಿಗೆ 'ಸುಗಮಸಂಗೀತ'ಕ್ಕೆ ಪ್ರಶಸ್ತಿಯನ್ನು ಸ್ಥಾಪಿಸಬೇಕೆನ್ನುವ ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿದಾಗ ಸಾಹಿತ್ಯ ಅಕಾಡೆಮಿಯ ನೆರವಿನೊಂದಿಗೆ ಸಂಗೀತ ನೃತ್ಯ ಅಕಾಡೆಮಿಯನ್ನೂ ಜೋಡಿಸಿ ಒಂದು ಸಮಿತಿ ಮಾಡಿಕೊಂಡರು. ಮೈಸೂರು ಅನಂತಸ್ವಾಮಿ, ಶ್ಯಾಮಲಾಭಾವೆ, ಆರ್.ಆರ್.ಕೇಶವಮೂರ್ತಿ, ಲಕ್ಷ್ಮೀನಾರಾಯಣ ಭಟ್ಟ ಇವರೆಲ್ಲಾ ಆ ಸಮಿತಿಯಲ್ಲಿ ಸೇರಿ ಕುಳಿತು ಚರ್ಚಿಸಿದರು. ಬಹುಜನ ಸಮುದಾಯವನ್ನು ಪ್ರತಿನಿಧಿಸುವ ಸಾಹಿತ್ಯವೇ ಪ್ರಧಾನವಾಗಿರುವ ಈ ಪ್ರಕಾರಕ್ಕೆ 'ಗಮಕ' ಕಲೆಗೆ ಕೊಡುತ್ತಿರುವ ಹಾಗೆಯೇ ಪ್ರಶಸ್ತಿಯನ್ನು ನೀಡಬೇಕೆಂದು ಆ ಸಮಿತಿಯಲ್ಲಿ ತೀರ್ಮಾನಿಸಲಾಯಿತು. ಸುಗಮಸಂಗೀತದ ಮುಖ್ಯ ಉದ್ದೇಶವೇ ಸಾಹಿತ್ಯ ಪ್ರಚಾರವಾದ್ದರಿಂದ ಸಾಹಿತ್ಯ ಅಕಾಡೆಮಿ ಇದಕ್ಕೆ ಒಪ್ಪಲೇಬೇಕೆಂದು ಭಟ್ಟರು ಪಟ್ಟು ಹಿಡಿದಿದ್ದರ ಪರಿಣಾಮವಾಗಿ ಸಾಹಿತ್ಯ ಅಕಾಡೆಮಿಯ ಈಗಿನ ಅಧ್ಯಕ್ಷರಾಗಿದ್ದ ಹಾ.ಮಾ. ನಾಯಕರು ಒಪ್ಪಿಗೆ ಇತ್ತರು. ೧೯೮೫ ರಿಂದ 'ಸುಗಮಸಂಗೀತ' ಪ್ರಕಾರಕ್ಕೆ ಸರಕಾರದಿಂದ ಪ್ರಶಸ್ತಿ ಕೊಡಲು ಪ್ರಾರಂಭವಾಯಿತು. ಮೊದಲನೇಯ ಪ್ರಶಸ್ತಿಗೆ ಹೆಚ್.ಆರ್. ಲೀಲಾವತಿಯವರು ಪಾತ್ರರಾದರು.

೧೯೮೨ರಲ್ಲಿ ಸಾಹಿತ್ಯ ಅಕಾಡೆಮಿಯಿಂದ 'ಸುಗಮಸಂಗೀತ'ದ ಒಂದು ಸೆಮಿನಾರ್ ಏರ್ಪಡಿಸಿದವರು ಲಕ್ಷ್ಮೀನಾರಾಯಣ ಭಟ್ಟರು. ಬಾಳಪ್ಪ ಹುಕ್ಕೇರಿಯವರ ಅಧ್ಯಕ್ಷತೆಯಲ್ಲಿ 'ಕವಿತಾ ಸಂಗೀತ' ಎಂಬ ಇಡೀ ದಿವಸದ ಕಾರ್ಯಕ್ರಮದಲ್ಲಿ ಕರ್ನಾಟಕದ ಸುಪ್ರಸಿದ್ಧ ಸುಗಮಸಂಗೀತಗಾರರೆಲ್ಲ ಒಂದಾಗಿ ಸೇರಿ ಹಾಡಿದರು. ಮೊಟ್ಟ ಮೊದಲ ಬಾರಿಗೆ ಸಾಹಿತ್ಯ ಅಕಾಡೆಮಿ ಸುಗಮಸಂಗೀತವನ್ನು

ಆತ್ಮೀಯವಾಗಿ ತನ್ನ ಕಕ್ಷೆಗೆ ತೆಗೆದುಕೊಂಡಿತು. ಭಟ್ಟರ ಸಾಹಸ ಇಲ್ಲಿಗೆ ನಿಲ್ಲದೆ ಕರ್ನಾಟಕ ಗಡೀ ಪ್ರದೇಶಗಳಲ್ಲಿ ಸಾಹಿತ್ಯ ಪ್ರಜ್ಞೆಯನ್ನೂ, ಭಾವೈಕ್ಯತೆಯನ್ನೂ ಮೂಡಿಸುವಲ್ಲಿ ಕಾರ್ಯಪ್ರವರ್ತವಾಯಿತು. ಆಗಿನ ಸಾಹಿತ್ಯ ಆಕಾಡೆಮಿಯ ಅಧ್ಯಕ್ಷರಾಗಿದ್ದ ಹಾ.ಮಾ. ನಾಯಕ್ ಅವರ ಒತ್ತಾಸೆಯಿಂದ ಅನಂತಸ್ವಾಮಿ ಮತ್ತು ಸಂಗಡಿಗರ ಆರು ಜನರ ತಂಡದೊಂದಿಗೆ ರಾಯಚೂರಿನಿಂದ ಹಿಡಿದು ಎಲ್ಲಾ ಗಡಿ ಭಾಗಗಳಲ್ಲಿ ಸುಗಮಸಂಗೀತದ ಕಹಳೆಯನ್ನು ಮೊಳಗಿಸಿದವರು. ಕವಿ, ಸುಗಮಸಂಗೀತ ಪ್ರೇಮಿ ಲಕ್ಷ್ಮೀನಾರಾಯಣ ಭಟ್ಟರು. ಸಾಹಿತ್ಯ ಅಕಾಡೆಮಿಯಿಂದ ಕುವೆಂಪು, ಬೇಂದ್ರೆ, ಮುಂತಾದ ಕವಿಗಳ ವಾಚನವನ್ನು ಧ್ವನಿಸುರುಳಿಯಲ್ಲಿ ಹಿಡಿದಿಟ್ಟಿದ್ದೇ ಅಲ್ಲದೆ ಅವುಗಳ ಗಾಯನವನ್ನೊಳಗೊಂಡ ಮೂರು ಧ್ವನಿಸುರುಳಿಗಳನ್ನು ಅಕಾಡೆಮಿಯ ಸಂಗ್ರಹಕ್ಕೆ ತುಂಬಿಕೊಟ್ಟರು.

ತಮ್ಮ ಭಾವಗೀತೆಗಳು ಧ್ವನಿಸುರುಳಿಯಲ್ಲಿ ಅಡಕಗೊಳ್ಳಲು ತೆಗೆದುಕೊಂಡ ಆಸಕ್ತಿ, ಶ್ರಮವನ್ನೇ, ಬೇರೆ ಕವಿಗಳ ಭಾವಗೀತೆಗಳ ಧ್ವನಿಸುರುಳಿ ತಯಾರಾಗುವಾಗಲೂ ತೆಗೆದುಕೊಂಡವರು ಲಕ್ಷ್ಮೀನಾರಾಯಣ ಭಟ್ಟರು. ಸಿ. ಅಶ್ವಥ್ ಅವರು ರಾಗ ಸಂಯೋಜಿಸಿದ 'ಷರೀಫ್‌ರ ಗೀತೆಗಳು', ಕೆ.ಎಸ್.ನರಸಿಂಹಸ್ವಾಮಿಯವರ 'ಮೈಸೂರು ಮಲ್ಲಿಗೆ' ಮುಂತಾದ ಅನೇಕ ಧ್ವನಿಸುರುಳಿಗಳ ಯಶಸ್ಸಿನಲ್ಲಿ ಭಟ್ಟರ ಹೆಸರು ಚಿರಸ್ಥಾಯಿಯಾಗಿದೆ. ಸುಗಮಸಂಗೀತಕ್ಕೆ ಶ್ರೀ ಭಟ್ಟರ ಕೊಡುಗೆ ಅಪಾರವಾದದ್ದು. ಕವನಗಳನ್ನು ಹಾಡುವುದೇ ತಪ್ಪು ಎನ್ನುತ್ತಿದ್ದವರನ್ನು ಎದುರಿಸಿ ಸುಗಮಸಂಗೀತದ ಏಳಿಗೆಗೆ ಅವರು ತುಂಬಾ ಸಹಾಯ ಮಾಡಿದ್ದಾರೆ; ಹಲವಾರು ಕವಿಗಳು ಈ ಕ್ಷೇತ್ರಕ್ಕೆ ಬರಲು ಸ್ಫೂರ್ತಿ ನೀಡಿದ್ದಾರೆ. ಸುಗಮಸಂಗೀತ ಕ್ಷೇತ್ರಕ್ಕೆ ಸಂಬಂಧಿಸಿದ ಯಾರೇ ಆದರೂ ಶ್ರೀ ಭಟ್ಟರನ್ನು ಸದಾ ನೆನಪಿನಲ್ಲಿಟ್ಟುಕೊಳ್ಳುವಂಥ ಅನೇಕ ಘನವಾದ ಕಾರ್ಯಗಳು ಅವರಿಂದ ನಡೆದಿವೆ" ಎಂದು ಸಿ.ಅಶ್ವಥ್‌ಅವರು ಭಟ್ಟರು ಸುಗಮಸಂಗೀತಕ್ಕೆ ನೀಡಿದ ಆತ್ಮಸ್ಥೈರ್ಯ, ಸಹಕಾರಗಳನ್ನು ಮೆಚ್ಚಿ ನುಡಿದಿದ್ದರೆ, ಶ್ರೀ ಮೈಸೂರು ಅನಂತಸ್ವಾಮಿಯವರು - "ಲಕ್ಷ್ಮೀನಾರಾಯಣ ಭಟ್ಟರು ನಮ್ಮಂಥ ಗಾಯಕರ ಜೊತೆ ಸ್ನೇಹದಿಂದ ಬೆರೆತವರು. ನಮ್ಮನ್ನು ಬೆಳೆಸುವ ಅನೇಕ ಸಲಹೆ ಸೂಚನೆಗಳನ್ನು ಕೊಡುತ್ತ ನಮಗೆ ಬೆನ್ನೆಲುಬಾಗಿ ನಿಂತವರು; ಸುಗಮಸಂಗೀತದ ಅನೇಕ ಹೊಸ ಚಟುವಟಿಕೆಗಳಿಗೆ ಕಾರಣರಾದವರು. ಈ ಕ್ಷೇತ್ರಕ್ಕೆ ಹೊಸ ಚೈತನ್ಯ, ತೇಜಸ್ಸು ಕೊಟ್ಟು ಅದರ ಪುನರುಜ್ಜೀವನ ಮಾಡಿದ ಕವಿಯೆಂದು ಅವರ ಹೆಸರು ಬೇರೆ ಎಲ್ಲರಿಗಿಂತ ಮೇಲೆ ಶಾಶ್ವತವಾಗಿ ಉಳಿಯುತ್ತದೆ. ಅವರ ಕೊಡುಗೆಗಾಗಿ ನನ್ನಂಥ ಸುಗಮಸಂಗೀತಗಾರರೆಲ್ಲ ಅವರಿಗೆ ಸದಾ ಋಣಿಗಳು" ಎಂದು ಎದೆ ತುಂಬಿ ನುಡಿದಿದ್ದಾರೆ. ಶಾಸ್ತ್ರೀಯ ಸಂಗೀತ ಮತ್ತು ಸುಗಮಸಂಗೀತ ಎರಡೂ ಪ್ರಕಾರಗಳಲ್ಲಿ ಪ್ರಸಿದ್ಧಿ ಮನ್ನಣೆಗಳಿಸಿದ ಹೆಚ್.ಕೆ.ನಾರಾಯಣ್ ಅವರು - "ಡಾ|| ಲಕ್ಷ್ಮೀನಾರಾಯಣ ಭಟ್ಟರು ಪ್ರಸಿದ್ಧರಾದ ಕವಿ, ವಿಮರ್ಶಕರು, ವಿದ್ವಾಂಸರು, ಅವರು ಸುಗಮಸಂಗೀತಕ್ಕೆ ಮಾಡಿರುವ ಕೆಲಸ ಎಷ್ಟು ದೊಡ್ಡದೆಂದು ನನ್ನಂಥ ಅನೇಕರಿಗೆ ಚೆನ್ನಾಗಿ ಗೊತ್ತು. ಹಾಡಲು ಸಾಧ್ಯವಾಗದ ನವ್ಯ ಕವನಗಳೇ ತುಂಬಿದ್ದಾಗ ಅವರು ನವ್ಯ ಕವನಗಳ ಜೊತೆಗೆ ನೂರಾರು ಮೋಹಕ ಗೀತೆಗಳನ್ನೂ ಬರೆದರು. 'ಬಾರೋ ವಸಂತ' - 'ಭಾವೋತ್ಸವ' ಮಾಧುರಿ, ಮಂದಾರ, ಕವಿತಾ, ದೀಪಿಕಾ ಮೊದಲಾದ ಅವರ ಕ್ಯಾಸೆಟ್ಟುಗಳು ಅವರ ಭಾವಗೀತೆಗಳನ್ನು ನಾಡಿನ ತುಂಬ ಹರಡಿವೆ. ಅವರ ಕೆಲಸ ಇಷ್ಟಕ್ಕೆ ಸೀಮಿತವಾಗಿಲ್ಲ. ಷರೀಫರ ಗೀತೆಗಳು, ಮೈಸೂರು ಮಲ್ಲಿಗೆ, ಭಾವ ಸಂಗಮಗಳಂಥ ಧ್ವನಿಮುದ್ರಿಕೆಗಳ ಕೆಲಸದಲ್ಲೂ ಅವರು ಹಿಂದೆ ನಿಂತು ದುಡಿದಿದ್ದಾರೆ. ನನ್ನಂಥ ಅನೇಕ ನಿರ್ದೇಶಕರಿಗೆ ಆ ಬಗೆಯ ಕೆಲಸದಲ್ಲಿ ನೆರವು ನೀಡಿದ್ದಾರೆ. ಕನ್ನಡ ಸುಗಮಸಂಗೀತದ ಹೊಸ ಚಳುವಳಿಯಲ್ಲಿ ಅವರಂತೆ ಶ್ರಮಿಸಿರುವ ಕವಿ ಇನ್ನೊಬ್ಬರಿಲ್ಲ ಎಂದು ಭಟ್ಟರು ಸುಗಮಸಂಗೀತಕ್ಕೆ ನೀಡಿದ ಮಹತ್ತರ ಕಾಣಿಕೆಗಳನ್ನೂ ಅವರ ಸಹೃದಯತೆಯನ್ನೂ ಎತ್ತಿ ನುಡಿದಿದ್ದಾರೆ.

ಶಿವಮೊಗ್ಗ ಸುಬ್ಬಣ್ಣನವರಂತೂ - 'ತನ್ನ ಸೊಗಸಾದ ಭಾವಪೂರ್ಣವಾದ ಗೀತೆಗಳಿಂದ ಈ ಕವಿ ನಮ್ಮ ಮನ ಅರಳಿಸಿಬಿಟ್ಟ. 'ಮುದುಡಿ ಕೂತ ಹಕ್ಕಿ ಹಾರಿ' ಎಲ್ಲ ಒಟ್ಟಿಗೇ ದನಿ ಎತ್ತಿದೆವು. ಅನಂತಸ್ವಾಮಿ, ಅಶ್ವಥ್, ಸುಮಿತ್ರ, ಕಸ್ತೂರಿ ಶಂಕರ್, ರತ್ನಮಾಲ, ಮಾಲತಿ, ನಾನು, ಛಾಯಾ, ಒಬ್ಬರೇ ಇಬ್ಬರೆ? ಸುಗಮಸಂಗೀತ ಕಲಾವಿದರ ದಂಡೇ ಈ ಗೀತೆಗಳಿಗೆ ದಾಳಿಯಿಟ್ಟವು. ಸುಗಮಸಂಗೀತವೆಂದರೆ ಮೂಗು ಮುರಿಯುತ್ತಿದವರಿಗೂ ಅದರ ರುಚಿ ಹತ್ತಿಸಿದ್ದು ನಮ್ಮ ಸಾಧನೆ. ಈ ಕಾರ್ಯದಲ್ಲಿ ಭಟ್ಟ ನಮ್ಮ ಬೆನ್ನಿಗೆ ನಿಂತ. ಸುಗಮಸಂಗೀತದ ನೆಲೆ-ಬೆಲೆಗಳನ್ನು ಎಲ್ಲರಿಗೆ ಮನದಟ್ಟು ಮಾಡಿಕೊಟ್ಟ ದಿಶೆಯಲ್ಲಿ ಅಭಿರುಚಿ ಬೆಳೆಸಲು ಹಮ್ಮಿಕೊಂಡ ಅನೇಕ ಕಾರ್ಯಕ್ರಮಗಳು ಅವನ

ಆಲೋಚನೆಯ ಫಲವೇ. ಕ್ಯಾಸೆಟ್‌ಗಳ ಮೂಲಕ ನಾಡಿನ ಉದ್ದಗಲಕ್ಕೂ ಕನ್ನಡ ಗೀತೆಗಳ ತಂಗಾಳಿ ಸುಳಿಸಿದ್ದರಲ್ಲಿ ಅವನದೇ ಪ್ರಮುಖ ಪಾತ್ರ. ದೀಪಿಕಾ, ಬಾರೋ ವಸಂತ, ಭಾವೋತ್ಸವ, ಮಂದಾರ, ಛಾಯಾ, ಮಾಧುರಿ - ಒಂದೇ ಎರಡೇ? ಇವನದೇ ಹತ್ತು ಹನ್ನೆರಡು ಕ್ಯಾಸೆಟ್‌ಗಳು. ಸಾಲದ್ದಕ್ಕೆ ಭಟ್ಟ ತಾನು ಮೆಚ್ಚಿದ ಕವಿಗಳನ್ನೂ ಕ್ಯಾಸೆಟ್ ಮೂಲಕ ಕನ್ನಡಿಗರಿಗೆ ಪರಿಚಯಿಸಿದ. ಶರೀಫ್ ಕರ್ನಾಟಕದ ಮನೆ ಮಾತಾಗಿದ್ದು, ಈ ಶರೀಫ್ ಭಟ್ಟನಿಂದಲೇ ! ಶರೀಫರ ಗೀತೆಗಳನ್ನು ಅವನು ವಿಶ್ವವಿದ್ಯಾಲಯಕ್ಕೆ ಸಂಪಾದಿಸಿಕೊಟ್ಟ. ಎಂ.ಎಸ್.ಐ.ಎಲ್. ಕಾರ್ಯಕ್ರಮದಲ್ಲಿ ಅವುಗಳನ್ನು ಹಾಡು ಮಾಡಲು ಪ್ರೇರಣೆಕೊಟ್ಟ. ಮುಂದೆ ಭಟ್ಟನ ಪ್ರಯತ್ನ, ಸಂಗೀತ ಸಂಸ್ಥೆಯ ಮಹೇಶರ ಧೈರ್ಯ, ಅಶ್ವಥ್‌ರ ಕೆಚ್ಚಿನ ರಾಗ ಸಂಯೋಜನೆ ಒಂದಾಗಿ ಷರೀಫ್‌ರು ಕನ್ನಡಿಗರ ಮನೆ - ಮನ ತುಂಬಿದರು. ನರಸಿಂಹಸ್ವಾಮಿಯವರ 'ಮೈಸೂರು ಮಲ್ಲಿಗೆ' ಕ್ಯಾಸೆಟ್‌ಆದದ್ದರಲ್ಲೂ ಭಟ್ಟನ ಪಾತ್ರವಿದೆ. ಕನ್ನಡಕ್ಕೆ ಹೊಸದೆನಿಸುವ ಕವಿಗಳ ಕಾವ್ಯ ವಾಚನದ ಕ್ಯಾಸೆಟ್, 'ಸಮ್ಮಿಲನ' ಕೂಡ ಭಟ್ಟನದೇ ಆದ ಹೊಸ ಕೊಡುಗೆ. ಕನ್ನಡದಲ್ಲಿ ಇದು ಮೊದಲ ಪ್ರಯತ್ನ. ಸುಗಮಸಂಗೀತ ಕಲಾವಿದರೊಡನೆ ಅವನು ಕೈಗೂಡಿಸಿದ ಫಲವಾಗಿ ಇಂದು ಅದರ ಬಗೆಗೆ ಚರ್ಚೆ, ಗೋಷ್ಠಿ, ಅದರದೇ ಕಛೇರಿ, ಸಾಹಿತ್ಯ ಸಮ್ಮೇಳನದಲ್ಲಿ 'ಗೀತ ಸಂಗೀತ' ಮೊದಲಾದುವೆಲ್ಲ ನಡೆಯುತ್ತಿದೆ' - ಎಂದು ಹೇಳಿ ಸುಗಮಸಂಗೀತ ಇತಿಹಾಸ ಮತ್ತು ಭಟ್ಟರ ಕಾಣಿಕೆಯನ್ನು ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಬಿ.ಕೆ. ಸುಮಿತ್ರ ಅವರು 'ಕಲಾವಿದರ ಪರನಿಂತ ಕವಿ' ಎಂದು ಬಣ್ಣಿಸುತ್ತಾ - "ಸುಗಮಸಂಗೀತ ಕ್ಷೇತ್ರಕ್ಕೆ ಭಟ್ಟರ ಹಾಗೆ ನಾನಾ ವಿಧದಲ್ಲಿ ಒದಗಿದ ಕವಿ ಇನ್ನೊಬ್ಬರಿಲ್ಲ. ಅವರಿಂದಾಗಿ ಸುಗಮಸಂಗೀತ ಚಳುವಳಿಗೆ ಬಹಳ ಬಲ ಬಂತು. ಎಷ್ಟೋ ಜನ ಕಲಾವಿದರ ನೆರವಿಗೆ ಅವರು ಬಂದಿದ್ದಾರೆ'. - ಎಂದು ಲಕ್ಷ್ಮೀನಾರಾಯಣ ಭಟ್ಟರು, ನುಡಿಯಲ್ಲಿ ಮತ್ತು ನಡೆಯಲ್ಲಿ ಹೇಗೆ ಅಭಿನ್ನರು ಎಂಬುದನ್ನು ತಿಳಿಸಿದ್ದಾರೆ.

ಸುಗಮಸಂಗೀತದ ಮುನ್ನಡೆಗಾಗಿ ಅದರ ಪುರೋವೃದ್ಧಿಗಾಗಿ ಶ್ರಮಿಸಿದ ಲಕ್ಷ್ಮೀನಾರಾಯಣ ಭಟ್ಟರು ಕೇವಲ ಕನ್ನಡನಾಡಿನಲ್ಲಾಗಲಿ ಅಥವಾ ಗಡಿನಾಡುಗಳಲ್ಲಾಗಲಿ ತಮ್ಮನ್ನು ಸೀಮಿತಗೊಳಿಸದೆ ಹೊರದೇಶಗಳಲ್ಲಿಯೂ ಸಾಹಿತ್ಯ ಹಾಗೂ ಸುಗಮಸಂಗೀತದ ಪರಿಚಾರಕರಾಗಿ, ಪ್ರಚಾರಕರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಎಪ್ಪತ್ತು ವರ್ಷ ಇಳಿವಯಸ್ಸಿನಲ್ಲಿಯೂ ಕ್ರಿಯಾಶೀಲರಾಗಿದ್ದಾರೆ. ತೀರ ಇತ್ತೀಚೆಗೆ (೨೦೦೬ ಜೂನ್-ಜುಲೈ) ಸಾಹಿತ್ಯ ಪ್ರಚಾರಕ್ಕಾಗಿ ಅಮೇರಿಕಾಗೆ ತೆರಳಿ ಅಲ್ಲಿಯ ಕನ್ನಡಿಗರಿಗೆ ಸಾಹಿತ್ಯೋಪನ್ಯಾಸಗಳನ್ನು ನೀಡಿ ಅವರ ಮನಸ್ಸನ್ನು ಗೆದ್ದು ಬಂದಿದ್ದಾರೆ. ಕನ್ನಡ ಸಾಹಿತ್ಯದ ಹಿರಿಮೆಯನ್ನು ಧ್ವನಿಸುರುಳಿಯ ಹೂರಣವಾಗಿಸಿ ಹಂಚಿ ಬಂದಿದ್ದಾರೆ. ಹಳೆಗನ್ನಡದಿಂದ ಹೊಸಗನ್ನಡದವರೆಗಿನ ಸಾಹಿತ್ಯದಲ್ಲಿ ಗಮಕ, ಸುಗಮಸಂಗೀತ ಎಲ್ಲವನ್ನೂ ಅಡಕಿಸಿ ಹುದುಗಿಸಿಕೊಟ್ಟಿದ್ದಾರೆ. ಇವರು ನೀಡಿದ ಉಪನ್ಯಾಸಗಳ ಬಗೆಗೆ ಕನ್ನಡಿಗರು ಪ್ರಶಂಸನೆಯ ಹುಚ್ಚುಹೊಳೆಯನ್ನೇ ಸುರಿಸಿದ್ದಾರೆ - "ಇದು ಪ್ರೊ|| ಲಕ್ಷ್ಮೀನಾರಾಯಣ ಭಟ್ಟರ ಅದ್ಭುತ ಸಾಹಸ' ಎಂದು ಕ್ಯಾಲಿಫೋರ್ನಿಯದ ಆಹಿತಾಲನರು ಹೇಳಿದರೆ, ಶರೀಫ್‌ಭಟ್ಟರೊಡನೆ ಅಟ್ಲಾಂಟಾದಲ್ಲೊಂದು ಸುಮಧುರ ಸಂಜೆ' ಎಂದು ಮಂಗಳಾ ಮಧುಸೂದನ್ ವರ್ಣಿಸಿದ್ದಾರೆ. ಫ್ಲಾರಿಡಾದಲ್ಲಿ ನಡೆದ ಸಾಹಿತ್ಯ ಶಿಬಿರದ ಬಗೆಗೆ ಮಂದಗೆರೆ ಅಶೋಕ ಭಾರದ್ವಜ ಬರೆಯುತ್ತಾ 'ಎನ್.ಎಸ್.ಎಲ್. ಭಟ್ಟರೆಂಬ ಬೋಧಿವೃಕ್ಷದ ಕೆಳಗೆ' - ಎಂದು ಭಟ್ಟರ ಉಪನ್ಯಾಸವನ್ನು ಬುದ್ಧ ನೀಡಿದ ಜ್ಞಾನೋಪದೇಶಕ್ಕೆ ಹೋಲಿಸಿದರೆ, ಉತ್ತರ ಕ್ಯಾಲಿಫೋರ್ನಿಯಾದ ಸನ್ನಿವೇಲ್‌ನ ಜೋತಿಮಹಾದೇವ್, – 'ಜ್ಞಾನದಾಹಿಗಳಿಗೆ ಗಂಗೆಯನ್ನು ಹನಿಸಿದ ಹಿರಿಯ ಕವಿ ಡಾ|| ಎನ್.ಎಸ್.ಎಲ್. ಲಕ್ಷ್ಮೀನಾರಾಯಣ ಭಟ್ಟರು ಕನ್ನಡ ಸಮುದಾಯವೊಂದರ ಕಣ್ ತೆರೆಸಿದರು - ಎಂದಿದ್ದಾರೆ. "ಶಿಕಾಗೋ ಕನ್ನಡಿಗರ ಮುಂದೆ ಸಾಹಿತ್ಯ ಸರಸ್ವತಿ" ಎಂದು ತ್ರಿವೇಣಿ ಶ್ರೀನಿವಾಸರಾವ್ ಭಟ್ಟರನ್ನು ಕೊಂಡಾಡಿದರೆ, ಲಾಸ್ ಎಂಜಲಿಸ್‌ನಲ್ಲಿ ನಡೆದ ಕನ್ನಡ ಕಾವ್ಯ ಪರಂಪರೆ ಕುರಿತ ರಸಗವಳದ ಬಗೆಗೆ ವರ್ಣಿಸುತ್ತಾ - 'ಪಂಪನಿಂದ ಚಂಪಾವರೆಗೆ ಕನ್ನಡದ ಕಂಪನ್ನು ಫರಂಗಿಯರ ದೇಶದಲ್ಲಿ ಪಸರಿಸಿದುದು ಕನ್ನಡ ಭಟ್ಟರ ಹೆಮ್ಮೆ ಎಂದು ಶ್ರೀನಿವಾಸಭಟ್ಟ ಪ್ರಶಂಸಿದ್ದಾರೆ. ಭಟ್ಟರು ಎಲ್ಲಿದ್ದರೂ ಹೇಗಿದ್ದರೂ ತಮ್ಮ ಸಾಹಿತ್ಯ - ಸಂಗೀತ ಪ್ರೀತಿಯಿಂದ ಇತಿಹಾಸವನ್ನೇ ನಿರ್ಮಿಸಬಲ್ಲರು - ಎನ್ನುವುದು ಇದರಿಂದ ಗೋಚರವಾಗುತ್ತದೆ. 'ಸುಗಮಸಂಗೀತ' ಕ್ಷೇತ್ರ ಶ್ರೀಮಂತವಾಗಿರುವುದು, ಮುಂದೆಯೂ ಇದೇ ಮುಂದುವರಿಯಬೇಕಾದರೆ ಇಂತಹ ಇತಿಹಾಸಕಾರರಿಂದ ಮಾತ್ರ ಅದು ಸಾಧ್ಯ.

‘ಸುಗಮಸಂಗೀತ’ದ ಸಂಗೀತ ನಿರ್ದೇಶಕರಾಗಿ ಗಾಯಕರಾಗಿ ತಮ್ಮ ಅನುಪಮ ಕೊಡುಗೆಯನ್ನು ನೀಡಿ ಈ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಹಿರಿಮೆ ಸಿ. ಅಶ್ವಥ್ ಅವರಿಗೆ ಸೇರುತ್ತದೆ. ತಮ್ಮ ವಿಶಿಷ್ಟಶೈಲಿಯ ಸಂಯೋಜನೆಯಿಂದ, ಸಿರಿಕಂಠದಿಂದ ಅಶ್ವಥ್‌ನಾಡಿನಲ್ಲಿ ಮನೆ ಮಾತಾಗಿದ್ದಾರೆ.ನಾಟಕ, ಸಿನಿಮಾ, ಸುಗಮಸಂಗೀತ - ಈ ಮೂರೂ ಮುಪ್ಪುರಿಗೊಂಡ ಅವರಲ್ಲಿ ಸಹಜ ಪ್ರತಿಭೆ, ಸ್ವಂತ ಚಿಂತನೆಗಳು ತುಂಬಿಕೊಂಡ ಕಾರಣದಿಂದ ಅಶ್ವಥ್ ಒಬ್ಬ ಕನಸುಗಾರರಾಗಿದ್ದಾರೆ. ನಿರಂತರ ಪ್ರಯೋಗಶೀಲರಾಗಿದ್ದಾರೆ. ಅವರಂತೆ ವಸ್ತುನಿಷ್ಠರಾಗಿ ‘ಸುಗಮಸಂಗೀತ’ ಕ್ಷೇತ್ರಕ್ಕೆ ಬದುಕನ್ನು ಅರ್ಪಿಸಿಕೊಂಡವರು ಯಾರೂ ಇಲ್ಲ ಎನ್ನಬಹುದು. ಸಾವಿರಾರು ಹಾಡುಗಳ ಸಂಯೋಜನೆಯಲ್ಲಿ ಹೊಚ್ಚಹೊಸತನವಿದೆ. ಬಣ್ಣ ಬಣ್ಣಗಳಿವೆ.

ಅಶ್ವಥ್ ಕ್ಯಾಸೆಟ್ ಪ್ರಪಂಚಕ್ಕಂತೂ ನೀಡಿದ ಕಾಣಿಕೆ ಅಭೂತಪೂರ್ವವಾಗಿದೆ. ಶಿಶುಗೀತೆ, ರಂಗಗೀತೆ, ಜಾನಪದ ಗೀತೆ, ಭಾವಗೀತೆ, ದಾಸರ ಪದಗಳು, ಷರೀಫ್‌ರ ಗೀತೆಗಳು, ತತ್ವಪದಗಳು, ವಚನಗಳು, ಕಾನೂನು ಗೀತೆಗಳು, ದೇಶಭಕ್ತಿ ಗೀತೆಗಳು, ಒಂದೇ, ಎರಡೇ ಸಹ ಸಂಯೋಜಕರುಗಳಿಗೆ ಹೊಟ್ಟೆಗಿಚ್ಚು ಬರುವಷ್ಟರ ಮಟ್ಟಿಗೆ ಇವು ವೈವಿಧ್ಯತೆಯನ್ನು ಪಡೆದುಕೊಂಡಿವೆ. ಅಶ್ವಥ್ ಮನಸ್ಸಿಗೆ ಏನಾದರೂ ಹೊಸತು ಹೊಳೆದರೆ, ಎಡೆಬಿಡದ ತ್ರಿವಿಕ್ರಮನಂತೆ, ಅದು ಸಿದ್ಧಿಯಾಗುವವರೆವಿಗೆ ತಿರುಗಿ ನೋಡಲಾರರು. ಏನನ್ನೂ ಮಾರಿಯಾದರೂ ಅದನ್ನು ಸಾಧಿಸಿಯೇ ತೀರುವವರು.

ನಿರಂತರ ಹುಡುಕಾಟದಲ್ಲಿ ಇರುವ ಅಶ್ವಥ್ ಸಿನಿಮಾರಂಗವನ್ನು ಪಕ್ಕಕ್ಕೆ ಇಟ್ಟು ಸುಗಮಸಂಗೀತವನ್ನು ಎರಡೂ ಕೈಗಳಿಂದ ಬಾಚಿಕೊಂಡಿದ್ದಕ್ಕೆ ಮುಖ್ಯ ಕಾರಣ ಅವರಲ್ಲಿದ್ದ ಸ್ವಂತಿಕೆ, ಕಾವ್ಯ ಪ್ರೇಮ ಮತ್ತು ಸೃಜನಶೀಲತೆ.

ಸುಗಮಸಂಗೀತವನ್ನು ಬೇರೆ ಬೇರೆ ಕಲಾ ಮಾಧ್ಯಮದೊಂದಿಗೆ ಸಮೀಕರಿಸಿ ಪ್ರಯೋಗಗಳನ್ನು ನಡೆಸಿದವರು ಅಶ್ವಥ್‌ಅವರು. ಅವರ ‘ಗೀತಮಾಧುರಿ’ (೧೯-೧೨-೧೯೮೮ ರಂದು) ಸುಗಮಸಂಗೀತೋತ್ಸವದಲ್ಲಿ ಚಿತ್ರ - ಸಂಗೀತ - ಸಾಹಿತ್ಯ - ನರ್ತನ - ಅಭಿನಯ, ಕಲೆಗಳ ಒಂದು ರಸಯೋಗವನ್ನು ಸೃಷ್ಟಿಮಾಡಿದರು. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮೊಟ್ಟಮೊದಲನೆಯ ಬಾರಿಗೆ ಕವಿಗಳು, ಸಂಗೀತಗಾರರು, ಚಿತ್ರಕಾರರು, ನಟರು, ನರ್ತಕರು, ರಂಗತಜ್ಞರು, ಧ್ವನಿತಜ್ಞರು, ತಂತ್ರಜ್ಞರು ಒಮ್ಮನಸ್ಸಿನಿಂದ ಒಂದೇ ನಿಶ್ಚಿತ ಗುರಿಗೆ ತಮ್ಮ ಪ್ರತಿಭಾ ಪ್ರಕಾಶವನ್ನು ಕೇಂದ್ರಿಕರಿಸಿ ಯಶಸ್ವಿಯಾದರು. ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಈ ಕಾರ್ಯಕ್ರಮ ಅಪೂರ್ವವಾಗಿದ್ದಲ್ಲೆ, ಅಶ್ವಥ್‌ರ ಕಲ್ಪನಾ ಶಕ್ತಿ, ಕರ್ತುತ್ವಶಕ್ತಿಗೆ ಸಾಕ್ಷಿಯಾಯಿತು.

ಮುಖ್ಯವಾಗಿ ಕರ್ನಾಟಕದ ವಾದ್ಯಗಾರರನ್ನೇ ಧ್ವನಿಮುದ್ರಣಕ್ಕೆ ವೇದಿಕೆಗೆ ಬಳಸಬೇಕೆಂಬ ಪರಿಕಲ್ಪನೆಯನ್ನು ತಂದು ಪಾಲಿಸಿದವರು ನಮ್ಮ ಅಶ್ವಥ್ ಅವರು. ‘ಸುಗಮಸಂಗೀತ’ ಎನ್ನುವ ಹೆಸರಿನ ಹಿಂದೆ ಅವರ ಪರಿಶ್ರಮವನ್ನು ಮರೆಯುವಂತೆಯೇ ಇಲ್ಲ. ಸುಗಮಸಂಗೀತದ ಬಗೆಗಿನ ಅವರ ಕಾಳಜಿ ‘ಸುಗಮಸಂಗೀತ’ಕ್ಕೊಂದು ಭಾಷ್ಯವಿದ್ದಂತೆ ಬರೆದಿರುವ ಪುಸ್ತಕದಲ್ಲಿ (೧೯೮೮) ವ್ಯಕ್ತವಾಗುತ್ತದೆ.

ಸುಗಮಸಂಗೀತದಲ್ಲಿ ‘ಸಮೂಹಗಾಯನ’ ಕಲ್ಪನೆಯನ್ನು ತಂದ ಅಶ್ವಥ್ ಸುಮಾರು ಸಾವಿರ ಜನ ಗಾಯಕ ಗಾಯಕಿಯರಿಂದ ಕುವೆಂಪು ಅವರ ವೈಚಾರಿಕ ಗೀತೆಗಳನ್ನು ಮೊತ್ತ ಮೊದಲ ಬಾರಿಗೆ ಹಾಡಿಸಿದರು. ೨೦೦೦ದಲ್ಲಿ ಅಮೇರಿಕಾದ ಹೂಸ್ಟನ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಸುಮಾರು ೬ ವಿವಿಧ ಭಾಗದಿಂದ ಆಯ್ದ ೨೨೦ ಗಾಯಕರಿಗೆ ಕುವೆಂಪು ಗೀತೆಗಳ ತರಬೇತಿ ನೀಡಿ ಹಾಡಿಸಿದರು. ‘ವಚನ’ ಗಾಯನ ಶೈಲಿಯನ್ನೇ ಬದಲಿಸಿ ನೃತ್ಯ ಶೈಲಿಗೆ ಅಳವಡಿಸಿ ಸುಮಾರು ೪೨ ವಚನಗಳಿಗೆ ರಾಗ ಸಂಯೋಜಿಸಿದರು.

‘ಗೀತಮಾಧುರಿ’ ಎಂಬ ಹೆಸರಿನಲ್ಲಿ ಅಶ್ವಥ್ ವಿವಿಧ ಆಯಾಮಗಳ ಮೂಲಕ ಸುಗಮಸಂಗೀತವನ್ನು ಪ್ರಸ್ತುತ ಪಡಿಸಿದರು. ದೂರದರ್ಶನದ ಧಾರವಾಹಿಯಾಗಿ ೬೦ ಕವಿತೆಗಳಿಗೆ ರಾಗ ಸಂಯೋಜಿಸಿ ಅದನ್ನು ದೃಶ್ಯ ಮಾಧ್ಯಮದ ಮೂಲಕ ಆಕರ್ಷಕವಾಗಿ ಮಾಡಿದರು. ಶ್ರಾವ್ಯದಿಂದ ಸುಗಮಸಂಗೀತ ವಿಸ್ತರಗೊಂಡು ದೃಶ್ಯಕ್ಕೂ ಇಳಿಯಿತು. ನೃತ್ಯಾಭಿನಯದಲ್ಲಿ ಮತ್ತಷ್ಟು ಆಕರ್ಷಕವಾಯಿತು. ‘ಸ್ವರಮಾಧುರಿ’

ಎನ್ನುವ ಪುಸ್ತಕದಲ್ಲಿ ಅಶ್ವಥ್ ಅವರು ತಮ್ಮ ರಾಗ ಸಂಯೋಜನೆಗಳ ೧೫೦ ಗೀತೆಗಳನ್ನು ಸಂಗೀತದ ಸ್ವರ ಪ್ರಸ್ತಾರದ ಮೂಲಕ ಮುದ್ರಿಸಿ ಹೊರತಂದರು. ಚಲನಚಿತ್ರ ಗೀತೆಗಳು, ರಂಗ ಗೀತೆಗಳು, ಸುಗಮಸಂಗೀತ, ಇವುಗಳ ಜೊತೆಗೆ ಅಶ್ವಥ್‌ರ ಹೊಸ ಸಾಧನೆ ಎಂದರೆ ಸುಮಾರು ದೂರದರ್ಶನ ಧಾರವಾಹಿಗಳ ಶೀರ್ಷಿಕೆ ಗೀತೆಗಳಿಗೆ ರಾಗಸಂಯೋಜನೆ ಮಾಡಿದ್ದುದು. ಅಶ್ವಥ್‌ಅವರು ರಾಗಸಂಯೋಜನೆ ಮಾಡಿದ ಎಲ್ಲಾ ಶೀರ್ಷಿಕೆ ಗೀತೆಗಳೂ ಅತ್ಯಂತ ಯಶಸ್ವೀ ಗೀತೆಗಳಾದವು. ಅವುಗಳ ಜನಪ್ರಿಯತೆ ಎಷ್ಟಾಯಿತೆಂದರೆ ದೂರದರ್ಶನದ ಆಚೆಗಿನ ವೇದಿಕೆಗೂ ಅವು ಬಂದಿಳಿದು ಕೇಳುಗರ ಕೋರಿಕೆಯ ಗೀತೆಗಳಾದವು. ಟಿ.ಎನ್. ಸೀತಾರಾಂ ಅವರ 'ಮಾಯಾಮೃಗ' - 'ಮನ್ವಂತರ' - 'ಮುಕ್ತಾ' ಧಾರವಾಹಿಗಳ ಜೀವರಾಗವೇ ಅಶ್ವಥ್ ಅವರ ಶೀರ್ಷಿಕೆ ಗೀತೆಯಿಂದ ಆರಂಭಗೊಂಡಿತು.

ಸುಗಮಸಂಗೀತಕ್ಕೆ ಒಂದು ಹೊಸ ಆಯಾಮವನ್ನು ನೀಡಬೇಕೆಂಬ ಗಂಭೀರ ಯೋಚನೆಯಲ್ಲಿ ಮೂಡಿದ ಕಾರ್ಯಕ್ರಮವೇ ಅವರ 'ಕನ್ನಡವೇ ಸತ್ಯ' - ಕಾರ್ಯಕ್ರಮ. ಸುಗಮಸಂಗೀತದಲ್ಲಿ ಪ್ರತಿಯೊಂದು ಹಂತದಲ್ಲಿಯೂ ಅಪೂರ್ವ ದಾಖಲೆಗಳನ್ನೆ ಮಾಡಿದ ಅಶ್ವಥ್ ೨೦೦೫ರ ಏಪ್ರಿಲ್ ತಿಂಗಳಲ್ಲಿ ಬೆಂಗಳೂರು ಅರಮನೆಯ ಆವರಣದಲ್ಲಿ ನೀಡಿದ 'ಕನ್ನಡವೇ ಸತ್ಯ' ಕಾರ್ಯಕ್ರಮ ಅಭೂತಪೂರ್ವ ಯಶಸ್ಸಿನಿಂದ ಅಶ್ವಥ್‌ರನ್ನು ಒಂದೇ ರಾತ್ರಿಯಲ್ಲಿ ತಾರೆಯನ್ನಾಗಿ ಮಾಡಿತು. ಮಹಾತಾರೆಗಳು, ಚಲನಚಿತ್ರ ನಟರು ನೀಡುವ ಕಾರ್ಯಕ್ರಮ, ಅದರಲ್ಲೂ ಕನ್ನಡ ಬಿಟ್ಟು ಬೇರೆ ಯಾವುದೇ ಭಾಷೆಯವರ ಕಾರ್ಯಕ್ರಮಕ್ಕೆ ಸಾಮಾನ್ಯವಾಗಿ ಅರಮನೆಯ ಆವರಣ ತುಂಬಿ ತುಳುಕುತ್ತಿತ್ತು. ಆದರೆ ಅಂದು ಹಿಂದಿನ ಎಲ್ಲಾ ದಾಖಲೆಗಳನ್ನು 'ಕನ್ನಡವೇ ಸತ್ಯ' ಒಂದೇ ರಾತ್ರಿಯಲ್ಲಿ ಸುಳ್ಳು ಮಾಡಿತು. ಒಂದು ಲಕ್ಷಕ್ಕೂ ಹೆಚ್ಚು ಜನ ಯಾವ ಸಿನಿಮಾ ತಾರೆಯರ ಆಕರ್ಷಣೆಯಿಲ್ಲದ, 'ಸುಗಮಸಂಗೀತ' ಕಾರ್ಯಕ್ರಮಕ್ಕೆ ನೆರೆದಿದ್ದರು. ಅಶ್ವಥ್‌ಕೇವಲ ಒಬ್ಬ ಹಾಡುಗಾರನಾಗಿ ಮಾತ್ರ ಸಲ್ಲದೆ, ಕನ್ನಡ ಕಲೆಯ ಸುಗಮಸಂಗೀತದ, ಸಂಸ್ಕೃತಿಯ ಒಬ್ಬ ಬಹುಮುಖ್ಯ ಪ್ರತಿನಿಧಿಯಾಗಿ ಕನ್ನಡನಾಡಿನ ಆಸ್ತಿಯಾದರು. ಕನ್ನಡಿಗರೆಲ್ಲರನ್ನು ಒಗ್ಗೂಡಿಸುವುದು ಸುಗಮಸಂಗೀತಕ್ಕೆ ಮಾತ್ರ ಸಾಧ್ಯವಿದೆ ಎಂಬುದನ್ನು ಸಾಬೀತುಮಾಡಿ ತೋರಿಸಿದರು. ರಾಜಕೀಯ ಚಳುವಳಿಗಿಂತ ಸಾಂಸ್ಕೃತಿಕ ಚಳುವಳಿ ಶಕ್ತಿಯುತವಾದದ್ದು ಎಂಬುದನ್ನು ಅಶ್ವಥ್‌ರ 'ಕನ್ನಡವೇ ಸತ್ಯ' ಎತ್ತಿ ಹಿಡಿಯಿತು.

ಸುಗಮಸಂಗೀತ ಜನಮಾನಸ ಭಾವ ಪ್ರಪಂಚವನ್ನು ತಣಿಸಿದರಷ್ಟೇ ಸಾಲದು. ವೈಚಾರಿಕ ಎಚ್ಚರವನ್ನು ಮೂಡಿಸುವ ಶಕ್ತಿಯಾಗಿಯೂ ಅದು ರೂಪುಗೊಳ್ಳಬೇಕು ಎಂಬುದು ಅಶ್ವಥ್‌ಅವರ ಇತ್ತೀಚಿನ ನಿಲುವು. ಹೀಗಾಗಿಯೇ ಅವರು ಸುಗಮಸಂಗೀತವನ್ನು ವೈಯಕ್ತಿಕ ನೆಲೆಯಿಂದ ಸಮಷ್ಠಿಯ ಕಡೆಗೆ ಕರೆದೊಯ್ಯುವ ಪ್ರಯತ್ನ ಮಾಡುತ್ತಿದ್ದಾರೆ. ಎಲ್ಲರನ್ನೂ ಎಲ್ಲವನ್ನೂ ಒಳಗೊಳ್ಳುವ ಮೂಲಕ ಅದೊಂದು ಶಕ್ತಿಯಾಗಿ ರೂಪಾಂತರ ಪಡೆಯಬೇಕು ಎಂದು ಹಂಬಲಿಸುತ್ತಿದ್ದಾರೆ. ಆದ್ದರಿಂದಲೇ ಅಶ್ವಥ್ ಅವರಿಗೆ ಸುಗಮಸಂಗೀತ - ಕೇವಲ ಕಲೆ ಮಾತ್ರವಲ್ಲ. ಎಚ್ಚರದ ದನಿಯಾಗಿದೆ. ಅದೊಂದು ಚಳುವಳಿಯಾಗಿದೆ.

ಕವಿಯಾಗಿ ಡಾ|| ಲಕ್ಷ್ಮೀನಾರಾಯಣ ಭಟ್ಟರು, ಸುಗಮಸಂಗೀತಗಾರರಾಗಿ ಸಿ. ಅಶ್ವಥ್‌ರ ಹಾಗೆ ವೈ.ಕೆ.ಎಂ. ಮುದ್ದುಕೃಷ್ಣ ಅವರ ಹೆಸರು ಸಂಘಟನೆಯಲ್ಲಿ ಮುಖ್ಯವಾದ ಹೆಸರಾಗಿದೆ. ಗಾಯಕರಾಗಿ ತಮ್ಮ ಒಲವನ್ನು ಸುಗಮಸಂಗೀತದತ್ತ ಮೂಡಿಸಿಕೊಂಡಿರುವ ಮುದ್ದುಕೃಷ್ಣ ಅವರ ಸಾಮರ್ಥ್ಯ ಎದ್ದು ಕಾಣುವುದು ಅವರ ಸಂಘಟನಾ ಕೌಶಲದಿಂದ.

ಇಂದು 'ಸುಗಮಸಂಗೀತ' ಎಲ್ಲರ ಮನೆ ಮನಗಳಲ್ಲಿ ಹುದುಗಿ ಕುಳಿತುಕೊಂಡಿದ್ದರ ಹಿಂದೆ ಅನೇಕ ಸಂಘಟನಾಕಾರರ ಹೆಸರಿದೆ. ಮುಖ್ಯವಾಗಿ ಜಿ.ವಿ. ಅತ್ರಿಯವರು 'ಸುಗಮಸಂಗೀತ' ನೀಡಿದ ಕಾಣಿಕೆ ಅಪೂರ್ವ. 'ಕನ್ನಡ ಸಂಗೀತ' ಎಂದೇ 'ಸುಗಮಸಂಗೀತ'ವನ್ನು ಕರೆದವರು ಅತ್ರಿ. ನಂತರ ಬೆಂಗಳೂರು, ಧಾರವಾಡ, ಹೈದ್ರಾಬಾದ್ ಕರ್ನಾಟಕದ ಗಡಿ ಭಾಗದ ಗುಲ್ಬರ್ಗ ಮತ್ತು ಚಿಕ್ಕಮಗಳೂರಿನಲ್ಲಿ ಅತ್ರಿ ನಡೆಸಿದ 'ಕನ್ನಡ ಸಂಗೀತ' ಸಮ್ಮೇಳನಗಳು, 'ಸುಗಮಸಂಗೀತ'ದ ಮೊದಲ ೬ ಸಮ್ಮೇಳನಗಳಾದವು. ಮಹಾ ಕನಸುಗಾರರಾದ ಅತ್ರಿ ಹಿರಿಯ ಕಿರಿಯ ಶಾಸ್ತ್ರೀಯ ಸಂಗೀತ ವಿದ್ವಾಂಸರುಗಳನ್ನು, ಕವಿಗಳನ್ನು ಆಹ್ವಾನಿಸಿ, ಸನ್ಮಾನಿಸಿದ್ದೇ ಅಲ್ಲದೆ ಸುಗಮಸಂಗೀತದ ವಿಸ್ತರಣೆಯ ಬಗೆಗೆ ಹೆಚ್ಚು ತಲೆ ಕೆಡಿಸಿಕೊಂಡದ್ದೂ ಉಂಟು. ಪ್ರಥಮ ಸಮ್ಮೇಳನದಲ್ಲಿಯೇ ಸ್ಥಳದಲ್ಲೇ ಕವಿತೆಗೆ ರಾಗ ಸಂಯೋಜಿಸಿ

ಹಾಡುವ 'ಸೃಷ್ಟಿ;' ಎಂಬ ವಿನೂತನ ಕಾರ್ಯಕ್ರಮವನ್ನು ಅತ್ರಿ ಹಮ್ಮಿಕೊಂಡಿದ್ದರು. ವಿಚಾರ ಸಂಕಿರಣಗಳೂ ನಡೆದವು. ಕವಿತೆ ಹಾಡಾಗುತ್ತಾ ಚಿತ್ರಕಲೆ ಮತ್ತು ನೃತ್ಯದೊಂದಿಗೆ ಸವಾಲು ಎಸೆಯುವ ಕಾರ್ಯಕ್ರಮಗಳನ್ನು ಅತ್ರಿ ಆಯೋಜಿಸಿದ್ದರು. ಅತ್ರಿಯವರ ಕ್ರಿಯಾಶೀಲತೆ ಸಾಕ್ಷಿಯಾದ ಕಾರ್ಯಕ್ರಮವೆಂದರೆ ಕಾರಾಗೃಹದಲ್ಲಿನ ಖೈದಿಗಳಿಗೆ ಸುಗಮಸಂಗೀತ ಕಮ್ಮಟವನ್ನು ಹಮ್ಮಿಕೊಂಡಿದ್ದು. ಶ್ರೀ ವಿಜಯ ಸಾಸನೂರ, ಕಾ.ತ. ಚಿಕ್ಕಣ್ಣ ಮತ್ತು ಡಾ|| ಜಯ ಅರವಿಂದ್ ಅವರ ಕವಿತೆಗಳಿಗೆ ರಾಗ ಸಂಯೋಜಿಸಿದ ಅತ್ರಿ ಖೈದಿಗಳಿಗೂ ಮನಃ ಪರಿವರ್ತನೆಯಾಗುವಂತೆ 'ಸುಗಮಸಂಗೀತ'ವನ್ನು ಕಲಿಸಲು ಪ್ರಯತ್ನಿಸಿದರು. ತಮ್ಮ 'ಸಂಗೀತ ಗಂಗಾ' ಸಂಸ್ಥೆಯಲ್ಲಿ ಪ್ರತಿ ವರ್ಷ 'ಸಂಗೀತ ಗಂಗಾ' ಎಂಬ ವಾರ್ಷಿಕ ಪ್ರಶಸ್ತಿಯನ್ನು ಸ್ಥಾಪಿಸಿದಿ ಅತ್ರಿ ಕಾಲದ ಕೆಸರಲ್ಲಿ ಮುಳುಗಿಹೋದದ್ದು ವಿಪರ್ಯಾಸವಾಯಿತು. ಆದರೆ ಅವರ ಹೆಸರು ಮಾತ್ರ ಚಿರಸ್ಥಾಯಿಯಾಯಿತು. ಅತ್ರಿಯವರ ಕಣ್ಮರೆಯ ನಂತರ 'ಸುಗಮಸಂಗೀತ'ವನ್ನು ತಮ್ಮ ಸಂಘಟನೆಗಳ ಮೂಲಕ ಮುನ್ನೆಡೆಸಿದವರೆಂದರೆ ವೈ.ಕೆ. ಮುದ್ದುಕೃಷ್ಣ ಅವರು. ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದ ಮುದ್ದುಕೃಷ್ಣ ಅವರು ಅಶ್ವಥ್‌ರ ಜೊತೆಗೂಡಿ 'ಧ್ವನಿ' ಎನ್ನುವ ಸುಗಮ ಸಂಸ್ಥೆಯನ್ನು ಸಂಘಟಿಸಿದರು. ಎಲ್ಲಾ ಸುಗಮಸಂಗೀತ ಗಾಯಕಿ ಗಾಯಕರನ್ನು ಒಗ್ಗೂಡಿಸಿ ನಾಡಿನಾದ್ಯಂತ - ಮೈಸೂರಿನಿಂದ ಬೀದರ್‌ವರೆಗೂ ಪ್ರವಾಸ ಮಾಡಿ 'ಸುಗಮಸಂಗೀತ' ಯಾತ್ರೆ ನಡೆಸಿ ಕಾರ್ಯಕ್ರಮಗಳನ್ನು ನೀಡಿದರು. ೧೯೯೩ ರಲ್ಲಿ ಕೊಪ್ಪಳದ ಸಾಹಿತ್ಯ ಸಮ್ಮೇಳನದಲ್ಲಿ ಅಂದಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಗೋ.ರೂ. ಚೆನ್ನಬಸಪ್ಪನವರೊಂದಿಗೆ ಜೊತೆಗೂಡಿ ನಾಡಗೀತೆಯ ಒಂದು ಧ್ವನಿಸುರುಳಿ 'ಹಚ್ಚೇವು ಕನ್ನಡದ ದೀಪ'ವನ್ನು ಹೊರತಂದರು. ಕೊಪ್ಪಳ ಸಾಹಿತ್ಯ ಸಮ್ಮೇಳನದಿಂದ 'ಸುಗಮಸಂಗೀತ' ಸಾಹಿತ್ಯ ವೇದಿಕೆಯನ್ನು ಹಂಚಿಕೊಂಡಿತು. ನಿರಂತರವಾಗಿ ಸಾಹಿತ್ಯ ಸಮ್ಮೇಳನಗಳಲ್ಲಿ 'ಸುಗಮಸಂಗೀತ'ದ ಕಾರ್ಯಕ್ರಮ ನಡೆಸಲು ಪ್ರಾರಂಭವಾಯಿತು.

ಮುಖ್ಯವಾಗಿ ಮೈಸೂರು ಅರಮನೆ ದರ್ಬಾರ್ ಹಾಲಿನಲ್ಲಿ ಬರಿಯ ಶಾಸ್ತ್ರೀಯ ಕಛೇರಿಗಳು ಮಾತ್ರ ನಡೆಯುವುದಕ್ಕೆ ಆಸ್ಪದವಿತ್ತು. ಆದರೆ ಮುದ್ದುಕೃಷ್ಣ ಮತ್ತು 'ಧ್ವನಿ' ಬಳಗದವರ ಹೋರಾಟದಿಂದ ಸುಗಮಸಂಗೀತವೂ ಅರಮನೆಯ ದರ್ಬಾರ್ ಹಾಲಿನ ವೇದಿಕೆಯನ್ನೇರಿತು. ಹಾಗೆಯೇ ೧೯೯೧ ರಲ್ಲಿ ಗೋ.ರೂ. ಚೆನ್ನಬಸಪ್ಪನವರ ಕಾಲದಲ್ಲಿಯೇ 'ಕಾವ್ಯಕಾವೇರಿ' ಎಂಬ ಸುಗಮಸಂಗೀತ ಕಾರ್ಯಕ್ರಮವು ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಪ್ರತಿ ತಿಂಗಳು ನಡೆಯಲು ಪ್ರಾರಂಭವಾಯಿತು. ಇಡೀ ರಾಜ್ಯಾದಾದ್ಯಂತ ಕಾವೇರಿ ಹರಿದಂತೆ ಸುಗಮಸಂಗೀತ ಗಾಯನಸುಧೆ ಹರಿಯಬೇಕೆನ್ನುವ ಮುದ್ದುಕೃಷ್ಣರ ಸಂಕಲ್ಪ ಈಡೇರಿತು.

ಈ ಮಧ್ಯೆ ಸುಗಮಸಂಗೀತದ ಕೆಲ ಕಲಾವಿದರು ಅಪಘಾತದಿಂದ ನಿಧನರಾಗಿ ಅವರ ಎಳೆಯ ಕಂದಮ್ಮಗಳು ವಿದ್ಯಾಭ್ಯಾಸ, ಜೀವನ ನಿರ್ವಹಣೆಗಾಗಿ ಪರಿತಪಿಸುವ ಸನ್ನಿವೇಶಗಳು ಎದುರಾದವು. ಕೆಲವರು ಅಪಘಾತದಿಂದ ಕಾರ್ಯಕ್ರಮಗಳಿಗೆ ಹೋಗಲಾಗದೆ ಮನೆಯಲ್ಲಿಯೇ ಕೆಲಸವಿಲ್ಲದೆ ಉಳಿಯಬೇಕಾಯಿತು. ಅಂತಹ ಪರಿಸ್ಥಿತಿಯಲ್ಲಿ ಅರವಿಂದ್ ರೆಕಾರ್ಡಿಂಗ್ ಸ್ಟುಡಿಯೋವಿನ ಧ್ವನಿತಂತ್ರಜ್ಞರೂ, ಮಾಲೀಕರೂ ಆದ ಶ್ರೀ ಅರವಿಂಗ್ ಕಿಗ್ಗಾಲ್ ಅವರು ಎಲ್ಲಾ ಕಲಾವಿದರನ್ನೂ ಕಲೆ ಹಾಕಿ ನಿಧಿ ಸಂಗ್ರಹಿಸಿದರು. ಕಲಾವಿದರ ಬಾಳಿಗೆ ಆಸರೆಯಾಗಲೂ ಇತರರನ್ನೂ ಕೋರಿಕೊಂಡರು. ಇವರ ಆತ್ಮೀಯ ಗೆಳೆಯರಾದ ವೈ.ಕೆ. ಮುದ್ದುಕೃಷ್ಣ ಅವರ ಬಳಿ ಈ ಪ್ರಸ್ತಾಪ ಮಾಡಿ ತಾವು ಸಂಗ್ರಹಿಸಿದ ಮೊತ್ತವನ್ನು ಕಲಾವಿದರ ನಿಧಿಗಾಗಿ ನೀಡಿದರು. ಮೊದಲೇ ಸುಗಮಸಂಗೀತದ ಸಂಘಟಕ, ಮೇಲಾಗಿ ಹೃದಯವಂತರಾಗಿದ್ದ ಮುದ್ದುಕೃಷ್ಣ ಅವರು ಈ ಸಮಯದಲ್ಲಿಯೇ 'ಕಲಾವಿದರ ಕ್ಷೇಮಾಭಿವೃದ್ಧಿ ಸಂಘ' ವೊಂದನ್ನು ಸ್ಥಾಪಿಸಿಯೇ ಬಿಟ್ಟರು. ಅಶಕ್ತರಾದ ಕಲಾವಿದರೆಲ್ಲರಿಗೂ ಆಪತ್ಕಾಲದಲ್ಲಿ ಇದು ನೆರವಿಗೆ ಬಂದಿತು. ಶಕ್ತರಾದ ಕಲಾವಿದರು ಅಶಕ್ತ ಕಲಾವಿದರಿಗೆ ನೆರವು ನೀಡುವಲ್ಲಿ ಇದು ಬಹು ಮುಖ್ಯ ಪಾತ್ರವಹಿಸಿತು.

ಇದೇ ಸಂಘಟನೆಯನ್ನು ರಾಜ್ಯ ವ್ಯಾಪ್ತಿಯಲ್ಲಿ ಮಾಡಬೇಕೆನ್ನುವ ಯೋಚನೆಯಿಂದ, ವಿಸ್ತಾರಗೊಳಿಸಬೇಕು ಎನ್ನುವ ಯೋಜನೆಗಳಿಂದ 'ಕರ್ನಾಟಕ ಸುಗಮಸಂಗೀತ ಪರಿಷತ್ತು' ಎಂಬುದು ಮುದ್ದುಕೃಷ್ಣ ಅವರ ಕನಸಿನ ಕೂಸಾಗಿ ಸಾಕಾರಗೊಂಡಿತು. ೨೦೦೩ರ ಏಪ್ರಿಲ್ ತಿಂಗಳಲ್ಲಿ ಇದು ನಾಂದಿ ಹಾಡಿತು. ನಾಡಿನ ಶ್ರೇಷ್ಠಕವಿಗಳು, ಹಿರಿಯ ಕಿರಿಯ ಕಲಾವಿದರ ಸಮಾಲೋಚನೆಗಳಿಂದ ಇದು

ಪ್ರಾರಂಭವಾಯಿತು. 'ಸುಗಮಸಂಗೀತ'ದ ನಾಲ್ಕು ಯಶಸ್ವಿ ಸಮ್ಮೇಳನಗಳನ್ನು ಮಂಡ್ಯ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಬಳ್ಳಾರಿಯಲ್ಲಿ ಕ್ರಮವಾಗಿ ನಡೆಸಿತು. ನೂರಾರು ಸುಗಮಸಂಗೀತ ಶಿಬಿರಗಳನ್ನು ರಾಜ್ಯಾದ್ಯಂತ ಹಳ್ಳಿ ಹಳ್ಳಿಗಳಲ್ಲಿ ನಡೆಸಿತು. ಕವಿನಮನಗಳು, ವಿಚಾರ ಸಂಕಿರಣಗಳು ನಡೆದವು. ಮುದ್ದುಕೃಷ್ಣ ಅವರ ನೂರಾರು ಕನಸುಗಳು ಇದರಿಂದ ನನಸಾದವು. ವಿಶೇಷವಾಗಿ ಕದಂಬ ಉತ್ಸವ, ಹಂಪಿ ಉತ್ಸವ, ಕಿತ್ತೂರು ಉತ್ಸವ, ಲಕ್ಕುಂಡಿ ಉತ್ಸವ, ಹೊಯ್ಸಳೋತ್ಸವ, ಕರಾವಳಿ ಉತ್ಸವಗಳಲ್ಲಿ ಸುಗಮಸಂಗೀತ ಕಾರ್ಯಕ್ರಮವನ್ನು ಪ್ರಾರಂಭಿಸಿದ ಮುದ್ದುಕೃಷ್ಣ ಅವರು, ಸುಗಮಸಂಗೀತವನ್ನು ಸಾಂಸ್ಕೃತಿಕವಾಗಿ ಎತ್ತರಕ್ಕೇರಿಸಲು ಬಹುವಾಗಿ ಶ್ರಮಿಸಿದರು. ಅನೇಕ ಅಪವಾದಗಳಿಗೆ ಈಡಾದರೂ, ಯಾವುದಕ್ಕೂ ಜಗ್ಗದೆ ತಮ್ಮ ಸಮರ್ಥ ಸಂಘಟನಾ ಶೈಲಿಯಿಂದ, ಸ್ನೇಹಪರತೆಯಿಂದ, ಆತ್ಮೀಯತೆಯ ಮೋಡಿಯಿಂದ ಜನರನ್ನು ಗೆದ್ದುಕೊಂಡರು. ತಾವು ಕನ್ನಡ ಸಂಸ್ಕೃತಿಯ ನಿರ್ದೇಶಕರಾಗಿದ್ದಾಗಲೂ ಸರಳತೆ, ಸಜ್ಜನಿಕೆಯನ್ನೇ ಮೈಗೂಸಿಡಿಕೊಂಡ ಮುದ್ದುಕೃಷ್ಣ ಅವರು 'ಕನ್ನಡ ಭವನ'ದ ರೂವಾರಿಯಾದಂತೆ ಸುಗಮಸಂಗೀತ ಸಂಘಟನಾಕಾರರಿಗೊಂದು ಮಾದರಿಯಾದರು.

ಸುಗಮಸಂಗೀತದ ವೇದಿಕೆಯಲ್ಲಿ ಮತ್ತು ಧ್ವನಿ ಸುರುಳಿಗಳಲ್ಲಿ ಜನಪ್ರಿಯವಾದಂತೆ, ಅದರ ಬಗ್ಗೆ ವಿಚಾರಣ ಸಂಕಿರಣಗಳೂ, ಚಿಂತನೆಗಳೂ ನಡೆದವು. ಇಂತಹ ಎಲ್ಲ ಚಿಂತನೆಗಳಿಗೆ ಪೂರಕವಾದಂತೆ ಲೇಖನಗಳೂ, ಪುಸ್ತಕಗಳೂ, ಹೊರಬಂದವು. ಸಿ. ಅಶ್ವತ್ಥ್‌ರ 'ಸುಗಮಸಂಗೀತ' ಹೆಚ್.ಆರ್.ಲೀಲಾವತಿ ಅವರ 'ಸುಗಮಸಂಗೀತ ಒಂದು ಸಿಂಹಾವಲೋಕನ' ವೆಂಬ ಎರಡು ಪುಸ್ತಕಗಳನ್ನು ಸಂಗೀತ ನೃತ್ಯ ಅಕಾಡೆಮಿ ಹೊರತಂದಿತು. ಸುಗಮಸಂಗೀತದ ಸಂಗೀತ ನಿರ್ದೇಶಕೂ, ಲೇಖಕರೂ, ಉಪನ್ಯಾಸಕರೂ ಆಗಿದ್ದ ಜಯಶ್ರೀ ಅರವಿಂದ್ ಅವರು ಸಂಶೋಧನೆ ನಡೆಸಿ 'ಸುಗಮಸಂಗೀತ ಒಂದು ಸಮಗ್ರ ಅಧ್ಯಯನ' ವೆಂಬ ಮಹಾಪ್ರಬಂಧವನ್ನು ಹಂಪೆ ವಿಶ್ವವಿದ್ಯಾನಿಲಯ ಸಲ್ಲಿಸಿ ಡಾಕ್ಟರೇಟ್ ಪದವಿ ಪಡೆದರು. ಇದರಿಂದ ಸುಗಮಸಂಗೀತಕ್ಕೊಂದು ಶಾಸ್ತ್ರೀಯ ಅಧ್ಯಯನದ ದೃಷ್ಟಿ ಬಂದಿತಲ್ಲದೆ ಅದರ ಗೌರವ ಘನತೆಗಳು ಎತ್ತರಕ್ಕೇರಿದವು. ಸುಗಮಸಂಗೀತ ವಿಶ್ವವಿದ್ಯಾನಿಲಯದ ಆವರಣವನ್ನೂ ಪ್ರವೇಶಿಸಿ ಇತಿಹಾಸದಲ್ಲಿ ಹೊಸ ದಿಕ್ಕನ್ನು ತೆರೆಯಿತು. ಹಂಪೆ ವಿಶ್ವವಿದ್ಯಾನಿಲಯವೇ, ಸುಗಮಸಂಗೀತಕ್ಕೆ ಪ್ರಥಮ ಡಾಕ್ಟರೇಟ್ ಪದವಿ ನೀಡಿದ ಪ್ರಥಮ ವಿಶ್ವವಿದ್ಯಾನಿಲಯವೂ ಆಯಿತು. ಕನ್ನಡ ಸಂಗೀತ, ಸಂಸ್ಕೃತಿ, ಭಾಷೆಯ ಬೆಳವಣಿಗೆಗೆ ಅರ್ಥಪೂರ್ಣವಾಗಿ ಸ್ಪಂದಿಸುತ್ತಾ ಮುನ್ನಡೆಸಿತು.

<u>ಸುಗಮ ಸಂಗೀತ ಮತ್ತು ಸಂಘಟನಾ ಸಂಸ್ಥೆಗಳು</u>

**ಧ್ವನಿ ಸುಗಮಸಂಗೀತ ಕೇಂದ್ರ, ಬೆಂಗಳೂರು**

ಸುಗಮಸಂಗೀತ ಪ್ರಾರಂಭಿಕ ಹಂತದಲ್ಲಿ ರೆಡಿಯೋ ಮೂಲಕ ಸಂಘಟಿಸಿತು. ನಂತರ ಹಂತಹಂತವಾಗಿ ಬೆಳೆದು ಒಂದು ಚೌಕಟ್ಟಿಗೆ ಮಾರ್ಪಟ್ಟು ಧ್ವನಿಸುರುಳಿಯ ಒಳಗೆ ಇಳಿಯಿತು. ಅನಂತರ ದೃಶ್ಯ ಮಾಧ್ಯಮವಾದ ದೂರದರ್ಶನದೊಳಗೂ ತನ್ನ ಹೆಜ್ಜೆಗಳನ್ನು ಊರಿತು. ಹತ್ತಾರು ಜನಪ್ರಿಯ ಕಲಾವಿದರು ಬೇರೆ ಬೇರೆ ಮಾಧ್ಯಮಗಳ ಮೂಲಕ ಸುಗಮಸಂಗೀತ ಪ್ರಕಾರವನ್ನು ಬೆಳೆಸಲು ಪ್ರಯತ್ನಪಟ್ಟರು. ಆದರೆ ಎಲ್ಲಾ ಜನಪ್ರಿಯ ಕಲಾವಿದರಿಗೂ ಪ್ರತ್ಯೇಕತೆ ಇತ್ತು. ಎಲ್ಲರೂ ಒಂದಾಗಿ ಒಂದೇ ವೇದಿಕೆಯಲ್ಲಿ ಬರುತ್ತಿರಲಿಲ್ಲ. ಅಶ್ವಥ್, ಅನಂತಸ್ವಾಮಿ, ಕಸ್ತೂರಿ ಶಂಕರ್, ಬಿ.ಕೆ.ಸುಮಿತ್ರ, ಶಿವಮೊಗ್ಗ ಸುಬ್ಬಣ್ಣ, ರತ್ನಮಾಲ ಪ್ರಕಾಶ್, ಮಾಲತಿ ಶರ್ಮಾ, ಇವರೆಲ್ಲಾ ತಮ್ಮದೇ ಆದ ವೈಯುಕ್ತಿಕ ಕಾರ್ಯಕ್ರಮಗಳನ್ನು ನೀಡುತ್ತಿದ್ದರು. ಇವರೆಲ್ಲ ಒಂದೇ ವೇದಿಕೆಯಲ್ಲಿಹಾಡುವ ಸಂಘಟನೆಯನ್ನು ತಂದವರು ಶ್ರೀ ವೈ.ಕೆ. ಮುದ್ದುಕೃಷ್ಣ ಅವರು. ಅಶ್ವತ್ಥ್ ಅವರು ಸಂಕಲ್ಪಸಿದ್ದನ್ನು ಮುದ್ದುಕೃಷ್ಣ ಅವರು ಕಾರ್ಯರೂಪಕ್ಕೆ ತಂದರು. ೧೯೯೧ರಲ್ಲಿ ಧ್ವನಿ ಸುಗಮಸಂಗೀತ ಕೇಂದ್ರ ಸ್ಥಾಪಿತವಾಯ್ತು. ಮೈಸೂರಿನಿಂದ ಬೀದರ್‌ವರೆಗೂ ಹಾಡುತ್ತಾ ಸುಗಮಸಂಗೀತ ಯಾತ್ರೆ ಮಾಡಿದರು.

೧೯೯೩ರ ಕೊಪ್ಪಳ ಸಾಹಿತ್ಯ ಸಮ್ಮೇಳನದಲ್ಲಿ ಆವತ್ತಿನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಗೊ.ರು. ಚೆನ್ನಬಸಪ್ಪ ಅವರೊಡನೆ ಸುದೀರ್ಘವಾದ ಚರ್ಚೆ ಮಾಡಿ ನಾಡಗೀತೆಯ ಧ್ವನಿಸುರುಳಿ 'ಹಚ್ಚೇವು ಕನ್ನಡದ ದೀಪ' ತರುವುದರ ಮೂಲಕ ಸಾಹಿತ್ಯ ಪರಿಷತ್ತಿಗೂ

ಸುಗಮಸಂಗೀತಕ್ಕೂ ಇದ್ದ ನಂಟನ್ನು ಭದ್ರವಾಗಿ ಪಡೆದುಕೊಂಡರು. ಆದಾ ಮೇಲೆ ಪ್ರತಿ ಸಾಹಿತ್ಯ ಸಮ್ಮೇಳನದಲ್ಲಿ ಸುಗಮಸಂಗೀತ ಅದರ ಅವಿಭಾಜ್ಯ ಅಂಗವಾಗಿ ನಡೆದುಕೊಂಡು ಬಂದಿತು. 'ಧ್ವನಿ ಸಂಸ್ಥೆ ಸುಗಮಸಂಗೀತದ ಅಭಿವೃದ್ಧಿಗಾಗಿ ನಾನಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು.

**ಸುಗಮಸಂಗೀತ ಅಕಾಡೆಮಿ ಮೈಸೂರು**

ಸುಗಮಸಂಗೀತದ ಮುನ್ನಡೆಗಾಗಿ ೧೯೮೫ರಲ್ಲಿ ಪ್ರಾರಂಭವಾದ ಈಸಂಸ್ಥೆಯ ನಿರ್ದೇಶಕರು ಹೆಚ್.ಆರ್.ಲೀಲಾವತಿ ಮತ್ತು ಅವರ ಯಜಮಾನರಾದ ರಘುರಾಂ, ನೂರಾರು ಗಾಯಕ ಗಾಯಕಿಯರಿಗೆ ಗಾಯನದಲ್ಲಿ ತರಬೇತಿ ನೀಡಿ, ವೇದಿಕೆ ಕಲ್ಪಿಸಿರುವುದಲ್ಲದೆ ಹೊಸ ಪ್ರತಿಭೆಗಳ ಗಾಯನದಲ್ಲಿ ಅನೇಕ ಧ್ವನಿ ಸುರುಳಿಗಳನ್ನು ತಂದಿದೆ. ಕರ್ನಾಟಕದ ಎಲ್ಲಾಮೂಲೆ ಮೂಲೆಗೂ ಸುಗಮಸಂಗೀತವನ್ನು ಹಂಚುತ್ತಾ ಬಂದಿರುವ ಅಕಾಡೆಮಿ ಕಲಾವಿದರು ಹೊರದೇಶಗಳಲ್ಲೂ ಸುಗಮಸಂಗೀತವನ್ನು ಪರಿಚಯಸಿದ್ದಾರೆ. ಉದ್ಯಮಿ ಕೆ.ವಿ. ಮೂರ್ತಿ ಅಧ್ಯಕ್ಷರಾಗಿರುವ ಈ ಸಂಸ್ಥೆ ೫೦೦ ಜನ ಸದಸ್ಯರನ್ನು ಹೊಂದಿದೆ.

**ರಮ್ಯ ಕಲ್ಚರಲ್ ಅಕಾಡೆಮಿ (೯-೧೧-೧೯೯೩)**

ಸುಗಮಸಂಗೀತದ ಮುನ್ನೆಡೆಯೊಂದಿಗೆ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಆಸಕ್ತಿಗಳನ್ನು ಹೊಂದಿರುವ ಈ ಸಂಸ್ಥೆಯ ಅಧ್ಯಕ್ಷ ಎಸ್.ಬಾಲಿ, ಖ್ಯಾತ ಲೇಖಕರ ಪುಸ್ತಕ ಬಿಡುಗಡೆಯಲ್ಲದೆ 'ಗೀತಧಾರೆ' 'ಗೀತಮಾಲಿಕೆ' ಎಂಬಭಾವಗೀತೆಗಳ ಕಾರ್ಯಕ್ರಮಗಳ ಮೂಲಕ ನಾಡಿನ ಪ್ರಸಿದ್ಧ ಕವಿಗಳ ರಚನೆಯನ್ನು ಹಿರಿಯ ಮತ್ತು ಕಿರಿಯ ಗಾಯಕ-ಗಾಯಕಿಯರಿಂದ ಪ್ರಸ್ತುತಪಡಿಸುತ್ತ ಬಂದಿದೆ. 'ಉಯ್ಯಾಲೆ' ಹಾಗೂ 'ತಂಗಾಳಿ' ಎಂಬ ಧ್ವನಿಸುರಳಿಯನ್ನು ಹೊರತಂದಿದ್ದಾರೆ. ಸಂಗೀತ ನಿರ್ದೇಶಕರಾಗಿದ್ದಾರೆ.

**ಸಂಗೀತ ಗಂಗಾ**

ಗಾಯಕ ಸಂಗೀತ ನಿರ್ದೇಶಕ ಜಿ.ವಿ. ಅತ್ರಿ ಸ್ಥಾಪಕ ಅಧ್ಯಕ್ಷರಾಗಿದ್ದ 'ಸಂಗೀತಗಂಗಾ' ಮಿಕ್ಕ ಎಲ್ಲಾ ಸಂಘಟನಾಕಾರರಿಗೂ ಸ್ಫೂರ್ತಿಯಾಯಿತು. ಕವಿ ಕಾವ್ಯಗಳ ಬಗೆಗೆ ವಿಶೇಷ ಜ್ಞಾನವಿದ್ದ ಅತ್ರಿಯವರು ಮೊಟ್ಟ ಮೊದಲ ಕನ್ನಡ ಸಂಗೀತ ಸಮ್ಮೇಲನ ಮಾಡಿದವರು. ಮೊದಲ ಮೂರು ವರುಷ ಬೆಂಗಳೂರಿನಲ್ಲಿ. ನಂತರ ಧಾರವಾಡ, ಗುಲ್ಬರ್ಗಾ ಮತ್ತು ಚಿಕ್ಕಮಗಳೂರಿನಲ್ಲಿ ಇದು ಮುಂದುವರೆಯಿತು. ೧೯೯೯ರಲ್ಲಿ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿನ ಖೈದಿಗಳಿಗಾಗಿ ನಡೆಸಿಕೊಟ್ಟ 'ಕಲಾವಿಕಾಸ' ಎಂಬ ಒಂದು ವಾರದ ಕಮ್ಮಟ ಅಪೂರ್ವವಾದದ್ದು. ಅತ್ರಿಯವರ ಅಕಾಲಿಕ ಮರಣದ ನಂತರ ಅವರ ಸೋದರಿ ಈ ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ.

**ಹೊಂಬಾಳೆ (೧೯೯೫)**

ಪ್ರತಿಭಾವಂತರಾದ ನವಗಾಯಕ ಗಾಯಕಿಯರಿಗೆ ವೇದಿಕೆ ಕಲ್ಪಿಸಿದೆ. ಪ್ರತಿಭಾ 'ಹೊಸ ಚಿಗುರು ಹಳೇಬೇರು', 'ಭಾವಾಂಜಲಿ', 'ಕಾವ್ಯಸಂಭ್ರಮ', 'ಅನಂತನಮನ' - ಮುಂತಾದ ನಿರಂತರ ಕಾರ್ಯಕ್ರಮಗಳ ಮೂಲಕ ಈ ಸಂಸ್ಥೆ ತನ್ನ ಉದ್ದೇಶ ಸಾಧಿಸುತ್ತಾ ಮುನ್ನಡೆದಿದೆ. ಸುಮಾರು ೯೦ಕ್ಕೂ ಹೆಚ್ಚು ಜನ ಗಾಯಕ ಗಾಯಕಿಯರನ್ನು ಸುಗಮಕ್ಷೇತ್ರಕ್ಕೆ ಪರಿಚಯಿಸಿದೆ. 'ಚಿಂವ್ ಚಿಂವ್ ಗುಬ್ಬಿ'(ಮಕ್ಕಳ ಗೀತೆಗಳು) ಅಪರಂಜಿ (ಜನಪದ ಗೀತೆಗಳು) ಭಾವಾಂಜಲಿ, ಭಾವಾಂಕುರ, ಆಲಾಪ ಹಾಗೂ ಪ್ರಣತಿ (ಭಾವಗೀತೆಗಳು) ಧ್ವನಿಸುರುಳಿಗಳನ್ನು ಹೊರತಂದಿದೆ. ಸ್ಥಾಪಕ ಅಧ್ಯಕ್ಷ ಹೆಚ್. ಫಾಲ್ಗುಣ ಅವರು ಸುಗಮಸಂಗೀತ ಕ್ಷೇತ್ರದಲ್ಲಿ ತೊಡಗಿರುವ ಎಲ್ಲ ಸಾಹಿತಿ, ಸಂಗೀತ ನಿರ್ದೇಶಕ, ಗಾಯಕಿ, ಗಾಯಕಿ, ವಾದ್ಯಗಾರ, ಧ್ವನಿಸುರುಳಿ ಸಂಸ್ಥೆ, ಸ್ಟುಡಿಯೋ, ಮುಂತಾದವರ ವಿವರ ಮತ್ತು ವಿಳಾಸಗಳನ್ನೊಳಗೊಂಡ 'ಪ್ರತಿಭಾ ಸಂಕುಲ' ಎಂಬ ಕೈಪಿಡಿಯನ್ನು ಹೊರತಂದಿದ್ದಾರೆ.

ವಿಶೇಷವಾಗಿ ಸುಗಮಸಂಗೀತಕ್ಕೆ ಮೀಸಲಾದ ಪ್ರಪ್ರಥಮ ಮಾಸಪತ್ರಿಕೆಯನ್ನು ಈ ಸಂಸ್ಥೆ ಹೊರತುರುತ್ತಿರುವುದು ಅಪೂರ್ವವಾಗಿದೆ. ಸುಗಮಸಂಗೀತದ ಹಿರಿಯ ವಾದ್ಯಗಾರರಿಗೆ 'ಕಲಾಕೋವಿದ' ಹಾಗೂ ಸುಗಮಸಂಗೀತದ ಧ್ವನಿಸುರುಳಿಗಳಲ್ಲಿನ ಶ್ರೇಷ್ಠರಿಗೆ 'ಸ್ವರಮಂದಾರ' ಪ್ರಶಸ್ತಿಗಳನ್ನು ಪ್ರತಿ ವರ್ಷ ನೀಡುತ್ತಾ ಬಂದಿದೆ.

**ಆದರ್ಶ ಸುಗಮಸಂಗೀತ ಅಕಾಡೆಮಿ**

೨೫-೮-೧೯೯೭ರಲ್ಲಿ ಪ್ರಾರಂಭವಾದ ಈ ಅಕಾಡೆಮಿಯ ಅಧ್ಯಕ್ಷರು ಕೃಷ್ಣಮೂರ್ತಿ ಕಿಕ್ಕೇರಿ. ಗಾಯನ-ವಾದ್ಯ ವಾದನದಲ್ಲಿ ತರಬೇತಿ ನೀಡುತ್ತಿದೆ. 'ಗೀತಾಂಜಲಿ' ಎಂಬ ಖ್ಯಾತ ಕವಿಗಳ ಗೀತೆಗಳನ್ನು ಪ್ರಕಟಿಸಿದೆ. ಕರೀಂಖಾನ್ ಅವರ ಹೆಸರಿನಲ್ಲಿ 'ಜಾನಪದಶ್ರೀ' ಪ್ರಶಸ್ತಿಯನ್ನು ಮೂರು ವರ್ಷ ಕೊಟ್ಟಿದೆ. ಕರ್ನಾಟಕ ಸುಗಮಸಂಗೀತ ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದು ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

**ಉಪಾಸನಾ**

ಗಾಯಕ, ಸಂಯೋಜಕ, ಜೆ. ಮೋಹನ್, ಇದರ ಅಧ್ಯಕ್ಷರು. ಉದಯೋನ್ಮುಖರಿಗೆ ಸುಗಮಸಂಗೀತ ಗಾಯನ ಹಾಗೂ ವಾದ್ಯ ವಾದನಲ್ಲಿ ತರಬೇತಿ ನೀಡುತ್ತಿದೆ. 'ಉಪಾಸನಾ' ಎಂಬ ಪ್ರಶಸ್ತಿಯನ್ನು ಜಿ.ವಿ. ಅತ್ರಿಯವರ ನೆನಪಾಗಿ ನೀಡುತ್ತಿದೆ. ಸುಗಮಸಂಗೀತ ಶಿಬಿರ, ಮನೆಯಂಗಳದಲ್ಲಿ ಸುಗಮಸಂಗೀತ ಇದರ ಹೆಗ್ಗಳಿಕೆ.

**ಸ್ವರಸುರಭಿ ಸಂಸ್ಥೆ**

ಬೆಂಗಳೂರಿನ ಯುವ ಗಾಯಕ ಶ್ರೀಧರ್ ಅಯ್ಯರ್ ಅವರ ಕನಸಿನ ಕೂಸೆ ಸ್ವರಸುರಭಿ ಸಂಸ್ಥೆ. ಯುವಕಲಾವಿದರಿಗೊಂದು ವೇದಿಕೆಯನ್ನು ಕಲ್ಪಿಸುವುದಕ್ಕೋಸ್ಕರ ಈ ಸಂಸ್ಥೆ ೨೦೦೪ ಆಗಸ್ಟ್ ೧೨ರಂದು ಪ್ರಾರಂಭವಾಯಿತು. ಜಿ.ವಿ. ಅತ್ರಿಯವರ ನಿಕಟ ಸ್ನೇಹಿತರೂ ಶಿಷ್ಯರೂ ಆಗಿದ್ದ ಶ್ರೀಧರ್ ಪ್ರಾಮಾಣಿಕ, ಕ್ರಿಯಾಶೀಲ ಕಲಾವಿದರು. ಔಷಧಿ ಕಂಪನಿಯೊಂದರಲ್ಲಿ ಹಿರಿಯ ಅಧಿಕಾರಿಗಳಾಗಿರುವ ಶ್ರೀಧರ್ ಒಲಿದದ್ದು 'ಸುಗಮಸಂಗೀತ'ಕ್ಕೆ ತಮ್ಮ ಸಂಸ್ಥೆಯ ಮೂಲಕ 'ಸುಗಮಸಂಗೀತ' ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯುವ ಪ್ರತಿಭೆಗಳಿಗೆ ವೇದಿಕೆ ನೀಡುತ್ತಿದ್ದಾರೆ. ಡಾ|| ಜಯಶ್ರೀ ಅರವಿಂದ್ ಅವರ ಸಂಗೀತ ನಿರ್ದೇಶನದಲ್ಲಿ ಮಕ್ಕಳಿಗಾಗಿಯೋಜಿಸಿದ 'ಹಾಡುತ್ತೀವಿರಾಗ' ಕಾರ್ಯಕ್ರಮದ ಯಶಸ್ಸು ಇವರ ಬೆನ್ನಿಗಿದೆ. ಕರ್ನಾಟಕದ ಎಲ್ಲಜಿಲ್ಲೆ, ತಾಲ್ಲೂಕುಗಳಲ್ಲಿ 'ಮಕ್ಕಳಿಗಾಗಿ ಕವಿತಾಗಾಯನ ತರಬೇತಿ ಶಿಬಿರವನ್ನು ನಡೆಸುತ್ತಾ ಸುಗಮಸಂಗೀತ ಗಾಯನಕ್ಕೆ ಸುಮಾರು ೮೦೦ ಮಕ್ಕಳನ್ನು ತೊಡಗಿಸಿದ್ದಾರೆ. 'ಸುಗಮಸಂಗೀತದ' ಮೂಲಕ ಮಕ್ಕಳಲ್ಲಿ ವ್ಯಕ್ತಿತ್ವ ವಿಕಸನ ಪ್ರಜ್ಞೆಯನ್ನು ಮೂಡಿಸುತ್ತಿದ್ದಾರೆ.

**ಚಿಕ್ಕಮಗಳೂರು ಸಂಗೀತಗಂಗಾ**

೧೯೯೯ರಲ್ಲಿ ಜಿ.ವಿ. ಅತ್ರಿಯವರ ಪ್ರೇರಣೆಯಿಂದ ಪ್ರಾರಂಭವಾದ ಈ ಸಂಸ್ಥೆಯ ಕಾರ್ಯದರ್ಶಿಗಳು ಮಂಜುನಾಥ್ ಕಾಮತ್. ಅಧ್ಯಕ್ಷರು ದಿ|| ಜೆ.ಪಿ. ಕೃಷ್ಣೇಗೌಡರು. ಸುಗಮಸಂಗೀತಾಸಕ್ತರ ನೂರಾರು ಜನ ಬಳಗವನ್ನು ಹೊಂದಿರುವ ಈ ಸಂಸ್ಥೆಯ ಉದ್ದೇಶ, ಸುಗಮಸಂಗೀತದ ಕಲಿಕೆ ಮತ್ತು ಪ್ರಚಾರವಾಗಿದೆ. ಕವಿನಮನ, ಕಾವ್ಯವಾಣಿಗಳ ಮೂಲಕ ಕನ್ನಡದ ಎಲ್ಲ ಕವಿಗಳ ವಿತೆಗಳ ಗಾಯನ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗಿದೆ. ಪ್ರತಿ ತಿಂಗಳೂ ಪ್ರಸಿದ್ಧ ಹಿರಿಯ ಸುಗಮಸಂಗೀತ ಕಲಾವಿದರಿಂದ ತರಬೇತಿ ಶಿಬಿರ ಇಡಿಸಿ ಹೊಸ ಹೊಸ ಕವಿಗೀತೆಗಳನ್ನು ಕಲಿಸುತ್ತಾ ಬಂದಿದೆ. ಭಾವಗೀತೆ, ರಂಗಗೀತೆ, ದಾಸರಪದ, ಶಿಶುಗೀತೆ, ಜನಪದಗೀತೆ, ಸಂಪ್ರದಾಯ ಹಾಡುಗಳು ತರಬೇತಿ ಶಿಬಿರ ನಡೆಸುತ್ತಾ ನೂರಾರು ಹಿರಿಯ ಕಿರಿಯ ಗಾಯಕರನ್ನು 'ಸುಗಮಸಂಗೀತ' ಗಾಯಕರನ್ನಾಗಿ

ರೂಪುಗೊಳಿಸಿದೆ. ಕಲೆ, ಸಂಸ್ಕೃತಿ, ಸಾಹಿತ್ಯಗಳು ಮುಪ್ಪುರಿಗೊಂಡ ಈ ಸಂಸ್ಥೆ ಸಮಾಜದ ಸರ್ವತೋಮುಖವಾದ ಬೆಳವಣಿಗೆಗೆ ಸಹಕರಿಸುತ್ತಿದೆ. ಕರ್ನಾಟಕ ಸುಗಮಸಂಗೀತ ಪರಿಷತ್ತಿನ ಜೊತೆ ಕೈಜೋಡಿಸಿ, ೨೦೦೫ರ ಫೆಬ್ರವರಿ ೧೨ ಮತ್ತು ೧೩ರಂದು 'ರಾಜ್ಯಮಟ್ಟದ ಗೀತೋತ್ಸವ'ವನ್ನು ಅಭೂತಪೂರ್ವ ಯಶಸ್ಸಿನಲ್ಲಿ ನೆರವೇರಿಸಿದ ಕೀರ್ತಿ ಈ ಸಂಸ್ಥೆಗೆ ಸೇರುತ್ತದೆ.

**ಪ್ರತಿಭಾಂಜಲಿ**

೨೦೦೧ ಫೆಬ್ರವರಿ ೮ರಂದು ಮಂಡ್ಯದಲ್ಲಿ ಪ್ರಾರಂಭವಾದ ಈ ಸಂಸ್ಥೆ ಸುಗಮಸಂಗೀತವನ್ನು ಸಮಾಜಮುಖಿಯನ್ನಾಗಿ ಮಾಡುವ ಆಕಾಂಕ್ಷೆಯಿಂದ ಪ್ರಾರಂಭವಾಯಿತು. ಯುವ ಗಾಯಕ ಡೇವಿಡ್ ಸೂತ್ರ ಹಿಡಿದಿರುವ ಈ ಸಂಸ್ಥೆಯ ಮೊದಲ ಕಾರ್ಯಕ್ರಮವೇ 'ಕುವೆಂಪು ಅವರ 'ಮನುಜಮತ ವಿಶ್ವಪಥ'ದ ಸಂದೇಶವಾಗಿತ್ತು. ಸುಗಮಸಂಗೀತದ ಶಿಬಿರಗಳು, ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದ ಈ ಶಾಲೆಯಲ್ಲಿ ಇದುವರೆವಿಗೆ ೭೦೦ ಕಲಾವಿದರೂ ಭಾಗವಹಿಸಿದ್ದಾರೆ. ಯುವ ಕಿರಿಯ ಹಿರಿಯರಾದಿಯಾಗಿ ಭಾಗವಹಿಸಿದ್ದಾರೆ. 'ಕೂಡಲ ಸಂಗಮ' ವಚನಗಳಿಂದ ಹಿಡಿದು ನಾಡಗೀತೆಯ ಸಮೂಹ ಗೋಷ್ಠಿ, ಗಾಯನವನ್ನು ನಡೆಸಲಾಗಿದೆ. 'ಶಾಲೆಗೊಂದು ಸುಗಮಸಂಗೀತ'- ವಿಶೇಷ ಕಾರ್ಯಕ್ರಮದ ರೂವಾರಿಯಾಗಿ ಡೇವಿಡ್ ಪ್ರತಿಶಾಲೆಯಲ್ಲೂ ಸುಗಮಸಂಗೀತ ಪ್ರಜ್ಞೆಯನ್ನು ಮೂಡಿಸಿದ್ದಾರೆ. ಮನೆಯಿಂದ ಮನೆಗೆ ಸುಗಮಸಂಗೀತವೆಂಬ ನಿರಂತರ ಹದಿಮೂರು ತಿಂಗಳು ಗಾಯನ ಕಾರ್ಯಕ್ರಮಗಳನ್ನು ಪ್ರಖ್ಯಾತರಿಂದ ಹವ್ಯಾಸಿಗಳವರೆಗೆ ನಡೆಸಿಕೊಂಡು ಬಂದಿದ್ದಾರೆ. ಮಂಡ್ಯದ ಸ್ಥಳೀಯ ಪ್ರತಿಭೆಗಳಿಗೆ ಕರ್ನಾಟಕ ಹಿರಿಯರೊಂದಿಗೆ ಅವಕಾಶ ನೀಡಲಾಗಿದೆ. ಮಕ್ಕಳ ದಿನಾಚರಣೆಯಂದು ಮತ್ತು ನಾಡಹಬ್ಬಗಳಂದು ಕವಿಕಾವ್ಯ ಗಾಯನ, ಕನ್ನಡವಾಣಿ. 'ಹಾಡುವೆವು ನಿಮಗಾಗಿ' ಸುಗಮಸಂಗೀತ ಗಾಯನ ಕಾರ್ಯಕ್ರಮ 'ಅಷ್ಟಕವಿ ಗೀತೋತ್ಸವ-ಮುಂತಾದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ (೨೦೦೬). ಮಂಡ್ಯಟೆಲಿವಿಷನ್ ನೆಟ್‌ವರ್ಕ್‌ಪ್ರಸಾರದಲ್ಲಿ 'ಮಂಡ್ಯ ಪ್ರತಿಭಾಂಜಲಿ ಸರಿಗಮಪ' ಎಂಬ ಸುಗಮಸಂಗೀತ ಸ್ಪರ್ಧೆಯನ್ನು ನಡೆಸುತ್ತಿದ್ದಾರೆ.

**ಸಪ್ತಸ್ವರ ಸುಗಮಸಂಗೀತ ಶಾಲೆ**

ಶ್ರೀಮತಿ ಜ್ಯೋತಿ ಅನಂತರಾಮು ೨೦೦೦ನೇ ಜನವರಿಯಲ್ಲಿ ಬೀರೂರಿನಲ್ಲಿ ಪ್ರಾರಂಭಿಸಿ ನಡೆಸುತ್ತಿರುವ ಸುಗಮಸಂಗೀತ ಶಾಲೆಯಲ್ಲಿ ಶಾಸ್ತ್ರೀಯ ಸಂಗೀತ ಮತ್ತು ತಬಲ ವಾದನಗಳನ್ನು ಕಲಿಸುತ್ತಿದೆ. ಈಗ್ಗೇ ಆರು ವರುಷಗಳಿಂದ ನೂರಾರು ಮಕ್ಕಳು, ಮಹಿಳೆಯರು ಸುಗಮಸಂಗೀತ ಕಲಿಯುತ್ತಿರುವ 'ಸಪ್ತಸ್ವರ ಸಂಗೀತ ಶಾಲೆ'ಯಲ್ಲಿ ಸುಗಮಸಂಗೀತಕ್ಕೆ ಆಧಾರವಾಗಿ ಬೇಕಾದ ಶಾಸ್ತ್ರೀಯ ಸಂಗೀತವನ್ನೂ ಕಲಿಸಲಾಗುತ್ತಿದೆ. ಪ್ರಸಿದ್ಧ ಸುಗಮಸಂಗೀತಗಾರರಿಂದ ಸುಗಮಸಂಗೀತ ತರಬೇತಿ ಶಿಬಿರವನ್ನು ವರುಷ ವರುಷವೂ ನಡೆಸಲಾಗುತ್ತಿದೆ. ಗೃಹಿಣಿಯರಿಗೂ ಸಂಪ್ರದಾಯಗೀತೆ ಮತ್ತು 'ಸುಗಮಸಂಗೀತ'ವನ್ನು ಕಲಿಸಿಕೊಡುತ್ತಿರುವ ಜ್ಯೋತಿ ಅನಂತರಮು ಅವರು ಶಾಸ್ತ್ರೀಯ ಮತ್ತು ಸುಗಮಸಂಗೀತ ಗಾಯನದಲ್ಲಿ ವಿಶೇಷ ಪರಿಣತಿ ಪಡೆದಿದ್ದು ಬೀರೂರಿನಂತಹ ಸಣ್ಣ ಊರಿನಲ್ಲಿಯೂ ಕ್ರಿಯಾಶೀಲತೆಯನ್ನು ತೋರಿಸಿದ್ದಾರೆ.

**ಸಹ್ಯಾದ್ರಿ ಸುಗಮಸಂಗೀತ ಅಕಾಡೆಮಿ:** ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ಎಸ್.ಬಿ. ಶಿವಲಿಂಗಪ್ಪನವರು ಸ್ಥಾಪಿಸಿದ 'ಸಹ್ಯಾದ್ರಿ ಸುಗಮಸಂಗೀತ' ಅಕಾಡೆಮಿ ಸುಗಮಸಂಗೀತವನ್ನು ಕಿರಿಯರಿಗೆ, ಯುವಕರಿಗೆ ಕಲಿಸುತ್ತಾ ಬೆಳೆದ ಸಂಸ್ಥೆಯಾಗಿದೆ. ಕೋಮು ಸೌಹಾರ್ದತೆಯ ಬಂಡಾಯ ಗೀತೆಗಳನ್ನು ಹಾಡುತ್ತಾ, ಜನ ಮನ್ನಣೆ ಪಡೆದಿದೆ. ನೂರಾರು ಸುಗಮಸಂಗೀತ ಕಾರ್ಯಾಗಾರಗಳನ್ನು ಕಳೆದ ಆರು ವರುಷಗಳಿಂದ ನಡೆಸಿಕೊಂಡು ಬಂದಿದೆ.

**ಜೇನುಗೂಡು :** ಜಾವಗಲ್ಲಿನ ವಸಂತ್ ಕುಮಾರ್ ಮತ್ತು ಮಿತ್ರರು ಪ್ರಾರಂಭಿಸಿದ ಈ ಸಂಸ್ಥೆ, ಸುಗಮಸಂಗೀತ ಮತ್ತು ಸಂಸ್ಕೃತಿಯ ಪ್ರಸರಣಕ್ಕಾಗಿ ಕಾರ್ಯಯುತವಾಗಿದೆ. ಮಕ್ಕಳಿಗೆ ಸುಗಮಸಂಗೀತ ಶಿಬಿರಗಳನ್ನು ಏರ್ಪಡಿಸುತ್ತಾ ಮಹಾನ್ ಕವಿಗಳ ಶತಮಾನ

ದಿನೋತ್ಸವಗಳನ್ನು ಆಚರಿಸುತ್ತಾ ಕವಿ, ಕಾವ್ಯ ಪ್ರಚಾರಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ೧೦೦೩ರ ಮಾರ್ಚ್ ತಿಂಗಳಲ್ಲಿ ಪ್ರಾರಂಭವಾದ ಈ ಸಂಸ್ಥೆ ಯುವ ಕಲಾವಿದರಿಗೆ 'ಅರಳುಮಲ್ಲಿಗೆ ಪ್ರಶಸ್ತಿ'ಯನ್ನು ನೀಡುತ್ತಾ ಬಂದಿದೆ. ಕಳಪೆ ದರ್ಜೆಯ ಕ್ಯಾಸೆಟ್‌ಗಳಿಗೆ ವಿರೋಧಿಸುತ್ತ, ಉತ್ತಮ ಸಂಸ್ಕೃತಿ ಪ್ರಸಾರಕ್ಕೆ ಟೊಂಕ ಕಟ್ಟಿ ನಿಂತಿದೆ. ೩೬ ಜನ ಯುವಕಲಾವಿದ, ಕಾರ್ಯಕರ್ತರು ಕೂಡಿ ಕಲೆತಿರುವ ಈ ಸಂಸ್ಥೆ ಜಾವಗಲ್‌ನ ಪ್ರಖ್ಯಾತ ಸಂಸ್ಥೆ ಎನ್ನಿಸಿದೆ. ಕ್ರಿಯಾಶೀಲವೂ, ಸಮಾಜ ಮುಖಿಯೂ ಆಗಿ ಸುಗಮಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ ಮುಂದುವರೆಯುತ್ತಿದೆ.

ಮೇಲ್ಕಂಡ ಶಾಲೆ ಸಂಸ್ಥೆಗಳೇ ಅಲ್ಲದೆ ಬಿ.ಕೆ. ಸುಮಿತ್ರ ಅವರ 'ಆರಾಧನಾ' ಎಸ್. ಸೋಮಸುಂದರಂ ಅವರ 'ಗಾನಸುಧಾ', ಮಾಲತಿಶರ್ಮರ 'ವಿಕಸನಾ' ರಾಜ ಅನಂತಸ್ವಾಮಿ ಅವರ 'ಮೈಸೂರು ಅನಂತಸ್ವಾಮಿ ಸುಗಮಸಂಗೀತ ಅಕಾಡೆಮಿ' ಗಾಯತ್ರಿ ಕೇಶವಮೂರ್ತಿ ಅವರ 'ಪಂಚಾಮೃತ' ಮುಂತಾದವು ಸುಗಮಸಂಗೀತದ ಪ್ರಸಾರಕ್ಕೆ ಶ್ರಮಿಸುತ್ತಾ ಸುಗಮಸಂಗೀತದ ಸಂಘಟನೆಗೆ ಪ್ರತ್ಯಕ್ಷ ಪರೋಕ್ಷವಾಗಿ ಆಧಾರವಾಗಿವೆ.

* * *

# ಅಧ್ಯಾಯ ೧೦ - ಸುಗಮಸಂಗೀತ ಮತ್ತು ರಾಗ ಸಂಯೋಜನೆ

ಇಂದು ಸುಗಮಸಂಗೀತ ನೆಲೆ ನಿಂತಿರುವುದಕ್ಕೆ ಅದರ ಜನಪ್ರಿಯತೆ ಮತ್ತು ಅದರ ಜನಪರತೆಯೇ ಕಾರಣವಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ನಿಜವಾದ ಕವಿತೆ ಜನಜೀವನದ ಪ್ರತಿಬಿಂಬವೂ ಗತಿಬಿಂಬವೂ ಆಗುತ್ತಾ ಗೀತದ ನೆರವಿನಿಂದ ಸಹಜ ಸುಂದರವೂ ಆಗಿರುವುದರಿಂದ ಜನಸಾಮಾನ್ಯರ ಬಾಯಲ್ಲಿ ಉಳಿದು ಮನಸ್ಸಿನೊಳಗೆ ಇಳಿದಿದೆ. ಕಿವಿಯಿಂದ ಕಿವಿಗೆ ಕೇಳುತ್ತಾ, ಕಾಲದ ಅಲೆಯಲ್ಲಿ ಉರುಳುತ್ತಾ, ಅರಳುತ್ತಾ, ಬಂದಿದೆ. ದೈನಂದಿನ ಭಾಷೆಯ ಆಡುಮಾತಿನ ಮೋಡಿಯಿಂದ ಆಕರ್ಷಿಸುತ್ತಿದೆ. "ಪುಸ್ತಕದೊಳಗಿನ ಭಾವಗೀತೆ ಅರಿಬಿರಿದ ಮೊಗ್ಗು. ಅದು ಸಮರ್ಥ ಪುಷ್ಪವಾಗುತ್ತದೆ' - ಎಂದ ಲಕ್ಷ್ಮೀನಾರಾಯಣಭಟ್ಟರ ಮಾತು ಸುಗಮಸಂಗೀತಕ್ಕೆ ಹಿಡಿದ ಕನ್ನಡಿಯಾಗಿದೆ. ಕವಿತೆಯ ಸಂಗೀತ ನಿರ್ದೇಶಕ ಮತ್ತು ಹಾಡುವ ಗಾಯಕ-ಇಬ್ಬರ ಹೊಣೆಗಾರಿಕೆಯೂ ಇದರಿಂದ ಮನದಟ್ಟಾಗುತ್ತದೆ. ಸುಗಮಸಂಗೀತದ ಸಂಯೋಜನೆಯಲ್ಲಿ ರಾಗ, ಸರಳೀಕೃತವಾಗಿ ಕವಿತೆಯೊಂದಿಗೆ ನೆರಳಾಗಿ ಹರಿಯಬೇಕಲ್ಲದೆ, ಪಾಂಡಿತ್ಯದ ಆಡಂಬರದ ಯಾವ ಪ್ರದರ್ಶನವನ್ನು ಮಾಡಬಾರದು. ರಾಗ ಅಥವಾ ತಾಳದ ಲೆಕ್ಕಾಚಾರ ಮುಖ್ಯವಲ್ಲ. ರಾಗದ ಭಾವಮೋಡಿಯಲ್ಲಿ ಕವಿತೆಯನ್ನು ಹೊಸ ರಾಗಾನುಭವದಲ್ಲಿ ಅನಾವರಣಗೊಳಿಸಿ ಕಟ್ಟಿ ಕೊಡುವುದೇ ಸಂಗೀತ ಸಂಯೋಜಕನ ಜವಾಬ್ದಾರಿಯಾಗಿದೆ. ಕವಿತೆಯ ಅನುಭವ ಮೊದಲು ಸಂಯೋಜಕನಿಗೆ, ನಂತರ ಗಾಯಕನಿಗೆ ಆಗಬೇಕು. ಆಗ ಮಾತ್ರ ಕವಿತೆಗೆ ಯುಕ್ತವಾದ ರಾಗಸಂಯೊಜನೆಯಾಗುತ್ತದೆ. ಸುಗಮಸಂಗೀತದಲ್ಲಿ ಕವಿತೆ ಮತ್ತು ಸಂಗೀತ, ಈ ಎರಡರ ಅನ್ಯೋನ್ಯ ದಾಂಪತ್ಯವಿದ್ದಾಗ ಮಾತ್ರ ಒಂದರಿಂದ ಮತ್ತೊಂದಕ್ಕೆ ಚೆಲುವು ಶಾಸ್ತ್ರೀಯ ವಾಗ್ಗೇಯ ಕೃತಿಯಲ್ಲಿ ಮಾತು ಧಾತುವಿಗೆ ಕರ್ತೃ ಒಬ್ಬನೇ. ಎರಡೂ ಮಾಧ್ಯಮದ ಹಿಡತ ಅವನದ್ದೇ. ಆದರೆ ಅವನ ಮೂಲ ಉದ್ದೇಶವೇ ಅವನ ಸಂಗೀತ ಗಾಯನ ಸಾಮರ್ಥ್ಯದ ಪ್ರತಿಪಾದನೆ ಮತ್ತು ಪಾಂಡಿತ್ಯ ನಿರೂಪಣೆ. ಶಾಸ್ತ್ರಿಯ ಸಂಗೀತದ ಗಾಯಕ ತನ್ನ ಸಂಗೀತ ನಿರೂಪಣೆಗೆ ಸಾಹಿತ್ಯವನ್ನು ನೆಪಮಾತ್ರಕ್ಕೆ ಬಳಸಿಕೊಳ್ಳುತ್ತಾನೆ. ಅವನ ಚಮತ್ಕಾರವೆಲ್ಲಾ ಸಂಗೀತಾಂಗಗಳಲ್ಲಿಯೇ ಹೊರತು ಸಾಹಿತ್ಯದಲ್ಲಿ ಇಲ್ಲ. ಆದರೆ ಇಲ್ಲಿ ಕವಿ ಬೇರೆ, ಸಂಯೋಜಕ ಬೇರೆ. ಗಾಯಕನ ಧ್ವನಿ, ಹಾಡುಗಾರಿಕೆಯ ಔನ್ನತ್ಯದಿಂದ ಇದು ಪರಿಣಾಮಕಾರಿಯಾಗಬೇಕಾಗುತ್ತದೆ. ಆತ ಶಾಸ್ತ್ರೀಯ ಸಂಗೀತ ವಿದ್ವಾಂಸನಾಗಬೇಕಾದ ಅವಶ್ಯಕತೆ ಇಲ್ಲವಾದರೂ ಶಾಸ್ತ್ರವನ್ನು ತಿಳಿದ ಸಂಗೀತ ಸಾಧಕನಾಗಿರಬೇಕಾಗುತ್ತದೆ. ಅಂದರೆ ಶಾಸ್ತ್ರೀಯ ರಾಗದ ಅಲಾಪ, ಸ್ವರ, ತಾಳ ಚಮತ್ಕಾರವಾಗಲಿ, ಮನೋಧರ್ಮ ಸಂಗೀತವಾಗಲಿ ಯಾವುದೂ ಇರದೆ, ಸಾಹಿತ್ಯದ ಶುದ್ಧವಾದ ನಿರೂಪಣೆಯೇ ಮುಖ್ಯವಾಗಿದೆ. ಕೇಳುಗರಿಗೆ ಸುಲಭವಾಗಿ ಸಾಹಿತ್ಯ

ತಲಪಿಸುವುದೇ ಸುಗಮಸಂಗೀತಗಾರನ ಗುರಿಯಾಗಿದೆ. ಸುಗಮಸಂಗೀತದಲ್ಲಿ ಬಳಸುವಂತಹ ಭಾವಶ್ರೀಮಂತವಾದ ಸಾಹಿತ್ಯ ಇತರ ಯಾವುದೇ ಸಂಗೀತ ಪದ್ಧತಿಯಲ್ಲಿ ಇಲ್ಲ. ಇಲ್ಲಿ ಸಾಹಿತ್ಯಕ್ಕೆ ಪ್ರಥಮ ಸ್ಥಾನ. ಸಂಗೀತಕ್ಕೆ ದ್ವಿತೀಯ ಸ್ಥಾನ.

ಸುಗಮಸಂಗೀತದಲ್ಲಿ ಸಂಯೋಜಕನಿಗೆ ರಾಗದ ತಿಳುವಳಿಕೆಯ ಜೊತೆಗೆ ಕವಿತೆಗೆ ಬೇಕಾದ ಭಾವಸ್ವರಸಂಯೋಜನೆ ತಿಳಿದಿರಬೇಕು. ಅದು ಒಂದೇ ರಾಗದಲ್ಲಿ ಸಿಗಬಹುದು, ಅಥವಾ ರಾಗಕ್ಕೆ ಅನ್ಯಸ್ವರಗಳು ಬಂದಾಗಲೂ ದೊರೆಯಬಹುದು. ಅಲ್ಲಿ ಮುಖ್ಯವಾದದ್ದು ಕವಿತೆಯನ್ನು ಸ್ವರಾಭಿನಯದ ಮೂಲಕ ಪ್ರಸ್ತುತಪಡಿಸುವ ಕ್ರಮ. ಕವಿತೆಯ ಅಂತರಂಗವನ್ನು ತೆರೆದಿಡಲು ಸಹಾಯಕವಾಗುವ ದನಿಯ ಯಾವುದೇ ಬಗೆಯ ಏರಿಳಿತಗಳನ್ನು ಸ್ವರದಲ್ಲಿ ಮೂಡಿಸುವುದೇ ಸಂಯೋಜಕನ ಕಾಯಕ. ಕವಿತೆಯನ್ನು ಓದುವಾಗ ಯತಿಯ ನಿಲುಗಡೆ, ಸಾಲಿನ ಕೊನೆಯನ್ನು ಹೇಳುವಾಗ ವಿರಾಮ ಅಥವಾ ಪ್ರಶ್ನಾರ್ಥ, ಇತ್ಯಾದಿ ಚಿನ್ಹೆಗಳನ್ನು ಗಮನಿಸುತ್ತೇವೋ ಹಾಗೆಯೇ ಹಾಡುವಾಗಲು ಈ ಭಾವನೆಗಳು ಕವಿತೆಯಲ್ಲಿರುವಂತೆಯೇ ನೋಡಿಕೊಳ್ಳಬೇಕು. ಕವಿತೆಯ ಲಯ ಹಾಡಾದಾಗ ಅರ್ಥ ಭಾವಕ್ಕೆ ಪುಷ್ಟಿಕೊಡುವಂತೆ ಇರಬೇಕು.

ನವೋದಯ ಪ್ರಾರಂಭದಲ್ಲಿನ ಗೀತೆಗಳೆಲ್ಲವೂ ರಾಗಾಧಾರಿತವಾಗಿರುವುದು ಕಂಡಬರುತ್ತದೆ. ಮಾಸ್ತಿಯವರ 'ಬಿನ್ನಹ' ಸಂಕಲನದಲ್ಲಿ ಗೀತೆಗಳಿಗೆ ನಿರ್ದಿಷ್ಟ ರಾಗ, ತಾಳಗಳನ್ನು ಹೆಸರಿಸಿರುವುದನ್ನು ನೋಡಬಹುದು. ಡಿ.ವಿ.ಜಿ. ಅವರ ಅಂತಃಪುರ ಗೀತೆಗಳೂ ಇದಕ್ಕೆ ಹೊರತಲ್ಲ. ಕಾಲದಿಂದ ಕಾಲಕ್ಕೆ ಕಾವ್ಯ ಪದವಿಟ್ಟು ಮುಂದೆ ಮುಂದೆ ಹೊರಳಿ ಹೊರಳಿ ತೇಜಸ್ಸನ್ನು ಪಡೆದು, ಹೊಳಪನ್ನೂ, ಸರಳತೆಯನ್ನೂ ಪಡೆದುಕೊಂಡಹಾಗೆ, ಸಂಗೀತವೂ ಅದರ ಬೆನ್ನ ಹಿಂದೆ ಹಿಂಬಾಲಿಸಿ ಬರುತ್ತಾ, ಪಲುಕಿ ಪಲುಕಿ ಹೊಸ ಮಾರ್ಗವನ್ನು ಕಂಡುಕೊಂಡು ಕವಿತೆಯ ಹಿಂದೆ ಸಾಗುತ್ತಾ ಬಂದಿದೆ.

ಸುಗಮಸಂಗೀತ ಆರಂಭದ ದಿನಗಳಲ್ಲಿ ಸಂಗೀತ ಸಂಯೋಜನೆ ಅಥವಾ ರಾಗಸಂಯೋಜನೆ ಎಂದು ಕರೆಯುತ್ತಿದ್ದು, ಇತ್ತೀಚೆಗೆ 'ಸ್ವರ ಸಂಯೋಜನೆ' ಎಂದು ಕರೆಯಲ್ಪಡುತ್ತಿದೆ. ಸುಗಮಸಂಗೀತಕ್ಕೆ ಸ್ವರವೇ ಭಾಷೆಯಾಗಿದೆ. ಸಾಹಿತ್ಯದ ಎದೆಮಿಡಿತವನ್ನು, ಭಾವದೆತ್ತರ ಬಿತ್ತರಗಳನ್ನು, ಅರ್ಥತರಂಗಗಳನ್ನು, ಸ್ವರಗಳ ಕಲಾಪೂರ್ಣ ವಿನ್ಯಾಸದಿಂದ ಅದು ಮೂಡಿಸಿಕೊಡುತ್ತಿದೆಯಾದ್ದರಿಂದ ಕವಿತೆಗೆ 'ರಾಗಸಂಯೋಜನೆ' ಎಂಬ ಶೀರ್ಷಿಕೆಗಿಂತ 'ಸ್ವರಸಂಯೋಜನೆ' ಎಂದು ಹೆಸರೇ ಸೂಕ್ತವಾದದ್ದು ಎಂದು ಪ್ರಸಿದ್ಧ ಸುಗಮಸಂಗೀತ ಗಾಯಕರಾದ ಸಿ. ಅಶ್ವಥ್ ಅವರು ಅಭಿಪ್ರಾಯಪಟ್ಟಿದ್ದಾರೆ. ತಮ್ಮ ಸಂಯೋಜನೆಗಳನ್ನು 'ಸ್ವರಸಂಯೋಜನೆ' ಗಳೆಂದೇ ಕರೆದುಕೊಂಡಿದ್ದಾರೆ. "ಒಂದು ಕವಿತೆಗೆ ಸಿದ್ಧವಾಗಿರುವ ಒಂದು ರಾಗವನ್ನು ಅನ್ವಯಿಸುವ ಪದ್ಧತಿಯನ್ನು ಅನೇಕರು ಅನುಸರಿಸುತ್ತಾರೆ. ಆದರೆ ಹೀಗೆ ಸಿದ್ಧರಾಗವೊಂದನ್ನು ಕವಿತೆಯೊಂದಕ್ಕೆ ಆರೋಪಿಸುವುದರಿಂದ ಕವಿತೆಗೆ ಸಿಗಬೇಕಾದ ನ್ಯಾಯ ಸಾಮಾನ್ಯವಾಗಿ ಸಿಗುವುದಿಲ್ಲವೆಂದೇ ನನ್ನ ಭಾವನೆ. ಒಂದು ಕವಿತೆಯಲ್ಲಿ ಸಾಲಿಂದ ಸಾಲಿಗೆ, ಪದಗಳಿಂದ ಪದಗಳಿಗೆ ಬೆಳೆಯುತ್ತಾ ಅದರ ಅರ್ಥ ಸರಣಿಯನ್ನು ಸಂಗೀತದ ಮೂಲಕ ಅನ್ವೇಷಿಸುತ್ತಾ ಹೋಗುವಾಗ ಸಿದ್ಧವಾದ ರಾಗ ಅಷ್ಟಾಗಿ ಉಪಯೋಗಕ್ಕೆ ಬರುವುದಿಲ್ಲ. ಕವಿತೆಯ ಅರ್ಥಸ್ಫುರಣಕ್ಕೆ ಭಾವದೀಪ್ತಿಗೆ ಸಹಜವಾಗಿ ಒದಗುವಂಥ ಸ್ವರಸ್ಥಾನಗಳನ್ನು ಹಿಡಿದು ಅವುಗಳನ್ನು ಉದ್ದೀಪಿಸುವುದರಿಂದ ಮಾತ್ರ ಕವಿತೆಗೆ ಸಂಪೂರ್ಣ ನ್ಯಾಯ ದೊರಕುತ್ತದೆ. ಇಡಿಯಾದ ರಾಗವನ್ನು ಕವಿತೆಗೆ ಅನ್ವಯಿಸುವ ನಿರ್ದೇಶಕ ಕವಿತೆಯ ವಿಶ್ಲೇಷಣೆಗೆ ತೊಡಗಿರುವುದಿಲ್ಲ. ಕೇವಲ ರಾಗದ ಮಾಧುರ್ಯಕ್ಕೆ ಮಾರುಹೋಗಿರುತ್ತಾನೆ." ಎಂದಿದ್ದಾರೆ.

ಕವಿತೆಯ ವಸ್ತು ಶೈಲಿ ರೂಪ ಬಂಧಗಳಿಂದ ಅಶ್ವಥಾ ಅವರಿಗಿಂತ ಮೊದಲು ಸಂಯೋಜಕರಾಗಿದ್ದವರ ಕಾಲದ ಕವಿತೆಗಳು ಭಿನ್ನವಾಗಿದ್ದವು. ಒಂದೇ ಭಾವನೆ ಎಳೆಯನ್ನು ಹಿಡಿದುಕೊಂಡ ಕವಿತೆಗಳಾಗಿದ್ದವು. ಏಕಮುಖಿಯಾಗಿ ಆಗಿದ್ದವೇನೋ? -ಹಾಗಾಗಿ ಅವು ರಾಗಾಧಾರಿತವಾಗಿರಬಹುದು. ಸುಗಮಸಂಗೀತ ಆಗಿನ್ನೂ ತನ್ನ ಸ್ವಂತ ಕಾಲ ಮೇಲೆ ನಿಲ್ಲುವ ಧೈರ್ಯ-ಭರವಸೆಗಳನ್ನು ತೋರಿಯೂ ಇರಲಿಲ್ಲವೆನ್ನಬಹುದು. ಅಶ್ವತ್ಥರ ಕಾಲದ ಹೊತ್ತಿಗೆ ಅದು ಪರಿಪೂರ್ಣವಾದ, ಆತ್ಮವಿಶ್ವಾಸವನ್ನು ತೋರುತ್ತಾ, ಬೆಳೆಯುವ ಹಾದಿಯಲ್ಲಿತ್ತು ಎನ್ನಬಹುದು. ಬಾಳಪ್ಪ ಹುಕ್ಕೇರಿ - ಪಾಂಡೇಶ್ವರದ ಕಾಳಿಂಗರಾವ್ ಪದ್ಮಚರಣ್ ಮತ್ತು ಮೈಸೂರು ಅನಂತಸ್ವಾಮಿ ಅವರುಗಳು

ಅದಾಗಲೇ ಒಂದು ಖಚಿತವಾದ ವೇದಿಕೆಯಲ್ಲಿ ಸುಗಮಸಂಗೀತವನ್ನು ಪ್ರತಿಷ್ಠಾಪಿಸಿದ್ದರು. ಕಾಳಿಂಗರಾವ್ ಮತ್ತು ಅನಂತಸ್ವಾಮಿ ಇಬ್ಬರೂ ಏಕ ರಾಗಾಧಾರಿತವಾದ ಹಾಗೂ ಸಂಕೀರ್ಣ ರಾಗಾಧಾರಿತವಾದ ಅನೇಕ ಗೀತೆಗಳನ್ನು ನೀಡಿದ್ದರು. ಸಾಹಿತ್ಯಕ್ಕೆ ಹೊಂದುವಂತಹ, ಜನಪ್ರಿಯ, ಧಾಟಿಗಳನ್ನು ಸಂಯೋಜಿಸಿ ಸುಗಮಸಂಗೀತಕ್ಕೆ ಒಂದು ನಿಖರವಾದ ಚೌಕಟ್ಟನ್ನೂ, ಆಕರ್ಷಣೆಯನ್ನೂ ತಂದುಕೊಟ್ಟಿದ್ದರು. ಅಶ್ವಥ್ ಅವರು ಸ್ವರಗಳ ಮೂಲಕ ಸಂಯೋಜನೆ ಮಾಡುತ್ತೇನೆಂದು ಹೇಳಿದರೂ, ಅದು 'ರಾಗ ಸಂಯೋಜನೆ'ಯೇ ಆಗಿರುತ್ತದೆ. ಏಕೆಂದರೆ ಮೂರಕ್ಕಿಂತ ಹೆಚ್ಚು ಸ್ವರಗಳು ಗುಂಪಾಗಿ ಸೇರಿದರೆ ಅದೇ 'ರಾಗ' ಎಂದು ಕರ್ನಾಟಕ ಸಂಗೀತದ ಲಾಕ್ಷಣಿಕರು ಹಿಂದಿನಿಂದಲೂ ಅಭಿಪ್ರಾಯಪಟ್ಟಿದ್ದಾರೆ. 'ಕೇಳುವವರ ಚಿತ್ತವನ್ನು ಆಕರ್ಷಿಸಿ ಆನಂದವನ್ನುಂಟುಮಾಡುವ, ಸುಖವನ್ನು ಕೊಡುವ ಸ್ವರವರ್ಣಗಳ ಸೇರುವಿಕೆಯೇ ರಾಗ ಸ್ವರವರ್ಣಗಳು ಕುಡಿ ಸಜ್ಜನರ ಚಿತ್ತಕ್ಕೆ ಆಹ್ಲಾದವನ್ನುಂಟು ಮಾಡುವ ಧ್ವನಿ ವಿಶೇಷವೇ ರಾಗ. 'ರಂಜಯತಿ ಇತಿರಾಗಃ"- ರಾಗವು ಕೇಳುಗನ ಭಾವಸ್ಥಿತಿಯ ಮೇಲೆ ಪ್ರಭಾವಬೀರುತ್ತದೆ. ಮನಸ್ಸಿನ ರಂಗವನ್ನು ಪಲ್ಲಟಿಸುತ್ತದೆ. ಪ್ರಭಾವಿಸುತ್ತದೆ, ಸೃಜಿಸುತ್ತದೆ, ಬಣ್ಣಗೊಳಿಸುತ್ತದೆ." ಎಂದು ಹೀಗೆಲ್ಲಾ ರಾಗವನ್ನು ನಮ್ಮ ಸಂಗೀತ ಲಾಕ್ಷಣಿಕರು ವರ್ಣಿಸಿದ್ದಾರೆ. ಶಾಸ್ತ್ರದ ದೃಷ್ಟಿಯಿಂದ ಮೂರೂ ಸ್ವರಗಳಿಗಿಂತಲೂ ಹೆಚ್ಚು ಸ್ವರ ಸೇರಿದಾಗ 'ಸ್ವರಸಂಯೋಜನೆ' ಎಂದು ಕರೆದರೂ ಅದು ಯಾವುದೋ ಒಂದು ರಾಗವೇ ಆಗಿರುತ್ತದೆ. ಅದು ಸಿದ್ಧವಾದ ಗುರುತಿಸಿಕೊಂಡ ರಾಗವಾಗಿರದಿದ್ದರೂ, ಹೊಸ ಭಾವಾವರಣವನ್ನು ಸಿದ್ಧಪಡಿಸುವ ಯಾವುದೋ ಒಂದು ರಾಗವಾಗುವುದಂತೂ ನಿಜ. ಕವಿತೆ ಅಪೇಕ್ಷೆಪಡುವ ಸ್ವರಸಂಯೋಜನೆಗಳಿಂದ ಹೆಣೆಯಲ್ಪಟ್ಟ ಅಪೂರ್ವ ರಾಗವೇ ಆಗಿರುತ್ತದೆ. ಕವಿತೆಗೆ ಇದರಿಂದ ರಂಗೇರುತ್ತದೆ. ಕೇಳುವವರಿಗೆ ರಂಜನೆ, ಆಹ್ಲಾದ ಎರಡೂ ದೊರೆಯುತ್ತದೆ. ಹಾಗಾಗಿ 'ರಾಗ' ಎನ್ನುವ ಹೆಸರು ಇಲ್ಲಿ ಅತ್ಯಂತ ಸಮಂಜಸವಾಗುತ್ತದೆ. ಕವಿತೆಗೆ ಅನ್ವರ್ಥವೂ ಆಗುತ್ತದೆ. ಇಂತಹುದೇ ರಾಗ ಎಂದು ಹೆಸರಿಸಿಕೊಳ್ಳದಿದ್ದರೂ, ಗುರುತಿಸಲಾಗದಿದ್ದರೂ, ಸ್ವರಸಂಯೋಜನೆಯಿಂದ ಕೂಡಿದ್ದರೂ, ಅದನ್ನು 'ರಾಗಸಂಯೋಜನೆ' ಎಂದೇ ಕರೆಯಬೇಕಾಗುತ್ತದೆ. ಸಂಯೋಜಕನ ಹೊಸ ಅನ್ವೇಷಣೆಯ ಹೊಸರಾಗ ಅದರಲ್ಲಿ ಹುಟ್ಟಿಕೊಂಡೇ ಇರುತ್ತದೆ.

ಒಂದು ಗೀತೆಗೆ ಕೇವಲ ಮೂರು ಸ್ವರದಿಂದ ಸಂಗೀತ ಸಂಯೋಜಿಸಲು ಸಾಧ್ಯವಿಲ್ಲ. ಕವಿತೆಯ ಆವರಣದ ಭಿನ್ನ ಭಿನ್ನ ಮಜಲುಗಳನ್ನು, ಭಾವದೀಪ್ತಿಯನ್ನು ಇದರಿಂದ ಪ್ರಕಾಶಪಡಿಸಲು ಸಾಧ್ಯವಿಲ್ಲ. ವೇದಗಳ ಪಠಣದಲ್ಲಿ ಇಂತಹ ಮೂರು ಸ್ವರಗಳ ಸಂಯೋಜನೆಯನ್ನು ಗಮನಿಸಬಹುದು. ಕೆಲವು ಜಾನಪದ ಗೀತೆಗಳಲ್ಲೂ ಇಂತಹ ಸ್ವರಸಂಯೋಜನೆಗಳು ಕಾಣಬಹುದು. ಸುಗಮಸಂಗೀತದ ಸಂಯೋಜನೆಯಲ್ಲಿ ಕವಿತೆಯ ವಾಗರ್ಥಗಳ ಬೆನ್ನುಹತ್ತಿ ಸ್ವರಗಳನ್ನು ಸಂಯೋಜಿಸಿದರೂ ಅದು ಮೂರು ಸ್ಥಾಯಿಗಳಲ್ಲಿ ತನ್ನ ಭಾವ ಪ್ರಚುರತೆಯನ್ನು ತೋರಬೇಕಾಗುವದರಿಂದ ಅದನ್ನು 'ರಾಗಸಂಯೋಜನೆ' ಎಂದೇ ಕರೆಯಬೇಕು. ಸ್ವರವರ್ಣಗಳ ಮೂಲಕ ಹೊಸ ರಾಗವನ್ನು ಅನಾವರಣಗೊಳಿಸುವ 'ರಾಗಸಂಯೋಜನೆ' - ಎನ್ನಬಹುದು. ಅಶ್ವಥ್ ಅವರ ಸಂಯೋಜನೆಗಳಲ್ಲಿ ನಾನು ಕಾಣುವುದು ಇಂತಹ 'ರಾಗಸಂಯೋಜನೆ'ಗಳನ್ನು, ಕವಿತೆಗಳ ಮೂಲಕ ಹರಿದಾಡುವ ಅಪೂರ್ವ ಸ್ವರಸಂಚಾರಗಳ ಸಂಯೊಜನೆಗಳನ್ನು ರಾಗಾಧಾರಿತ ಅವರು ಹೇಳಿಕೊಳ್ಳದಿದ್ದರೂ, ಅದು ಕವಿತೆಗೆ ಹೊಂದುವ, ಕವಿತೆಯಲ್ಲಿ ಅಂತರ್ಗತವಾಗಿರುವ, ಅವ್ಯಕ್ತವಾದ, ಯಾವುದೋ ರಾಗವಾಗಿಯೇ ಇರುತ್ತದೆ. ಆದ್ದರಿಂದ ಕವಿತೆಗೆ 'ಸ್ವರಸಂಯೋಜನೆ' ಎನ್ನುವುದು ಶೀರ್ಷಿಕೆಯಾದರೂ ಅದು ರಾಗಸಂಯೋಜನೆಯೇ ಆಗಿರುತ್ತದೆ. ಆದ್ದರಿಂದ 'ರಾಗಸಂಯೋಜನೆ' ಎನ್ನುವ ಬಲಕೆಯೇ, ಶೀರ್ಷಿಕೆಯೇ, ಅತ್ಯಂತ ಸಮಂಜಸವಾದದ್ದು ಮತ್ತು ಶಾಸ್ತ್ರಬದ್ಧವಾದದ್ದು.

ತಾಂತ್ರಿಕವಾಗಿ ನೋಡಿದಾಗ ಸ್ವರಗಳಿಗೆ ಅವು ಬಿಡಿಯಾಗಿದ್ದಾಗ ಯಾವ ವ್ಯಕ್ತಿತ್ವವೂ ಇಲ್ಲ. ಅವು ರಾಗದೊಳಗಿದ್ದಾಗಲೇ ಅವುಗಳಿಗೆ ಇಡಿಯಾದ ಒಂದು ಭಾವನೆ, ವ್ಯಕ್ತಿತ್ತ್ವೂ ಸೃಷ್ಠಿಯಾಗುವುದು. ಒಂದು ಸ್ವರ ಇನ್ನೊಂದರ ಜೊತೆ ಸೇರಿದಾಗಲೇ ಅದೂ ಕನಿಷ್ಠ ಐದು ಸ್ವರವಾದರೂ ಸೇರಿದಾಗ ಒಂದು ಭಾವವನ್ನು ವ್ಯಕ್ತಪಡಿಸಲು ಸಾಧ್ಯ. ಹೀಗೆ ಗುಂಪಾಗಿ ಸೇರಿದ ಸ್ವರಗಳೇ ಭಾವವಾಹಕಗಳಾಗಿ 'ರಾಗ' ವಾಗುತ್ತದೆ. ರಾಗ ಎಂದ ಕೂಡಲೇ ಒಂದು ಶಿಸ್ತು, ಕಟ್ಟುಪಾಡು ಇರುತ್ತದೆ. ಸಹಜ ಸ್ವರಗಳು ಅದರಲ್ಲಿ ಬರುವ ಹಾಗೆ, ಅನ್ಯ ಸ್ವರಗಳು ಬರುವ ಹಾಗೆ ಇಲ್ಲ. ಹಾಗೆ ಬಂದಾಗ ನಿಯಮದ ಉಲ್ಲಂಘನೆ ಆಗುತ್ತದೆ. ರಾಗ ಸಂಯೋಜನೆಯಲ್ಲಿ ದಾರಿ ತಪ್ಪಿದ ಅಪವಾದ ಬರುತ್ತದೆ, ಎಂಬ ಕಾರಣದಿಂದ 'ಸ್ವರಸಂಯೋಜನೆ' ಎಂಬ ಹೆಸರು ಸೂಕ್ತವಾಗಿರಬಹುದು. ಅಥವಾ ಶಾಸ್ತ್ರೀಯ ಶಿಸ್ತಿನ ಗೆರೆಯಿಂದ ಆಚೆ ಬರುವ

ಕಾರಣಕ್ಕಾಗಿ 'ಸ್ವರ ಸಂಯೋಜನೆ' ಎಂದಿಟ್ಟುಕೊಳ್ಳಬಹುದು. ಕವಿತೆಯನ್ನು ರಾಗದ ಆಧಾರದಲ್ಲಿ ಪ್ರಾರಂಭಿಸಿ ನಂತರ ಅರ್ಥಕ್ಕನುಗುಣವಾಗಿ ಅದನ್ನು ಹಂತ ಹಂತವಾಗಿ ವಿಸ್ತರಿಸಿಕೊಳ್ಳುವ ಸಂಯೋಜನೆಗಳಲ್ಲಿ ಕಾಣುತ್ತೇವೆ. ಇದನ್ನೇ ಕವಿತೆಯೂ ತನ್ನ ರಚನಾ ಕ್ರಮದಲ್ಲಿ ಹೊತ್ತುಕೊಂಡಿರುವುದು. ಕವಿತೆ ಹುಟ್ಟುವಾಗ ಭಾವವೊಂದರಿಂದ ಪ್ರಾರಂಭಿಸಿ ಹಂತ ಹಂತವಾಗಿ ಅರ್ಥಗಳ ಪದರ ಪದರಗಳನ್ನು ಬಿಚ್ಚಿಡುತ್ತಾ ಅಪೂರ್ವ ಅನುಭವವನ್ನು ಸಾಂದ್ರೀಕರಿಸಿದಂತೆ, ಸಂಕೀರ್ಣತೆಯನ್ನು ತೋರಿದಂತೆ, ಅದಕ್ಕೆ ಸೂಕ್ತವಾದ ಸಂಗೀತ ಸಂಯೋಜನೆ ಮಾಡುವಾಗ, ರಾಗವೊಂದನ್ನು ಕೇಂದ್ರವನ್ನಾಗಿ ಇಟ್ಟುಕೊಂಡು ನಂತರ ಭಾವಕ್ಕೆ ಹೊಂದುವಂತಹ ಸ್ವರಗಳನ್ನು ಅದರ ಸುತ್ತಲೂ ಅರ್ಥಕ್ಕೆ ಹೊಂದುವಂತೆ, ವಿವಿಧ ಮಜಲುಗಳ ಮೂಲಕ ಕಟ್ಟಿಕೊಡುವುದೇ ಸುಗಮಸಂಗೀತದ ಸಂಯೋಜನೆಯ ಶೈಲಿಯಾಗಿದೆ. ಆದ್ದರಿಂದ ಸುಗಮಸಂಗೀತಕ್ಕೆ ಸಂಗೀತ ಸಂಯೋಜನೆ ಮಾಡುವುದನ್ನು 'ಸ್ವರಸಂಯೋಜನೆ' ಅನ್ನುವುದಕ್ಕಿಂತ 'ರಾಗಸಂಯೋಜನೆ' ಎನ್ನುವುದು ಹೆಚ್ಚು ಅರ್ಥಪೂರ್ಣವಾಗಿದೆ. ಮತ್ತು ಧ್ವನಿಪೂರ್ಣವಾಗಿದೆ. 'ರಾಗ' ಎನ್ನುವ ಹೆಸರೇ-ಕವಿತೆಯ ಸಂಗೀತ ಸಂಯೋಜನೆಗೆ ಪೂರಕವಾಗಿದೆ. 'ರಾಗ' ಎಂದರೆ 'ಬಣ್ಣ' 'ಪ್ರೀತಿ', 'ರಂಜನೆ' ಇತ್ಯಾದಿ ಅರ್ಥಗಳು ಕವಿತೆಯ ವ್ಯಕ್ತಿತ್ವವನ್ನು, ಭಾವಾರ್ಥವನ್ನು ಬಿಂಬಿಸುವಲ್ಲಿ ಯಶಸ್ವಿಯಾಗುತ್ತದೆ. ರಾಗದಿಂದ ರಂಗೇರುತ್ತಾ ಕವಿತೆಯ ಅಂತರಂಗವನ್ನು ಬಿಂಬಿಸುವ ಸುಗಮಸಂಗೀತ ಇಂದು ಅತ್ಯಂತ ಜನಪ್ರಿಯ ಗಾಯನ ಪ್ರಕಾರವಾಗಿದೆ.

**ಸಂಯೋಜಕರು ಮತ್ತು ಶೈಲಿ**

'ಸುಗಮಸಂಗೀತ' ಹಿಂದೆಯೇ ಹೇಳಿರುವಂತೆ ನವೋದಯ ಕಾಲದಿಂದ ಹುಟ್ಟಿಕೊಂಡ ಗೀತಗಾಯನ ಪ್ರಕಾರ. ಕವಿತೆ ಹೇಗೆಲ್ಲಾ ಸಂದರ್ಭಕ್ಕೆ, ಜನರ ಅಭಿರುಚಿಗೆ, ಸಾಮಾಜಿಕ ಸ್ಪಂದನಕ್ಕೆ ತನ್ನನ್ನು ತೆತ್ತುಕೊಂಡಿತೋ, ಹಾಗೆಯೇ, ಗೀತವೂ ಅದನ್ನು ಅನುಸರಿಸಿಕೊಂಡೇ ಬಂದಿದೆ. ಕವಿತೆ ದೇಶಭಕ್ತಿಯ ಭಾವದಲ್ಲಿದ್ದಾಗ, ಸ್ವಾತಂತ್ರ್ಯದ ಹಂಬಲದಲ್ಲಿದ್ದಾಗ, ನಾಡಪ್ರೇಮದ ಅಭಿವ್ಯಕತಿಯಲ್ಲಿದ್ದಾಗ, ಅಭಿವ್ಯಕ್ತವಾಗುತ್ತಿದ್ದ ಭಾವಗಳಿಗೆ ಪೂರಕವಾಗಿ ರಾಗಸಂಯೋಜನೆಗೊಳ್ಳುತ್ತಿದ್ದು ಸ್ವಾತಂತ್ರ್ಯದ ಅನಂತರ ಬಿಡುಗಡೆಯ ಹರ್ಷ, ಮುಕ್ತಮನಸ್ಸಿನ ನೆಮ್ಮದಿ, ನಾಡಭಕ್ತಿ ಮುಂತಾದ ಭಾವಗೀತೆಗಳು ಹುಟ್ಟಿಕೊಳ್ಳುತ್ತಿದ್ದವು. ಸಾಮಾಜಿಕ ಬದಲಾವಣೆಗಳು ಕಾವ್ಯದ ಮೇಲೆ ಬದಲಾವಣೆ ತಂದಂತೆ, ಗೀತೆಗಳೊಳಗೂ ತಂದವು. ಇದು ಅನಿವಾರ್ಯವೂ ಆಯಿತು. ಸ್ವಾತಂತ್ರ್ಯ ಪೂರ್ವಗೀತೆಗಳು ದುಃಖದ ಛಾಯೆಯನ್ನು ಕೆಲವೆಡೆ ವ್ಯಕ್ತಪಡಿಸಿರುವುದೂ ಕಂಡುಬರುತ್ತದೆ. ಸ್ವಾತಂತ್ರ್ಯೋತ್ತರದ ಗೀತೆಗಳು ಆತ್ಮವಿಶ್ವಾಸದ, ಉಲ್ಲಾಸದ ಗೀತೆಗಳಾಗಿ ಅಭಿವ್ಯಕ್ತವಾಗಿವೆ.ಕವಿತೆಗಳಲ್ಲಿ ರಾಗ ಸಂಯೋಜನೆ, ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತಾ ಬಂದಿರುವುದೇ ಸುಗಮಸಂಗೀತದ ಇಂದಿನ ಬೆಳವಣಿಗೆಗೆ ಕಾರಕವೂ, ಪೂರಕವೂ ಆಗಿದೆ. ಎಂಬುದು ಗಮನಾರ್ಹ. ಕವಿತೆ ಸಂಯೋಜಕರ, ಸಂಯೋಜನೆಯ ಶೈಲಿಯಿಂದ ಭಿನ್ನ, ಭಿನ್ನ ಮಾದರಿಯಲ್ಲಿ ಮೂಡುತ್ತಾ ಬರುತ್ತಿದೆ. ಇದಕ್ಕೆ ಕಾರಣ ಸಂಯೋಜಕನ ರಾಗ ಕಲ್ಪನೆ, ಕವಿತೆಯನ್ನು ಅವನು ಅರ್ಥೈಸಿರುವ ಬಗ್ಗೆ ಅವನ ಗ್ರಹಿಕೆ, ಒಬ್ಬನಿಗಿಂತಾ ಮತ್ತೊಬ್ಬನಲ್ಲಿ ಬೇರೆಯೇ ಆಗಿರುತ್ತದೆ. ಕವಿತೆಯಲ್ಲಿ ಕವಿಯ ವ್ಯಕ್ತಿತ್ವವಿರುವಂತೆ, ಗೀತೆಯಲ್ಲಿ ರಾಗ ಸಂಯೋಜಕನ ವ್ಯಕ್ತಿತ್ವವಿರುತ್ತದೆ. ಬಾಳಪ್ಪ ಹುಕ್ಕೇರಿಯವರ ಕಲ್ಪನೆಗಿಂತ, ಕಾಳಿಂಗರಾವ್ ಅವರ ಕಲ್ಪನೆ ಬೇರೆಯೇ ಆಗಿರುತ್ತದೆ. ಅವರ ಬದುಕಿನ ಅನುಭವ, ಅವರ ಯೋಚನಾಲಹರಿ, ಅವರ ಪಾಂಡಿತ್ಯ, ತಿಳುವಳಿಕೆ, ಜೀವನ, ಸ್ವಭಾವ ಎಲ್ಲವೂ ಬೇರೆ, ಬೇರೆ. ಹಾಗಾಗಿ ಸುಗಮಸಂಗೀತದಲ್ಲಿ ರಾಗ ಸಂಯೋಜನೆ ಕವಿತೆಯಿಂದ ಕವಿತೆಗೆ ಭಿನ್ನ ಭಿನ್ನ ಶೈಲಿಯಲ್ಲಿ ಹರಿದುಕೊಂಡು ಬಂದಿದೆ. ಸಂಯೋಜಕ ಹಾಡುಗಾರ, ಇಬ್ಬರೂ ಒಬ್ಬರೇ ಆದಾಗ ಇದು ವಿಶಿಷ್ಟವಾಗುತ್ತದೆ. ಸಂಯೋಜಕ ಮತ್ತು ಹಾಡುಗಾರರು ಬೇರೆ ಬೇರೆ ಆದಾಗ ಪರಿಣಾಮ ಒಳ್ಳೆಯದೂ ಆಗಬಹುದು ಅಥವಾ ಅರ್ಥಹೀನವೂ ಆಗಬಹುದು.

**ಸುಗಮಸಂಗೀತ ಸಂಯೋಜಕರು**

ನಮ್ಮ ಕರ್ನಾಟಕದಲ್ಲಿ ಸುಗಮಸಂಗೀತ ಸಂಯೋಜಕರಲ್ಲಿ ಪ್ರಥಮರೆಂದರೆ ಹುಕ್ಕೇರಿಯ ಬಾಳಪ್ಪನವರು. ನಂತರ ಪಾಂಡೇಶ್ವರದ ಕಾಳಿಂಗರಾಯರು, ಪದ್ಮಚರಣ, ಧಾರವಾಡದ ಪಿ.ಆರ್. ಭಾಗವತ್ ಬೆಂಗಳೂರಿನ ಹೆಚ್.ಕೆ. ನಾರಾಯಣ, ಮೈಸೂರು ಅನಂತಸ್ವಾಮಿ,

ವಸಂತ ಕನಕಾಪುರ್ ಸಿ. ಅಶ್ವಥ್ ಮುಂತಾದವರು ಇವರೆಲ್ಲಾ ಸುಗಮಸಂಗೀತಕ್ಕೆ ಶ್ರೀಮಂತಿಕೆಯನ್ನು ತಂದ ಸಂಗೀತ ಸಂಯೋಜಕರು. ಕುವೆಂಪು, ಬೇಂದ್ರೇ, ಪು.ತಿ.ನ., ರಾಜರತ್ನಂ, ಕೆ.ಎಸ್.ನರಸಿಂಹಸ್ವಾಮಿ ಮುಂತಾದ ಕವಿಗಳು ತಮ್ಮ ಸ್ವಂತಿಕೆಯಿಂದ, ವಿಭಿನ್ನವಾಗಿ ನಿಂತ ಹಾಗೆ, ಮೇಲಿನ ಸುಗಮಸಂಗೀತ ಸಂಯೋಜಕರು ತಮ್ಮ ಸ್ವೋಪಜ್ಞತೆಯಿಂದ 'ಸುಗಮಸಂಗೀತ' ಪ್ರಕಾರದಲ್ಲಿ ವಿಶಿಷ್ಟ ವ್ಯಕ್ತಿಗಳಾಗಿ ತಮ್ಮ ಹೆಸರು ಮೂಡಿಸಿದ್ದಾರೆ. ಸುಗಮಸಂಗೀತ ಶಾಸ್ತ್ರೀಯ ಸಂಗೀತದ ಮಡಿಲಿನಲ್ಲಿಯೇ ಸುಗಮಸಂಗೀತ ಎದ್ದು ಬಂದಿತು'- ಎಂಬುದನ್ನು ಗಮನಿಸಿದ್ದೇವೆ. ಶಾಸ್ತ್ರೀಯ ಸಂಗೀತಗಾರರೇ ಇದಕ್ಕೆ ನಾಂದಿಹಾಡಿದ್ದನ್ನೂ, ರಾಗ ಸಂಯೋಜಿಸಿ ಆಕಾಶವಾಣಿಯಲ್ಲಿ ಹಾಡಿದ್ದನ್ನು ಇತಿಹಾಸದ ಪುಟಗಳಲ್ಲಿ ಮನಗಂಡಿದ್ದೇವೆ. ಹಾಗೆಯೇ ಸುಗಮಸಂಗೀತಕ್ಕೆ ರಾಗ ಸಂಯೋಜಿಸಿ, ಅದನ್ನು ಬಣ್ಣಗೊಳಿಸಿದವರೂ ನಮ್ಮ ಶಾಸ್ತ್ರೀಯ ಸಂಗೀತಗಾರರೇ ಆಗಿದ್ದಾರೆ. ಇವರ ನಂತರ ಸುಗಮಸಂಗೀತಕ್ಕೆ ರಾಗ ಸಂಯೊಜಿಸಿದವರು ನಾಟಕರಂಗದಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಗಳಿಸಿದ್ದವರು ಆಗಿದ್ದಾರೆ. ಅಂದರೆ ನನಗೆ 'ಸುಗಮಸಂಗೀತ'ದಲ್ಲಿ ಎರಡು ರೀತಿಯ ಪ್ರಸಿದ್ಧ ಶೈಲಿಗಳು ತೋರುತ್ತಿವೆ. ಮೊದಲನೇಯದು ಶಾಸ್ತ್ರೀಯ ಸಂಗೀತಗಾರರು ರೂಪಿಸಿದ ಒಂದು ಶೈಲಿಯಾದರೆ, ಮತ್ತೊಂದು ನಾಟಕರಂಗದಿಂದ ಅನುಭವಪಡೆದುಕೊಂಡವರು ರೂಪಿಸಿದ ಶೈಲಿ-ಮೊದಲನೆಯ ಶಾಸ್ತ್ರೀಯ ಸಂಗೀತಗಾರರ ಶೈಲಿಗೆ ಪದ್ಮಚರಣ್, ವಸಂತ್ ಕನಕಾಪುರ-ಎಚ್.ಕೆ.ನಾರಾಯಣ್-ವಿ.ಆರ್.ಭಾಗವತ್, ಸೇರಿದರೆ, ಎರಡನೇಯ ಶೈಲಿಗೆ ಕಾಳಿಂಗರಾವ್, ಬಾಳಪ್ಪ ಹುಕ್ಕೇರಿ, ಮೈಸೂರು ಅನಂತಸ್ವಾಮಿ ಮತ್ತು ಸಿ. ಅಶ್ವಥ್ ಇವರು ಸೇರುತ್ತಾರೆ. ಮೊದಲನೆಯ ಶೈಲಿಯಲ್ಲಿ ಶಾಸ್ತ್ರಿಯ ರಾಗಗಳ ಶಿಸ್ತು, ಕಟ್ಟುಪಾಡುಗಳು ಕಂಡುಬಂದರೆ, ಎರಡನೆಯ ಶೈಲಿಯಲ್ಲಿ, ಸ್ವತಂತ್ರವೂ, ಸರಳವೂ ಆದ ರಾಗಾಭಿನಯವಿರುತ್ತದೆ. ಕವಿತಾ ವಾಚನಕ್ಕೆ ಅತ್ಯಂತ ಹತ್ತಿರವಾಗಿದ್ದ ಈ ಶೈಲಿಯಲ್ಲಿ ಸಂಯೋಜಿಸಲ್ಪಟ್ಟ ನೂರಾರು ಗೀತೆಗಳು ಜನಪ್ರಿಯವಾದವು. ಸುಗಮಸಂಗೀತದ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸಿದವು. ಸುಗಮವಾಗಿ ಸರಳವಾಗಿ ಸಹೃದಯರ ಹೃದಯದೊಳಗೆ ಇಳಿದವು.

**ಶಾಸ್ತ್ರೀಯ ಶೈಲಿ**

**ಪದ್ಮಚರಣ್ (ಎ.ವಿ.ಕೃಷ್ಣಮಾಚಾರ್) (೨೧-೧೯೨೦-೨೨-೭-೨೦೦೨) :** ಉತ್ತರ ಕರ್ನಾಟಕದಲ್ಲಿ ಜನರನ್ನು ರಂಜಿಸುವುದರ ಜೊತೆಗೆ, ಹಳ್ಳಿಯ ಜೀವನವನ್ನು ತಿದ್ದಲು, ಮೂಢನಂಬಿಕೆಗಳ ವಿರುದ್ಧ ಹೋರಾಡಲು, ಶಿಕ್ಷಣ, ಕುಟುಂಬ ಯೋಜನೆಗಳನ್ನು ಪ್ರಚಾರ ಮಾಡಲು ಬಾಳಪ್ಪ ಹುಕ್ಕೇರಿಯವರು ಹೇಗೆ ತಮ್ಮ ಗಂಡುದನಿಯನ್ನು ಒತ್ತೆಯಾಗಿಟ್ಟರೋ ಹಾಗೆಯೇ ಮೈಸೂರು ಮತ್ತು ದಕ್ಷಿಣ ಕನ್ನಡ ಪ್ರಾಂತ್ಯದಲ್ಲಿ ಕಾಳಿಂಗರಾಯರು ಅದರ ಇನ್ನೊಂದು ಶಾಖೆಯಾದರು. ಇವರಿಬ್ಬರೂ ಉತ್ಸವ ಮೂರ್ತಿಗಳಂತೆ ಊರೂರು ಅಲೆದು ತಾವು ಕಲಿತು ಬೇರೆಯವರಿಗೂ ತಾವು ಕಲಿತದ್ದನ್ನು ಕಲಿಸಿದರು. ಕರ್ನಾಟಕದ ಎರಡೂ ಮೂಲೆಗಳ ವಿಭಿನ್ನ ಮುಖವಾಗಿ ಬಾಳಪ್ಪ ಮತ್ತು ಕಾಳಿಂಗರಾಯರು ಸುಗಮಸಂಗೀತವನ್ನು ಪಸರಿಸುತ್ತಿರುವಾಗಲೇ ಮೈಸೂರಿನಲ್ಲಿ ನೆಲೆಸಿದ್ದ (ಆಂಧ್ರದಿಂದ ಬಂದು) ಪದ್ಮಚರಣ್ ಎಂಬ ಶಾಸ್ತ್ರೀಯ ಸಂಗೀತ ವಿದ್ವಾಮಸರು (ಪಿಟೀಲುವಾದಕರು) ಮೈಸೂರು ಆಕಾಶವಾಣಿಯಲ್ಲಿ ೧೯೪೯ರ ಆಗಸ್ಟ್ ತಿಂಗಳಿನಲ್ಲಿ ನಿಲಯದ ಕಲಾವಿದನಾಗಿ ಸೇರಿಕೊಂಡರು. ೧೯೪೭ರಿಂದಲೇ ಭಾವಗೀತೆಗೆ ಮಟ್ಟು ಕೂಡಿಸುತ್ತಿದ್ದ ಎ.ವಿ.ಕೃಷ್ಣಮಾಚಾರ್ಯರು ಪದ್ಮಚರಣ್ ಆದದ್ದು ಭಾವಗೀತೆಯ ಸಂಯೋಜಕರಾಗಿ ಬಹಳ ದಿನಗಳಾದ ಮೇಲೆ. ಅವರ ಪ್ರಥಮ ಸಂಯೋಜನೆ 'ಪುಣ್ಯಭೂಮಿ ಭಾರತಿ ಜನ್ಮಭೂಮಿ ಭಾರತಿ' ಎಂಬ ಗೀತೆ. ೧೯೫೦ರಲ್ಲಿ ಸಂಯೋಜಿಸಿದ್ದು.

ಸ್ವಭಾವತಃ ಶಿಸ್ತಿನವರಾಗಿದ್ದ 'ಪದ್ಮಚರಣ್' ಅವರ ಸಂಯೋಜನೆಗಳೂ, ಶಾಸ್ತ್ರೀಯ ಸಂಗೀತದ ಉಸಿರಿನೊಂದಿಗೆ ಹೊಸ ಶರೀರವನ್ನು ಪಡೆದು ಹೊಸ ಪಾಕವೇ ಆಗಿತ್ತು. ೧೯೫೦ 'ಪದ್ಮಚರಣ್' ಸಂಯೋಜಿಸಿದ್ದ ಕುವೆಂಪು ಅವರ 'ಶೂನ್ಯತೆ ಏನಿದು' (ಸಿಂಧು ಭೈರವಿ)-ಗೋಪಾಲಕೃಷ್ಣ ಅಡಿಗರ ಆರದಿರು ಆರದಿರು ಓ ನನ್ನ ಬೆಳಕೆ (ರಾಗಮಾಲಿಕೆ) ಕವಿತೆಗಳು ಪದ್ಮಚರಣರ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಾಗಿದ್ದವು. ಯಾವುದೇ ಸಂಘ ಸಂಸ್ಥೆಯಲ್ಲಿ ಈ ಭಾವಗೀತೆಗಳೇ ಪ್ರಾರ್ಥನಾ ಗೀತೆಗಳಾಗಿದ್ದವು. ಮೈಸೂರಿನ ಅರಸರಾಗಿದ್ದ ಶ್ರೀ ಜಯಚಾಮರಾಜ ಒಡೆಯರುಈ ಎರಡು ಹಾಡುಗಳನ್ನು ಅಪೇಕ್ಷಪಟ್ಟು ಹಾಡಿಸುತ್ತಿದ್ದರು. ಕವಿ ಪು.ತಿ.ನರಸಿಂಹಾಚಾರ್ಯರ

‘ನಿಲ್ಲಿಸದಿರುವನಮಾಲಿ’ (ಶಿವರಂಜನಿರಾಗ) ಡಿ.ವಿ.ಜಿ.ಯವರ ವನಸುಮದೊಳೆನ್ನ ಜೀವನವು (ಮೋಹನ, ಬಾಗೇಶ್ರೀ-ಹಿಂದೋಳ-ರಾಗಮಾಲಿಕೆ) ಕುವೆಂಪು ಅವರ ನಿನ್ನೆಡೆಗ ಬರುವಾಗ, (ತಿಲಾಂಗ್) ರಾಗಗಳ ೧೯೫೦ರ ದಶಕದ ಜನಪ್ರಿಯ ಗೀತೆಗಳಾಗಿದ್ದವು. ೧೯೫೦ರ ದಶಕದ ಸಾಹಿತ್ಯ ಸಂವೇದನೆಯೇ ಹೀಗೆ. ಸಂಗೀತದ ಮೂಲಕ ಸಂವಹನಗೊಂಡಿತ್ತು ಎನ್ನುವುದು ಗಮನಾರ್ಹ.

ಭಾವಗೀತೆಯ ಮೋಹ ಹೆಚ್ಚಿಸುವಲ್ಲಿ ‘ನಿಲ್ಲಿಸದಿರು ವನಮಾಲಿ’ ಗೀತೆಯ ಪಾತ್ರ ದೊಡ್ಡದಾಗಿತ್ತು. ಶಾಸ್ತ್ರೀಯ ಸಂಗೀತಗಾರರಿಗೂ ಹುಚ್ಚು ಹಿಡಿಸಿದ್ದು ಕೀರ್ತನೆ ಅಲ್ಲದ, ದಾಸರಪದವಲ್ಲದ ಹೊಸಬಗೆಯ ಹಗುರವಾದ ಪದಗಳುಳ್ಳ ಆತ್ಮೀಯ ಸಾಹಿತ್ಯ. ಆಡುಮಾತಿನ ನಿವೇದನೆ ಎದಯಾಂತರಾಳದ ತುಮುಲ, ದುಗುಡ, ಭಾವತೀವ್ರತೆಗಳಿಂದ ತುಂಬಿದ ಗೀತೆ. ಮಡಿವಂತ ಹಾಡುಗಾರರಿಂದ ಹಿಡಿದು ಸಾಮಾನ್ಯ ಹಾಡುಗಾರರವರೆಗೆ ಎಲ್ಲರೂ ಮೆಚ್ಚಿ ಕಲಿತು ಹಾಡುತ್ತಿದ್ದ ಹಾಡಬಹುದಾಗಿದ್ದ ಆ ಗೀತೆ. ಜೊತೆಗೆ ಶಿವರಂಜನಿ ರಾಗ ಅಂದಿಗೆ ಹೊಚ್ಚ ಹೊಸ ಆಕರ್ಷಣೆಯೂ ಆಗಿದ್ದುದು.

ಗೋಪಾಲಕೃಷ್ಣ ಅಡಿಗರ ‘ನನ್ನ ನಿನ್ನ ಬಳುವಳಿ’ - ವೀ.ಸೀ. ‘ವರುಷ ಹೋಯಿತು ವರುಷ ಬಂದಿತು’ ಮುಂತಾದ ಹಾಡುಗಳ ಸಂಗೀತದ ಭಾರ ಸ್ವಲ್ಪ ಹೆಚ್ಚೇ ಎನ್ನಬಹುದು. ಅವರ ಪ್ರಪ್ರಥಮ ಸಂಯೋಜನೆಗಳಲ್ಲಿ ದುಃಖದ ಛಾಯೆಯೇ ತುಂಬಿತ್ತು. ನಂತರದಲ್ಲಿ ಹಂತಹಂತವಾಗಿ ವಿಭಿನ್ನರೂಪ ಪಡೆದುಕೊಂಡವು. ಕುವೆಂಪು ಅವರ ‘ಯಾವ ಜನ್ಮದ ಮೈತ್ರಿ’ (ರಾಗಮಾಲಿಕೆ) ಅಡಿಗರ ‘ಇಂದುಕೆಂದಾವರೆ’, ರಾಘವೇಂದ್ರ ಇಟಗಿಯವರ ‘ನುಡಿಸು ವೀಣೆಯ ವೈಣಿಕ,’, ವೀಸೀ ಅವರ ‘ನಡೆಹಯವೆ ನಡೆ ಮುಂದಕ್ಕೀಗ’ ಗೀತೆಗಳು ಪದ್ಮಚರಣರ ಸಂಯೊಜನೆಯ ವಿಕಾಸ ಗೀತೆಗಳೆನ್ನಬಹುದು. ಕುವೆಂಪು ಅವರ ‘ಕಳಚಿ ಬೀಳುವೆನಯ್ಯಾ ನಿನ್ನ ಸಿರಿಯಡಿಗೆ’-ಎಂಬ ಕವಿತೆಯ ರಾಗ ಸಂಯೋಜನೆ ಕವಿ ಕುವೆಂಪು ಅವರಿಗೆ ಪ್ರಿಯವಾಗಿತ್ತು. ಕುವೆಂಪು ಅವರ ಮತ್ತೊಂದು ಗೀತೆ ‘ಹಗಲೆಲ್ಲಾ ಧೂಳಿನಲ್ಲಿ ಗೊಂಬೆಯಾಟವನಾಡಿ’ ಎಂಬ ಕವಿತೆಯಲ್ಲಿ ಸಹಜತೆ ಮಾರ್ದನಿಗೊಂಡಿತ್ತು. ‘ಅಲ್ಲಿ ಇಲ್ಲಿ ನಾ ನೋಡಿದಲ್ಲಿ ನೀ’-ಎಂಬ ಕರ್ಕಿಯವರ ಕವಿತೆ, ‘ನೆನ್ನೆಗಳನು ನೆಲಕೆ ಮೆಟ್ಟಿ’-ಎಂಬ ಆನಂದಕಂದರ ಕವಿತೆ, ‘ಒಲವವೆಂಬ ಹೊತ್ತಿಗೆಯ ಓದ ಬಯಸುತ’, ‘ನನ್ನ ಹರಣ ನಿನಗೆ ಶರಣ’ ಎಂಬ ಕವಿತೆಗಳು ಪದ್ಮಚರಣರ ಸಂಯೋಜನೆಯ ಬೆಳವಣಿಗೆಯ ಹಂತಗಳಾದವು.

ಐವತ್ತರ ದಶಕದಲ್ಲಿ ಪ್ರಣಯದ ಭಾವ ಚಿಲುಮೆಯನ್ನು ಉಕ್ಕಿಸಿದ ಕುವೆಂಪು ಅವರ ‘ಹೃದಯ ಕಮಲದಿ ಮಧುರ ಪ್ರೇಮ ಮಕರಂದವಿದೆ’, ‘ನಾ ನಿನಗೆ ನೀನೆನಗೆ ಜೇನಾಗುವ’ ಎಂಬ ಕವಿತೆಗಳಲ್ಲಿ ಪ್ರೇಮದ ತೀವ್ರತೆ, ಅರ್ಪಣಾಭಾವ, ಕೋಮಲ ಮತ್ತು ತೀವ್ರ ಮಧ್ಯಮ (ಮ೧+ಮ೨) ಗಳೆರಡರ ಬಳಕೆಯಿರುವ ಹಮೀರ್ ಕಲ್ಯಾಣಿ ರಾಗದಲ್ಲಿ ಸುವ್ಯಕ್ತವಾದವು. ಕುವೆಂಪು ಅವರ ‘ಚಂದಿರ ಬಾರೋ ಕುಣಿಯುವಂತೆ ಮತ್ತಶಿಖಿ’-ಪರಮೇಶ್ವರ ಭಟ್ಟರ ‘ದೀಪ ಹಚ್ಚು’ ಶ್ರೀ ಅವರ ‘ಏನು ಸುಖಿಯೋ ತಾನು’- ಅಡಿಗರ ‘ಯಾವ ಮೋಹನ ಮುರಲಿ’ ಎನ್.ಕೆ.ಕುಲಕರ್ಣಿ ಅವರ ‘ಸೀಕರಿಸುವೆಯೋ ದೇವಾ’ -ಮುಂತಾದವು ತಮ್ಮ ವಸ್ತು, ರೀತಿ. ಭಾವ, ಶೈಲಿ, ರೂಪಗಳಲ್ಲಿ ಒಂದೊಂದೂ ವಿಭಿನ್ನವಾದ ವ್ಯಕ್ತಿತ್ವವನ್ನು ವ್ಯಕ್ತಪಡಿಸಿದವು. ಪದ್ಮಚರಣರು ಕವಿತೆಯನ್ನು ಆಯ್ಕೆ ಮಾಡಿರುವುದರಲ್ಲೇ ಅವರ ವ್ಯಕ್ತಿತ್ವದ ಪರಿಚಯವಾಗುತ್ತದೆ. ಕವಿತೆಯಲ್ಲಿ ಕವಿಯ ಆತ್ಮ ಹುದುಗಿರುವಂತೆ, ಸಂಯೋಜಕನ ಸಂಯೋಜನೆಗಳಲ್ಲಿ ಆ ಸಂಗೀತಗಾರನ ಹೃದಯವಿರುತ್ತದೆ.

ಕುವೆಂಪು ಅವರ ಹೆಚ್ಚು ಕವನಗಳು, ಸಾಹಿತ್ಯಭಾರದಿಂದ ಇರುವ ಕವಿತೆಗಳೆಲ್ಲಾ ಪದ್ಮಚರಣ್ ತೊಡಿಸಿದ ನಾದದುಡಿಗೆಯಲ್ಲಿ ಮತ್ತಷ್ಟು ಚಂದವಾದವು. ಇವುಗಳಲ್ಲಿ ‘ಅಂತರತಮ ಹೇ ಗುರು’ (ದರ್ಬಾರಿ ಕಾನಡ) ‘ಓ ನನ್ನ ಚೇತನಾ’, ‘ನಿನ್ನ ಪದಕಮಲದಲ್ಲಿ ಮನೆ ಮಾಡಿರುವ ನನಗೆ’ ಗೀತೆಗಳು ಪದ್ಮಚರಣರನ್ನು ಎತ್ತರಕ್ಕೆ ಬೆಳೆಸಿದ ಗೀತೆಗಳು. ಇದೇ ದಶಕದಲ್ಲಿ ಪದ್ಮಚರಣರು ಸಂಯೋಜಿಸಿದ ಬೇಂದ್ರೆಯವರ ‘ಅವತರಿಸು ಬಾ ನಾರಾಯಣ’, ‘ಏಳು ಚಿನ್ನ ಬೆಳಗಾಯ್ತು ಅಣ್ಣ’ ಮೊದಲಾದವು ಗಮನಾರ್ಹವಾದವು.

೧೯೬೦ರ ದಶಕದಲ್ಲಿ ಇಂಡಿಯಾ, ಚೈನಾ ಯುದ್ಧದ ಸಂದರ್ಭದಲ್ಲಿ ಆಕಾಶವಾಣಿ ಅನೇಕ ದೇಶಭಕ್ತಿ ಗೀತೆಗಳನ್ನು ಬಿತ್ತರಿಸಿದಾಗ ಅವುಗಳಲ್ಲಿ ಬಹುಪಾಲು ಗೀತೆಗಳನ್ನು ಪದ್ಮಚರಣರು ಸಂಯೋಜಿಸಿದರು.

ಪದ್ಮಚರಣರು ೫೦ರ ದಶಕದಲ್ಲೇ ಸಂಯೋಜಿಸಿದ್ದ ಅತ್ಯಂತ ಜನಪ್ರಿಯ ಗೀತೆಗಳೆಂದರೆ ಜಿ.ಎಸ್.ಶಿವರುದ್ಪ್ರನವರ 'ಉಡುಗಣವೇಷ್ಟಿತ' (ಯಮನ್) ಮತ್ತು 'ಹೌದೇನೇ ಉಮಾ' (ಮಾಂಡ್) ರಾಗದ ಎರಡು ಗೀತಗಳು. ಪದ್ಮಚರಣರು ಸಂಯೋಜಿಸಿದ್ದು ಸುಮಾರು ಸಾವಿರಾರು ಹಾಡುಗಳು. ಇವರ ನಂತರದಲ್ಲಿ ಬಂದವರು ಇರು ರಾಗಸಂಯೋಜಿಸಿದ್ದ ಅನೇಕ ಕವಿತೆಗಳಿಗೆ ಬೇರೆ ಬೇರೆ ರಾಗಸಂಯೋಜನೆಗಳನ್ನು ಮಾಡಿದರೂ, ಈ ಮೇಲಿನ ಎರಡು ಗೀತಗಳು ಮಾತ್ರ ಅವರದಾಗಿಯೇ ಉಳಿಯಿತು. ಕವಿತೆಯ ಗಾಂಭೀರ್ಯವನ್ನು ನಾಟಕೀಯತೆಯನ್ನು ಪ್ರತಿಬಿಂಬಿಸಿ, ಈ ಎರಡು ಹಾಡುಗಳ ಮೂಲಕ ಜಿ.ಎಸ್.ಶಿವರುದ್ರಪ್ಪನವರನ್ನು ಹಳ್ಳಿ ಹಳ್ಳಿಗೂ ಹೊತ್ತುಕೊಂಡು ಹೋಯಿತು. ಪದ್ಮಚರಣರ ಕೀರ್ತಿಯನ್ನು ಉತ್ತುಂಗಕ್ಕೇರಿಸಿದವೆಂದರೆ ಈ ಎರಡು ಗೀತಗಳು. ಇವು ಸಾರ್ವಕಾಲಿಕವಾದವೆಂಬುದೇ ಇದರ ಸಂಗೀತ ಸಂಯೋಜನೆಯ ಹೆಗ್ಗಳಿಕೆ.

ಐವತ್ತರ ದಶಕದಲ್ಲಿ ಪದ್ಮಚರಣರ ಸಂಯೋಜನೆಯಲ್ಲಿ ಕಾಣುತ್ತಿದ್ದ ಶಾಸ್ತ್ರೀಯ ಸಂಗೀತದ ಬಿಗಿ ಬಂಧ, ಗತ್ತುಗಾರಿಕೆಗಳು ಅರವತ್ತರ ದಶಕದ ಅವರ ಸಂಯೋಜನೆಗಳಲ್ಲಿ ಸ್ವಲ್ಪವೇ ಸಡಿಲಾಗಿ, ನವಿರಾಗಿ, ನಾಜೂಕಾಗುತ್ತಾ ಬಂದವು. ಕಾರನ ಅವರಿಗೆ ನಾಟ್ಯ ಸಂಗೀತದ ಸಂಪರ್ಕ ಬಂದಿದ್ದರಿಂದ ಎನ್ನಬಹುದು. ಸಾವಿರಾರು ಕವಿತೆಗಳಿಗೆ ರಾಗಸಂಯೋಜನೆ ಮಾಡಿದ ಪದ್ಮಚರಣ್ ಸಂಗೀತಜ್ಞತೆಯ ಜೊತೆಗೆ ಕವಿ ಹೃದಯವನ್ನೂ ಮೈಗೂಡಿಸಿಕೊಂಡವರು ನೂರಾರು ಕವಿತೆ. ಹಲವಾರು ಗೀತರೂಪಕಗಳನ್ನು ಆಕಾಶವಾಣಿಯ ಮತ್ತು ವೈಯುಕ್ತಿಕ ಒತ್ತಡಗಳಿಗಾಗಿ ಬರೆದರು. ೧೯೪೭ರಿಂದ ೧೯೯೪ರವರೆವಿಗೂ ರಾಗಸಂಯೋಜನೆ ಮಾಡುತ್ತಿದ್ದರು.

ಪದ್ಮಚರಣರ ರಾಗ ಸಂಯೋಜನೆಯ ಪ್ರಮುಖ ಲಕ್ಷಣವೆಂದರೆ ಸ್ವರಸ್ಥಾನ ಖಚಿತತೆ, ರಾಗದ ನಿಖರ ರೂಪ ಪ್ರಕಾಶದ ಸಾಂದ್ರತೆ. ಸಂಗೀತದಲ್ಲಿ ಯಾವ ಚಮತ್ಕಾರ, ಕಸರತ್ತುಗಳಿಲ್ಲದೆ, ರಾಗ, ಸ್ವರಗಳಲ್ಲಿ ವೈವಿಧ್ಯತೆ, ವಿಸ್ತರದ ಹರಹು ಎದ್ದು ಕಾಣುತ್ತದೆ. ಆದರೆ ಇವೆಲ್ಲಾ ಇವರ ಶಾಸ್ತ್ರೀಯ ಸಂಗೀತಕ್ಕೆ ಶಿಸ್ತಿನ ಸಿಪಾಯಿಗಳಂತೆ ವಿಧೇಯವಾಗಿರುತ್ತದೆ. ಎಲ್ಲಿಯೂ ಅನಿಶ್ಚಿತ ಉಲಿತವಾಗಲಿ, ಅನವಶ್ಯಕ ಗಮಕಗಳಾಗಲಿ ಕಾಣಲು ಸಾಧ್ಯವೇ ಇಲ್ಲ. ಶಾಸ್ತ್ರಿಯ ಸಂಗೀತದ ಮಣ್ಣಿನಲ್ಲಿ ಅರಳುವ ಅವರ ಸಂಯೋಜನೆಗಳು ಕೆಲವು ಬಾರಿ ಒಮ್ಮೆ ಕೇಳಿದ ಹಾಡಿನ ಧಾಟಿಯೇ ಮತ್ತೆ ಮತ್ತೆ ಕೇಳುತ್ತದೆ ಎನ್ನುವ ಭ್ರಮೆ ತರುತ್ತದೆ. ಕರ್ನಾಟಕ ಸಂಗೀತದ ಪದ್ಧತಿಯ ಕಟ್ಟುಪಾಡು ಅವರನ್ನು ಬಂಧಿಸಿರಬಹುದೆಂದು ಭಾಸವಾಗುತ್ತದೆ. ಆದರೆ ಪರಂಪರೆಯ ಹಾದಿಯನ್ನು ಬಿಟ್ಟು ಅಡ್ಡದಾರಿಯಲ್ಲಿ ನುಗ್ಗಿ ಬರುವುದೇ ಹೊಸತನವಲ್ಲ ಎಂದು ಭಾವಿಸುವ ಪದ್ಮಚರಣ್ ಸುಗಮಸಂಗೀತಕ್ಕೆ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟ ಇತಿಹಾಸಕಾರೆಂಬುದು ಸುಸ್ಪಷ್ಟ. ಅವರು ಪಿಟೀಲು ವಾದಕರಾಗಿದ್ದರಿಂದ ಆ ವಾದ್ಯದಲ್ಲಿ ಪ್ರಕಟವಾಗುವ ಆದ್ರತೆ, ಮಾಧುರ್ಯ, ನಿವೇದನಾಭಾವ, ಅಂತರಂಗವನ್ನು ಅಲ್ಲಾಡಿಸುವ ನೋವಿನ ಮಿಡಿತಗಳ ಜೊತೆಗೆ, ಪ್ರಚಂಡವೇಗ, ಉತ್ಸಾಹ, ಪ್ರೀತಿಯನ್ನು ವ್ಯಕ್ತ ಮಾಡುವ ಲವಲವಿಕೆ ಇವಿಷ್ಟೂ ಅವರ ಸಂಗೀತ ಸಂಯೋಜನೆಗೆ ಪೂರಕವಾಗಿ ಬೆರೆತುಹೋದವು.

ಪದ್ಮಚರಣರ ಸಂಗೀತ ಸಂಯೋಜನೆಗಳಲ್ಲಿ ಪ್ರತಿ ಮಧ್ಯಮದ ಬಳಕೆ ಅತಿಹೆಚ್ಚು. ಅವರ ಮೋಹವೆಲ್ಲಾ ಶುದ್ಧ ಮಧ್ಯಮಕ್ಕಿಂತ (ಮ೧) ಪ್ರತಿ ಮಧ್ಯಮ (ಮ೨) ಬಳಸಿದ ಸ್ವರಸಂಯೋಜನೆಗಳಲ್ಲಿ ಎದ್ದು ಕಾಣುತ್ತದೆ. ಈ ಮಧ್ಯಮ (ಮ೨) ಸ್ವರದ ಗುಣವಾದರೂ ಭಾಷೆಯ ಭಾವ ಬಳುಕುಗಳನ್ನು ಮತ್ತಷ್ಟು ಸುಪ್ರಕಾಶಗೊಳಿಸುವಂತಹದ್ದು. ಇದು ಬದುಕಿನ ಭಾವನಾತ್ಮಕ ಸಂಬಂಧಗಳನ್ನು ಸೂಕ್ಷ್ಮವಾಗಿ ಮೂರ್ತಿಕರಿಸುತ್ತದೆ.

ಪದ್ಮಚರಣರನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದ ಅನೇಕ ಮಹನೀಯರು ಅವರು ಪ್ರತಿ ಮಧ್ಯಮವನ್ನು ಬಳಸಿದ ರಾಗಸಂಯೋಜನೆ ಮಾಡಿದ ಎಲ್ಲಾ ಹಾಡುಗಳನ್ನೂ ಕಲ್ಯಾಣಿ ರಾಗವೆಂದು ಗುರುತಿಸಿ ಆರೋಪಿಸಿದ್ದಾರೆ. ಕಲ್ಯಾಣಿ ರಾಗದಲ್ಲಿ ಅವರೇ

ರಾಗ ಸಂಯೋಜಿಸಿರುವ ಅಪೂರ್ವವಾದ ಹತ್ತಾರು ಹಾಡುಗಳಿವೆ. ಅವು ಸುಗಮಸಂಗೀತಕ್ಕೂ ಶಾಸ್ತ್ರೀಯ ಸಂಗೀತಕ್ಕೂ ಕಟ್ಟಿರುವ ಸೇತುವೆಗಳಾಗಿವೆ. ಎರಡೂ ಪ್ರಕಾರದಲ್ಲೂ ಸಲ್ಲುವಂತಹದ್ದು. ಉದಾ: 'ಶೃಂಗಪುರಾಧೀಶ್ವರೀ' ಮುಂತಾದವು. ಸಾಹಿತ್ಯ-ಸಂಗೀತ ಎರಡೂ ಅವರದ್ದೇ ಆಗಿವೆ.

ಪದ್ಮಚರಣರ ಸಂಯೋಜನೆಗಳ ಮೂರು ಅಂಶಗಳನ್ನು ನಾವು ಗಮನಿಸಬಹುದು. ೧) ಶಾಸ್ತ್ರೀಯ ತೆಯ ಸೊಗಡು ೨) ಪರಂಪರೆಯ ಪ್ರಶಾಂತತೆ ೩) ಸಂಯಮದ ನಿರೂಪಣೆ-ಇವು ಮೂರು ಪದ್ಮಚರಣ್ ಅವರ ಸಂಯೋಜನೆಯ ಪ್ರಮುಖ ಲಕ್ಷಣಗಳು. ಇವರ ಸಂಗೀತ ಸಂಯೋಜನೆ ಜುಳು ಜುಳು ಹರಿಯುವ ಶುದ್ಧ ತಿಳಿನೀರಿನಂತೆ. ಅದರಲ್ಲಿ ಅಡೆತಡೆಗಳಾಗಲೀ ಹುಚ್ಚು ಮೊರೆತ ಅಬ್ಬರದ ಅಲೆಗಳಾಗಲೀ ಕಾಣುವುದಿಲ್ಲ.

**ವಿ.ಆರ್. ಭಾಗವತ್**

ಉತ್ತರ ಕರ್ನಾಟಕದ ಮತ್ತೊಬ್ಬ ಹೆಸರಾಂತ ಸಂಗೀತ ಸಂಯೋಜಕರೆಂದರೆ ವಿ.ಆರ್. ಭಾಗವತರ್ ಅವರು. ಶಾಸ್ತ್ರಿಯ ಸಂಗೀತ ಶೈಲಿಗೆ ಸೇರುವ ಸಂಯೋಜಕರಾದ ಭಾಗವತ ಅವರ ಹಿಂದೂಸ್ತಾನೀ ಸಂಗೀತವನ್ನು ಕಲಿತಿದ್ದು ಉತ್ತರ ಕರ್ನಾಟಕದಲ್ಲಿ 'ಸುಮಗಸಂಗೀತ'ವನ್ನು ಹಳ್ಳಿ ಹಳ್ಳಿಯಿಂದ ಗಡಿನಾಡುಗಳವರೆಗೆ ತೆಗೆದುಕೊಂಡು ಹೋದರು. ಕೊಂಕಣಿ, ಮರಾಠಿ, ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಗಳ ಜ್ಞಾನ ಹೊಂದಿದ್ದ ಭಾಗವತರು ೧೯೩೬ರಿಂದ ದ.ರಾ. ಬೇಂದ್ರೆಯವರ ಪ್ರಭಾವಕ್ಕೆ ಒಳಗಾದರು. ಬೇಂದ್ರೆ, ಕುವೆಂಪು. ಬೆಟಗೇರಿ ಕೃಷ್ಣ ಶರ್ಮ ಮುಂತಾದವರ ಭಾವಗೀತೆಗಳನ್ನು ಹಾಡುತ್ತಿದ್ದ ಅವರು ಕನ್ನಡ ಭಾವಗೀತೆಗಳನ್ನು ಮರಾಠಿ ಭಾಷೆಗೆ ಅನುವಾದಿಸಿದ್ದೇ ಅಲ್ಲದೆ, ಮರಾಠಿ ಗೀತೆಗಳನ್ನು ಕನ್ನಡಕ್ಕೆ ಅನುವಾದಿಸಿ ಅವುಗಳನ್ನು ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರದ ಗಡಿಜಿಲ್ಲೆಗಳಲ್ಲಿ ಹಾಡಿ ಭಾಷಾಸೌಹಾರ್ದತೆಯನ್ನು ಮೂಡಿಸಿದರು. ಮರಾಠಿ ಗೋಡಗೀತೆಗಳು ಕನ್ನಡ ಗೀತೆಗಳ ಹೂತೋಟದಲ್ಲಿ ಅರಳುವಂತೆ ಮಡುವಲ್ಲಿ ಎನ್ಕೆ ಕುಲಕರ್ಣಿಯವರು ಕಾರಣರಾದ ಹಾಗೆ, ಭಾಗವತರೂ ಕಾರಣರಾದರು. ಎರಡು ಭಾಷೆಗಳ ಕೊಳು ಕೊಡುಗೆಯಿಂದ ಭಾಷಾಬಾಂಧವ್ಯ ಮತ್ತಷ್ಟು ಬಿಗಿಯಾದವು. ಹಿಂದೂಸ್ತಾನೀ ಶಾಸ್ತ್ರೀಯಸಂಗೀತದ ಮಾಧುರ್ಯತೆಯನ್ನು ಸದುಪಯೋಗಿಸಿಕೊಂಡ ಭಾಗವತರು ಸುಗಮಸಂಗೀತಕ್ಕೆ ಮತ್ತೊಂದು ಆವರಣವನ್ನು ಸೃಷ್ಟಿ ಮಾಡಿಕೊಟ್ಟರು. ಸುಗಮಸಂಗೀತವನ್ನು ಕನ್ನಡ ಗೀತರೂಪಕ, ಗೀತನಾಟಕಗಳಲ್ಲಿ ಪ್ರಯೋಗಿಸಿ ಅದರ ಪರಿಧಿಯನ್ನು ವಿಸ್ತರಿಸಿದರು. ಇದು ಉತ್ತರ ಕರ್ನಾಟಕದ ಶ್ರೋತೃಗಳು 'ಸುಗಮಸಂಗೀತ'ದತ್ತ ಆಕರ್ಷಿತರಾಗಲು ಬಹುಮಟ್ಟಿಗೆ ಕಾರಣವಾಯಿತು. ಏಕೆಂದರೆ ಆಯಾಕಾಲದ ಬೇಡಿಕೆ, ಅಭಿರುಚಿಗೆ ಒದಗಿಕೊಳ್ಳುತ್ತಾ, ಮಿಡಿಯುತ್ತಾ ಬಂದ ರಂಈತೆಗಳೇ ಉತ್ತರ ಕರ್ನಾಟಕದಲ್ಲಿ ಆಗ ಪ್ರಮುಖ ಪಾತ್ರ ವಹಿಸಿದ್ದವು. ಕಾಲಾಂತರದಲ್ಲಿ 'ಗೆಳೆಯರ ಬಳಗ'ದ ಕವಿಗಳಿಂದ ಶಾಸ್ತ್ರೀಯ ನಾಟಕರಂಗದಲ್ಲಿ ಪರಿಣತಿಗಳಿಸಿದ ಕಲಾವಿದರಿಂದ 'ಕವಿತಾ ಗಾಯನ' ತನ್ನ ಅಂಗಳದೊಳಗೆ ಪಲ್ಲವಿಸಿ ಮೆಲ್ಲಮೆಲ್ಲನೆ ಅಡಿಯಿಟ್ಟಿತು. ಜಾನಪದ ಸೊಗಡನ್ನು ಶಾಸ್ತ್ರೀಯ -ರಂಗ ಸಂಗೀತ ಶೈಲಿಯನ್ನು ತನ್ನೊಳಗೆ ಹುದುಗಿಸಿಕೊಂಡಿತು. ಸುಮಾರು ಆರು ದಶಕಗಳ ಕಾಲ ತಮ್ಮ ಸುಗಮಸಂಗೀತದಿಂದ ಉತ್ತರ ಕರ್ನಾಟಕದಲ್ಲಿ ಮನೆ ಮಾತಾಗಿದ್ದ ಭಾಗವತರು 'ಕುಣಿಯೋಣ ಬಾರಾ' 'ಭೃಂಗದ ಬೆನ್ನೇರಿ ಬಂತು' 'ಅನ್ನಾವತಾರ' 'ಟೊಂಕದ ಮ್ಯಾಲೆ ಕೈ ಇಟಕೊಂಡು'- 'ಮೂರು ದಿನಗಳು ಜಾರಿದವು' 'ಚೆಲುವು ಹಿರಿಯದೋ'- ಮುಂತಾದ ಗೀತೆಗಳಿಂದ ತಮ್ಮ ಛಾಪು ಮೂಡಿಸಿದರು.

**ಎಚ್.ಕೆ.ನಾರಾಯಣ:** ೧೯೫೪ರಿಂದ ಆಕಾಶವಾಣಿಯ ನಿಲಯದ ಕಲಾವಿದರಾಗಿ, ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಅದ್ವಿತೀಯ ಪಾಂಡಿತ್ಯಗಳಿಸಿ 'ಸುಗಮಸಂಗೀತ'ದಲ್ಲಿ ಅತಿ ಮಧುರವಾಗಿ ರಾಗ ಸಂಯೋಜನೆ ಮಾಡಿದ ಹಿರಿಮೆ ಎಚ್.ಕೆ. ನಾರಾಯಣ ಅವರದು. 'ಸುಗಮಸಂಗೀತ'ದಲ್ಲಿ ಕವಿಯ ಹಾಗೂ ಸಂಗೀತ ಸಂಯೊಜಕನ ವ್ಯಕ್ತಿತ್ವದ ಅಭಿವ್ಯಕ್ತಿ ಇರುವುದು ಅತ್ಯಂತ ಸಹಜವಾದದ್ದು ಎಂಬುದನ್ನು ಈಗಾಗಲೇ ವಿವರಿಸಲಾಗಿದೆ. ಎಚ್.ಕೆ. ನಾರಾಯಣರ ಸಂಯೋಜನೆಗಳು ಅವರ ವ್ಯಕ್ತಿತ್ವವನ್ನು ಹೊತ್ತು ತರುತ್ತವೆ. ಕವಿತೆಯನ್ನು ಅವರು ಆರಿಸಿಕೊಳ್ಳುವ ಬಗೆ, ಅದಕ್ಕೆ ಶಾಸ್ತ್ರೀಯ ಸಂಗೀತದ ಸುಗಂಧವನ್ನು ಸೂಸುವುದು, ಎಲ್ಲ ಅವರ ಮೃದುಮಾತು, ನಡೆಯಂತೆ ಸರಳ

ಸುಭಗ. ಎಲ್ಲಿಯೂ ಆವೇಶವಾಗಲಿ, ದ್ವಂದತೆಯಾಗಲಿ, ಅಪಕ್ವ ಸ್ವರಸಂಯೋಜನೆಗಳಾಗಲಿ ಅವರ ಸಂಗೀತ ಸಂಯೋಜನೆಗಳಲ್ಲಿ ಕಂಡುಬರುವುದಿಲ್ಲ. ಸಂದಿಗ್ಧ ಸ್ಥರಸ್ಥಾನಗಳಂತೂ ಇಲ್ಲವೇ ಇಲ್ಲ. ಕೆಲವೊಮ್ಮೆ ಶಾಸ್ತ್ರೀಯ ಕಟ್ಟುಪಾಡುಗಳಿಗೆ ಸಿಕ್ಕಿಕೊಳ್ಳದಿದ್ದರೂ ಆ ಶಾಸ್ತ್ರೀಯವೆನಿಸದೆ, ಸಾಹಿತ್ಯ ಪ್ರಸಾರ ಕಾರ್ಯದಲ್ಲಿ ಪ್ರಮುಖವಾಗಿಸಿಕೊಳ್ಳುವ ಸೌಲಭ್ಯ ಗುಣಗಳು ಇವರ ರಾಗ ಸಂಯೊಜನೆಯಲ್ಲಿ ಕಂಡುಬರುತ್ತವೆ.

ಎಚ್.ಕೆ.ನಾರಾಯಣ್ ಅವರ ಸಂಯೋಜನೆಯಲ್ಲಿ ಅವರದೇ ಆದ ವೈಶಿಷ್ಟ್ಯತೆ ಛಾಪಿದೆ. ಶಾಸ್ತ್ರೀಯ ಸಂಗೀತ ವಿದ್ವಾಂಸರಾದರೂ, ತಮ್ಮ ವಿದ್ವತ್ತಿನ ಭಾರವನ್ನು ಕವಿತೆಗಳ ಮೇಲೆ ಬೀಳದಂತೆ ನಾರಾಯಣ್ ಅವರು ಕವಿತೆಗಳಿಗೆ ರಾಗದ ತೊಡಿಗೆ ತೊಡಿಸಿದ್ದಾರೆ.

ಕರ್ನಾಟಕ ಶಾಸ್ತ್ರೀಯ ಮತ್ತು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಈ ಎರಡೂ ಪ್ರಕಾರಗಳಲ್ಲಿ ಪರಿಣತಿ, ಪಾಂಡಿತ್ಯ ಪಡೆದ ನಾರಾಯಣರು, ಈ ಎರಡೂ ಪ್ರಕಾರದ ಸಂಗೀತ ಶೈಲಿಯ ಉತ್ತಮಾಂಶಗಳನ್ನು ಗ್ರಹಿಸಿ ತಮ್ಮ ಸಂಯೋಜನೆಗಳಲ್ಲಿ ಹಿಡಿದಿಟ್ಟುಕೊಂಡವರು. ಕಣವಿಯವರ ವಿಶ್ವವಿನೂತನ, ಲಕ್ಷ್ಮೀನಾರಾಯಣಭಟ್ಟರ-'ಈ ನಮ್ಮ ತಾಯಿ ನಾಡು' 'ಬಾರೋ ವಸಂತ' – 'ಏಕೆ ಕಾಡುತಿದೆ'– 'ತೊರೆದು ಹೋಗದಿರುಜೋಗಿ'-ಪು.ತಿ.ನ. ಅವರ 'ಓ ಭಾರತಿ' – ಬೇಂದ್ರೆಯವರ 'ನನ್ನ ಪುಟ್ಟಪುರಂದರ' 'ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೇ' 'ದಣಿದ ಜೀವಕ್ಕೆ' ಮುಂತಾದ ಗೀತೆಗಳು ಶಾಸ್ತ್ರೀಯ ಗಿಡದಲ್ಲಿ ಬಿಡಿಸಿಟ್ಟ ಸುಗಮಸಂಗೀತದ ಹೂಗಳಾಗಿ ಅರಳಿ ಪರಿಮಳ ಬೀರುತ್ತಿವೆ.

**ವಸಂತ ಕನಕಾಪುರ:** ೧೯೭೫ರಿಂದ ಧಾರವಾಡ ಆಕಾಶವಾಣಿಯಲ್ಲಿ ನಿಲಯದ ಕಲಾವಿದರಾಗಿ ಬೆಳಕಿಗೆ ಬಂದ ವಸಂತ್ ಅವರು ಹಾರ್ಮೋನಿಯಂ ವಾದ್ಯ ವಾದನದಲ್ಲಿ ಮಾಂತ್ರಿಕನೆಂದೇ ಖ್ಯಾತಿ ಪಡೆದವರು. ಬೆಂಗಳೂರಿನ ಬಳಿ ಇರುವ 'ಕನಕಪುರದವರು. ಪುಣೆಯಲ್ಲಿ ಹಾರ್ಮೋನಿಯಂ ನುಡಿಸುತ್ತಿದ್ದು' ಅತ್ಯಂತ ಪ್ರತಿಭಾವಂತರಾಗಿದ್ದರೂ ತಮ್ಮನ್ನು ಸಹಕಲಾವಿದರು ಗಮನಿಸದೇ ಇದ್ದ ಕಾರಣ, ಕನಕಪುರವನ್ನು ಹಿಂದೀ ಭಾಷೆಯ ಉಚ್ಛಾರಣೆಯಂತೆ ಕನಕಾಪೂರ್-ಎಂದು ಮಾಡಿ 'ವಸಂತ್' ಎನ್ನುವ ಹೆಸರನ್ನು ಸೇರಿಸಿಕೊಂಡ ಮೇಲೆ ಅವರಿಗೆ ಶುಕ್ರದೆಸೆ ಪ್ರಾರಂಭವಾಯಿತು. ಅವರ ನಿಜವಾದ ಹೆಸರು 'ವಾಸುದೇವಮೂರ್ತಿ' ಎಂದು. ಹಿಂದೂಸ್ತಾನಿ ಸಂಗೀತದ ಎಲ್ಲಾ ದೊಡ್ಡ ದೊಡ್ಡ ವಿದ್ವಾಮಸರುಗಳಿಗೆ ಸಾಥಿ ನೀಡಿದ ವಸಂತ್ ಅವರು ಆಕಾಶವಾಣಿಯ ಸಂಗೀತ ಸಂಯೋಜಕರಾದ ನಂತರ ಅನೇಕ ಗೀತೆಗಳಿಂದ ತಮ್ಮ ಸ್ವಂತ ಛಾಪು ಮೂಡಿಸಿದರು. ಕೆ.ಎಸ್.ನ ಅವರ 'ರಸ ಸಾಗರದಲಿ' ನಗೆಯೆ ಪ್ರೀತಿಯೆಂದು – ಕುವೆಂಪು ಅವರ 'ಜ್ಯೋತ್ಸೆ ತುಂಬಿ' ಸಿದ್ಧಲಿಂಗ ಪಟ್ಟಣಶೆಟ್ಟಿಯವರ ಬಾರೆ ತಾಯಿ, ಬುದ್ಧಣ ಹಿಂಗಮಿರೆಯವರ 'ನಿನ್ನ ಗುಡಿಯ ಬಾಗಿಲಲಿ ಬೇಂದ್ರೆಯವರ 'ಸಂಜೆ ಗೆಂಪು' ಮುಂತಾದ ಗೀತೆಗಳಿಂದ ಪ್ರಖ್ಯಾತರಾಗಿದ್ದಾರೆ.

**ಗೀತಾಭಿನಯದ ಶೈಲಿ**

**ಬಾಳಪ್ಪ ಹುಕ್ಕೇರಿ**

ನಮ್ಮ ಸುಗಮಸಂಗೀತಗಾರದಲ್ಲಿ ಹಿರಿಯ ಕಲಾವಿದರಾಗಿ ಉತ್ತರ ಕರ್ನಾಟಕದಲ್ಲಿ 'ಸುಗಮಸಂಗೀತ'ವನ್ನು ಹಳ್ಳಿಹಳ್ಳಿಗೂ, ಮೂಲೆ ಮೂಲೆಗೂ ಕೊಂಡೊಯ್ದವರ ಬಾಳಪ್ಪಹುಕ್ಕೇರಿಯವರು. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಅಡಿಪಾಯದಲ್ಲಿಯೇ 'ರಂಗಗೀತೆ'ಗಳ ರುಚಿ ಹತ್ತಿಸಿಕೊಂಡ ಬಾಲಪ್ಪನವರು 'ಮಹಾತ್ಮಾ ಸೇವಾ ಸಂಗೀತ ನಾಟಕ ಮಂಡಳಿ' ಎಂಬ ನಾಟಕ ಕಂಪನಿಯನ್ನು ೧೯೩೨ರಿಂದ೧೯೪೦ರ ವರೆವಿಗೆ ಸುಮಾರು ಎಂಟು ವರುಷಗಳ ಕಾಲ ನಡೆಸಿದವರು. ಸ್ವಾತಂತ್ರ್ಯ ಪೂರ್ವದಲ್ಲಿದ್ದ ದೇಶಭಕ್ತಿಯ ಆವೇಶ, ಪ್ರೇಮದ ತುಡಿತವನ್ನು ತಮ್ಮ ತನುಮನದಲ್ಲಿ ತುಂಬಿಕೊಂಡಿದ್ದ ಬಾಳಪ್ಪನವರು ಗಾಯನದ ಶೈಲಿಗಿಂತ, ಗಾಯನದ ವಸ್ತುವಿಗೆ ಹೆಚ್ಚು ಬೆಲೆ ಕೊಟ್ಟಿದುದು ಅವರ ಸಂಯೋಜನೆಯಲ್ಲಿ ಎದ್ದು ಕಾಣುವ ಅಂಶವಾಗಿದೆ. ನಾಟಕ ಮಂಡಳಿಯ ಪ್ರಭಾವದಿಂದ ಸುಗಮಸಂಗೀತವನ್ನು ಅವರು ಹಾಡುತ್ತಿದ್ದ ವೈಖರಿ ಅಂದಿನ ನಾಟ್ಯಗೀತೆಯನ್ನೇ ಕಣ್ಣಮುಂದೆ ತರುತ್ತದೆ. ಮಹಾತ್ಮ ಗಾಂಧಿಯವರ ಆದರ್ಶಕ್ಕೆ ತನ್ನನ್ನು

ಅರ್ಪಿಸಿಕೊಂಡಿದ್ದ ಬಾಳಪ್ಪನವರು ತಮ್ಮ ಗೀತೆಗಳ ಮೂಲಕ ಆಗಿನ ಕಾಲದ ಜನರಿಗೆ ಸ್ವಾತಂತ್ರ್ಯ ಚಳುವಳಿಯ ಅರಿವನ್ನು ಮೂಡಿಸಿದ್ದರು. ಸುಗಮಸಂಗೀತದ ಪ್ರಾರಂಭ ಕಾಲವಾಗಿದ್ದರಿಂದ ಅಂದಿನ ಸಾಮಾಜಿಕ ತುರ್ತಿಗೆ ಬೇಕಾದ ಗೀತೆಗಳನ್ನುಹಾಡುವುದು ಅನಿವಾರ್ಯವೂ ಆಗಿತ್ತು. ಸ್ವಾತಂತ್ರ್ಯ ಸಿಗುವವರೆವಿಗೆ ಅವರುಹಾಡಿದ ಗೀತೆಗಳೆಲ್ಲಾ ವೀರಾವೇಶದಿಂದಿರುವ ಗಂಡುಗಲಿಗಳ ಹಾಡಿನಂತೆಯೇ ಇದ್ದವು. ರಂಗಗೀತೆಗಳ ಆವೇಶವೂ ಅದನ್ನು ಅನುಸರಿಸಿತ್ತು. ಆದರೆ ಸ್ವಾತಂತ್ರ್ಯ ಬಂದ ನಂತರ, ಜಾನಪದ ಗೀತೆಗಳು, ಸೋಬಾನೆ ಹಾಡುಗಳು, ಪ್ರಖ್ಯಾತ ಕವಿಗಳಾದ ಕುವೆಂಪು, ಬೇಂದ್ರೆ, ಕಣವಿ, ನರಸಿಂಹಸ್ವಾಮಿ, ಕಾವ್ಯಾನಂದ, ಆನಂದಕಂದ, ಶಿಶುನಾಳ ಷರೀಫ, ಕಡಕೋಳ ಮಡಿವಾಳಪ್ಪ ಮುಂತಾದವರ ಗೀತೆಗಳಿಗೆ ರಾಗಸಂಯೋಜನೆ ಮಾಡಿ ಹಾಡತೊಡಗಿದರು. ಕುವೆಂಪು ಅವರ 'ಬಾರಿಸು ಕನ್ನಡ ಡಿಂಡಿಮವ'-ಕಾವ್ಯಾನಂದರ' ಮೊದಲು ಮಾನವನಾಗು, ಬೇಂದ್ರೆಯವರ 'ಯಾತಕವ್ವಾ ಹುಬ್ಬಳ್ಳಿ ಧಾರವಾಡ, ಕ್ರಾಂತಿಕಾರಕ ಗೀತೆಗಳಾಗಿ, ಸಾಂದರ್ಭಿಕ ಪರಿಣಾಮವನ್ನುಂಟು ಮಾಡಿದವು.

ಬಾಳಪ್ಪನವರು ಶಾಸ್ತ್ರೀಯ ಸಂಗೀತದಲ್ಲಿ ತಮಗೆ ಪ್ರಭುತ್ವವಿದ್ದರೂ ಅದರ ಕಟ್ಟುಪಾಡುಗಳಿಂದಾಚೆ ಬಂದು ಹಾಡಿದರು. ಕವಿತ್ವಕ್ಕೆ ಹಾಡಿನ ಅಂತರಾರ್ಥಕ್ಕೆ ಅಥವಾ ಅದರ ಪಾಕಕ್ಕೆ ತಮ್ಮ ಹಾಡಿನಲ್ಲಿ ಮೊದಲ ಸ್ಥಾನ ನೀಡಿದರು. 'ಇನ್ನೂ ಯಾಕ ಬರಲಿಲ್ಲವ್ವಾ' ಎಂಬ ಬೇಂದ್ರೆಯವರ ಗೀತೆಯ ಸಂಯೋಜನೆಯಲ್ಲಿ ಜಾನಪದ ಮಟ್ಟಿನ ದೇಸಿಯಂತೆ ಕಂಡರೆ-'ಬಾರಿಸು ಕನ್ನಡ ಡಿಂಡಿಮವ' ಎಂಬಲ್ಲಿ ಸಾವಿರ ಜನರನ್ನು ಎತ್ತಿ ಒಯ್ಯುವ ಸಾರೋಟು ಧೀರನ ಕೆಚ್ಚು, ನಂಬಿಕೆಗಳು ತುಂಬಿ ತುಳುಕುತ್ತಿವೆ. 'ನಾ ಸಂತೆಗೆ ಹೋಗಿದ್ವಿ'-'ನಾನು ಬಡವಿ ಆತ ಬಡವ'-'ಹಿಂದೂಸ್ಥಾನಕ ಎಂಥವ ಬೇಕ'-ಮುಂತಾದ ಹಾಡುಗಳು ವಿಶಿಷ್ಟ ಶೈಲಿಯಲ್ಲಿವೆ. ಅಂದಂದಿನ ತುರ್ತಿಗೆ ಅಂದಂದಿನ ಪ್ರೇಕ್ಷಕ ವರ್ಗಕ್ಕೆ ಹೊಂದುವ ಭಕ್ತಿಗೀತೆ, ತತ್ವಪದ, ಜಾಪದ, ಶಿಷ್ಟ ಕವಿತೆ, ಯಾವುದು ಬೇಕೋ? ಅದನ್ನು ಹಾಡುವ ಕಲೆಗಾರಿಕೆ ಇದ್ದ ಬಾಳಪ್ಪನವರ ವಿಶೇಷತೆ ಏನೆಂದರೆ, ಅವರ ಗಾಯನ ಶೈಲಿಯಲ್ಲಿ ಎದ್ದು ಕಾಣುತ್ತಿದ್ದ ಅಪ್ಪಟ ಪ್ರಾದೇಶಿಕ, ಸಂಸ್ಕೃತಿ.ನಮ್ಮ ಜನರ ಆಚಾರ ವಿಚಾರ, ಕಟ್ಟುಕಟ್ಟಲೆಗಳಿಗೆ, ಇವರ ಹಾಡು, ದನಿಯಾಗಿತ್ತು. 'ಸುಗಮಸಂಗೀತ' ಜನ ಸಾಮಾನ್ಯರ ಆಶೋತ್ತರಗಳನ್ನು ಈಡೇರಿಸಬಲ್ಲದು ಎಂಬ ನಿಲುವಿಗೆ ಬಾಳಪ್ಪನವರನ್ನು ಉದಾಹರಿಸಬಹುದು. ಗಾಯನ ಪ್ರಸ್ತುತಿಯಲ್ಲಿ ಸರಳತೆಯೊಂದಿಗೆ ಮುಗ್ಧತೆಯನ್ನು, ಮುಕ್ತವಾದ ನಿರ್ಮಲ ಮನಸ್ಸನ್ನು ತೋರಿಸಿದವರು ಬಾಳಪ್ಪ ಹುಕ್ಕೇರಿಯವರು. "ಹಾಡನ್ನು ಹರವೋಣ ಮತ್ಸರ ಮರೆಯೋಣ" ಎಂಬ ಮಂತ್ರವನ್ನು ಕೇಳುಗರಿಗೆ ಕೊಟ್ಟ ಬಾಳಪ್ಪನವರು ಹಾಡಿನಿಂದ ಏನೆಲ್ಲಾ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟರು. ಒಂದು ಈತೆ ಭಾವೈಕ್ಯತೆಯನ್ನು ಮೂಡಿಸಬಲ್ಲದು, ಮತ್ಸರ, ಸೇಡು, ದ್ವೇಷಗಳನ್ನು ನೀಗಿಸಬಲ್ಲದು ಎಂಬ ಕಲ್ಪನೆಯೇ ಧ್ವನಿ ಪೂರ್ಣವಾಗಿರುವಾಗ, ಅದರ ದೀಕ್ಷೆ ಇನ್ನು ಹೇಗಿರಬಹುದು? ಸುಗಮಸಂಗೀತದ ಮೂಲಕ ಆ ಸೂತ್ರಕ್ಕೆ ಭಾಷ್ಯವನ್ನೇ ಬರೆದಿಟ್ಟು ಹೋದವರು 'ಸಾವಿರ ಹಾಡಿನ ಸರದಾರ'ರಾದ ಬಾಳಪ್ಪ. ಮನುಷ್ಯನ ಜೀವನದಲ್ಲಿ ಸಾಹಿತ್ಯ ಎಂತಹ ಪರಿಣಾಮವನ್ನು ಬೀರಬೇಕು ಎನ್ನುವುದನ್ನು ತಮ್ಮ ಹಾಡುಗಳ ಮೂಲಕ ಕಲಿಸಿದ ಬಾಳಪ್ಪ ಕೇವಲ 'ಸುಗಮಸಂಗೀತ'ಗಾರರಾಗದೆ ಬದುಕಿಗೆ ದಾರಿ ತಓರುವ ದಾರ್ಶನಿಕರಾದದ್ದು ವಿಶೇಷವಾದದ್ದು. 'ಹಾಡನ್ನು ಹರವೋಣ ಮತ್ಸರವ ಮರೆಯೋಣ' ಎಂಬ ಮಾತಿನಲ್ಲಿ ಮಾನವನ ಮೂಲ ದೌರ್ಬಲ್ಯವನ್ನೂ, ಅದನ್ನು ಕಳೆದುಕೊಂಡು ಪಾರಾಗುವ ಅರಿವನ್ನೂ ಹೇಳುತ್ತಾ, ಸಾಮಾಜಿಕ ಕಳಕಳಿಯನ್ನು ಮೆರೆದ ಬಾಳಪ್ಪನವರು ದ.ರಾ. ಬೇಂದ್ರೆಯವರ ಬಾಯಲ್ಲಿ 'ವ್ಹಾ ಬಾಳಪ್ಪ ನೀ ನೂರು ವರ್ಷ ಬಾಳಪ್ಪ' ಎನಿಸಿಕೊಂಡರು.

ರಂಗಗೀತೆಗಳ ಗುಂಗಿಗೆ ಜಾನಪದ ಲಯ ಧಾಟಿಗಳನ್ನು ತುಂಬಿಸಿ ಕವಿತೆಗಳಿಗೆ ರಾಗ ಸಂಯೋಜನೆ ಮಾಡಿದ ಬಾಳಪ್ಪನವರು ಹಾಡಿನ ಮಧ್ಯೆ ಮಾತಾಡುತ್ತಾ, ಮಾತಿನ ಮಧ್ಯೆ ಹಾಡುತ್ತಾ ಕಾರ್ಯಕ್ರಮಗಳನ್ನು ನೀಡುತ್ತಿದ್ದ ಶೈಲಿಯನ್ನು ಮತ್ತೆ ಯಾರೂ ಅನುಸರಿಸಲೇ ಇಲ್ಲ. ಬಾಳಪ್ಪನವರ ಅಂದಿನ ಹಾಡುಗಾರಿಕೆಗೆ ಸ್ಫೂರ್ತಿಯಾಗಿದ್ದುದು ಅಂದಿನ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿ. ನವೋದಯ ಕವಿಗಳ ಕವಿತೆಯಲ್ಲಿ ಕಂಡ ಸಾಮಾಜಿಕ ಕಳಕಳಿಯೇ ಅಂದಿನ ಸುಗಮಸಂಗೀತವಾಗಿತ್ತು. ಬಾಳಪ್ಪ ಹುಕ್ಕೇರಿಯವರ ಆಗಮನದ ಮುನ್ನ ಮತ್ತು ಅವರಿದ್ದ ಪರಿಸರದಲ್ಲಿ ಸುಗಮಸಂಗೀತವೆಂದರೆ ಇವೇ ಎಂದಾಗಿತ್ತು. ನಂತರ ಬಂದ ಕಾಳಿಂಗರಾಯರು ಅದಕ್ಕೊಂದು ಹೊಸರೂಪ ಕೊಟ್ಟರು.

**ಕಾಳಿಂಗರಾಯರು (೩೧-೮-೧೯೧೪ - ೨೧-೯-೧೯೮೧)**

ಸ್ವಾತಂತ್ರ್ಯ ಪೂರ್ವದಲ್ಲಿ ದೇಶಭಕ್ತಿಗೀತೆ, ಕನ್ನಡಗೀತೆಗಳಿಂದ ತುಂಬಿದ ಕವಿತಾ ಗಾಯನದ ಮಸುಕಿನ ಹಾದಿಗೆ ಬೆಳದಿಂಗಳ ಬೆಳಕನ್ನು ಚೆಲ್ಲಿದವರು ನಮ್ಮ ಕಾಳಿಂಗರಾಯರು. ದುರ್ಗಮವಾಗಿದ್ದ ಕವಿತಾಗಾಯನವನ್ನು ಸುಗಮ ಸುಂದರ ಮಾಡಿದ ಹಿರಿಮೆಯೂ ಅವರಿಗೆ ಸಲ್ಲುತ್ತದೆ. ನವಿರಾದ ಮಧುರಕಂಠದಿಂದ ಅವರು ಹಾಡಲು ತೊಡಗಿದರೆಂದರೆ ಸ್ವರಕನ್ಯೆಯರು ನಾದನರ್ತನದಲ್ಲಿ ಅವರ ಕಂಠದಿಂದ ತೊನೆಯುತ್ತಿದ್ದರು. ಕವಿತಾ ಪ್ರಸ್ತುತಿಯಲ್ಲಿ ಅವರಿಗಿದ್ದ ಸಂಯಮ ಅದ್ಭುತವಾದದ್ದು.

ಕವಿತೆಯ ಮೊದಲ ಅಕ್ಷರದಿಂದ ಕಡೆಯ ಅಕ್ಷರದವರೆವಿಗೆ ರಾಗಸಂಯೋಜನೆ ಮಾಡಿದ್ದ ರೀತಿ, ಪದ, ಪದಗಳ ಅರ್ಥವನ್ನು ಹೆಜ್ಜೆ ಮೇಲೆ ಹೆಜ್ಜೆಯಿಟ್ಟು ನಡೆಸಿಕೊಂಡು ಎಲ್ಲಿ ಯತಿ ಬೇಕೋ, ಅಲ್ಲಿ ನಿಂತು, ಎಲ್ಲಿ ರಾಗದ ಪಲುಕುಬೇಕೋ, ಅಲ್ಲಿ ಪಲುಕಿ, ಮೇಲೆ ಮೇಲೆ, ಹತ್ತಿ, ಹತ್ತುತ್ತಾ ಕವಿತಾ ಸ್ಪರ್ಶವನ್ನು ಮಾಡಿಸುತ್ತಲೇ, ತಾನು ಕಂಡ ಕಾವ್ಯದ ಬೆಡಗು ಬಿನ್ನಾಣವನ್ನು ಆನಂದಿಸಿ, ಅನಂತರ ಕೇಳುಗರಿಗೆ ಪ್ರಸ್ತುತ ಪಡಿಸುತ್ತಿದ್ದ ಕಾಳಿಂಗರಾಯರ ಶೈಲಿ ಅಪೂರ್ವವಾದದ್ದು.

'ಸುಗಮಸಂಗೀತ' ತನ್ನ ಹೆಸರಿನಿಂದಲೇ ತಿಳಿಸುವಂತೆ ಅದು ಸಂಗೀತದ ಶೈಲಿಯಾದರೂ ಎಲ್ಲವೂ ಅಲ್ಲಿ ಸುಗಮವಲ್ಲ. ಕಾವ್ಯದ ಅರ್ಥವನ್ನು ತನ್ನ ತಲೆಯ ಮೇಲೆ ಎತ್ತಿಕೊಂಡು, ಹೊತ್ತುಕೊಂಡು ಬರುವ ಸಂಗೀತ ಅದು. ಕೇಳುಗರಿಗೆ ಕಾವ್ಯ, ಶಾಸ್ತ್ರ, ಯಾವುದರ ವಿಶೇಷ ಜ್ಞಾನದ ಅರಿವು ಬೇಕಾಗಿಲ್ಲ. ಸಹೃದಯತೆಗೆ, ಸುಮಧುರತೆಗೆ ಕಿವಿ ತೆರೆದು ಕುಳಿತವರಿಗೆ ಅದು ಸುಗಮಸಂಗೀತ. ಕಾಳಿಂಗರಾಯರು ಕವಿತಾ ಗಾಯನವನ್ನು ಸಾಮಾನ್ಯನ ಕಿವಿಗೆಟುಕುವಂತೆ ಸರಳಿಕರಿಸದೆ ಹೋಗಿದ್ದಿದ್ದರೆ, ಇಂದು ಸುಗಮಸಂಗೀತ ಬಹುಶಃ ಇಷ್ಟು ಜನಪ್ರಿಯತೆಯನ್ನು ಗಳಿಸುತ್ತಿರಲಿಲ್ಲ ಎನ್ನಬಹುದು. ಸುಗಮಸಂಗೀತ ಇಂದು ಮನೆ ಮನೆಗೂ ಹರಡಿ ಕಿವಿಕಿವಿಗಳನ್ನು ತುಂಬಲು ಕಾಳಿಂಗರಾಯರೇ ಬಹುಮಟ್ಟಿಗೆ ಕಆರಣ. ಸುಗಮಸಂಗೀತವೆಂದರೆ ಕೇವಲ ಕವಿತಾ ಗಾಯನವಲ್ಲ. ಕವಿತೆಗೆ ರಾಗ ಜೋಡಿಸಿ ಮಧುರವಾಗಿ ಹಾಡಿದ ಮಾತ್ರಕ್ಕೆ ಅದು ಸಂಗೀತವಾಗುತ್ತದೆಯೇ ವಿನಃ ಸುಗಮಸಂಗೀತವಾಗುವುದಿಲ್ಲ. ಕವಿತೆ ಅಂತರಾಳದಲ್ಲಿರುವ ನೂರು ಭಾವನೆಗಳು, ನಿವೇದನೆಗಳು, ಧನ್ಯಾರ್ಥಗಳು, ಒಳಮಿಡಿತಗಳು ಎಲ್ಲವೂ ಹಾಡಾಗಿ ಹರಿಯಬೇಕು. ಕವಿತೆಯ ಆಳಕ್ಕಿಳಿದು ಮೇಲೆ ಹತ್ತಿ ಬಂದವರು ಮಾತ್ರ, ಆ ಕವಿತೆಯನ್ನು ಅರ್ಥಮಾಡಿಕೊಳ್ಳಬಲ್ಲರು. ಕವಿತೆಯ ಒಳತೋಟಿಯನ್ನು ಸಮಾನ ಹೃದಯಿಗಳಾಗಿ ಅರಿತು ಅದನ್ನು ಆ ಕವಿತೆಯ ದನಿಯಲ್ಲಿ, ಎಂದರೆ ಕವಿತೆಯ ಭಾವದಲ್ಲಿ ಮೂಡಿಸಬಲ್ಲವರು ಮಾತ್ರ ಸುಗಮಸಂಗೀತಗಾರರಾಗುತ್ತಾರೆ. ಇದನ್ನು ಪು.ತಿ.ನರವರು ಹೇಳಿದ 'ಭವನಿಮಜ್ಜನಚಾತುರ್ಯಾ ಲಘಿಮಾಂ ಕೌಶಲಾಂ'- ತತ್ತ್ವಕ್ಕೆ ಅನ್ವಯಿಸಬಹುದು. ಕಾವ್ಯದೊಳಗೆ ಇಳಿದು ಚಾತುರ್ಯದಿಂದ ಮಿಂದು, ಕುಶಲದಿಂದ ಮೇಲೆದ್ದು ಬರುವುದೇ ಇಲ್ಲಿ ಹೆಗ್ಗಳಿಕೆ. ಕಾವ್ಯದ ಅನುಭವವನ್ನು ಸುಗಮಸಂಗೀತಗಾರ ಅನುಭವಿಸಿ ಮೇಲೆದ್ದು ಅದರಲ್ಲಿ ತಾನು ಪಡೆದ ಸುಖಾನುಭವವನ್ನು, ಪ್ರಸ್ತುತಪಡಿಸಬೇಕು. ಪ್ರಸ್ತುತಿಯಲ್ಲಿಯೂ ಸಂಯಮ, ಶಿಸ್ತು, ಪ್ರಾಮಾಣಿಕತೆಯನ್ನು ಮುನ್ನಡೆಸಿಕೊಂಡು, ಕವಿಯ ಕಾವ್ಯದ ಪರಿಧಿಯನ್ನು ದಾಟದೆ, ಅತಿಯಾದ ಸ್ವಾತಂತ್ರ್ಯ ತೆಗೆದುಕೊಳ್ಳದೆ ವಿನಯಶೀಲನಾಗಿ, ಕವಿತೆಯನ್ನು ಹಾಡಿನ ಮೂಲಕ ಹನಿಹನಿಯಾಗಿ ತೆರೆದು ಕವಿತೆಯ ವಿರಾಟ್ ದರ್ಶನವನ್ನು ಮಾಡಿಸಬೇಕು. ಇದು ನಿಜವಾದ ಸುಗಮಸಂಊತ 'ಸುಗಮ' ಎನ್ನುವ ಶಬ್ದದ ಅರ್ಥವೇ ಇದು. ಕಾಳಿಂಗರಾಯರಿಗೆ ಈ ಶಕ್ತಿ ಸಿದ್ಧಿಸಿದ್ದೇ ಅವರು ಜನಸಾಮಾನ್ಯರ ಹೃದಯ ಸಿಂಹಾಸನವನ್ನೇರಲು ಮೊದಲ ಹಂತವಾಯಿತು. ಅವರು ಹಾಡಿದ 'ಉದಯವಾಗಲಿ ನಮ್ಮ ಕನ್ನಡ ನಾಡು', 'ಬಾರಯ್ಯ ಬೆಳದಿಂಗಳೇ', 'ಅನಂತದಿಂದಿಗಂತದಿಂ', 'ಎಲ್ಲಾದರೂ ಇರು', 'ಬ್ರಹ್ಮ ನಿಂಗೆ ಜೋಡಿಸ್ತೀನಿ', 'ಮುಗಿಲಮಾರಿಗೆ', 'ಅಳುವ ಕಡಲೊಳು', 'ಬಾಗಿಲೊಳು ಕೈ ಮುಗಿದು', 'ರತ್ನನ ಪದಗಳು', 'ಮೂಡಲ್ ಕುಣಗಲ್ ಕೆರೆ' ಮುಂತಾದ ಗೀತೆಗಳು ತಮ್ಮ ವೈವಿಧ್ಯತೆಯಿಂದ ಜನಮನ ಸೂರೆಗೊಂಡವು. ಇಲ್ಲಿ ನಮಗೆ ಪ್ರಮುಖವಾಗಿ ಕಾಣುವುದು 'ವೈವಿಧ್ಯತೆ' ಎನ್ನಬಹುದು. ಸುಗಮಸಂಗೀತಕ್ಕೆ ಬೇಕಾದ ಪ್ರಮುಖ ಗುಣವೇ ವೈವಿಧ್ಯತೆ. ನೋವು, ನಲಿವು, ವಿರಹ, ಹರುಷ, ಏಕಾಂತ, ಚಿಂತೆ, ಹೀಗೆ ಮಾನವನ ಭಿನ್ನ ಭಿನ್ನ ಮನೋಭಾವಗಳಿಗೆ ತಕ್ಕಂತೆ ಮೂಡಿದಂತಹ ವಿಭಿನ್ನ ಭಾವಗಳೇ ಸುಗಮಸಂಗೀತದ ವಸ್ತುವಾಗಿದ್ದರಿಂದ ಗಾಯನಕ್ರಮಗಳಲ್ಲಿ ಏಕತಾನತೆ ತಪ್ಪಿಹೋದವು. ಹಾಡುಗಳು

ವಸ್ತು ವೈವಿಧ್ಯತೆಯಿಂದ, ಛಂದಸ್ಸು, ಲಯಗತಿಗಳ ವೈವಿಧ್ಯತೆಯಿಂದ ಚೆಂದವಾದವು. ಕಾಳಿಂಗರಾಯರು ಹಾಡಿರುವ 'ಅಳುವಕಡಲೊಳು' ಹಾಡು ಮತ್ತು 'ಬ್ರಹ್ಮ ನಿಂಗೆ ಜೋಡಿಸ್ತೀನಿ'- ಎನ್ನುವ ಹಾಡಿಗೂ ನಡೆ, ಲಯ, ಛಂದಸ್ಸು, ಭಾವ, ರೀತಿ, ಶೈಲಿ, ಎಲ್ಲಾ ರೀತಿಯಲ್ಲಿಯೂ ಅಜಗಜಾಂತರ ವ್ಯತ್ಯಾಸಗಳಿವೆ. ರಾಗ ಸಂಯೋಜನೆ, ಸಾಹಿತ್ಯ ಸಂವೇದನೆ, ಗಾಯನ ನಿವೇಧನೆ, ಎಲ್ಲವೂ ಭಿನ್ನ ಭಿನ್ನವಾಗಿದೆ. ನಮ್ಮ ಸುಗಮಸಂಗೀತಕ್ಕೆ ಈ ಚೆಲುವನ್ನು ತಂದುಕೊಟ್ಟವರು ಕನ್ನಡದ ಕೋಗಿಲೆಯೆಂದೇ ಹೆಸರಾದ ಪಾಂಡೇಶ್ವರದ ಕಾಳಿಂಗರಾವ್ ಅವರು. ನವೋದಯ ಕಾವ್ಯದ ಆರಂಭದಲ್ಲಿ ಪ್ರೇಮ, ವಿರಹ, ದುಃಖ ಗೀತೆಗಳು, ದೇಶ ಭಕ್ತಿಗೀತೆಗಳು, ಶಾಸ್ತ್ರೀಯ ಸಂಗೀತದಂತೆಯೇ ರಾಗಸಂಯೋಜಿಸಿ ಹಾಡಲಾಗುತ್ತಿದ್ದವು. ಕವಿತೆಗಳಿಗೆ ತಮ್ಮ ಮಾಂತ್ರಿಕ ಶೈಲಿಯಿಂದ ನವಿರು ಸ್ಪರ್ಶವನ್ನು ಕೊಟ್ಟವರು ಕಾಳಿಂಗರಾಯರು. ಅದಕ್ಕೆ ಕಾರಣ ಅವರಿಗಿದ್ದ ಭಿನ್ನ ಭಿನ್ನ ಕಲಾ ಪ್ರಕಾರಗಳ ಪ್ರಾವೀಣ್ಯತೆಯೂ ಹೌದು. ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ನಾಟ್ಯ ಗೀತೆ, ರಂಗಗೀತೆ, ಜಾನಪದ ಗೀತೆ, ಚಲನಚಿತ್ರ ಗೀತೆ, ಪಾಶ್ಚಾತ್ಯ ಸಂಗೀತ-ಈ ಎಲ್ಲಾ ಪ್ರಕಾರಗಳಲ್ಲಿಯೂ ರಾಯರು ಕೈಯಾಡಿ ಸೈ ಎನಿಸಿಕೊಂಡಿದ್ದರು. ಮರಾಠೀ ನಾಟ್ಯಗೀತೆಗಳನ್ನೂ ತಾವು ನಾಟಕ ಕಂಪನಿಯಲ್ಲಿದ್ದಾಗಲೇ ಕರಗತಮಾಡಿಕೊಂಡಿದ್ದರು. ವೃತ್ತಿರಂಗಭೂಮಿಯಿಂದಲೇ ವೃತ್ತಿಯನ್ನು ಆರಂಭಿಸಿದ ರಾಯರಿಗೆ ರಂಗಗೀತೆಗಳೆಂದರೆ ಪಂಚಪ್ರಾಣ. ಅಭಿನಯವೇ ಕಲಿತ ಮೊದಲವಿದ್ಯೆ. ಪಾತ್ರ ಮಾಡುವಾಗ ಮೈಮರೆಯುತ್ತಾ ತಮ್ಮನ್ನೇ ಮರೆಯುತ್ತಿದ್ದ ಕಾಳಿಂಗರಾಯರಿಗೆ, ಕವಿತೆಯೊಳಗಿನ ಮಾತ್ರಧಾರಿಯಾಗುವುದು ಸುಲಭವೇ ಆಯಿತೇನೋ. ಅವರು ಹಾಡುತ್ತಿದ್ದ ಕವಿತೆಗಳು ಅವರವೇ ಆಗಿದ್ದವು. 'ಅಳುವ ಕಡಲೊಳು ತೇಲಿ ಬರುತಿದೆ ನಗೆಯ ಹಾಯಿ ದೋಣಿ'-ಈ ಕವಿತೆಯನ್ನು ಅವರು ಹಾಡುವಾಗ 'ನಗೆಯ ಹಾಯಿ ದೋಣಿ' ಎನ್ನುವಲ್ಲಿನ ಪಲುಕು ಮೆಲುಕು ಹಾಕುವಂತಹುದು. 'ಹಾಯಿ' ಎನ್ನುವಲ್ಲಿನ ಸ್ವರಗಳ ಬಳುಕು, ಕೊಂಕು, ಪಂಚೇಂದ್ರಿಯಗಳಿಗೂ ಅನುಭವವಾಗುತ್ತದೆ. ಸುಗಮಸಂಗೀತಕ್ಕೆ ಬೇಕಾದದ್ದು ಅಭಿನಯವೇ. ಅಂದರೆ ಒಂದು ರೀತಿಯ ವಾಚಿಕಾಭಿನಯ. ಧ್ವನಿಯ ಬೆಡಗಿನಲ್ಲಿ ಇದು ಬೆರೆತಿರುತ್ತದೆ. ತಂಬೂರಿಯಲ್ಲಿ ಶ್ರುತಿ ಮಾಡಿದ ನಂತರ ಕೂಡಿಸುವ ಜೀವಾಳದಂತೆ, ಸನ್ನ ದಾರದಲ್ಲಿ ನಾದ ಝೇಂಕರಿಸುವಂತೆ, ಸ್ವರದ ಕೊಂಕಿನಲ್ಲಿ ಕಾಕುವಿನ ಏರಿಳಿತಗಳಲ್ಲಿ ಇದು ಅಭಿವ್ಯಕ್ತವಾಗುತ್ತದೆ. ಭಾವಗೀತಾ ಗಾಯನ ಗೆಲ್ಲುವುದೇ ಇಲ್ಲಿ. ಕಾಳಿಂಗರಾಯರಿಗೆ ಈ ಸೂಕ್ಷ್ಮತೆ ಗೊತ್ತಿದ್ದರಿಂದಲೇ, ಉತ್ತಮ ಧ್ವನಿ ಕಾವ್ಯಗಳನ್ನು, ಅಭಿನಯ ಗೀತೆಗಳನ್ನು, ನಿವೇದನ ಕವಿತೆಗಳನ್ನು ಆರಿಸಿಕೊಂಡರು.

ಒಂದೊಂದು ಭಾಷೆಗೂ, ಒಂದೊಂದು ಅಪರೂಪದ ವ್ಯಕ್ತಿತ್ವವಿರುತ್ತದೆ. ಬೇರೆಯಾದ ಉಲುಹು, ಹೊಳಹು, ನಡೆ, ಲಾವಣ್ಯ, ಬೆಡಗು, ದನಿಯ ಚಿತ್ತಾರಗಳು ವಿಶೇಷವಾಗಿರುತ್ತವೆ. ಬಹುಭಾಷಾ ಪರಿಣತರ ಕೃತಿಗಳಲ್ಲಿ ಈ ಹೊಸತನಗಳು ಹೊಕ್ಕು ವೈಶಿಷ್ಟ್ಯಗಳನ್ನು ಬಿಂಬಿಸುತ್ತವೆ. ಕಾಳಿಂಗರಾಯರ ಗಾಯನ ಶೈಲಿಗೂ ಈ ಅನುಭವವಿತ್ತೆಂದು ನನ್ನ ಅನಿಸಿಕೆ. ಯಾವ ವಿಶ್ವವಿದ್ಯಾನಿಲಯದಲ್ಲಿ ಪದವಿ ಪಡೆಯದಿದ್ದರೂ, ರಾಯರು ಕನ್ನಡ, ಸಂಸ್ಕೃತ, ಹಿಂದಿ, ತುಳು, ಕೊಂಕಣಿ, ಮರಾಠೀ, ಇಂಗ್ಲಿಷ್ ಭಾಷೆಗಳಲ್ಲಿ ಪರಿಣತರಾಗಿದ್ದರು. ಈ ಎಲ್ಲಾ ಭಾಷೆಗಳ ವಿಶಿಷ್ಟ ಸಂಯೋಜನೆಗಳನ್ನು ಹಾಡುತ್ತಿದ್ದರು. ಅವರ ಸಂಯೋಜನೆಗಳಲ್ಲಿ ಯಾವುದೇ ಒಂದೇ ಶೈಲಿಗೆ ಅಂಟಿಕೊಂಡ ಗಾಯನವಿಲ್ಲ. ಏಕತಾನತೆಯಿಲ್ಲ ಹಾಗೆಯೇ ಬರಿಯ ಪ್ರಯೋಗಗಳೂ ಇಲ್ಲ. ಜಾನಪದ ಗೀತೆಗಳಾಗಲಿ, ಭಕ್ತಿಗೀತೆಗಳಾಗಲಿ, ಭಾವಗೀತೆಗಳಾಗಲಿ, ದಾಸರಪದಗಳಾಗಲಿ, ಎಲ್ಲಮಾ ಒಂದು ಹದವಾದ ಪಾಕದಲ್ಲಿ ಸಂಯೋಜಿಸಲ್ಪಟ್ಟವು.

ಜಾನಪದ ಸಂಗೀತದಲ್ಲಿ ವಿಶೇಷ ಪ್ರೀತಿಯಿದ್ದ ರಾಯರು ಆರಿಸಿಕೊಂಡಿದ್ದು ಹೆಚ್ಚು ಹೆಚ್ಚು ಜನಪದ ಗೀತೆಗಳನ್ನು ಒಂದು ಕಾಲಕ್ಕಂತೂ 'ಸುವ್ವೀ ಸುವ್ವಮ್ಮ ಲಾಲಿ', 'ಘಲ್ಲು ಘಲ್ಲೆನುತಾ', 'ಬೆಟ್ಟ ಬಿಟ್ ಇಳಿಯುತ್ತಾ ಬಂದಾಳೆ', 'ಅದು ಬೆಟ್ಟ ಇದು ಬೆಟ್ಟವೋಮೋ ನಂಜುಂಡ', 'ಅಮ್ಮಕರುಮ್ಮಕದಿಂದ' ಮುಂತಾದ ಹಾಡುಗಳು ಕನ್ನಡ ನಾಡಿನ ಕೈತೋಟದಲ್ಲಿ ಬೆಳೆದ ಮಲ್ಲಿಗೆ ಮೊಗ್ಗುಗಳಾಗಿ ಬಿರಿಯತೊಡಗಿದ್ದವು. ರಾಯರು ಜನಪದ ಸಂಗೀತದ ನಾಡಿ ಮಿಡಿತವನ್ನು ಕರಗತ ಮಾಡಿಕೊಂಡಿದ್ದಕ್ಕೋ ಏನೋ, ಅವರು ಹಾಡಿದ ಜನಪದ ಗೀತೆಗಳು ಶಾಸ್ತ್ರೀಯ ಸಂಗೀತದ ಛಾಯೆಯನ್ನು ಸ್ವಲ್ಪ ಮಟ್ಟಿಗೂ ತೋರದೆ, ನಮ್ಮ ನೆಲದಲ್ಲಿ ಬೆಳೆದ ಹೂವುಗಳಾದವು. ಜನಪದ ಕಾವ್ಯ ಹೀಗೆ ಶಿಷ್ಟಕವಿಗಳಿಗೂ 'ಗರಿ' ಮೂಡಿಸುತ್ತದೆ ಎನ್ನುವುದಕ್ಕೆ ನಮ್ಮ ಬೇಂದ್ರೆಯವರ ಸಾವಿರಾರು ಗೀತೆಗಳೇ ಸಾಕ್ಷಿ. ನಮ್ಮ ಸುಗಮಸಂಗೀತಕ್ಕೆ ಜನಪದ ರೆಕ್ಕೆಯನ್ನು ಹಚ್ಚಿ ಸೊಬಗು ತೋರಿದವರು ಕಾಳಿಂಗರಾಯರು.

ಅವರು ರಾಗಸಂಯೋಜಿಸಿ ಹಾಡಿದ 'ನಗೆಯು ಬರುತಿದೆ', 'ಓ ನನ್ನ ನೀಲಿ ಸೀರೆಯ ಕನ್ಯೆ', 'ಅಂದು ನೀ ನುಡಿದ ಪಿಸುಮಾತು', 'ಓಲೇಲಿಲೇಸಾ' ಬೆಳದಿಂಗಳ ರಾತ್ರೀಲಿ ನೆಪಾಯ್ತದೆ', 'ಸಿಂಹನೊಡನಾಡುತ್ತ' ಹೇಳುತ್ತಾ ಹೋದರೆ ಸುಮಾರು ನೂರು, ನೂರು ಹಾಡುಗಳು ಕಾಳಿಂಗರಾಯರನ್ನು ಅನಾವರಣಗೊಳಿಸುತ್ತವೆ. ಅವರ ಗಾಯನ ಶೈಲಿಯನ್ನು, ಸಂಯೋಜನೆಯಲ್ಲಿನ ಸಂಯಮಭರಿತ ಆಲೋಚನೆಯನ್ನು ಮುಂದೆ ತಂದು ನಿಲ್ಲಿಸುತ್ತದೆ. 'ನನ್ನ ಸಂಗೀತ ಗಗನ ಕುಸುಮವಾದರೆ ಏನು ಪ್ರಯೋಜನ? ನೆಲದ ಮಟ್ಟಾಮುಟ್ಟಿ ಮಣ್ಣಿನಮಗ ಕುಣಿವಂತಾಗಬೇಕು'-ಎನ್ನುತ್ತಿದ್ದ ರಾಯರು ಊರು ಊರು, ಹಳ್ಳಿಹಳ್ಳಿ, ಬೀದಿಬೀದಿ, ತಿರುಗಿ, ಕನ್ನಡನಾಡ ಗೀತೆಗಳನ್ನು, ಭಾವಗೀತೆಗಳನ್ನು ದಾಸರಪದ, ಜನಪದ ಗೀತೆಗಳನ್ನು ಹಾಡಿದರು. ಕನ್ನಡ ಏಕೀಕರಣ ಚಳುವಳಿಯಲ್ಲಿ (೧೮೪೫) ಪಾಲ್ಗೊಂಡರಾಯರು, ಘೋಷಣೆ ಕುಗದೆ, ಭಾಷಣ ಮಾಡದೆ, ಕೇವಲ ತಮ್ಮ ಮೋಹಕಗಾಯನದಿಂದ ಚಳುವಳಿಗಾರರಿಗೆ ಸ್ಫೂರ್ತಿ ನೀಡಿದ್ದರು. ಕ್ಲಾರಿಯೋನೆಟ್, ಮ್ಯಾಂಡೋಲಿನ್, ಹವಾಯಿ ಗಿಟಾರ್, ಗಿಟಾರ್, ಮುಂತಾದ ವಾದ್ಯಗಳ ಒಳಮಿಡಿತವನ್ನು ಸರಿಯಾಗಿ ತಿಳಿದುಕೊಂಡು ಅವುಗಳನ್ನು ಸೂಕ್ತವಾಗಿ ತಮ್ಮ ಕಾರ್ಯಕ್ರಮಗಳಲ್ಲಿ ಬಳಸಿಕೊಂಡರು. ರಂಗಗೀತೆ, ಚಿತ್ರಗೀತೆಗಳಿಗಿಂತ ಭಿನ್ನವಾಗಿದ್ದ ಭಾವಗೀತಾಯನವನ್ನು ಪ್ರತ್ಯೇಕವಾಗಿ ತಆವೇ ಅನುಭವಿಸಿ, ಅವುಗಳಿಗಿದ್ದ ದೂರವನ್ನು ಕಾಯ್ದುಕೊಂಡರು. ಆ ದೂರವನ್ನು ಅವರು ಕಾಯ್ದುಕೊಂಡಿದ್ದರಿಂದಲೇ ಸುಗಮಸಂಗೀತಕ್ಕೆ ಪ್ರತ್ಯೇಕ ವ್ಯಕ್ತಿತ್ವ ಬಂದು ಅದು ಒಂದು ವಿಶಿಷ್ಟ ಗಾಯನ ಪ್ರಕಾರವಾಗಿ ರೂಪುಗೊಂಡಿತು. ಒಂದು ಗೀತೆಯನ್ನು ಕೇಳಿದರೆ ಕೇಳುಗರ ಪಂಚೇಂದ್ರಿಯಗಳಿಗೆ ಅದು ವೇದ್ಯವಾಗಬೇಕು. ಅದರ ದನಿ, ಬಣ್ಣ, ವಾಸನೆ, ಸ್ಪರ್ಶ, ರುಚಿ, ಎಲ್ಲವೂ ಒಮ್ಮೆಲೆ ಅನುಭವವಾಗಬೇಕು. ಈ ದರ್ಶನವನ್ನು ನಮ್ಮ ಸುಗಮಸಂಗೀತದಲ್ಲಿ ಮೊದಲು ತೋರಿದರು. ಕಾಳಿಂಗರಾಯರು.

**ಮೈಸೂರು ಅನಂತಸ್ವಾಮಿ (೨೫-೧೦-೧೯೩೬ - ೯-೧-೧೯೯೫)**

ಸುಗಮ ಸಂಗೀತ ಹಾಡುಗಾರಿಕೆ ಮತ್ತು ಸಂಯೋಜನೆಯಲ್ಲಿ ಕಾಳಿಂಗರಾಯರಿಂದ ಪ್ರೇರಿತರಾಗಿ, ರಾಯರ ಶೈಲಿಯನ್ನು ವಿಸ್ತರಿಸಿದರು ಎಂದೇ ಹೇಳಬಹುದಾದವರು ಶ್ರೀ ಮೈಸೂರು ಅನಂತಸ್ವಾಮಿ. 'ಸುಗಮಸಂಗೀತ' ಇಂದು ಒಂದು ಗಟ್ಟಿ ನೆಲೆಯನ್ನು ಕಂಡುಕೊಳ್ಳುವಲ್ಲಿ ಮೈಸೂರು ಅನಂತಸ್ವಾಮಿಯವರ ಪಾತ್ರ ದೊಡ್ಡದು. 'ಬಾಗಿಲೊಳು ಕೈಮುಗಿದು ಒಳಗೆ ಬಾ ಯಾತ್ರಿಕನೆ' ಕುವೆಂಪು ಕವಿತೆ ಇವರ ಪ್ರಥಮ ರಾಗಸಂಯೋಜನೆ ಎಂದರೆ ಆಶ್ಚರ್ಯವಾಗುತ್ತದೆ. ಸುನಾದ ವಿನೋದಿನಿ ರಾಗದಲ್ಲಿ ಅವರು ತೆರೆದಿರುವ ಸ್ವರಲೋಕ ಅದ್ಭುತ ಚಿತ್ರ ಬರೆಯುತ್ತದೆ. ಚರಣದಿಂದ ಚರಣಕ್ಕೆ ಭಾವದ ಪ್ರತಿಮೆಗಳು ಹರಿಯುತ್ತಲೇ ರಾಗಗಳು ಬದಲಾಗುತ್ತವೆ. ಚರಣದ ಪ್ರಾರಂಭದಲ್ಲಿ ಪೂರಿಯಾಧನಾಶ್ರೀ ಇದ್ದು ಕಡೆಯ ಸಾಲುಗಳೆರಡು ದರ್ಬಾರಿ ಕಾನಡದಲ್ಲಿ ಬರುತ್ತವೆ. ಇವು ರಾಗಸಂಯೊಜನೆಗಳಾದರೂ ಶಾಸ್ತ್ರೀಯ ಆವೃತ್ತಿಯಲ್ಲಂತೂ ಅಲ್ಲ. ಸ್ವರ ಸಂಯೋಜನೆಯಲ್ಲಿ ರಾಗವನ್ನು ಅನಾವರಣಗೊಳಿಸುವುದೇ ಅನಂತಸ್ವಾಮಿಯವರ ಅನನ್ಯತೆ. ಅವರಿಗಿದ್ದ ಪಾಂಡಿತ್ಯ ಅಸಾಧಾರಣವಾದುದು.

ಅನಂತಸ್ವಾಮಿ ಒಬ್ಬ ಅಪೂರ್ವ ಕಲಾವಿದ ಅವರು ರಾಗಸಂಯೋಜನೆ ಮಾಡಿರುವ ಗೀತೆಗಳು ನೂರಾರು. ಅವುಗಳಲ್ಲಿ ಕೆಲವು ರತ್ನಪ್ರಾಯವಾದವು. ಅವರ ಗಾಯನವೆಂದರೆ ಅದೊಂದು ರೀತಿಯಲ್ಲಿ ವ್ಯಕ್ತಿತ್ವದ ಅಭಿವ್ಯಕ್ತಿ. ಅನಂತಸ್ವಾಮಿಯವರ 'ಇಳಿದು ಬಾ ತಾಯಿ' (ಬೇಂದ್ರೆ) ದಾಖಲೆಗಳನ್ನು ಮುರಿದ ಸಂಯೋಜನೆ, 'ಜಯಭಾರತ ಜನನಿಯ ತನುಜಾತೆ' (ಕುವೆಂಪು) 'ನಾಕುತಂತಿ', 'ಕುರಿಗಳು ಸಾರ್ ಕುರಿಗಳು' (ನಿಸಾರ್) 'ಯಾವ ಮೋಹನ ಮುರಲಿ' 'ನಿತ್ಯೋತ್ಸವ', 'ಬೆಣ್ಣೆಕದ್ದ' ಮತ್ತದೇ ಬೇಸರ ಒಂದೊಂದೂ ವೈವಿಧ್ಯತೆಗಳನ್ನು ತೋರಿಸುವಂತಹದ್ದು. ಒಂದೊಂದು ಹಾಡಿನಲ್ಲಿಯೂ, ಅನನ್ಯತೆ, ಸ್ವಂತಿಕೆಯ ಹೊಳಪು, ಛಾಪು. ಅವರ ಒಂದೊಂದು ಸ್ವರಸಂಯೋಜನೆಯಲ್ಲೂ, ಹಾಡಿನ ಸಣ್ಣಸಣ್ಣ ಹೊರಳುಗಳಲ್ಲಿಯೂ ಅಪೂರ್ವ ಮೋಹಕತೆ ಎದ್ದು ಕಾಣುತ್ತದೆ. ಕವಿತಾ ಪ್ರಸ್ತುತಿಯಲ್ಲಿಯೂ, ಅರೇ ಹಾಡುವಾಗಲಂತೂ, ಕವಿತೆ ತನ್ನ ಸಮಸ್ತ ವೈಭವದೊಡನೆ ಪ್ರತ್ಯಕ್ಷವಾಗಿ ಸಾಕ್ಷಾತ್ಕಾರಗೊಳ್ಳುತ್ತದೆ. ಕೇಳುಗರ ಎದೆ ಕರಗಿಸುವ ಮಾಧುರ್ಯ ಹರಿಯುತ್ತಿದೆ, ಕವಿತೆ ಬೆಳಗುತ್ತದೆ.

ಕಾಳಿಂಗರಾಯರು ಸುಗಮಸಂಗೀತಕ್ಕೆ ತಳಪಾಯ ಹಾಕಿದರು. ಆದರೆ ಅನಂತಸ್ವಾಮಿ ಅದರ ಕಂಭ, ಚಾವಣಿ, ಗೋಡೆಗಳನ್ನೆಲ್ಲಾ ಮುಂದಾಳಾಗಿ ನಿಂತು ಕಟ್ಟಿ ತಾವೇ ಅದರ ಸುವರ್ಣ ಶಿಖರವಾಗಿ ಹೋದರು. ಸ್ವರಸಂಯೋಜನೆ ಮತ್ತು ಗಾಯನ ಎರಡು ಶಕ್ತಿಗಳನ್ನೂ ಬಹಳ ಘನವಾದ ನೆಲೆಯಲ್ಲಿ ರೂಢಿಸಿಕೊಂಡಿದ್ದ ಅನಂತಸ್ವಾಮಿ ಸರಿಸಾಟಿಯಿಲ್ಲದ ಸುಗಮಸಂಗೀತಗಾರ. ಶ್ರೇಷ್ಠ ಭಾವಗೀತೆಗಳ ಅಂತರಂಗವನ್ನು ಅವರಂತೆ ತಮ್ಮ ಮಾಧುರ್ಯ ಪ್ರಧಾನವಾದ ಗಾಯನದಲ್ಲಿ ತೆರೆದು ತೋರಿಸಿದವರು ಇನ್ನೊಬ್ಬರಿಲ್ಲ.

ಅನಂತಸ್ವಾಮಿಯವರು ಸಂಗೀತ ಸಂಯೋಜನೆ ಮಾಡಿದ್ದು ಸುಮಾರು ಒಂದು ಸಾವಿರಕ್ಕೂ ಮಿಕ್ಕ ಹಾಡುಗಳನ್ನು ಅವುಗಳ ವೈವಿಧ್ಯತೆ ಕಂಡರೆ ಬೆರಗು ಮೂಡುತ್ತದೆ. ರಾಗಪ್ರಧಾನವಾದ ಸಂಯೋಜನೆಗಳು, ಸ್ವರಸಂಯೋಜನೆ ಮಾಡಿದ ಸಂಯೋಜನೆಗಳು, ಪಾಶ್ಚಾತ್ಯ ಸಂಗೀತದ ಕಾರ್ಡ್‌ಗಳ ಆಧಾರದಿಂದ ಸಂಯೋಜಿಸಿದ, ರತ್ನನ ಪದಗಳು, ಕೈಲಾಸಂ ಪದಗಳು, ಮಾಧುರ್ಯವನ್ನೇ ಪ್ರಧಾನವಾಗಿಟ್ಟು ಉಣಿಸಿದ ಗೀತಪ್ರಧಾನವಾದ ಸಂಯೋಜನೆಗಳು, ಪದಗಳ ಶಬ್ದಗಳ ಅನುಕರಣೆಯಂತೆ ಉಲಿಯುವ (ಉದಾಃಹೂಹೂಹೂ) ಗೀತಸಂಯೋಜನೆಗಳು ಹೇಳುತ್ತಾ ಹೋದರೆ ಅದೇ ಒಂದು ಮಹಾಗ್ರಂಥವಾಗುವಷ್ಟು ವಿಸ್ತಾರವುಳ್ಳದ್ದು.

ನಿತ್ಯೋತ್ಸವ ಧ್ವನಿ ಸುರುಳಿ, ರತ್ನನ್ ಪದ, 'ಭಾವಸಂಗಮ' ಧ್ವನಿಸುರುಳಿಯ (ಎಲ್ಲಾ ಹಾಡುಗಳೂ) ಎಲ್ಲೆ ಜಾರಿತೋ 'ನಿತ್ಯೋತ್ಸವ', 'ನಾನು ಬಡವಿ ಆತ ಬಡವ', 'ಮಧುರೆಗೆ ಹೋದನೋ', 'ರಾಯರು ಬಂದರು', 'ಕೋಳಿಕೆ ರಂಗ', 'ಮಡಿಕೇರಿ ಮೇಲ್ಮಂಜು', 'ನೀನ್ ನನ್ ಅಟ್ಟಿಲ್', 'ಲೋಕದ ಕಣ್ಣಿಗೆ', 'ಈ ಬಾನು ಈ ಚುಕ್ಕಿ', 'ಎದೆ ತುಂಬಿ ಹಾಡಿದೆನು' ಹೀಗೆ ನೂರಾರು ಹಾಡುಗಳು ಪಟ್ಟಿ ಇದೆ.

ಬಿ.ಎಂ. ಶ್ರೀಯವರ 'ಕರುಣಾಳು ಬಾಬೆಳಕೆ'-'ಮೊದಲು ತಾಯಿ ಹಾಲು ಕುಡಿದು', ಡಿವಿಜಿಯವರ ಮಂಕುತಿಮ್ಮನ ಕಗ್ಗ-ಕುವೆಂಪು ಅವರ 'ಓ ನನ್ನ ಚೇತನ' ಅಂತರತಮನೀಗುರು, ನಿನ್ನೆಡೆಗೆ ಬರುವಾಗ ದೂರ ಬಲು ದೂರ-ಜಿ.ಎಸ್ಎಸ್ ಅವರ 'ಎದೆ ತುಂಬಿ ಹಾಡಿದೆನು'-ಲಕ್ಷ್ಮೀನಾರಾಯಣ ಭಟ್ಟರ 'ಎಲ್ಲೆ ಜಾರಿತೋ' 'ಬಾ ಒಲವೇ'- ಪುತಿನ ಅವರ 'ನನ್ನೊಳುನಾ'- ಕೆ.ಎನ್.ಎಸ್. ಅವರ 'ಮೈಸೂರು ಮಲ್ಲಿಗೆ', ಹೆಚ್.ಎನ್. ವೆಂಕಟೇಶ್‌ಮೂರ್ತಿಯವರ 'ನನ್ನ ಹಳೆಯ ಹಾಡುಗಳೇ', 'ಲೋಕದ ಕಣ್ಣಿಗೆ' 'ಅಮ್ಮಾ ನಾನು ದೇವರಾಣೆ' ಮುಂತಾದ ಗೀತೆಗಳು ಅನಂತ ಸ್ವಾಮಿಯವರ ಧ್ವನಿಯಲ್ಲಿ ಪ್ರತಿಬಾರಿ ಕೇಳಿದಾಗಲೂ ಹೊಚ್ಚ ಹೊಸತಾಗಿ ಹುಟ್ಟಿಬರುತ್ತವೆ. ಪ್ರತಿ ಬಾರಿ ಹಾಡಿದಾಗಲೂ ಕವಿತೆಯ ಬಣ್ಣಕ್ಕೆ ಮತ್ತಷ್ಟು ಸೊಗಸಿನ ಬೆಳಕು ಹರಿಯುತ್ತದೆ. ಆ ಬೆಳಕಿನಲ್ಲಿ ಕವಿತಾ ಸುಂದರಿ ಮತ್ತಷ್ಟು ಚೆಲುವೆಯಾಗಿ ಕಂಡು ಬರುತ್ತಾಳೆ.

ಸುಗಮಸಂಗೀತ ಶ್ರುತಶಕ್ತಿ ಮತ್ತು ಅರ್ಥಶಕ್ತಿ ಎರಡರ ಬೆನ್ನೂ ಹತ್ತ ಬೇಕಾಗುತ್ತದೆ. ಶಬ್ದನಾದ ಮತ್ತು ಅರ್ಥ ಎರಡನ್ನೂ ಬಳಸಿಕೊಂಡು ಗೀತದ ಭಾವಪ್ರತಿಮೆಯನ್ನು ನಿರ್ಮಿಸಬೇಕಾಗುತ್ತದೆ. ಅನಂತಸ್ವಾಮಿಯವರಿಗೆ ಕಾವ್ಯದ ಸ್ಪಷ್ಟ ಪರಿಚಯ ಇದ್ದುದರಿಂದ, ಕವಿಗಳ ಒಡನಾಟ ಇದ್ದಿದ್ದರಿಂದ ಕವಿತೆಯ ಎದೆಮಿಡಿತವನ್ನು ರಾಗಗಳ ಮೂಲಕ ಹೆಣೆದು ನಾದದ ಸುಂದರ ಉಡಿಗೆಯನ್ನು ತೊಡಿಸಿದರು. ನಿರಂತರ ವೈವಿಧ್ಯತೆಗಳ ಮೂಲಕ ಪ್ರಯೋಗಶೀಲತೆಯನ್ನೇ ತೋರಿಸಿದರು. ಶಾಸ್ತ್ರಿಯ-ಜಾನಪದ-ಪಾಶ್ಚಾತ್ಯ-ಲಘು ಎಲ್ಲವು ಮಿಳಿತವಾಗಿ, ಎಲ್ಲಿ ಬೇಕೋ ಅಲ್ಲಿ ಪಲುಕಿ,ಎಲ್ಲಿ ಬೇಕೋ ಉರುಳಿ ನಿಂತು, ಸುಗಮಸಂಗೀತವಾಗುವಂತೆ, ಕವಿತೆಗಳ ಚಿತ್ರವನ್ನು, ಸುಗಮಸಂಗೀತದ ಚೌಕಟ್ಟಿನಲ್ಲಿ ನಯವಾಗಿ ಹಿಡಿದು ಕಟ್ಟಿದರು. ಅನಂತ ಸ್ವಾಮಿಯವರು ಸಂಗೀತ ನಿರ್ದೇಶನ ಮಾಡಿದ-ಗೀತರೂಪಕಗಳಾದ ಸಿಂಡ್ರೆಲಾ (ಪಾಶ್ಚಾತ್ಯ), ಪುಣ್ಯಕೋಟಿ, ಕಿಂದರಜೋಗಿ-ಧರ್ಮಭೂಮಿ, ವಿಜಯೋತ್ಸವ-ಕರ್ನಾಟಕ ವೈಭವ-ಮುಂತಾದವು ಒಂದಕ್ಕಿಂತಾ ಒಂದು ಭಿನ್ನವಾಗಿ ವೈವಿಧ್ಯತೆಯಲ್ಲಿ ನಿಪುಣತೆಯನ್ನು ಸಾಧಿಸಿದವು. ಅನಂತಸ್ವಾಮಿಯವರು ೧೯೭೪ರಲ್ಲಿ 'ನಮ್ಮೂರ ವೈಭವ ಏನ ಹೇಳ್ಳಣ್ಣ- ಗಾಂಧಿ ಹೇಳಿಕೊಟ್ಟ ಪಾಠ' ಗೀತೆಗಳನ್ನು ಬರೆದು ಹಾಡಿ ರಂಜಿಸಿದರು. ಅನಂತಸ್ವಾಮಿಯಂತಹ ಕಲಾವಿದ ಅನಂತವಾಗಿ ಉಳಿಯುವುದು ಅವನ ಕಲಾಕೃತಿಗಳಿಂದ ಮಾತ್ರವಲ್ಲದೇ ಅವನ ವ್ಯಕ್ತಿತ್ವದಿಂದಲು ಕೂಡ ಎಂಬುದಕ್ಕೆ ಅವರೇ ಸಾಕ್ಷಿ. ಅನಂತಸ್ವಾಮಿಯವರ ಗೀತಸಂಯೋಜನೆಗಳು ಯಾರೊಂದಿಗೂ ಗುದ್ದಾಡುವಂತಹುದಲ್ಲ. ಯಾರೊಂದಿಗೂ ಪೈಪೋಟಿಗೆ ಇಳಿಯುವಂತಹದು ಅಲ್ಲ. ಅವುಗಳಿಗೆ ಅದರದೇ ಆದ ಸೌಜನ್ಯತೆಯಿದೆ. ಸಮಾಧಾನ ಚಿತ್ತವಿದೆ. ಸಮತೋಲನ ಭಾವವಿದೆ. ಇವೆಲ್ಲವನ್ನೂ

ಮೀರಿದ ಪ್ರಾಮಾಣಿಕತೆಯಿದೆ. ಇವೆಲ್ಲ ಅನಂತಸ್ವಾಮಿಯವರ ವ್ಯಕ್ತಿತ್ವದ ಗುಣ.ಈ ಗುಣಗಳೆಲ್ಲಾ ಇವರ ಸಂಯೋಜನೆಗಳ ಮೇಲೆ ಪರಿಣಾಮ ಬೀರಿವೆ. ಅನಂತಸ್ವಾಮಿಯವರು ಎಂದೂ ಮುಂದೆ ನುಗ್ಗಿ ನಿಂತವರಲ್ಲ ಎದೆ ತಟ್ಟಿಕೊಂಡು ಹಾಡಿದವರೂ ಅಲ್ಲ. ಹಾರಿ ಹಾರಿ ಮುಂದೆ ಮುಂದೆ ದಾಟಿದವರೂ ಅಲ್ಲ. ಏರಿ ಏರಿ ಕೊರಳೆತ್ತಿ ಕೂಗಿದವರೂ ಅಲ್ಲ. ಶಾಂತವಾಗಿ ಹರಿಯುವ ನದಿಯ ಕಲರವದಂತೆ ಅವರಶೈಲಿ. ಅವರ ಗೀತೆಗಳು ಸಾವಿನ ನೋವಿಂದ, ಅಗಲಿಕೆಯ ಭಯದಿಂದ ಅಂತ್ಯದ ಆತಂಕದಿಂದ ಮುಕ್ತವಾದುವು.

ಹೀಗೆ ಸತತ ಅನಂತಸ್ವಾಮಿ ಪ್ರಯೋಗಶೀಲರಾಗಿದ್ದರು. ಬೇರೆಯವರಿಗೆ ಅವರ ಸಂಯೋಜನೆಗಳು ರೂಢಿಯ ಜಾಡಿಗಿಂತ ಭಿನ್ನವಾದುದನ್ನು ಸೃಷಿಸ ಬಯಸುತ್ತಿದ್ದ ಅನಂತಸ್ವಾಮಿಯವರು ತಮ್ಮ ಸಂಯೋಜನೆಗಳಲ್ಲಿ ಮಾಧುರ್ಯ ಮತ್ತು ಬೆಳಕನ್ನು ಹದವಾಗಿ ಬೆರೆಸಿದ್ದರು. ಅವರು ಒಮ್ಮೆ ಸಂಗೀತ ಸಂಯೋಜನೆ ಮಾಡಿದ ಕವಿತೆಗೆ ಬೇರೊಬ್ಬರು ಮತ್ತೆ ಸಂಯೋಜನೆ ಮಾಡಲು ಸಾಧ್ಯವಾಗದಂತಹ ಸಂಯೋಜನೆ ಅವರದು ಭಾರತೀಯ ಭಾಷೆಯ ಭಾವಗೀತೆಯ ಪ್ರಪ್ರಥಮ ಧ್ವನಿ ಸುರುಳಿಯ ಸಂಗೀತ ಅನಂತಸ್ವಾಮಿಯವರದು ಎಂಬುದು ಅವರ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿ. ಕೆಎಸ್‌ನ ಬೇಂದ್ರೆಯವರ ಕವನಗಳಿಗೆ ಅವರು ಸಂಗೀತ ಸಂಯೋಜಿಸಿದ ಶೈಲಿ ನಮ್ಮನ್ನು ಭಾವದಲ್ಲಿ ತೇಲಿಸಿದರೆ, ನಾಟಕ ಶಕ್ತಿಯಿಂದ ರಾಜರತ್ನಂ ಪದಗಳು ನಮ್ಮನ್ನು ಕುಣಿಸುತ್ತವೆ. ಧಾಟಿ ಲಯಗಳಿಂದಲೇ ನಿಸಾರ್ ಮುಂತಾದವರ ಕವನಗಳು ನಮ್ಮನ್ನು ಬೆರಗಾಗಿಸುತ್ತವೆ.

ಅನಂತಸ್ವಾಮಿಯವರು ತೋರಿದ ವೈವಿಧ್ಯತೆಗೆ ಕಾರಣ, ಅವರಿಗಿದ್ದ ನಾನಾ ವಾದ್ಯಗಳ ವಾದನಾನುಭವ. ಅವರು ಮ್ಯಾಮಡಲಿನ್, ಕೊಳಲು, ಹಾರ್ಮೋನಿಯಂ, ಮುಂತಾದ ವಾದ್ಯಗಳನ್ನು ಪ್ರಾವೀಣ್ಯತೆಯಿಂದ ನುಡಿಸುತ್ತಿದ್ದರು. ಅವರಂತೆ ಮ್ಯಾಂಡಲಿನ್ ನುಡಿಸುವ ಮತ್ತೊಬ್ಬ ಕಲಾವಿದರಿಲ್ಲ ಎನ್ನುವುದು ವಾಸ್ತವದ ವಿಷಯ.

ರಾಜರತ್ನಂ ಹಾಡುಗಳಿಗೆ ಕಾರ್ಡ್ಸ್ ಮೂಲಕ ಸ್ವರ ಸಂಯೋಜನೆ ಮಾಡಿದ ನಂತರ, ರಾಜರತ್ನಂ ಕವಿತೆಗಳಿಗೆ ಸ್ವರಸಂಯೋಜನೆ ಮಾಡಲು ಹೊರಟ ಸುಗಮಸಂಗೀತಗಾರರು ಅನುಸರಿಸಿ, ಅನುಕರಣೆ ಮಾಡಿದ್ದು ಅನಂತಸ್ವಾಮಿಯವರ ಶೈಲಿಯನ್ನೆ. ಅನಂತಸ್ವಾಮಿಯವರದೇ ಒಂದು ಶಾಲೆಯಾಯಿತು. ಹತ್ತಾರು ಮಂದಿ ಅವರ ಶಿಷ್ಯರಾದರು. ರಾಜು ಅನಂತಸ್ವಾಮಿ, ಎಂ.ಕೆ.ಜಯಶ್ರೀ, ಗಾಯಿತ್ರಿ, ಪುಷ್ಪ, ಜಗದೀಶ್, ಅನಂತ್‌ಕುಮಾರ್, ದಿ|| ನಾಗಾರಾಜ್, ಶ್ರೀನಿವಾಸ ಉಡುಪ, ಕಸ್ತೂರಿ ಶಂಕರ್, ರತ್ನಮಾಲಾ ಪ್ರಕಾಶ್, ಶ್ರೀಲಕ್ಷ್ಮಿ-ಪದ್ಮಾವತಿ ಮುಂತಾದವರು ಅನಂತಸ್ವಾಮಿಯ ಶೈಲಿಯನ್ನೇ ಅನುಸರಿಸಿದರು.

ಸುಗಮಸಂಗೀತಕ್ಕೆ ಒಂದು ನಿರ್ದಿಷ್ಟ ಆಕಾರವನ್ನು ಕೊಟ್ಟವರು ಅನಂತಸ್ವಾಮಿಯವರು. ಅದಕ್ಕೊಂದು ಸಿದ್ಧಾಂತ ತಂದವರೂ ಅವರೇ. ಪ್ರಭಾತ್ ಕಲಾವಿದರ ಗೀತನೃತ್ಯರೂಪಗಳಿಗೆಲ್ಲ (ಶಾಸ್ತ್ರೀಯ ಸಂಗೀತ ರೂಪಕಗಳನ್ನು ಹೊರತುಪಡಿಸಿ) ಸಂಗೀತ ಸಂಯೋಜನೆ ಮಾಡಿದ ಅನಂತಸ್ವಾಮಿಯವರು, ತಮ್ಮ ಸಂಯೋಜನೆಗಳಲ್ಲಿ ಚಿತ್ರ ಸಂಗೀತವನ್ನೂ ನೃತ್ಯ ಸಂಗೀತವನ್ನೂ ಅಂತರ್ಯಾಮಿಯಾಗಿ ಬಳಸಿಕೊಂಡರು. ಇದು ಅನಂತಸ್ವಾಮಿಯವರ ಸಂಗೀತ ನಿರ್ದೇಶನದ ಸ್ವೋಪಜ್ಞತೆ ಎನ್ನಬಹುದು.

**ಸಿ. ಅಶ್ವತ್ಥ್ (೨೯-೧೨-೧೯೩೯)**

ಗೀತಾಭಿನಯ ಶೈಲಿಗೆ ಉತ್ತಮ ಉದಾಹರಣೆ ಅಶ್ವತ್ಥ್ ಅವರ ರಾಗ ಸಂಯೋಜನೆ. ಸುಗಮ ಸಂಗೀತ ಇತಿಹಾಸದಲ್ಲಿ ಅಶ್ವತ್ಥ್ ಅವರದು ದೊಡ್ಡ ಹೆಸರು. ಬಾಲ್ಯದಿಂದ ಹಿಂದೀ ಚಲನಚಿತ್ರಗೀತೆಗಳಿಂದ ಪ್ರಭಾವಿತರಾಗಿ ಕವಿತೆಗಳಿಗೆ ಮಟ್ಟು ಕೂಡಿಸಲು ಪ್ರಾರಂಭಿಸಿದರ. ೧೯೬೦ರಿಂದಲೇ ಇದು ಪ್ರವೃತ್ತಿಯಾಗಿ ಬೆಳೆಯಿತು. ರಂಗಭೂಮಿಯ ಅನುಭವವೇ ಅಶ್ವತ್ಥ್‌ರಿಗೆ ಸುಗಮ ಸಂಗೀತಕ್ಕೆ ಅಡಿಪಾಯವಾಯಿತು. 'ಶಿಶುನಾಳ ಷರೀಫ್' ಧ್ವನಿಸುರುಳಿಯಿಂದ ಪ್ರಾರಂಭವಾಗಿ ಹತ್ತಾರಾಗಿ ನೂರಾರಾಗಿ ಕಡೆಗೆ ಸುಮಾರು ಸಾವಿರ

ಹಾಡುಗಳ ಹತ್ತಿರ ಹತ್ತಿರ ಗೀತೆಗಳಿಗೆ ಸ್ವರಸಂಯೋಜನೆ ಮಾಡಿದರು. ನಾಟಕ, ಚಲನಚಿತ್ರ, ಸುಗಮ ಸಂಗೀತ ಈ ಮೂರೂ ಪ್ರಕಾರಗಳಿಗೆ ಸಂಗೀತ ನಿರ್ದೇಶಿದ ಅಶ್ವತ್ಥ್ ಮೂರೂ ಗುಣಗಳನ್ನು ಅಂತರ್ಗತವಾಗಿಸಿಕೊಂಡರು.

ಅಶ್ವತ್ಥ್‌ರದು ಹಾಡಿನ ಅರ್ಥಕ್ಕೆ ಸ್ವರವನ್ನು ಶೋಧಿಸುವ ಸಂಯೋಜನ ಶೈಲಿ, ಕವಿತೆಯು ಚರಣದಿಂದ ಚರಣಕ್ಕೆ ಅರ್ಥ ಪರಂಪರೆಯನ್ನು ಹಿಗ್ಗಿಸುವಲ್ಲಿ ಸಂಗೀತ ಸಂಯೋಜಕನೂ ಸಾಹಿತ್ಯವನ್ನು ಹಿಂಬಾಲಿಸಬೇಕಾಗುತ್ತದೆ. ಕವಿತೆಯಲ್ಲಿ ಒಂದೊಂದು ಚರಣ ಬೇರೆ ಬೇರೆ ಅರ್ಥಕೊಡುವಂತೆ ಸಂಗೀತ ಸಂಯೋಜನೆಯಲ್ಲೂ ಈ ಅರ್ಥವನ್ನು ಹುಡುಕಿ ಪಡೆಯುವುದೇ ಉತ್ತಮ ಸಂಯೋಜನೆಯ ಶೈಲಿ, ಬಾರೆ ನನ್ನ ಶಾರದೆ (K.S.N.) ಮೊದಲ ರಾಗ ಸಂಯೋಜನೆ.

ಕವಿ ಲಕ್ಷ್ಮೀನಾರಾಯಣ ಭಟ್ಟರ 'ಏಕೆ ಹೀಗೆ ನಮ್ಮ ನಡುವೆ', ಕಯ್ಯಾರ ಕಿಞ್ಞಾಣ್ಣರೈ ಅವರ 'ಕಾಣದಿಹ ದಾರಿಯಲಿ' ಲಕ್ಷ್ಮಣರಾವ್ ಅವರ 'ಕವಿದಂತೆ ಮಂಜು' ಶಿವರುದ್ದಪ್ಪನವರ 'ಎಲ್ಲೋ ಹುಡುಕಿದೆ', ಕೆ.ಎಸ್.ಎನ್. ಅವರ 'ಹೊಸಲಬಳಿ ಬಂದೊಡನೆ' 'ಮೊದಲದಿನ ಮೌನ' ಷರೀಫರ 'ತರವಲ್ಲ ತಗಿನಿನ್ನ' ಮೊದಲಾದ ಸಂಯೋಜನೆಗಳು ಅಶ್ವತ್ಥ್‌ರ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ನಾಟಕ, ಜನಪದ, ಚಲನಚಿತ್ರ, ಸುಗಮಸಂಗೀತ-ಈ ನಾಲ್ಕೂ ಪ್ರಕಾರದ ಅನುಭವಗಳೀಸಿರುವ ಅಶ್ವತ್ಥ್ ಸುಗಮ ಸಂಗೀತದ ಬಗೆಗೆ ಪುಸ್ತಕ ಸುಗಮ ಸಂಗೀತ'ದಲ್ಲಿ ತಿಳಿಸಿರುವ ವಿಚಾರಗಳು ಅಪೂರ್ವವಾಗಿವೆ. ಸುಗಮಸಂಗೀತದ ಬಗೆಗೆ ಆಲೋಚಿಸಿದ ಮೊಟ್ಟ ಮೊದಲಿಗರೂ ಅವರೇ ಆಗುತ್ತಾರೆ. ಅವರ ವಿಚಾರಧಾರೆಗಳು ಮುಂದಿನ ಪೀಳಿಗೆಗೆ ಅಡಿಪಾಯಗಳಾಗಿವೆ.

ಇವರ ಅತ್ಯುತ್ತಮ ಸಂಯೋಜನೆಗಳು ಕೆ.ಎಸ್.ಎನ್. ಅವರ ತೌರಸುಖದೊಳಗೆನ್ನ ನಿನ್ನೊಲುಮೆಯಿಂದಲೇ, ಮೊದಲದಿನ ಮೌನ, ಬಾರೆ ನನ್ನ ಶಾರದೆ, ಒಂದಿರುಳು ಕನಸಿನಲಿ, ಅಕ್ಕಿಯಾರಿಸುವಾಗ ಮುಂತಾದವು. ಇವುಗಳ ಅಭಿವ್ಯಕ್ತಿಯಲ್ಲಿ ಅಶ್ವತ್ಥ್‌ರವರ ಛಾಪು ಎದ್ದು ಕಾಣುತ್ತದೆ. ಅಡಿಗರ 'ಅಮೃತವಾಹಿನಿಯೊಂದು ಹರಿಯುತಿದೆ' 'ಮೌನ ತಬ್ಬಿತು ನೆಲವ' 'ಎದೆಯು ಮರಳಿ ತೊಳಲುತಿದೆ'-ಗೀತೆಗಳಲ್ಲಿ ಅಡಿಗರ ವ್ಯಕ್ತಿತ್ವ ಮೂಡುತ್ತದೆ. ಅಶ್ವತ್ಥ್ ಸುಕವಿತೆಗೆ ಸ್ವರಸಂಯೋಜನೆ ಮಾಡುವುದೇ ನಿಜವಾದ ಸಂಯೋಜನೆ ಎಂದಿದ್ದಾರೆ. ಅವರ ಸಂಯೋಜನೆಗಳು ಸ್ವರಸಂಯೋಜನೆಯಲ್ಲಿಯೇ ಸಂಯೋಜಿಸಲ್ಪಟ್ಟಿವೆ. ನರಸಿಂಹಸ್ವಾಮಿಗಳ 'ಮೊದಲದಿನ ಮೌನ' ಎನ್ನುವ ಗೀತೆಯಲ್ಲಿ 'ಮೌನ' ಎಂಬ ಶಬ್ದ 'ಅಡಿಗರ' ಮೌನತಬ್ಬಿತು ನೆಲವ-ಎಂಬಲ್ಲಿನ 'ಮೌನ' ಪದ ಒಂದೇ ಆಗಿದ್ದರೂ ಈ ಎರಡೂ ಬೇರೆ ಬೇರೆ ಕವಿತೆಗಳ ಸಂದರ್ಭದಲ್ಲಿ ಬಂದು ಅರ್ಥದಿಂದ ಭಿನ್ನವಾದವು. ಅಶ್ವತ್ಥ್ ದೂರಗಳನ್ನು ಕಾಯ್ದುಕೊಂಡೇ ಸಂಯೋಜಿಸಿದ್ದಾರೆ.

ಕವಿತೆಯಲ್ಲಿರುವ ಮಾತು, ಮೌನ, ವಿರಾಮಚಿಹ್ನೆ, ಅರ್ಧವಿರಾಮ, ಆಶ್ಚರ್ಯ, ಪ್ರಶ್ನಾರ್ಥಕ (?) ಮೊದಲಾದ ಚಿಹ್ನೆಗಳಿರುತ್ತವೆ. ಕವಿ ಇವೆಲ್ಲವನ್ನೂ ಉದ್ದೇಶಪೂರ್ವಕವಾಗಿ ಬಳಸಿದ್ದಾನೆ, ಕವಿತೆಯ ಸ್ವರಸಂಯೋಜಕ ಇದನ್ನೆಲ್ಲಾ ತನ್ನ ಸ್ವರಸಂಯೋಜನೆಯಲ್ಲಿ ತಾರದಿದ್ದರೆ. ಕವಿತೆ ಸಾರ್ಥಕತೆ ಪಡೆಯುವುದಿಲ್ಲ. ಅಶ್ವತ್ಥ್‌ರ ಮಹತ್‌ಗುಣವೇ ಇಂತಹ ಸೂಕ್ಷ್ಮಗಳನ್ನು ಗಮನಿಸುವುದು. 'ಮೊದಲ ದಿನ ಮೌನ, ಅಳುವೇ ತುಟಿಗೆ ಬಂದಂತೆ ನಂತರ ಚಿಂತೆ, ಎಂಬಲ್ಲಿನ ವಿರಾಮದಲ್ಲಿ ಚಿಂತೆಯನ್ನು ಸ್ವರದ ಮೂಲಕ (ಸಮಾಮಾ) ವ್ಯಕ್ತಪಡಿಸಿದ್ದಾರೆ.

ಜಿ.ಎನ್. ಶಿವರುದ್ರಪ್ಪನವರ 'ಯಾವುದೀ ಪ್ರವಾಹವು' ಎಂಬ ಕವಿತೆಯಲ್ಲಿ ಪ್ರಶ್ನಾರ್ಥಕ ಚಿಹ್ನೆಗೆ(?) ಅಶ್ವತ್ಥ್‌ಥೆಯೇ ಪ್ರಶ್ನಾರ್ಥಕ ಚಿಹ್ನೆ ಬಂದಮೇಲೆ ಅರೆಕ್ಷಣ ನಿಂತು ಹಾಡುತ್ತಾರೆ. (ರೀಸಸಾ | "" | "" | – ಎಂದು, ಪಲ್ಲವಿಯಲ್ಲಿ ಪ್ರಶ್ನಾರ್ಥಕ ಚಿನ್ಹೆ ನಿಲ್ಲುತ್ತದೆ.

ಅಶ್ವತ್ಥ್‌ರು ಅನೇಕ ಪ್ರಯೋಗಗಳನ್ನು ಮಾಡಿದ್ದಾರೆ. ಅವುಗಳಲ್ಲಿ ವಚನಗಳನ್ನು ತಾಳಕ್ಕಳವಡಿಸಿ ನೃತ್ಯಕ್ಕೆ ಹೊಂದುವಂತಹ ಒಂದು ಪ್ರಯತ್ನ 'ಕೂಡಲಸಂಗಮ' ಧ್ವನಿಸುರುಳಿ-ಪ್ರಾರಂಭದಲ್ಲಿ ಪ್ರತಿಕ್ರಿಯೆ ನೀರಸವಾಗಿದ್ದು. ನಂತರ ಜನಪ್ರಿಯವಾಯಿತು.

ಅಶ್ವತ್ಥರು ಮಕ್ಕಳಗೀತೆ ಮಾಡುವಾಗ 'ಮಕ್ಕಳೇ ಹಾಡುವಂತೆ' ಮಾಡಿದ್ದಾರೆ, ಇವರಂತೆ ಶಿಶುಗೀತೆಗಳಿಗೆ ಸ್ವರಸಂಯೋಜಿಸಿರುವುದು ಮತ್ತೊಬ್ಬರಿಲ್ಲ. ಇವರ 'ಕಲಿಯೋಣ ಬಾ' 'ಬಣ್ಣದ ಹಕ್ಕಿ' 'ಗಿಲಿ ಗಿಲಿ ಗೆಜ್ಜೆ'-ಮುಂತಾದ ಧ್ವನಿ ಸುರುಳಿಗಳಲ್ಲಿ ಇದು ವ್ಯಕ್ತವಾಗುತ್ತದೆ.

'ಗೀತಮಾಧುರಿ' ಎಂಬ ದೂರದರ್ಶನ ಧಾರವಾಹಿಗೆ ಭಾವಗೀತೆಯನ್ನು ಅಳವಡಿಸಿ ಪ್ರಸಿದ್ಧ ಹಿರಿಯ ಕಿರಿಯ ಕವಿಗಳ ಕವಿತೆಗಳನ್ನು ದೃಶ್ಯ ಮಾಧ್ಯಮದಿಂದ ವರ್ಣರಂಜಿತ ಮಾಡಿದ ಕೀರ್ತಿ ಅಶ್ವತ್ಥ್‌ಗೆ ಸಲ್ಲುತ್ತದೆ.

ರಂಗಭೂಮಿಯ ಅನುಭವವನ್ನು ಹೆಕ್ಕಿಕೊಂಡು ಕವಿತೆಯಲ್ಲಿ ಕವಿಯ ವ್ಯಕ್ತಿತ್ವವನ್ನು ಹುಡುಕುತ್ತಾ, ಕವಿತೆಯಲ್ಲಿ ಭಾವದೀಪ್ತಿಯನ್ನು ಬೆಳಗಿಸುತ್ತಾ ಸ್ವರಸಂಯೋಜನೆ ಮಾಡುವರಲ್ಲಿ ಅಶ್ವತ್ಥರ ಕಾಣಿಕೆ ಅನನ್ಯ.

ಸುಗಮ ಸಂಗೀತವನ್ನು ಅಧಿಕಾರಯುತವಾಗಿ ಮುನ್ನಡೆಸಿ ಅದಕ್ಕೊಂದು ಚೌಕಟ್ಟೆಂಬ ಸಿದ್ಧಾಂತವನ್ನು ಪುಸ್ತಕ ರೂಪದಲ್ಲಿ ಬರೆದದ್ದೇ ಅಲ್ಲದೆ ಸುಗಮ ಸಂಗೀತಗಾರರನ್ನು ಮುಂದಿನ ಹಾದಿಗೆ ಎಳೆದೊಯ್ಯುವ ಸಾರಥಿಯೇ ಸಿ. ಅಶ್ವತ್ಥ್ ಎನ್ನಬಹುದು.

ಅಶ್ವತ್ಥರ ನಂತರ ಅವರಿಗೆ ಸಮಾನಂತರದಲ್ಲಿ ಅವರಷ್ಟೇ ಪ್ರಭಾವಶಾಲಿಯಾದ ಯಾವ ಸಂಯೋಜಕರೂ ಇಲ್ಲವೆಂದೇ ಹೇಳಬಹುದು.

**ಸುಗಮಸಂಗೀತದ ಗಾಯಕಿಯರು**

ಸುಗಮಸಂಗೀತ ಗಾಯನ ಹಾದಿಯ ಅವಲೋಕನದಲ್ಲಿ ಗಮನಿಸಿದಾಗ ಈ ಸಂಗೀತ ಪ್ರಕಾರಕ್ಕೆ ಅಪಾರವಾದ ಕಾಣಿಕೆ ಕೊಟ್ಟವರು ನಮ್ಮ ಮಹಿಳಾ ಗಾಯಕಿಯರೇ ಎಂಬ ಅಂಶ ಗೋಚರವಾಗುತ್ತದೆ. ಮೈಸೂರು ಆಕಾಶವಾಣಿಯ ಮೊದಲ ದನಿಯಾಗಿ ಡಾ|| ಶಮಂತಕಮಣಿಯವರು ಕಂಡು ಬಂದರೆ, ಮುಂಬಯಿ ಆಕಾಶವಾಣಿಯ ಮೊದಲ ದನಿಯಾಗ 'ಸೀತಾಮುಲ್ಕಿ'ಯವರು ಹಾಡಿದರೆಂಬ ಅಂಶ ತಿಳಿಯುತ್ತದೆ.

ಉತ್ತರಕರ್ನಾಟಕದಲ್ಲಿ ಸೀತಾಮುಲ್ಕಿ, ಹೀರಾಬಾಯಿ, ವಿಜಯದೇಸಾಯಿ, ಸುಶೀಲಾ ಟೇಂಬೆ ಮುಂತಾದವರು ಕಾರಣರಾದಂತೆ ದಕ್ಷಿಣಕರ್ನಾಟಕದ ಮಂಗಳೂರಿನಲ್ಲಿ ಶ್ರೀಮತಿ ಜಯಂತಿದೇವಿ ಹಿರೇಬೆಟ್(೧೯೧೭) ಅವರು, ಸುಗಮಸಂಗೀತದ ಆರೋಹಣದ ಸ್ಥಿತಿಗೆ ಕಾರಣರಾದ ಪ್ರತಿಭಾವಂತ ಗಾಯಕಿ. ೧೯೪೪ರಲ್ಲಿಯೇ ಇವರು ಹಾಡಿದ 'ಭಾಗ್ಯದ ಲಕ್ಷ್ಮೀ ಬಾರಮ್ಮ' ಮತ್ತು 'ಹೂವ ತರುವವರ ಮನೆಗೆ ಹುಲ್ಲ ತರುವ' ಎಂಬ ಪರುಂದರದಾಸರ ಪದಗಳ H.M.V. ಕಂಪನಿಯ ಮೂಲಕ ಮದರಾಸಿನಲ್ಲಿ ಧ್ವನಿಮುದ್ರಿತವಾಗಿತ್ತು. ೧೯೫೨ರಲ್ಲಿ ಮುಂಬಯಿಯಲ್ಲಿ ಮತ್ತೆ ಇದೇ ಕಂಪನಿಯವರು ಭಾವಗೀತೆಗಳನ್ನು ಧ್ವನಿಮುದ್ರಿಸಿದರು. 'ವಾರಿ ನೋಟಿ ಹಾರತಿತ್ತ' (ಬೇಂದ್ರೆ) 'ಹತ್ತು ಬರುಷದ ಹಿಂದೆ' (ಕೆ.ಎಸ್.ನರಸಿಂಹಸ್ವಾಮಿ) ಮುಂತಾದ ಹಾಡುಗಳ ಎಚ್.ಎಂ.ವಿ. ಕಂಪನಿಯಲ್ಲಿ ಮುದ್ರಿತವಾಗಿ ಅತ್ಯಂತ ಜನಪ್ರಿಯವಾದವು. ಕನ್ನಡ ವಚನಗಳನ್ನು ದಾಸರಪದಗಳನ್ನು ಸುಗಮಸಂಗೀತ ಶೈಲಿಗೆ ಅಳವಡಿಸಿದ ಮೊದಲಿಗರೆಂಬ ಕೀರ್ತಿ ಜಯಂತಿದೇವಿಯವರದಾಯಿತು. 'ಮಹಾತ್ಮಗಾಂಧಿ' ಅವರ ಮುಂದೆ 'ವಂದೇಮಾತರಂ' ಹಾಡಿ ಮೆಚ್ಚುಗೆ ಗಳಿಸಿದ ಜಯಂತಿ ಅವರು ಕನ್ನಡ, ಮರಾಠೀ, ಕೊಂಕಣಿ ಮುಂತಾದ ಭಾಷೆಗಳಲ್ಲಿ ಜನಪ್ರಿಯ ಗೀತೆಗಳನ್ನು ಜನಸಾಮಾನ್ಯರನ್ನು ಆಕರ್ಷಿಸಿದರು. 'ಶಿಶುನಾಳ ಷರೀಫರ' ಪ್ರಶಸ್ತಿಯನ್ನು ಪಡೆದವರಲ್ಲಿ ಮೊದಲಿಗರಾದರು.

ಸುಗಮಸಂಗೀತದ ಮೊದಲ ಹಾಡಿಗೆ ದನಿಯಾದವರು ಮತ್ತು ಈ ಸಂಗೀತ ಪ್ರಕಾರಕ್ಕೆ ಅಪಾರವಾದ ಕಾಣಿಕೆ ಕೊಟ್ಟವರು ನಮ್ಮ ಗಾಯಕಿಯರೇ ಎನ್ನುವುದು ಅಚ್ಚರಿಯ ಸಂಗತಿ. ೧೯೪೯ರಲ್ಲಿ ಮೈಸೂರಿನಲ್ಲಿ ಡಾ|| ಶಮಂತಕಮಣಿಯವರಿಂದ ಭಾವಗೀತಾಗಾಯನ ಆರಂಭವಾಯಿತು. ಡಾ|| ಶಮಂತಕಮಣಿಯವರು ಹಾಡಿದ ಕುವೆಂಪುರವರ 'ಕರೆಯುತಿದೆ ಓ ದೂರ ದಾಹ್ವಾನವಾಣಿ'-'ಶೂನ್ಯತೆ ಏನಿದು ಹೃದಯದಲಿ'-'ನಾನಿನ್ನು ಮರೆಯೆ'. 'ಕರೆಯೆಂದು ಬರುವುದೋ' ಎಂಬ ನಾಲ್ಕು ಗೀತೆಗಳು ಪದ್ಮಚರಣರ ರಾಗಸಂಯೋಜನೆಯಲ್ಲಿ

ಆಕಾಶವಾಣಿಯಿಂದ ಬಿತ್ತರಗೊಂಡವು. ವೃತ್ತಿಯಿಂದ ವೈದ್ಯರಾಗಿ ಪ್ರವೃತ್ತಿಯಿಂದ ಸಂಗೀತಕಾರರಾಗಿದ್ದ ಡಾ|| ಶಮಂತಕಮಣಿಯವರೇ ಪದ್ಮಚರಣರ ಪ್ರಥಮ ಶಿಷ್ಯೆ ಎನ್ನಬಹುದು. ಇವರ ನಂತರ ೧೯೫೦ರಲ್ಲಿ ಆಗಸ್ಟ್ ೧೪ರಂದು ಆಕಾಶವಾಣಿ ಕೃಷಿರಂಗ ಕಾರ್ಯಕ್ರಮದಲ್ಲಿ 'ಗೌರಿ ತವರಿಗೆ ಹೋಗಿ ಬಂದದ್ದು'-ಎಂಬ ಜಾನಪದ ಹಾಡಿನ ಮೂಲಕ ಜನಪ್ರಿಯ ಗಾಯಕಿಯಾಗಿ ಮಹಾನ್ ತಾರೆಯಾಗಿ ಮೆರೆದವರು ಶ್ರೀಮತಿ ಹೆಚ್.ಆರ್. ಲೀಲಾವತಿ. ಪದ್ಮಚರಣ್‌ರ ಬಳಿ ಇಪ್ಪತ್ತನಾಲ್ಕು ವರ್ಷಗಳ ಕಾಲ ಸುಗಮಸಂಗೀತವನ್ನು ಕಲಿತು ಅವರ ಸಂಯೋಜನೆಗಳಿಗೆ ದನಿಯಾದವರು ಲೀಲಾವತಿ. ಕರ್ನಾಟಕದ ಅವರ ಸಂಯೋಜನೆಗಳಿಗೆ ದನಿಯಾದವರು ಲೀಲಾವತಿ. ಕರ್ನಾಟಕದ ಲತಾಮಂಗೇಶ್ಕರ್ ಎಂದೇ ಪ್ರಖ್ಯಾತಿ ಪಡೆದ ಲೀಲಾವತಿಯವರು ಗಾಯಕಿಯಾಗಿ, ಸಂಯೋಜಕಿಯಾಗಿ, ಲೇಖಕಿಯಾಗಿದ್ದುದೇ ಅಲ್ಲದೆ ಆಕಾಶವಾಣಿಯಲ್ಲಿ ಸಂಗೀತ ಸಂಯೋಜಕಿಯಾಗಿ ಹೆಸರು ಮಾಡಿದರು. ಐವತ್ತರ ದಶಕದಿಂದ ಸುಮಾರು ಮೂರು ದಶಕಗಳವರೆಗೆ 'ಗಾನ ಸಾಮ್ರಾಜ್ಞಿ'ಯಾಗಿ ಮೆರೆದ ಅವರ ಗಾಯನದ ನಾದಸುಖ ಕೇಳಿದವರಿಗಷ್ಟೆ ಅನುಭವ. ಶಾಂತ, ಗಂಭೀರಶೈಲಿಯ ಮಾಧುರ್ಯದ ಮಹತ್ ಸ್ಪರ್ಶವೇ ಅವರ ಗಾಯನದ ಮುಖ್ಯ ಗುಣ. ಸುಗಮಸಂಗೀತದ ಮಹಿಳಾ ಸಂಯೋಜಕರಲ್ಲಿ ಲೀಲಾವತಿಯವರದು ಹಿರಿಯ ಸ್ಥಾನ. ಲೀಲಾವತಿಯವರ ಸಹಪಾಠಿಯಾಗಿದ್ದ ಎಂ.ವಿ. ಮಾಲತಿಯವರು ಶಾಸ್ತ್ರೀಯ ಸಂಗೀತದಲ್ಲಿ ಆರ್.ಕೆ. ಶ್ರೀಕಂಠನ್ ಅವರ ಶಿಷ್ಯೆಯಾಗಿದ್ದು, ಸುಗಮಸಂಗೀತದಲ್ಲಿ ಪದ್ಮಚರಣ ಶಿಷ್ಯೆಯಾಗಿದ್ದರು. ಅಡಿಗರ 'ಇಂದು ಕೆಂದಾವರೆ' ಬೇಂದ್ರೆಯವರ 'ಎನ್ನ ಹರಣ ನಿನಗೆ ಶರಣ'-ಹಾಡುಗಳ ಮೂಲಕ ಮನೆ ಮನೆಯ ಮಾತಾಗಿದ್ದರು. ಜಯಚಾಮರಾಜ ಒಡೆಯರ್ ಎದುರಿನಲ್ಲಿ 'ನನ್ನ ಹರಣ' ಭಾವಗೀತೆ ಹಾಡಿ ಮೆಚ್ಚುಗೆ ಪಡೆದಿದ್ದರು. ಪದ್ಮಚರಣ್‌ರ ಶೀಷ್ಯೆಯರಾದ ರೇಖಾ ಮತ್ತು ಕೃಪಾ ಅವರು ಆಲ್ ಇಂಡಿಯಾ ರೇಡಿಯೋವಿನಲ್ಲಿ ಡೆಲ್ಲಿಯಲ್ಲಿ ನಡೆದ ಹದಿನಾಲ್ಕು ಭಾಷೆಗಳ ಗಾಯನ ಮೇಳದಲ್ಲಿ ನಿಸಾರರ 'ಸದಾ ಉರಿಯುತಿರು ಹಾಗೆ ಸ್ವಾತಂತ್ರ್ಯದ ಹಣತೆ'ಯ ಮೂಲಕ ಹೆಸರು ಮಾಡಿದ್ದರು. ಹದಿನಾಲ್ಕು ಭಾಷೆಗಳ ಹದಿನಾಲ್ಕು ಗೀತೆಗಳಲ್ಲಿ ಪದ್ಮಚರಣ್‌ರ ಸಂಯೋಜನೆಯಾದ ಈಗೀತೆ ಅತ್ಯುತ್ತಮವೆಂದು ಮೆಚ್ಚುಗೆ ಗಳಿಸಿತ್ತು. ಪದ್ಮಚರಣ್‌ರ ಮತ್ತೊಬ್ಬ ಶಿಷ್ಯೆ ಡಾ|| ಮಾಧವಿರಾಜ, ಸಿ.ಕೆ.ತಾರಾ ಮತ್ತು ವೈ.ಎಸ್. ಇಂದ್ರಾ ಜೋಡಿಗಾಯನದಲ್ಲಿ ಅನೇಕ ಗೀತೆಗಳನ್ನು ಪ್ರಸಿದ್ಧಿಗೆ ತಂದರು. ನಿಸಾರರು ರಚಿಸಿದ 'ಆತ್ಮಾರ್ಪಣೆ' ಎನ್ನುವ ಬಾನುಲಿರೂಪಕದಲ್ಲಿ ಕಾಳಿಂಗರಾವ್‌ರವರೊಂದಿಗೆ ಎಂ.ಎನ್. ರತ್ನಹಾಡಿದ್ದರು. ಪದ್ಮಚರಣ್ ಅವರು ಸಂಯೋಜಿಸಿದ್ದ ವಿಸೀ ಅವರ 'ಮಾನವನೆತ್ತರ ಆಗಸದೇರಿಗೆ' ಎಂಬ ಕವಿತೆಯನ್ನು ಮದರಾಸಿನ ಪ್ರಸಿದ್ಧ ಹಿನ್ನೆಲೆ ಗಾಯಕಿ ಪಿ. ಲೀಲಾ ಅರು ಹಾಡಿದ್ದರು. ಮುಂಬಯಿಯಿಂದ ಕರ್ನಾಟಕಕ್ಕೆ ಬಂದಿದ್ದ ರಾಗ ಖ್ಯಾತ ಹಿಂದೂಸ್ತಾನೀ ಸಂಗೀತ ಗಾಯಕಿ ಶ್ರೀಮತಿ ಲಕ್ಷ್ಮಿಶಂಕರ್ ಅವರು ಪದ್ಮಚರಣ್ ಸಂಯೋಜಿಸಿದ್ದ 'ಸ್ವಾಗತ ಸ್ವಾಗತ, ಸ್ವಾಗತವು ಕವಿವಾಣಿಗೆ'-ಎಂಬ ಗೀತೆಯನ್ನು ಹಾಡಿದ್ದರು. ಕರ್ನಾಟಕ ಸಂಗೀತದ ಪಿಟೀಲು ವಿದ್ಯಾಸಂಸ್ಥೆಯಾದ ಟಿ. ರುಕ್ಮಿಣಿ ಮತ್ತು ಕರ್ನಾಟಕ ಸಂಗೀತ ಸಾಮ್ರಾಟ ಡಾ|| ಎಂ. ಬಾಲಮುರುಳೀಕೃಷ್ಣ ಇಬ್ಬರೂ ಆಕಾಶವಾಣಿಯ ನವಸುಮ ಕಾರ್ಯಕ್ರಮಕ್ಕಾಗಿ ಮಾಸ್ತಿ ಅವರ 'ಕೋಗಿಲೆ ಕೋಗಿಲೆ' ಗೀತೆಯನ್ನು ಹಾಡಿದ್ದರು. ಪದ್ಮಚರಣ್ ಈ ಗೀತೆಗೆ ರಾಗಸಂಯೋಜಿಸಿದ್ದರು.

ಟಿ. ರುಕ್ಮಿಣಿ ಮತ್ತು ಬಾಲಮುರಳಿಯವರು ಬೇಂದ್ರೆಯವರ 'ನೀ ಮಳ್ಳ ಜಾತಿಯ ಹೆಣ್ಣು' ಗೀತೆಯ ಮೂಲಕ ಹೆಸರು ಮಾಡಿದ್ದರು. ಟಿ. ರುಕ್ಮಣಿಯವರು ಹಾಡಿದ್ದ ಕೆ. ಎಸ್.ನರಸಿಂಹಸ್ವಾಮಿಗಳ 'ಮುಗಿಲೆ ಮುಗಿಲೆ' ಮತ್ತು 'ಶ್ರೀ ಕೃಷ್ಣನಂತಹ ಮುಗಿಲು' ಮತ್ತು ಅಡಿಗರ 'ಹಿಂದುಮುಂದಿನೆಣಿಕೆ ಏಕೆ? ಮುಂತಾದ ಗೀತೆಗಳು ಜನಪ್ರಿಯವಾಗಿದ್ದವು.

ಕಾಳಿಂಗರಾವ್ ಅವರೊಂದಿಗೆ ಮೂರು ದಶಕಗಳ ಕಾಲ ಹಾಡಿ ಅವರ ಎಲ್ಲ ಹಾಡುಗಾರಿಕೆಗೆ ಕಾರ್ಯಕ್ರಮಗಳಿಗೆ ಶರುತಿಯಂತೆ ಇದ್ದ ಸೋದರಿಯರಾದ ಮೋಹನ್‌ಕುಮಾರಿ ಮತ್ತು ಸೋಹನ್‌ಕುಮಾರಿಯವರೂ ಸುಗಮಸಂಗೀತ ಗಾಯಕಿಯರಲ್ಲಿ ಪ್ರಮುಖರು. ಹೆಚ್.ಎಂ.ವಿಯಲ್ಲಿ ಧ್ವನಿಮುದ್ರಿತವಾಗಿದ್ದ 'ಜೋ ಜೋ ಬಾಲಕೃಷ್ಣ' ಅಂದಿನ ಜನಪ್ರಿಯ ಹಾಡಾಗಿತ್ತು.

ಎಸ್.ಕೆ. ವಸುಮತಿ, ಸಿ.ಕೆ. ತಾರಾ, ಶ್ಯಾಮಲ ಜಾಗಿರ್‌ದಾರ್ ಮುಂತಾದವರು ಸುಗಮಸಂಗೀತದ ಹಾದಿಗೆ ಹೂವು ಚೆಲ್ಲಿದರು. ಬಾನುಲಿ ಗೀತರೂಪಕಗಳಲ್ಲಿ ಮಿಂಚಿ ಪು.ತಿ.ನ. ಅವರ ಗೀತರೂಪಕಗಳಿಗೆ ಬಹುಪಾಲು ದನಿ ನೀಡಿದವರು ಎಸ್.ಕೆ. ವಸುಮತಿ, ಪು.ತಿ.ನ ಅವರ

ಗೋಕುಲ ನಿರ್ಗಮನ, ಹರಿಣಾಭಿಸರಣ, ದೀಪಲಕ್ಷ್ಮಿ ಮುಂತಾದ ರೂಪಕಗಳ ಜನಪ್ರಿಯತೆಗೆ ಈ ಬಾನುಲಿಯ ಕೋಗಿಲೆಗಳೇ ಕಾರಣ. 'ಗೀತಗೋಪಾಲ' ಸಂಗೀತ ರೂಪಕದಲ್ಲಿ ಸಿ.ಕೆ. ತಾರಾ ಹೆಸರು ಜನಪ್ರಿಯವಾಯಿತು. ತಾರಾ ಮತ್ತು ವಸುಮತಿಯವರು ತಯಾರು ಮಾಡಿದ ಅಸಂಖ್ಯಾತ ಶಿಷ್ಯರಿಂದ ಮೈಸೂರು, ಬೆಂಗಳೂರು ಪ್ರಾಂತ್ಯಗಳಲ್ಲಿ ಸುಗಮಸಂಗೀತದ ವೃಕ್ಷ ಟಿಸಿಲೊಡೆದುದು ಸಂತಸದ ಘಟ್ಟ ಎನ್ನಬಹುದು. ಶ್ಯಾಮಲಾ ಜಾಗಿರ್‌ದಾರ್ ೧೯೫೭ರಲ್ಲೇ ರಷ್ಯಾದ ಅಧ್ಯಕ್ಷ ಹಾಗೂ ಪ್ರಧಾನಿಗಳ ಮುಂದೆ ಮೊದಲ ಕಾರ್ಯಕ್ರಮವನ್ನು ನೀಡಿದ್ದರು. ವಚನ, ದಾಸರಪದ ಭಾವಗೀತೆಗಳ ಗಾಯನದ ಮೂಲಕ ಮನಸೆಳೆದರು. ತಮ್ಮ ಇಂಪಾದ ಗಾಯನಕ್ಕಾಗಿ ೧೯೫೬ರಲ್ಲಿ 'ಸ್ವೀಟ್ ವಾಯ್ಸ್‌ಆಫ್ ಮೈಸೂರ್' ೧೯೬೨ರಲ್ಲಿ ಸ್ವೀಟ್ ಮೆಲೋಡಿ ಆಫ್ ಕರ್ನಾಟಕ, ಕರ್ನಾಟಕ ಕೋಗಿಲೆ ಪ್ರಶಸ್ತಿಗಳನ್ನು ಬಾಚಿಕೊಂಸರು. ಹೆಚ್.ಎಂ.ವಿ.ಕಂಪನಿಯಲ್ಲಿ ಇವರ ಹತ್ತಾರು ಗೀತೆಗಳನ್ನು ಧ್ವನಿ ಮುದ್ರಿಸಕೊಂಡಿತು. 'ರಂಗನಾಥನ ಪಾದವ ತೊಳೆಯೆ ಕಾವೇರಿ ಬಂದಳು'- 'ಕಲ್ಲಿನಲಿ ಕೆತ್ತಿದನು' 'ಆನೆ ಬಂದಿತಮ್ಮಾ' 'ನಿನ್ನ ಬಾಂದವಳದಂತೆ' ಮೈಸೂರು ಸುತ್ತ ಸಾಲು ತೆಂಗಿನಮರ, ಮುಂತಾದ ಹಾಡುಗಳು ಶ್ಯಾಮಲಾ ಜಾಗಿರ್‌ದಾರ್ ಅವರ ಜನಪ್ರಿಯ ಗೀತೆಗಳು.

ಶ್ಯಾಮಲಾ ಜಿ. ಭಾವೆ (೧೯೪೧) ಉಭಯಗಾನ ವಿದುಷಿ ಎಂಬ ಬಿರುದು ಪಡೆದು ಶಾಸ್ತ್ರೀಯ ಲಘು ಶಾಸ್ತ್ರೀಯ ಪ್ರಕಾರಗಳಲ್ಲಿ ಭಾವಗೀತಾ ಪ್ರಕಾರಗಳಲ್ಲಿ ಪ್ರಸಿದ್ಧಿ ಮಾಡಿದವರು. ಸುಗಮಸಂಗೀತದ ಎಲ್ಲ ಪ್ರಕಾರಗಳಲ್ಲೂಕೈಯಾಡಿಸಿರುವ ಶ್ಯಾಮಲಾ ಭಾವೆ ಹತ್ತಾರು ಧ್ವನಿಸುರುಳಿಗಳನ್ನು ತಂದರು. 'ಸುವರ್ಣಬಾರತ'- 'ಉತ್ತರ ದರ್ಶನ' - 'ಗೀತತರಂಗ'- 'ಭಾವೈಕ್ಯ ಭಾರತಿ'- 'ವಚನ ಸುಧಾ'- ಇವುಗಳು ಶ್ಯಾಮಲಾ ಭಾವೆಯವರ ಅತ್ಯುತ್ತಮ ಸಂಯೋಜನೆಯಿಂದ ಧ್ವನಿಸುರುಳಿಗಳು. ಶ್ಯಾಮಲಾ ಅತಿ ಸೂಕ್ಷ್ಮ ಭಾವನೆಯ ಗೀತ ಸಂಯೋಜಕರು. ತಾಯಿ ಲಕ್ಷ್ಮಿಭಾವೆ ತಂದೆ ಗೋವಿಂದ ವಿಠಲ ಭಾವೆಯವರು ಸ್ಥಾಪಿಸಿದ ಸರಸ್ವತಿ ಸಂಗೀತ ವಿದ್ಯಾಲಯ ಪ್ರಾಚಾರ್ಯೆಯಾಗಿ, ನಾಡಿನ ಎಲ್ಲ ಕವಿಗಳ ಎಲ್ಲ ರಚನೆಗಳನ್ನು ಹಾಡುತ್ತಾ ಬಂದವರು.

ಸುಗಮಸಂಗೀತಕ್ಕೆ ಪ್ರಮುಖ ಚಾಲನೆಕೊಟ್ಟವರು ಶ್ರೀ ಮೈಸೂರು ಅನಂತಸ್ವಾಮಿಗಳು, ಇವರ ಸಂಯೋಜನೆಯಾದ 'ಯಾವ ಮೋಹನ ಮುರಳಿ ಕರೆಯಿತು' ಗೀತೆಯಿಂದ ತಮ್ಮ ಮಧುರ ಕಂಠದ ಸಿರಿ ತೆರೆದ ರತ್ನಮಾಲಾ ಪ್ರಕಾಶ್‌ರವರು 'ಸುಗಮಸಂಗೀತ'ವೆಂದರೆ ರತ್ನಮಾಲಾ, ರತ್ನಮಾಲಾ ಎಂದರೆ ಸುಗಮಸಂಗೀತ ಎನಿಸುವಷ್ಟು ಪ್ರಸಿದ್ಧರಾದರು. 'ಬಾಗಿಲೊಳು ಕೈ ಮುಗಿದು' ಎದೆ ತುಂಬಿ ಹಾಡಿದೆನು 'ಯಾವ ಮೋಹನ ಮುರಲಿ' ಉಡುಗಣ ವೇಷ್ಟಿತ ನಿಲ್ಲಿಸದಿರು ವನಮಾಲಿ, ಮೊದಲ ದಿನ ಮೌನ, ಏನೀ ಮಹಾನಂದವೇ, 'ತೌರಸುಖದೊಳಗೆನ್ನ' ಮುಂತಾದ ಭಾವಗೀತೆಗಳಿಂದ ಕೇಳುಗರ ಮನಸ್ಸನ್ನು ಸೂರೆ ಮಾಡಿದರು.

M.S.I.L ಮೂಲಕ ಬೆಳಕಿಗೆ ಬಂದ ಗಾಯಕಿ ಬಿ.ಕೆ. ಸುಮಿತ್ರ ಅವರು, (೧೯೪೬) ಕಲಿತಿದ್ದು ಅಪ್ಪಟ ಶಾಸ್ತ್ರೀಯ ಸಂಗೀತ. ಹೆಸರು ಮಾಡಿದ್ದು 'ಜಾನಪದ' ಗೀತೆಗಳಲ್ಲಿ ಮತ್ತು ಚಿತ್ರಗೀತೆಗಳಲ್ಲಿ, ಒಲವು ಮೂಡಿದ್ದು ಸುಗಮಸಂಗೀತದಲ್ಲಿ. ಸ್ಪಷ್ಟ ದನಿಯ ಸುಮಿತ್ರ 'ಬೃಂದಾವನಕೆ' (ಕುವೆಂಪು) ಬೆಣ್ಣೆಕದ್ದ (ನಿಸಾರ್) ಮುಂತಾದ ಜನಪ್ರಿಯ ಗೀತೆಗಳನ್ನು ಹಾಡಿ ಹೆಸರುಮಾಡಿದರು.

ಮೈಸೂರು ಅನಂತಸ್ವಾಮಿಯವರೊಡನೆ ಸುಮಾರು ಮೂವತ್ತೈದು ವರ್ಷ ಸತತವಾಗಿ, ಸುಗಮಸಂಗೀತ ಹಾಡಿ ಅವರ ಸಂಯೋಜನೆಗಳಿಗೆ ಮಾಧುರ್ಯತೆ ತಂದುಕೊಟ್ಟು ತಾವೂ ಪ್ರಬುದ್ಧ ಗಾಯಕಿಯಾಗಿ ಬೆಳೆದವರು ಶ್ರೀಮತಿ ಎಂ.ಕೆ. ಜಯಶ್ರೀ ಅವರು. ೧೪-೫-೧೯೫೫ರಂದು ಬೆಂಗಳೂರಿನಲ್ಲಿ ಹುಟ್ಟಿದ ಜಯಶ್ರೀಯವರ ಐದುವರುಷದ ಬಾಲಕಿಯಾಗಿರುವಾಗಲೇ ಹಾಡುತ್ತಾ ಹಾಡುತ್ತಾ ಬೆಳೆದರು. ಬಾಲ್ಯದಿಂದಲೇ ಶಾಸ್ತ್ರೀಯ ಸಂಗೀತವನ್ನು ಎಸ್.ಚಂದ್ರಶೇಖರ್, ಬೆಳಕವಾಡಿ ವರದರಾಜಯ್ಯಂಗಾರ್, ರತ್ನಗಿರಿ ಸುಬ್ಬಾಶಾಸ್ತ್ರಿ, ಆನೂರು ರಾಮಕೃಷ್ಣ ಮೊದಲಾದ ವಿದ್ವಾಂಸರುಗಳ ಬಳಿ ಹಂತಹಂತವಾಗಿ ಕಲಿತರು. ಸುಗಮಸಂಗೀತವನ್ನು ಮೈಸೂರು ಅನಂತಸ್ವಾಮಿಯವರ ಬಳಿ ಕಲಿತರು. ಸುಗಮಸಂಗೀತ ಪ್ರಪ್ರಥಮ 'ಧ್ವನಿಸುರುಳಿ' 'ನಿತ್ಯೋತ್ಸವ'ದಲ್ಲಿ ಹಾಡಿ ಹೆಗ್ಗಳಿಕೆ ಗಳಿಸಿದರು. ಪ್ರಭಾತ್ ಕಲಾವಿದರ (೧೯೬೭-೬೮) 'ಕಿಂದರಿಜೋಗಿ' ಗೀತ ನಾಟಕದಿಂದ ಧ್ವನಿಮುದ್ರಣ ಕ್ಷೇತ್ರಕ್ಕೆ ಕಾಲಿಟ್ಟ ಜಯಶ್ರೀಯವರು ಹಿಂದೆ ತಿರುಗಿ ನೋಡಲಿಲ್ಲ. ಹತ್ತಾರು ಗೀತರೂಪಕಗಳಲ್ಲಿ ಹಾಡುತ್ತಾ ಬಂದರು. ಆಕಾಶವಾಣಿಯ ಒ.ಖ.ಋ.ಐ ಗೀತೆಗಳಲ್ಲಿಯೂ

ಜನಪ್ರಿಯರಾದರು. ಬರ, ಚಿತ್ರಕೂಟ, ಪುಣ್ಯಕೋಟಿ, 'ಸಂಗೀತ'- ಚಿತ್ರಗಳಿಗೆ ಹಿನ್ನೆಲೆಗಾಯಕಿಯಾಗಿಯೂ ಹಾಡಿದರು. 'ಕವಿ ಕಂಡ ಕೃಷ್ಣ' 'ಶಿಲ್ಪ ವೈಭವ' -ಮೋಹಿನಿಭಸ್ಮಾಸುರ-'ವಂದೇಮಾತರಂ'- ಮುಂತಾದ ಗೀತನಾಟಕಗಳಿಗೆ ಸಂಗೀತ ನೀಡಿನಿರ್ಮಿಸಿದ್ದರು. ವಿವಧ ಭಾಷೆಗಳ ಸುಮಾರು ಇನ್ನೂರೈವತ್ತಕ್ಕೂ ಹೆಚ್ಚು ಜಾಹೀರಾತುಗಳಿಗೆ ಧ್ವನಿ ನೀಡಿದರು. ಆಕಾಶವಾಣಿಯ ಅಖಿಲಭಾರತ ಭಾವಗೀತಾ ಗಾಯನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದರು. ೧೯೯೯ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದರು. ನಿತ್ಯೋತ್ಸವ', ಮತ್ತದೇ ಬೇಸರ ಹೂ ಹೂ ಹೂ- ನನ್ನ ನಲವಿನ ಬಳ್ಳಿ, ಎಲೆಕೆಂಚಿ ಬಾರೆ' ಈ ಬಾನು ಈ ಹಕ್ಕಿ' ಇಂದು ಕೆಂದಾವರೆ, ಬೆಣ್ಣೆಕದ್ದ, ನೀನುಡಿಯದಿರಲೇನು-ತುಂಬುತಿಂಗಳೀನ-ಬಾ ಸವಿತ-ನಾ ಕುಣಿಬೇಕ-ನೀ ಬರುವ ದಾರಿಯಲಿ-ಮುಂತಾದ ಗೀತೆಗಳು ಜಯಶ್ರೀಯವರ ಸಿರಿಕಂಠಕ್ಕೆ ಸಾಕ್ಷಿಯಾದವು. ಹೆಚ್.ಕೆ. ನಾರಾಯಣ್, ಜಿ.ಕೆ.ವೆಂಕಟೇಶ್, ಪದ್ಮಚರಣ್, ಸೀತರಾಮ ರಾಜು, ಈಶ್ವರ್ ರಾಜನ್ ನಾಗೇಂದ್ರ-ಚಂದ್ರಶೇಖರ ಕಂಬಾರ, ಗುಣಸಿಂಗ್ ಮುಂತಾದ ಪ್ರಸಿದ್ಧ ಸಂಗೀತ ಸಂಯೋಜಕರು ಇವರ ದನಿಯನ್ನು ಸಮರ್ಥವಾಗಿ ಬಳಿಸಿಕೊಂಡರು.

ಎಂ.ಎಸ್.ಐ.ಎಲ್‌ನಿಂದ ಬೆಳಕಿಗೆ ಬಂದ ಮತ್ತೊಬ್ಬ ಗಾಯಕಿ ಶ್ರೀಮತಿ ಕಸ್ತೂರಿಶಂಕರ್ ಅವರು-೧೯೫೦-೧೧-೧ರಂದು ಮೈಸೂರಿನಲ್ಲಿ ಹುಟ್ಟಿದ್ದರು. ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ವಿದ್ವಾನ್ ಎ.ಸುಬ್ಬರಾವ್ ಅವರ ಬಳಿಯೂ, ಹಿಂದೂಸ್ತಾನಿ ಸಂಗೀತವನ್ನು ಪಂಡಿತ್ ಡಿ.ಬಿ. ಹರೀಂದ್ರ ಅವರಿಂದಲೂ ಕಲಿತರು. ಪದ್ಮಚರಣ್, ಹೆಚ್.ಕೆ.ನಾರಾಯಣ - ಮೈಸೂರು ಅನಂತಸ್ವಾಮಿ, ಸಿ. ಅಶ್ವಥ್ ಅವರ ಸಂಯೋಜನೆಗಳಿಗೆ ದನಿಯಾದರು-ನವೋದಯದ ಕಿರಣ ಲೀಲೆ, ಹಕ್ಕು ಹಾರುತಿದೆ ನೋಡಿದಿರಾ, ನಾನು ಬಡವಿ - 'ಯಾರು ಜೀವವೇ'- ಮುಂತಾದ ಪ್ರಸಿದ್ಧ ಗೀತೆಗಳು ಇವರಿಗೆ ಹೆಸರು ತಂದುಕೊಟ್ಟಿತು.

ಎಂ.ಎಸ್.ಐ.ಎಲ್ ನಂತರ, ಕ್ಯಾಸೆಟ್ ಮೂಲಕ ಹಲವಾರು ಗಾಯಕಿಯರು ಬೆಳಕಿಗೆ ಬಂದರು. ಹಿರಿಯ ಗಾಯಕಿಯರಾದ ಎಸ್. ಜಾನಕಿ, ವಾಣಿ ಜಯರಾಂ, ಪಿ. ಸುಶೀಲಾ, ಎಂ.ಎಸ್. ಶೀಲಾ, ಸುಲೋಚನಾ ವೆಂಕಟೇಶ್ ಮತ್ತು ನಂತರದ ಕಿರಿಯ ಗಾಯಕಿಯರಾದ ಸಂಗೀತಾ ಕಟ್ಟಿ, ಚಂದ್ರಿಕಾ ಗುರುರಾಜ್, ಮಂಜುಳಾ ಗುರುರಾಜ್, ಇಂದು ವಿಶ್ವನಾಥ್, ಬಿ.ಆರ್. ಛಾಯಾ, ಅನಿತಾ ಅನಂತಸ್ವಾಮಿ, ಸವಿತಾ ಅನಂತಸ್ವಾಮಿ, ರೋಹಿಣಿ ಮೊಹನ್, ಕೆ.ಎಸ್. ಸುರೇಖಾ, ಹೆಚ್.ಎನ್. ಮೀರಾ, ವಾಸಂತಿ ಶೆಣೈ, ಪ್ರೇಮಲತಾ ದಿವಾಕರ್, ಅಖಿಲಾ ಮಧುಸೂದನ್, ಬಿ.ಆರ್. ಮಂಜುಳಾ, ಬಿ.ಆರ್.ಗೀತಾ, ರೇಣುಕಾ ನಾಕೋಡ್, ಎಸ್.ಪಿ. ಶೈಲಜಾ, ಚಿತ್ರ ಮುಂತಾದವರು ಸುಗಮಸಂಗೀತದ ಗಾಯಕಿಯರ ಪರಂಪರೆಯನ್ನು ಮುಂದುವರೆಸಿದರು. ಇಂದು ಯುವಗಾಯಕಿಯರ ಒಂದು ದೊಡ್ಡ ಹಿಂಡೇ ಸುಗಮಸಂಗೀತ ಗಾಯನವನ್ನು ಉತ್ಕೃಷ್ಟಗಾಯನ ಮಟ್ಟಕ್ಕೆ ಎತ್ತಿಕೊಂಡೊಯ್ಯುತ್ತಿದೆ. ಯುವ ಗಾಯಕಿಯರಾದ ನಂದಿತ, ಪಲ್ಲವಿ, ದಿವ್ಯಾರಾಘವನ್, ಶ್ರೀರಕ್ಷಾ ಅರವಿಂದ್ ಮಂಳ್ಳಾ, ಅರ್ಚನಾ ಉಡುಪ, ಸುನೀತ, ಶಮಿತ ಮಲ್ನಾಡ್, ಕುಸುಮ, ಸುಪ್ರಿಯಾ ಆಚಾರ್, ನಾಗಚಂದ್ರಿಕಾ, ವೀಣಾ ಕುಲಕರ್ಣಿ, ಜಯಶ್ರೀ ಶ್ರೀಧರ್. ಅಮೃತಾ ಚಂದ್ರಶೇಖರ್ ರಶ್ಮಿ ಮಂಜುನಾಥ್, ರೂಪಾ ಅಶ್ವಿನ್, ಮಾಲಿನಿ ಪ್ರಸಾದ್, ಅನ್ನಪೂರ್ಣ, ಸಿಂಧು ನಾಗೇಶ್, ಅರ್ಚನಾ ರಾವ್, ಲತಾ ಪ್ರಶಾಂತ್, ಸಿ.ಕೆ. ಸೌಮ್ಯ, ಮುಂತಾದ ಗಾಯಕಿಯರು ಸುಗಮಸಂಗೀತಕ್ಕೆ ಹೊಸ ಆಕರ್ಷಣೆ ತಂದಿದ್ದಾರೆ.

**ಸುಗಮಸಂಗೀತದ ಗಾಯಕರು–ಒಂದು ಪಕ್ಷಿನೋಟ**

ಮೈಸೂರಿನ ಪ್ರಾಂತ್ಯದಲ್ಲಿ ಸುಗಮಸಂಗೀತವನ್ನು ಮೊದಲು ಹಾಡಿದ ಮಹನೀಯರ ಪೈಕಿ-ಗಮಕಿ ಕಳಲೆ ಸಂಪತ್ಕುಮಾರಾಚಾರ್ಯರೇ ಮೊದಲಿಗರು. ನಂತರ ಅವರನ್ನು ಗಮಕಿ ಗುಡಿಬಂಡೆ ರಾಮಾಚಾರ್ ಮುಂತಾದವರು ಹಿಂಬಾಳಿಸಿದುದನ್ನು ಗಮನಿಸಬಹುದು. 'ವೀಸೀ ಅವರ ಎಮ್ಮಮನೆಯಂಗಳದಿ 'ಗೀತೆಯಿಂದ ಸಂಪತ್ಕುಮಾರಾಚಾರ್ಯರು ಹೆಸರು ಮಾಡಿದಂತೆ, ಬೇಂದ್ರೆಯವರ 'ಗಂಗಾವತರಣ' ದಿಂದ ಜನಪ್ರಿಯರಾದವರು ಗುಡಿಬಂಡೆ ರಾಮಾಚಾರ್ ಅವರು. ಡಿ.ವಿ.ಜಿ. ಅವರ 'ವನಸುಮದೊಳೆನ್ನ ಜೀವನವು' ಕವಿತೆ (ಆಠಾಣ ರಾಗವನ್ನು ಸಂಯೋಜಿಸಿ) ಹಾಡುತ್ತಿದ್ದ ಬಾಪುರಾಮಣ್ಣನವರ (ಹೆಚ್.ಆರ್.ಲೀಲಾವತಿ ಅವರ ತಂದೆ) ಅಠಾಣ ರಾಮಣ್ಣ ಎಂದೇ ಪ್ರಸಿದ್ಧರಾಗಿದ್ದರು. ಕುವೆಂಪು ಅವರ 'ದೂರಬಹುದೂರ' 'ದೋಣಿ ಸಾಗಲಿ ಮುಂದೆ ಹೋಗಲಿ' ಗೀತೆಗಳಿಂದ ಪ್ರಖ್ಯಾತರಾದವರು ಬಿ.ಜೆ. ರಾಮನಾಥ್ ಅವರು.

ಕುವೆಂಪು ಅವರ ಬಾರಿಸು ಕನ್ನಡ ಡಿಂಡಿಮವ' ಎಂದು ಕನ್ನಡದ ಕಹಳೆಯನ್ನು ಮೊಳಗಿಸಿದವರು ಹುಕ್ಕೇರಿಯ ಬಾಳಪ್ಪನವರು. 'ಹಾಡನ್ನು ಹರವೋಣ ಮತ್ಸರವ ಮರೆಯೋಣ' ಎಂಬ ಮಂತ್ರದಿಂದ ಸಾಮಾಜಿಕ ಕಳಕಳಿಯ ತೋರಿಸಿ ಜನಪರವಾಗಿ ಮೆರೆದ ಗಾಯಕರಾದರು. ಬೇಂದ್ರೆಯವರ 'ಕುಣಿಯೋಣ ಬಾರಾ' - 'ಭೃಂಗದಬೆನ್ನೇರಿ ಬಂತು' - 'ಅನ್ನಾವತಾರ' - 'ಟೊಂಕದ ಮ್ಯಾಲೆ ಕೈ ಇಟಗೊಂಡು'-ಆನಂದ ಕಂದರ 'ಚೆಲುವು ಹಿರಿಯದೋ ಹೃದಯದೊಲವು ಹಿರಿಯದೋ' - ಮುಂತಾದ ಗೀತೆಗಳಿಂದ ಜನಪ್ರಿಯರಾದವರು, ವಿ.ಆರ್. ಭಾಗವತ್ ಅವರು. ಕೆ.ಎಸ್.ನ.ಅವರ ಮೈಸೂರು ಮಲ್ಲಿಗೆ ಹಾಡುಗಳಿಂದ - ಮಲೆನಾಡಿನಲ್ಲಿ ಮನೆಮಾತಾಗಿದ್ದವರು ದೇವಂಗಿ ಚಂದ್ರಶೇಖರ್ ಅವರು 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಹುಯಿಲಗೋಳರ ಗೀತೆಯ ಮೂಲಕ ಪಾಂಡೇಶ್ವರ ಕಾಳಿಂಗರಾವ್ ಅವರು ಹೆಸರು ಮಾಡಿದ್ದರು. ಕರ್ನಾಟಕ ಏಕೀಕರಣದ ಸಮಯದಲ್ಲಿ ಹಾಡಿದ ಈ ಹಾಡು ಘೋಷಣೆಗಳನ್ನು ಕೂಗದೆ, ಭಾಷಣಗಳನ್ನು ಕೂಗದೆ, ಭಾಷಣಗಳನ್ನು ಮಾಡದೆ, ಪರಿಣಾಮಕಾರಿಯಾಗಿದ್ದ ಕ್ರಾಂತಿಗೀತೆಯಾಗಿತ್ತು. ಜನರಲ್ಲಿ 'ನಾಡಪ್ರೇಮ, ಭಾಷಾ ಪ್ರೇಮ'ವನ್ನು ಉಕ್ಕಿಸುವಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಬೇಂದ್ರೆಯವರ 'ಉತ್ತರ ಧ್ರುವದಿಂ ದಕ್ಷಿಣ ಧ್ರುವಕು' 'ನನ್ನ ಹರಣ ನಿನಗೆ ಶರಣ'- 'ನಾನು ಬಡವಿ ಆತ ಬಡವ' ಮುಂತಾದ ಗೀತೆಗಳಿಂದ ಭೀಮಸೇನ ಜೋಶಿಯವರು ಜನಪ್ರಿಯರಾಗಿದ್ದರು.

ಬೇಂದ್ರೆಯವರ 'ಶುಭನುಡಿಯೆ ಶಕುನದ ಹಕ್ಕಿ' ಗೀತೆಯಿಂದ ಜನಪ್ರಿಯರಾದವರು ಭಟ್ಕಳದ ಎಂ.ಪ್ರಭಾಕರ್ ಅವರು. ತಮ್ಮ ಗಾಯನ ಮತ್ತು ಸಂಗೀತ ಸಂಯೋಜನೆಗಳಿಂದ ಪ್ರಖ್ಯಾತರಾದವರು ಎಚ್.ಕೆ. ನಾರಾಯಣ ಅವರು. ಸುಗಮಸಂಗೀತಕ್ಕೆ ಆಕರ್ಷಕ ಶೈಲಿಯನ್ನು ತಂದುಕೊಟ್ಟು ಜನಪ್ರಿಯಗೊಳಿಸಿದ್ದೇ ಅಲ್ಲದೇ ನಿಸಾರರ 'ನಿತ್ಯೋತ್ಸವ' ಧ್ವನಿಸುರುಳಿಗೆ ಸಂಗೀತ ಸಂಯೋಜನೆ ಮಾಡಿ ಪ್ರಪ್ರಥಮ ಸುಸಂಗೀತ ಧ್ವನಿಸುರುಳಿಯ ಸಂಗೀತ ನಿರ್ದೇಶಕರೂ ಗಾಯಕರೂ ಆದವರು ಮೈಸೂರು ಅನಂತಸ್ವಾಮಿಗಳು. ಮಲೆನಾಡಹಕ್ಕಿ ಎಂದೆ ಹೆಸರು ಮಾಡಿದ ಗರ್ತಿಕೆರೆ ರಾಘಣ್ಣ ತಮ್ಮ ಮುಗ್ಧ ಗಾಯನಕ್ಕೆ ಹೆಸರಾಗಿದ್ದರು. ಶಿಶುನಾಳ ಷರೀಫರ ಗೀತೆಗಳಿಂದ ಜನಪ್ರಿಯರಾಗಿದ್ದು, ತಮ್ಮ ಅದ್ಭುತವಾದ ರಾಗಸಂಯೋಜನೆಯಿಂದ ಜನಪ್ರಿಯ ಹೊಸ ಪರಂಪರೆಯನ್ನು ತಂದವರು ಸಿ. ಅಶ್ವಥ್. 'ತರವಲ್ಲತಗಿ ನಿನ್ನ ತಂಬೂರಿ' ಸೋರುತಿಹುದು ಮನೆಯ ಮಾಳಿಗೆ, 'ಜಿ.ಎಸ್. ಶಿವರುದ್ರಪ್ಪನವರ' 'ಕಾಣದಕಡಲಲಿ' ಮುಂತಾದ ಹಾಡುಗಳಿಂದ ಜನಪ್ರಿಯರಾದರು. ಸಂತ ಶಿಶುನಾಳ ಷರೀಫರ 'ಕೋಡಗನ ಕೋಳಿ ನುಂಗಿತ್ತ' ಕುವೆಂಪು ಅವರ 'ಬಾರಿಸು ಕನ್ನಡ ಡಿಂಡಿಮವ' ಗೀತೆಗಳ ಮೂಲಕ ತಮ್ಮ ಕಂಚಿನ ಕಂಠದಿಂದ ಪ್ರಸಿದ್ಧಿಯಾದವರು ಶಿವಮೊಗ್ಗ ಸುಬ್ಬಣ್ಣ. ಸುಗಮಸಂಗೀತದಲ್ಲಿ ವೈವಿಧ್ಯತೆಯ ಗೀತೆಗಳನ್ನು ಹಾಡಿ ಅದರ ಪರಿಧಿಯನ್ನು ವಿಸ್ತರಿಸಿದವರಲ್ಲಿ ನರಸಿಂಹನಾಯಕ್, ಶಂಕರ್ ಶಾನಭಾಗ ರಾಜು ಅನಂತಸ್ವಾಮಿ ಇವರುಗಳು ಪ್ರಮುಖರಾದರು. ಗಾಯನದ ಶೈಲಿ, ಸಂಯೋಜನೆಯ ಶೈಲಿಯಲ್ಲಿ ಮೂವರೂ ಭಿನ್ನತೆಯನ್ನು ತಂದರು. ಜಾನಪದ ಗೀತೆಗಳನ್ನು ಹಾಡುತ್ತಲೇ, ಸುಗಮಸಂಗೀತದಲ್ಲಿ ಅದರ ಸೊಗಡನ್ನು ತುಂಬಿ ತಂದವರು ಶಿವಮೊಗ್ಗದ ಕೆ. ಯುವರಾಜ್ ಮತ್ತು ಧಾರವಾಡದ ಯಶವಂತ್ ಹಳಿಬಂಡಿ. ಶಾಸ್ತ್ರೀಯ ಸಂಗೀತದೊಂದಿಗೆ ಸುಗಮವನ್ನು ಹಾಡುತ್ತಾ ಬಂದವರು ಉಡುಪಿಯ ನಟರಾಜ ಶರ್ಮ ಮತ್ತು ಕಾಸರಗೊಡ ಶಶಿಧರ್ ಕೋಟೆಯವರಾದರೆ, ಚಲನಚಿತ್ರಗಳಲ್ಲಿ ಹಾಡುತ್ತಾ ಸುಗಮದಲ್ಲಿಯೂ ಹಾಡುತ್ತಾ ಪ್ರಶಂಸೆ, ಪ್ರಶಸ್ತಿ ಗಳಿಸಿದರು. ರಮೇಶಚ್ಚಂದ್ರ ಅವರು.

ಕರ್ನಾಟಕದ ಮಹಾತಾರೆಯರಾದ ನಟ ಸಾರ್ವಭೌಮ ಡಾ. ರಾಜ್‌ಕುಮಾರ್, ಡಾ> ಪಿ.ಬಿ.ಶ್ರೀನಿವಾಸ್, ಪದ್ಮಶ್ರೀಎಸ್‌ಪಿ. ಬಾಲಸುಬ್ರಹ್ಮಣ್ಯಂ, ಅವರು ಕೂಡಾ, ಸುಗಮಸಂಗೀತದ ಔನ್ನತ್ಯಕ್ಕೆ ಕಾರಣರಾದ ಗಾಯಕರಾಗಿದ್ದಾರೆ.

ಸುಗಮಸಂಗೀತದ ಗಾಯನದೊಂದಿಗೆ 'ಸಂಯೋಜನೆ'ಯನ್ನು ಮಾಡಿದವರೆಂದರೆ ಜಿ.ವಿ.ಅತ್ರಿ. ಹಿಂದೂಸ್ತಾನೀ ಸಂಗೀತವನ್ನು ಅಭ್ಯಾಸ ಮಾಡಿ, ಕನ್ನಡ ಹಳೆಯ ಚಲನಚಿತ್ರ ಗೀತೆಗಳತ್ತ ಒಲವು ಮೂಡಿಸಿಕೊಂಡಿದ್ದ ಅತ್ರಿ ಕೆಲಸ ಮಾಡಿದ್ದು ಸುಗಮಸಂಗೀತ ಕ್ಷೇತ್ರದಲ್ಲಿ. ಸುಗಮಸಂಗೀತದ ಇತಿಹಾಸದಲ್ಲಿ ಇವರ ಹೆಸರು ಚಿರಸ್ಥಾಯಿಯಾದುದು. ಮೊಟ್ಟ ಮೊದಲಿಗೆ ಅನೇಕ ಸುಗಮಸಂಗೀತ ಸಮ್ಮೇಳನಗಳನ್ನು ಆಯೋಜಿಸುತ್ತಾ, ಸುಗಮಸಂಗೀತವನ್ನು ಕರ್ನಾಟಕದಾದ್ಯಂತ ಸಂಘಟಿಸಿದ ಹಿರಿಮೆ ಅತ್ರಿಗೆ ಸೇರುತ್ತದೆ.

'ಜಿ.ಎಸ್.ಶಿವರುದ್ರಪ್ಪನವರ 'ಪ್ರಕೃತಿಯಂತೆ'-ಚೆನ್ನವೀರ ಕಣವಿಯವರ 'ಬಾ ಮಲ್ಲಿಗೆ' ಮುಂತಾದ ಹತ್ತಾರು ಸುಮಧುರ ಗೀತೆಗಳಿಂದ ಅಮರರಾದವರು ಜಿ.ವಿ.ಅತ್ರಿ.

ಗಾಯನ ಸಂಘಟನೆಗಳಲ್ಲಿ ಹಿರಿಯ ಸ್ಥಾನವನ್ನು ಪಡೆದವರು ವೈ.ಕೆ. ಮುದ್ದುಕೃಷ್ಣ ಅವರು. ಭದ್ರಾವತಿಯ ಗಾಯಕ, ಎನ್.ವಿ. ಶಿವಲಿಂಗಪ್ಪ ಸರಳ ಸುಗಮ ಗೀತೆಗಳನ್ನು, ಬಂಡಾಯ ಗೀತೆಗಳನ್ನು ಹಾಡುತ್ತಾ ಜನಪರವಾದವರು. ಯುವ ಗಾಯಕ ಮೋಹನ್ ಹಲವಾರು ಗೀತೆಗಳಿಗೆ ಸಂಗೀತ ಸಂಯೋಜನೆ ಮಾಡುತ್ತಾ ಹಾಡುತ್ತಾ ಭರವಸೆಯ ದನಿ ಮೂಡಿಸಿದವರು. ರಾಯಚೂರು ಜಿಲ್ಲೆಯ ಮಾನವಿಯರಾದ, 'ಅಂಬಯ್ಯನುಲಿ' ತಮ್ಮ ಸುಮಧುರ ಸಿರಿ ಕಂಠದಿಂದ ಉತ್ತರ ಕರ್ನಾಟಕದಲ್ಲಿ ಮನೆ ಮಾತಾದವರು. ವಚನಗಳನ್ನು ದಾಸರ ಪದಗಳನ್ನು ಹಾಡುತ್ತಾ ಸುಗಮಸಂಗೀತದಲ್ಲಿ ವಿಶೇಷ ಒಲವು ಮೂಡಿಸಿಕೊಂಡ ಪ್ರತಿಭಾವಂತ ಸಹೃದಯೀ ಗಾಐಕರು. ರಾಜೇಶ್‌ಕೃಷ್ಣ, ಹೇಮಂತ್, ಬದರೀಪ್ರಸಾದ್ ಚಲನಚಿತ್ರ ಗೀತೆಗಳ ಗಾಯನದ ಜೊತೆಗೆ ಸುಗಮಸಂಗೀತವನ್ನು ಹಾಡುತ್ತಾ ಬಂದವರು. ಹಿಂದೂಸ್ತಾನಿ ಸಂಗೀತ ಗಾಯಕರಾದರೂ, ಸುಗಮಸಂಗೀತವನ್ನು ಹಾಡುತ್ತಾ, ತಮ್ಮ ಕಂಠಮಾಧುರ್ಯದಿಂದ ಹೆಸರಾದವರು ಅನಂತ ಭಾಗವತರ್, ರವೀಂದ್ರ ಸೋರಗಾಂವಿ, ದೇವೇಂದ್ರ ಕುಮಾರ್ ಮುದೋಳ ಮುಂತಾದರು. ಯುವ ಗಾಯಕರ ಪಟ್ಟಿಯಲ್ಲಿ ಕಿಕ್ಕೇರಿ ಕೃಷ್ಣಮೂರ್ತಿ-ಗಣೇಶ್‌ದೇಸಾಯಿ, ಪಂಚಂ ಹಳಿಬಂಡಿ, ಉದಯ್‌ಅಂಕೋಲ, ಮಲ್ಲಿಗೆ ಸುಧೀರ್, ಎನ್.ಆರ್.ರಾಘವೇಂದ್ರ, ನರಹರಿ ದೀಕ್ಷಿತ್, ಡಿ.ಜೆ. ಭರತ್, ನಿತಿನ್ ರಾಜಾರಾಮಶಾಸ್ತ್ರಿ, ವಿನಯಕುಮಾರ್, ರವಿಮೂರೂರು, ಸುಚೇತನ್, ದೇವಿಡ್ ಮಂಡ್ಯ ಮುಂತಾದವರು ಗಮನಾರ್ಹರಾಗಿದ್ದಾರೆ. ಸುಗಮಸಂಗೀತದ ಶೈಲಿಯಲ್ಲಿಯೇ ಕನ್ನಡ ಗಜ಼ಲ್‌ಗಳನ್ನು ಹಾಡುತ್ತಾ, ಹೆಸರು ಮಾಡಿರುವವರು ರವೀಂದ್ರ ಹಂದಿಗನೂರು ಅವರು. ಭಕ್ತಿಗೀತೆಗಳೊಂದಿಗೆ ಭಾವಗೀತೆಗಳನ್ನು ಹಾಡಿದವರು ಮಂಗಳೂರಿನ ಎಂ.ಎಸ್. ಗಿರಿಧರ್, ಧಾರವಾಡದ ಎಂ.ಎಸ್. ಕಾಮತ್, ಜೋಸೆಫ್, ಬೆಂಗಳೂರಿನ ಶ್ರೀಧರ್ ಅಯ್ಯರ್, ಚೇತನ್ ಶಿವಮೊಗ್ಗ. ಅನೂಪ್, ಚಿಕ್ಕಮಗಳೂರಿನ ಎಮ್.ಎಸ್. ಸುಧೀರ್, ಮಹೇಶ್ ಮುಂತಾದವರು.

ಇಂತಹ ಅಮೂಲ್ಯ ಸಂಗೀತ ಸಂಯೋಜನೆಗಳನ್ನು ಕೊಟ್ಟ ಸಂಯೋಜಕರು-

**ಸಂಗೀತ ಸಂಯೋಜಕರು:**

೧. ಡಾ. ಜಯಶ್ರೀ ಅರವಿಂದ್
೨. ಬಿ.ವಿ. ಶ್ರೀನಿವಾಸ್
೩. ರಾಜು ಅನಂತಸ್ವಾಮಿ
೪. ಬಾಲಿ
೫. ಪ್ರಸಾದ್ - ಮುರಳಿ
೬. ಮೈಸೂರು ಮೋಹನ್
೭. ತಿರುಮಲೆ ಶ್ರೀನಿವಾಸ್
೮. ಶಾಂತ ಜಯತೀರ್ಥ
೯. ಶ್ರೀಪಾದ್ ಹೆಗಡೆ
೧೦. ಶ್ರೀಕಾಂತ್ ಕುಲಕರ್ಣಿ
೧೧. ಎ.ಆರ್. ಅಚ್ಯುತ ಐ ವಸಂತ್
೧೨. ದಾಮೋದರ್
೧೩. ಪಾರ್ವತಿಸುತ
೧೪. ಉಪಾಸನ ಮೋಹನ್
೧೫. ಪಲ್ಗುಣ
೧೬. ಇಂದೂ ವಿಶ್ವನಾಥ್
೧೭. ಶಿವಮೊಗ್ಗ ವೇಣುಗೋಪಾಲ
೮. ಮೈಸೂರು ಉಪಾಧ್ಯಾಯ
೧೯. ಬಿ.ಕೆ. ಚಂದ್ರಶೇಖರ್

**ಇಂದಿನ ಸುಗಮಸಂಗೀತ ಗೀತೆಗಳ ಕೆಲವು ಜನಪ್ರಿಯ ಸಂಯೋಜನೆಗಳ ಉಲ್ಲೇಖನಗಳು**

೧. ಎದೆ ತುಂಬಿ ಹಾಡಿದೆನು - ಮೈಸೂರು ಅನಂತಸ್ವಾಮಿ
೨. ಉಡುಗಣವೇಷ್ಟಿತ - ಪದ್ಮಚರಣ್
೩. ಹಕ್ಕಿಹಾರುತಿದೆ ನೋಡಿದಿರಾ - ಮೈಸೂರು ಅನಂತಸ್ವಾಮಿ
೪. ಬೆಳದಿಂಗಲೇನೆ ಗೆಳತಿ - ಡಾ|| ಜಯಶ್ರೀ ಅರವಿಂದ್
೫. ನಿಲ್ಲಿಸದಿರು ವನಮಾಲಿ - ಡಾ|| ಜಯಶ್ರೀ ಅರವಿಂದ್
೬. ಕೇದಿಗೆಯ ಬನದಲಿ - ಡಾ||ಜಯಶ್ರೀ ಅರವಿಂದ್
೭. ತೊರೆದು ಹೋಗದಿರು ಜೋಗಿ - ಹೆಚ್.ಕೆ. ನಾರಾಯಣ್
೮. ತವರ ಸುಖದೊಳಗೆನ್ನ - ಸಿ. ಅಶ್ವಥ್
೯. ಕಾಣದಾ ಕಡಲಿಗೆ - ಸಿ. ಅಶ್ವಥ್
೧೦. ಶ್ರಾವಣ ಬಂತು - ಸಿ. ಅಶ್ವಥ್
೧೧. ಬರುವನೇನೆ ಸಖಿ ಚೆಲುವ - ಮೈಸೂರು ಅನಂತಸ್ವಾಮಿ
೧೨. ಲೋಕದ ಕಣ್ಣಿ ರಾಧೆಯ - ಮೈಸೂರು ಅನಂತಸ್ವಾಮಿ
೧೩. ಬಂಗಾರ ನೀರ ಕಡಲಾಚೆ - ಸಿ. ಅಶ್ವಥ್
೧೪. ನಾಕು ತಂತಿ - ಮೈಸೂರು ಅನಂತಸ್ವಾಮಿ
೧೫. ಕವಿತೆ ಕಣ್ಣೀಗೀಮರ - ಬಾಲೀ
೧೬. ಮಿಡಿವೆ ಏಕೆ ತಂತಿ ನೀನು - ಪ್ರಸಾದ್
೧೭. ಎಲ್ಲ ನಿನ್ನ ಲೀಲೆ ತಾಯೆ - ಬಿ.ವಿ.ಶ್ರೀನಿವಾಸ್
೧೮. ಶಂಕೆ ಎಂಬ ಬೆಂಕಿ ಸೋಂಕಿ - ಬಿ.ವಿ.ಶ್ರೀನಿವಾಸ್
೧೯. ನನ್ನ ಹಳೆಯ ಹಾಡುಗಳೇ - ಮೈಸೂರು ಅನಂತಸ್ವಾಮಿ
೨೦. ಹರಿಯಿತೇನು ಋಣ - ಮೈಸೂರು ಅನಂತಸ್ವಾಮಿ
೨೧. ರಸಸಾಗರದಲಿ - ವಸಂತ ಕನಕಾಪುರ್
೨೨. ಅಮ್ಮಾ ನಿನ್ನ ಎದೆಯಾಳದಲ್ಲಿ - ಸಿ. ಅಶ್ವಥ್
೨೩. ನಿನ್ನೊಲುಮೆಯಿಂದಲೇ - ಸಿ.ಅಶ್ವಥ್
೨೪. ಮೊದಲ ದಿನ ಮೌನ - ಸಿ. ಅಶ್ವಥ್
೨೫. ಇಷ್ಟು ಕಾಲ ಒಟ್ಟಿಗಿದ್ದು - ಬಿ.ಕೆ. ಚಂದ್ರಶೇಖರ್
೨೬. ಶಾಂತವಾಗಿದೆ ಕಡಲು - ಎಚ್.ಕೆ.ನಾರಾಯಣ್
೨೭. ನಲ್ಲ ನೀನೆ ಒಲಿದು ಬಂದರೆ - ರಾಜು ಅನಂತಸ್ವಾಮಿ
೨೮. ಕಬ್ಬನ್ ಪೇಟೆಯ ಕಾಮಾಕ್ಷಿ - ರಾಜು ಅನಂತಸ್ವಾಮಿ
೨೯. ಕಾಲದ ಕಡಲಲಿ ಉಸಿರಿನ ಹಡಗು - ರಾಜು ಅನಂತಸ್ವಾಮಿ
೩೦. ನನ್ನ ಕೈಯ್ಯ ಹಿಡಿದಾಕೆ - ರಾಜು ಅನಂತಸ್ವಾಮಿ
೩೧. ಮಾಧವ ನಿನ್ನ ಕೊರಳಿನ ಭಾವ - ರಾಜುಅನಂತಸ್ವಾಮಿ
೩೨. ಬ್ರಹ್ಮನಿಂಗೆ ಜೋಡಿಸ್ತೇನಿ - ಪಿ.ಕಾಳಿಂಗರಾವ್
೩೩. ಅಳುವ ಕಡಲಲಿ - ಪಿ.ಕಾಳಿಂಗರಾವ್
೩೪. ನಾನು ಬಡವಿ ಆತ ಬಡವ - ಮೈಸೂರು ಅನಂತಸ್ವಾಮಿ
೩೫. ಯಾವ ಮೋಹನ ಮುರುಳಿ - ಮೈಸೂರು ಅನಂತಸ್ವಾಮಿ
೩೬. ಎಲ್ಲ ಮರೆತಿರುವಾಗ - ಮೈಸೂರು ಅನಂತಸ್ವಾಮಿ

**ಸುಗಮಸಂಗೀತ ಮತ್ತು ಗಾಯನ**

'ಸುಗಮಸಂಗೀತ' ತನ್ನ ಹೆಸರಿನಿಂದ ಹೇಳುವಂತೆ ಇದೊಂದು 'ಸಂಗೀತ ಶೈಲಿಯಾದರೂ' ಅರ್ಥದಲ್ಲಿ ಕೇವಲ ಸಂಗೀತದ ಶೈಲಿಯಾಗಿರದೆ, ಉತ್ಕೃಷ್ಟವಾದ ಸಾಹಿತ್ಯದ ನಿರೂಪಣೆಯಾಗಿದೆ. ಕವಿ, ಸಂಯೋಜಕ, ಗಾಯಕ ಮತ್ತು ಕೇಳುಗರ ನಡುವಿನ ಬಾಂಧವ್ಯವಾಗಿದೆ. ಇದೊಂದು ಬಗೆಯ ವ್ಯಕ್ತಿತ್ವದ ಅಭಿವ್ಯಕ್ತಿಯಾಗಿದೆ. ನಾಲ್ಕು ಜನರ ಬಾಂಧವ್ಯದ ಮೂಲಕ ವಿಶಿಷ್ಟವಾದ ಭಾವಾವವರಣ ಸೃಷ್ಟಿಯಾಗುತ್ತದೆ. ಕವಿಯಿಂದ ಸಂಯೋಜಕನಿಗೆ, ಸಂಯೋಜಕನಿಂದ - ಗಾಯಕನಿಗೆ, ಗಾಯಕನಿಂದ - ಕೇಳುಗನಿಗೆ ಮುಟ್ಟುವ ಕವಿತೆಯ ಭಾವದರ್ಶನ, ವ್ಯಕ್ತಿಯಿಂದ ವ್ಯಕ್ತಿಗೆ ತಲುಪುವಾಗ ಮೂಲ ಗುಣದ ಜೊತೆ ಮತ್ತಷ್ ಪೂರಕ ಹೊಸ ಗುಣಗಳನ್ನು ಪಡೆದು ಚೆಲುವಾಗುತ್ತದೆ. ಯಾವುದು ವ್ಯಕ್ತಿಯಿಂದ ಮತ್ತೊಂದು ವ್ಯಕ್ತಿಯ ಕೈಗೆ ತಲುಪುವಾಗ ಮೂಲ ಗುಣವನ್ನು ಕಿಂಚಿತ್ತೂ ಕಳೆದುಕೊಳ್ಳದೆ, ಮತ್ತಷ್ಟು ಸ್ಪುಟವಾಗಿ, ಮತ್ತಷ್ಟು ತೇಜಸ್ಸಿನಿಂದ ದೈದೀಪ್ಯಮಾನವಾಗಿ ಬೆಳಗುವುದೋ ಅದೇ ಸುಗಮಸಂಗೀತದ ಸಂಗೀತ ಸಂಯೋಜನೆ ಮತ್ತು ಗಾಯನಗಳೆನ್ನಬಹುದು. ಕವಿತೆಯ ಅನುಭವವನ್ನು ಅದರ ಎಲ್ಲ ಸೂಕ್ಷ್ಮ ಮನಸ್ಸಿನ ಭಾವನೆಗಳನ್ನು ಸಂಗೀತ ಸಂಯೋಜಕ ತನ್ನ ರಾಗದ ಬಣ್ಣದಲ್ಲಿ ಅದ್ದಿ ತೆಗೆದು ಗಾಯಕನಿಗೆ ಮುಟ್ಟಿಸುತ್ತಾನೆ. (ಗಾಯಕನೂ ಸಂಯೋಜಕನೂ ಒಬ್ಬರೇ ಆಗಿರಲೂ ಬಹುದು.) ಗಾಯಕನ ಕೊರಳಿಂದ ಕವಿತೆಯ ದರ್ಶನದ ಜೊತೆಗೆ ಸಂಗೀತ ಸಂಯೋಜಕನ ಸಂಯೋಜನೆಯೂ ಸೇರಿಕೊಂಡು ಅವನ ಹೊಣೆಗಾರಿಕೆ ದುಪ್ಪಟ್ಟಾಗುತ್ತದೆ. ಗಾಯಕ ಇವೆರಡನ್ನೂ ಅರಿಗಿಸಿಕೊಂಡು ಅತ್ಯಂತ ಪರಿಣಾಮಕಾರಿಯಾದ ಧ್ವನಿಯಿಂದ ಕವಿ-ಸಂಯೋಜಕ ಇಬ್ಬರನ್ನೂ ಅನಾವರಣಗೊಳಿಸಬೇಕಾಗುತ್ತದೆ. ಅವನ ಗಾಯನದ ಹೆಚ್ಚುಗಾರಿಕೆಯಲ್ಲಿಯೇ ಸುಗಮಸಂಗೀತದ ಜವಾಬ್ದಾರಿ ಅಡಗಿರುತ್ತದೆ. ಗಾಯನ

ನಿರೂಪಣಾ ಶಕ್ತಿಯೊಂದರಿಂದಲೇ ಸುಗಮಸಂಗೀತದ ಯಶಸ್ಸು ನಿರ್ಧಾರವಾಗುತ್ತದೆ, ಅಂದಾಗ ಸುಗಮಸಂಗೀತದಲ್ಲಿ ಗಾಯಕನಿಗೆ ಹೆಚ್ಚು ಜವಾಬ್ದಾರಿ. ಆತನ ನಿಪುಣತೆಯಿಂದ ಗೀತೆ ಅಪೂರ್ವ ಅನುಭವವನ್ನು ಕೊಡಬಹುದು. ಹಾಗೆಯೇ ಒಬ್ಬ ಕೆಟ್ಟ ಗಾಯಕನಿಂದ ಕವಿ, ಸಂಗೀತ ಸಂಯೋಜಕ ಇಬ್ಬರ ಸತ್ವಗಳು ಮಬ್ಬಾಗಬಹುದು. ಒಬ್ಬ ಬುದ್ಧಿವಂತ ಗಾಯಕನ ನೈಪುಣ್ಯತೆಯಿಂದ ಸರಳವಾದ ಹಾಡೂ ಅದ್ಭುತವಾಗಿ ಹೊರ ಹೊಮ್ಮಬಹುದು. ಒಳ್ಳೆಯ ಗಾಯನ ಪ್ರಸ್ತುತಿಯಿಂದ ಸಾಮಾನ್ಯವಾದ ಹಾಡೂ ಜನಪ್ರಿಯವಾಗಬಹುದು. ಆದ್ದರಿಂದ ಸುಗಮಸಂಗೀತದಲ್ಲಿ ಗಾಯಕನೇ ಸಾರ್ವಭೌಮ, ಕವಿಗಿರುವ ಕವಿತಾ ಸಾಮರ್ಥ್ಯ, ಸಂಗೀತ ಸಂಯೋಜಕನ ಕಲ್ಪನಾ ಶಕ್ತಿ ಎರಡನ್ನೂ ಅರಗಿಸಿಕೊಂಡು, ತನ್ನದಾಗಿಸಿಕೊಂಡು ನಿರೂಪಿಸುವ ಗಾಯಕನೇ ಸುಗಮಸಂಗೀತದ ಕೇಂದ್ರಬಿಂದು. ಇವನೇ ಒಂದು ಅರ್ಥದಲ್ಲಿ ಸೂತ್ರಧಾರಿಯೂ ಪಾತ್ರಧಾರಿಯೂ ಅದಂತಹ ಕಲೆಗಾರ. ಪ್ರತಿದಿನ ಪಾತ್ರ ಮಾಡುವಾಗಲೂ ಅಭಿನಯದ ಹೊಸ ಹೊಸ ಭಾವತರಂಗಗಳನ್ನು ತೆರೆದು ತೋರಿಸುವ ಕಲಾವಿದನೇ ಸುಗಮಸಂಗೀದ ಗಾಯಕ. ಪ್ರತಿ ಬಾರಿ ಅದೇ ಹಾಡನ್ನೇ ಹಾಡಿದರೂ ಅದು ಹೊಸದೆನಿಸುವಂತೆ ಮಾಡುವವನೇ ಗಾಯಕ. ಅದೇ ಅವನ ಕಾಯಕ. ಆಗ ಮಾತ್ರ ಅವನು ಸುಗಮಸಂಗೀತಕ್ಕೆ ಸಲ್ಲುತ್ತಾನೆ.

**ಸುಗಮಸಂಗೀತದಲ್ಲಿ ವಾದ್ಯ ಸಂಯೋಜನೆ**

ಸುಗಮಸಂಗೀತದಲ್ಲಿ ವಾದ್ಯ ಸಂಯೋಜನೆ ಬಹು ಮುಖ್ಯ ಪಾತ್ರವಹಿಸುತ್ತದೆ. ಇದು ಹೆಚ್ಚಾಗಿದ್ದರೆ ಗೀತೆಯ ಅರ್ಥಾಭಾಸವಾಗುತ್ತದೆ. ಕಮ್ಮಿ ಇದ್ದರೆ ಗೀತೆಯ ಪರಿಪೂರ್ಣತೆಗೆ ಧಕ್ಕೆ ಬರುತ್ತದೆ. ಅಂದರೆ ತೀರಾ ಹೆಚ್ಚೂ ಅಲ್ಲದ ತೀರಾ ಕಡಿಮೆಯೂ ಅಲ್ಲದ ವಾದ್ಯಗಳ ಆಯ್ಕೆ ಮತ್ತು ಸಂಯೋಜನೆ ಮುಖ್ಯವಾದ ಅಂಶವಾಗಿದೆ. ಸುಗಮಸಂಗೀತ ಒಂದು ಸಮಷ್ಠಿ ಸೃಷ್ಟಿ. ಗಾಯಕನೊಬ್ಬನೇ ವೇದಿಕೆಯಲ್ಲಿ ಪರಿಣಾಮಕಾರಿಯಾಗಿ ಹಾಡಿದ್ದರೂ ಅವನೊಂದಿಗೆ ಸಂಬಂಧಪಟ್ಟ ವಾದ್ಯಗಾರರಿಂದ್ದರೇ ಮಾತ್ರ ಗೀತೆ ಸಫಲತೆಯನ್ನು ಕಾಣುತ್ತದೆ. ಶ್ರುತಿ-ಲಯಗಳು ಸಂಗೀತಕ್ಕೆ ಮಾತಾಪಿತರಿದ್ದಂತೆ ಎಂಬುದನ್ನು ವೇದ ಶಾಸ್ತ್ರಗಳು ಮನದಟ್ಟು ಮಾಡಿಕೊಡುತ್ತಲೇ ಬಂದಿವೆ. ಇಲ್ಲಿ ಶ್ರುತಿಗಾಗಿ ಲಯಕ್ಕಾಗಿ, ನಾನಾ ತರದ ವಾದ್ಯಗಳನ್ನು ಉಪಯೋಗಿಸಬೇಕಾಗುತ್ತದೆ. ಒಂದು ಗೀತೆಯು ಸೃಷ್ಟಿಸುವ ಭಾವ ಪ್ರವೇಶವನ್ನ, ಭಾವಾವರಣವನ್ನು, ಭಾವದೀಪ್ತಿಯನ್ನು, ಭಾವತರಂಗಗಳನ್ನು, ಸ್ವರಲಯವಾದ್ಯಗಳ ಮೂಲಕ ಕಟ್ಟಿಕೊಡಬೇಕಾಗುತ್ತದೆ. ಕವಿತೆಯು ಸೃಷ್ಟಿಸುವ ವಾತಾವರಣವನ್ನು ಕೇವಲ ನಾದಸ್ವರಗಳ ಜೋಡಣೆಯ ಮೂಲಕ, ವಿವಿಧ ವಾದ್ಯಗಳಲ್ಲಿ ಅವುಗಳ ಮಿತಿಯಲ್ಲಿ ನೀಡಬೇಕಾಗುತ್ತದೆ. ಗೀತೆಯ ಮೊದಲು, ಪಲ್ಲವಿಯ ಅನಂತರ ಬರುವ ಪ್ರತಿ ಚರಣಗಳಲ್ಲಿ ಸಾಹಿತ್ಯದ ಭಾವ ಬದಲಾದಂತೆ ರಾಗ ಸಂಯೋಜನೆಯೂ ಬದಲಾಗಿರುತ್ತದೆ. ಆ ರಾಗದ ಬೆನ್ನೇರಿ, ಸಾಹಿತ್ಯಾರ್ಥಗಳ ತಂತುಗಳನ್ನು ಅರಿತು ವಾದ್ಯ ಸಂಯೋಜಿಸುವುದೇ ಸುಗಮಸಂಗೀತದ ವಿಶಿಷ್ಟತೆಯಾಗಿದೆ. ಇದನ್ನು Back ground Music ಎನ್ನುತ್ತೇವೆ. ಚಿಕ್ಕದಾಗಿ BGM ಎನ್ನುವ ಇವು ಗೀತೆಯ ಒಳಗಿದ್ದಾಗ ಭಾವ ತಂತುಗಳಾಗಿ ಕೆಲಸ ಮಾಡಿ ಅರ್ಥ ತುಂಬುತ್ತವೆ. ಅವರಿಗೆ ಗೀತದ ಹೊರಗೆ ಇವಕ್ಕೆ ಯಾವ ಅರ್ಥವೂ ಇಲ್ಲ, ಅಸ್ತಿತ್ವವೂ ಇಲ್ಲ. ಭಾವಗೀತೆಯ ಅರ್ಥಕ್ಕೆ ಪುಷ್ಠಿ ನೀಡಿ ಕವಿತೆಯ ಕಲ್ಪನೆಯನ್ನು ಮೂರ್ತಿಕರಿಸುತ್ತ ಚರಣದಿಂದ ಚರಣಕ್ಕೆ ಅರ್ಥ ಪರಂಪರೆಯನ್ನು ತೆರೆಯುತ್ತದೆ. ಲಯಕ್ಕಾಗಿ ತಬಲ, ಡಿಕ್ಕಿ, ಗೆಜ್ಜೆ-ತಾಳ, ಇತ್ಯಾದಿಗಳನ್ನು ಬಳಸುತ್ತೇವೆ. ರಿದಂ ಪ್ಯಾಡ್ ಎಂಬ ಎಲೆಕ್ಟ್ರಾನಿಕ್ ಲಯ ವಾದ್ಯವೊಂದರ ಸಹಾಯದಿಂದ ಘಟಸಿಂಗಾರ, ಘಟ, ತಬಲ, ತರಂಗ್, ಚಂಡೆ, ಡ್ರಮ್ಸ್, ಮೃದಂಗ, ಗೆಜ್ಜೆ, ತಾಳ ಎಲ್ಲಾ ಲಯವಾದ್ಯಗಳ ಧ್ವನಿಯನ್ನು ಪಡೆಯಬಹುದಾಗಿದೆ. ಶ್ರುತಿಗಾಗಿ ಕೀ ಬೋರ್ಡ್ ವಾದನವನ್ನು ಬಳಸಲಾಗುತ್ತಿದೆ. ಕೀಬೋರ್ಡ್ ಪಾಶ್ಚಾತ್ಯ ವಾದ್ಯವೆಂದು ಸುಗಮಸಂಗೀತಕ್ಕೆ ಅದು ಒಗ್ಗುವುದಿಲ್ಲವೆಂದು ಕೆಲವು ಮೂಗೆಳೆಯುವರೂ ಉಂಟು. ಆದರೆ ಕೀಬೋರ್ಡ್ವಾದನವನ್ನು ಬಲ್ಲವರು ಅದರ ಸಾಧ್ಯಾನುಸಾಧ್ಯತೆಗಳ ಬಗೆಗೆ ತಿಳಿದಿರುವುದರಿಂದ ಹಾಗೆ ಹೇಳಲಾರರರು. ಪಕ್ಕವಾದ್ಯಗಳನ್ನು ಎಲ್ಲಾ ಒಂದು ಆಧಾರ ಶ್ರುತಿಗೆ ಸಿದ್ಧಮಡಿಕೊಳ್ಳುವುದು ಗಾಯಕ ಹಾಡುಗಾರಿಕೆಗೆ ಮುನ್ನ ಮಾಡುವ ಪೂರ್ವ ಸಿದ್ಧತೆ. ಕೀ ಬೋರ್ಡ್ ವಾದ್ಯದ ಮೂಲಕ ಪಕ್ಕ ವಾದ್ಯಗಳನ್ನು ಒಂದು ಆಧಾರ ಶ್ರುತಿಗೆ ಟ್ಯೂನ್ ಮಾಡಿಕೊಳ್ಳಬೇಕು. ಸುಗಮಸಂಗೀತದಲ್ಲಿ ರಾಗ ಸಂಚಾರ ಸ್ಥಾಯಿಗನುಗುಣವಾಗಿ ಶ್ರುತಿಯನ್ನು ನಿರ್ಧಾರಮಾಡಲಾಗಿರುವುದರಿಂದ, ಅಲ್ಲದೆ ಗಾಯಕನ ಕಂಠದ ಇತಿಮಿತಿಗಳಲ್ಲಿ ಅದು ಕುಳಿತಿರುವುದರಿಂದ, ಕೀ ಬೋರ್ಡ್ ಮಲಕ ಶ್ರುತಿಯನ್ನು ರಾಗ ಸಂಚಾರದ ಮಿತಿಯನ್ನು ಗುರುತಿಸಿಕೊಳ್ಳಲು ಸಹಾಯವಾಗುತ್ತದೆ. ಒಂದೊಂದು ಗೀತೆ ಒಂದೊಂದು

ಶ್ರುತಿಯಲ್ಲಿರುತ್ತದೆ. ಅಲ್ಲದೆ ಕೀಬೋರ್ಡ್‌ನಲ್ಲಿ ಕೊಳಲು, ಪಿಟೀಲು, ಸಿತಾರ್, ಓಬೋ, ಸಂತೂರ್, ತಂತಿ ವಾದ್ಯಗಳ ಧ್ವನಿಯನ್ನೆಲ್ಲಾ ತರಬಹುದಾಗಿದ್ದು ವಾದ್ಯ ಸಂಯೋಜನೆಗೆ ಬೇಕಾದ ನಾದೋತ್ಪತ್ತಿಯನ್ನೂ ಅದರಿಂದ ಮಾಡಬಹುದು. ಸುಗಮಸಂಗೀತದಲ್ಲಿ ಪ್ರತಿವಾದ್ಯಗಳೂ ಹಾಡಿನ ಅರ್ಥ ಪುಷ್ಟಿಗೆ ಪೂರಕವಾಗಿರುವುದಲ್ಲದೆ ಹಾಡಿನ ಒಂದು ಭಾಗವಾಗಿ ಮೈವೆತ್ತಿರುತ್ತದೆ. ಪ್ರತಿಯೊಂದು ವಾದ್ಯಕ್ಕೂ ತನ್ನದೇ ಆದ ಭಾಷೆ, ಅಭಿವ್ಯಕ್ತಿ ಇರುವುದರಿಂದ ಗೀತೆಯನ್ನು ಭಾವದ ಎತ್ತರದಲ್ಲಿ ಏರಿಸಲು ಅವು ಸಹಕಾರಿಯಾಗಿರುವುದಲ್ಲದೆ, ಅವುಗಳ ಪಾಂಡಿತ್ಯವಾಗಲಿ, ಪ್ರೌಢಿಮೆಯಾಗಲಿ, ವಾದ್ಯದ ಘನತೆಯಾಗಲಿ ಯಾವುದೂ ಅಲ್ಲಿ ಮುಖ್ಯವಾಗದೆ, ಗೀತೆಯ ಜೊತೆ ಕೈ ಕೈ ಹಿಡಿದು ಸಾಗುತ್ತದೆ. ಗೀತೆಯ ಸಾಹಿತ್ಯವೇ ರಾಗ ಸಂಯೋಜನೆ, ವಾದ್ಯ ಸಂಯೋಜನೆ, ಗಾಯಕನ ಪಾತ್ರ, ಎಲ್ಲವನ್ನೂ ನಿರ್ಧರಿಸಿ ಬಿಡುತ್ತದೆ. ಸುಗಮಸಂಗೀತದಲ್ಲಿ ಮೊದಲೇ ಹೇಳಿದಂತೆ, ಸಾಹಿತ್ಯದ್ದೇ ಸಾರ್ವಭೌಮತ್ವ. ಸಂಗೀತ ಅದರ ಅನುಯಾಯಿ. ವಿನಯಶೀಲತೆಯೇ ಅದರ ಸೌಂದರ್ಯ.

ಉತ್ತಮ ಕವಿತೆಗಳನ್ನು ಉತ್ತಮ ಕಲಾವಿದರು ಸೃಜನಶೀಲರಾಗಿ ಕವಿತೆಯ ಅಂತರಾರ್ಥವನ್ನು ತೆರೆಯುವಂತೆ ಹಾಡಿದಾಗ ಮಾತ್ರ ಅದು ಸುಗಮಸಂಗೀತ. ಇವನ್ನು ಹೊರತುಪಡಿಸಿ ಕಳಪೆ ದರ್ಜೆಯ ಕವಿತೆಗಳನ್ನು ಹಾಡುವುದರಿಂದ ಸಂಸ್ಕೃತಿ ಕೆಲ ಮಟ್ಟಕ್ಕಿಳಿಯುತ್ತದೆ. ಹಿರಿಯ ಸುಗಮಸಂಗೀತಗಾರರು ಕಟ್ಟಿ ಬೆಳೆಸಿದ ಸುಗಮಸಂಗೀತದ ವೃಕ್ಷವನ್ನು ಕಿರಿಯರು ಉಳಿಸಿ ಬೆಳೆಸಿಕೊಳ್ಳುವುದು ಇಂದು ಅತ್ಯವಶ್ಯಕವಾಗಿದೆ. ಸುಗಮಸಂಗೀತ ನಾಡಿನ ಸಂಸ್ಕೃತಿಯನ್ನು ಸಾರವತ್ತಾಗಿ ಸಮಾಜದತ್ತ ಕೊಂಡೊಯ್ಯುತ್ತಿದೆ. ಸಾಂಸ್ಕೃತಿಕ ಉತ್ಸವ, ದಸರಾ ಹಬ್ಬ, ಗಣೇಶ ಚತುರ್ಥಿ, ರಾಮೋತ್ಸವ, ರಾಜ್ಯೋತ್ಸವ, ನಾಡಹಬ್ಬ, ಇತ್ಯಾದಿ ಸಂದರ್ಭಗಳಲ್ಲಿ ಸುಗಮಸಂಗೀತ ವೇದಿಕೆಯನ್ನು ಅಲಂಕರಿಸಿದೆ. ಸಹೃದಯರ ಹೃದಯ ಸಿಂಹಾಸನವನ್ನೇರಿ ರಾರಾಜಿಸುತ್ತಿದೆ

**ವಾದ್ಯ ಸಂಯೋಜಕರು**

ಮಾರುತಿ, ಎನ್ ಎಸ್ ಪ್ರಸಾದ್, ಎನ್ ಎಸ್ ಮುರುಳಿ, ಬಿ.ಕೆ. ಚಂದ್ರಶೇಖರ್, ಶಬ್ಬೀರ್, ಸುಂದರಮೂರ್ತಿ, ಪ್ರವೀಣ್‌ದತ್ತ ಸ್ಟೀಫನ್, ದಾಮೋದರ್, ಬಿ.ವಿ. ಶ್ರೀನಿವಾಸ್, ಹೇಮಂತ್, ಮೋಹನ್‌ರಾಜ್, ರಾಜೇಶ್, ರಾಜು ಅನಂತಸ್ವಾಮಿ, ಡಿ.ಶ್ರೀನಿವಾಸ್, ಸಿತಾರ್ ಶ್ರೀನಿವಾಸ್, ವಿ.ಕೆ. ರಾಮನ್. ಸಂಗೀತ್ ಥಾಮಸ್, ಪ್ರವೀಣ ಗೋಡ್ಖಿಂಡಿ, ದೀಪಕ್ ಶಿವಮೊಗ್ಗ ಮೊದಲಾದವರು.

**ಸುಗಮಸಂಗೀತದ ವಾದ್ಯಗಾರರು**

ಸುಗಮಸಂಗೀತದ ಭಾವಾವರಣಕ್ಕೆ ಪೂರಕವಾಗಿ ಉಪಯೋಗಿಸುವ ವಾದ್ಯಗಳು ಮತ್ತು ವಾದ್ಯಗಾರರು ನೂರಾರು ಮಂದಿ. ಅಂತಹ ಕಲಾವಿದರ ಹೆಸರುಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಲು ಪ್ರಯತ್ನಿಸಲಾಗಿದೆ.

**ತಬಲ**

ದೇವಂಬು, ನಾಗೇಶ್, ಪ್ರವೀಣ್ ಡಿ. ರಾವ್, ಬಾಲಿ, ವೇಣುಗೋಪಾಲರಾಜು, ಆನೂರ ಶಿವು, ಪ್ರದ್ಯುಮ್ನ, ಗೋಪಿನಾಥ್, ಲಕ್ಷ್ಮೀಪತಿ, ಮಧುಸೂದನ್, ಸತ್ಯಮೂರ್ತಿ, ಎಂ.ಸಿ. ಶ್ರೀನಿವಾಸ್, ಹನುಮಂತ್, ವಿಶ್ವನಾಥ್ ನಾಕೋಡ್, ರಾಜೇಂದ್ರ ನಾಕೋಡ್, ಶಿವಸತ್ಯ, ನಾಣಿ, ಸತ್ಯಮೂರ್ತಿ, ಲೋಕೇಶ್, ವೆಂಕಟೇಶ್, ದಿನೇಶ್, ಗುರುಮೂರ್ತಿ ವೈದ್ಯ, ಉದಯ್ ಕರ್‌ಪೂರ್‌ಕರ್, ರವಿ ಭದ್ರಾಚಾರ್, ಟಿಪ್ಪಿ, ಕುಲಕರ್ಣಿ, ಅಶ್ವಥ್‌ನಾರಾಯಣ್, ಸತ್ಯವಿಜಯ ಭಟ್, ದಾಮೋದರ್, ಅರವಿಂದ್ ನಾಝರೇ, ಗುರುರಾಜ್ ಧಾರವಾಡ, ಎಂ.ಎ. ಕೃಷ್ಣಮೂರ್ತಿ, ರವೀಂದ್ರ ಯಾವಗಲ್, ರಾಜು ಅನಂತಸ್ವಾಮಿ, ಜೆರಾಲ್ಡ್, ಪ್ರಮಥ್, ಜಗದೀಶ್, ತುಕಾರಂ ಶಿವಮೊಗ್ಗ ರಾಘವೇಂದ್ರ.

**ಸಂತೂರು**

ಸುಂದರ್, ಕುಮಾರ್ ಮದ್ರಾಸ್,

**ಹವಾಯಿನ್ ಗಿಟಾರ್**

ಪ್ರಕಾಶ್ ಸೊಂಟಕಿ, ಕುಮಾರ್ ಮದ್ರಾಸ್

**ಕೀಬೋರ್ಡ್**

ಶಬ್ಬೀರ್ ಅಹಮದ್, ಸಾಧುಕೋಕಿಲ, ಪ್ರವೀಣ್‌ದತ್ ಸ್ಟೀಫನ್, ನಾಗರಾಜ್, ಹರೀಶ್, ಶ್ರೀಧರ್, ಜಯಸಿಂಹ, ಮೋಹನ್‌ರಾಜು, ಜಯರಾಂ, ಸಂಗೀತ್, ಉಮೇಶ್, ಕೃಷ್ಣ ಉಡುಪ, ನಾಗಭೂಷಣ, ಉಡುಪ, ಗೋಪಿನಾಥ್, ಥಾಮಸ್ ನಾಕೋಡ್, ನವನೀತ್, ಪುರುಷೋತ್ತಮ್, ವಸಂತ್ ಕುಂಬ್ಳೆ, ರಾಜೀವ್ ಜೋಯಿಸ್, ದೀಪಕ್ ಶಿವಮೊಗ್ಗ, ಸಿದ್ದಪ್ಪ ಶಿವಮೊಗ್ಗ, ಮೈಸೂರು ಮೋಹನ್, ತುಮಕೂರು ಶ್ರೀನಿವಾಸ್, ಎಲ್. ಕುಮಾರ್, ರಾಜು ಅನಂತಸ್ವಾಮಿ, ಪ್ರಸಾದ್, ಗಣೇಶ್, ಉದಯ್‌ಕಿರಣ್, ವೆಂಕಟೇಶ್‌ಮೂರ್ತಿ, ಗೌತಮ್ ಮೋಹನ್, ಬಿ.ವಿ. ಶ್ರೀನಿವಾಸ್, ಪ್ರವೀಣ್ ಡಿ. ರಾವ್.

**ಗಿಟಾರ್**

ಬಿ. ಗೋಪಿ, ಕ್ಯಾಲಬ್, ಸುದರ್ಶನ್, ರಾಜು, ಮಾರುತಿ, ಹಮೀದ್, ಡಿ. ಶ್ರೀನಿವಾಸ್, ಪ್ರವೀಣ್ ದತ್ತ ಸ್ಟೀಫನ್, ಕುಮಾರ್ ಮದ್ರಾಸ್, ಗಿರಿಧರ್, ವಾಸು

**ಮ್ಯಾಂಡಲೀನ್**

ಎನ್.ಎಸ್. ಪ್ರಸಾದ್, ಮೈಸೂರು ಆನಂದ್, ಸುಮಾರಾಣಿ, ರಾಜೀವ್ ಜೋಯಿಸ್, ಸತೀಶ್ ಕುಮಾರ್, ಕುಮಾರ್ ಮದ್ರಾಸ್.

**ಸಿತಾರ್**

ಸುಮಾರಾಣಿ, ಜಯಂತ್ ಕುಮಾರದಾಸ್, ಗೋಪಿನಾಥ್, ಶ್ರೀನಿವಾಸ್, ಶ್ರುತಿ ಕಾಮತ್, ಶಂಶದ್‌ಅಲಿ.

**ಕೊಳಲು**

ಪ್ರಾಣೇಶ್, ಸುಂದರಮೂರ್ತಿ, ಭುಟ್ಟೋ, ಹೆಚ್.ಎಸ್. ವೇಣುಗೋಪಾಲ್, ಪ್ರವೀಣ್ ಗೋಡಖಿಂಡಿ, ಎನ್.ಎಸ್. ಮುರುಳಿ, ರಾಜೇಶ್, ರವಿಚಂದ್ರ, ವಿ.ಕೆ. ರಾಮನ್, ರಘುನಂದನ್, ವಸಂತ್‌ಕುಮಾರ್, ಸರ್ವೋತ್ತಮ, ಶಿವಲಿಂಗರಾಜಾಪೂರ, ಜಯರಾಂ, ರಮೇಶ್, ಮಹೇಶ್.

**ಕ್ಲಾರಿಯೋನಟ್**

ನಾಗೇಂದ್ರ ಬೆಂಗಳೂರು

**ವೀಣೆ**

ಪುಷ್ಪಾ ಕಾಶೀನಾಥ್, ವೀಣಾವಾರುಣೀ, ಎಂ.ಆರ್. ಮಂಜುಳ, ರಾಮು, ಹೆಚ್.ಆರ್.ಕೆ.ಪ್ರಸಾದ್,

**ಬ್ಯಾಂಜೋ**

ಎನ್.ಎಸ್. ಪ್ರಸಾದ್.

**ವಯೋಲಿನ್**

ಬಿ.ಕೆ.ಚಂದ್ರಶೇಖರ್, ಜಯರಾಮು, ನಾಗರಾಜ್, ಈಶ್ವರ್, ಜ್ಯೋತ್ಸಾ, ನಿಂಬರ್ಗಿ, ಹೇಮಂತ್, ಅಮರನಾಥ್, ಅಗಾಸ್ಟಿನ್, ಕ್ರಿಸ್ಟಿ, ನೆಲ್ಸನ್, ಮನೋಜ್, ಜೆಫ್ರಿ, ಜೆರಾಲ್ಡ್

**ರಿದಂ ಪ್ಯಾಡ್**

ಬಾಲಿ, ವಾದಿಕುಮಾರ್, ಪದ್ಮನಾಭಕಾಮತ್, ವರದ, ಅರುಣ್, ರಮೇಶ್, ಎಂ.ಸಿ. ಶ್ರೀನಿವಾಸ್, ರಘುಶಿವಮೊಗ್ಗ, ರಾಮು, ಪ್ರಸನ್ನ, ಪ್ರಮಥ್‌ಕಿರಣ್, ರವಿ ಬೆಂಗಳೂರು, ಜಗ್ಗಿ, ಲಯೇಂದ್ರ, ಪ್ರದ್ಯುಮ್ನ, ಗುರುರಾಜ್.

**ವಿಶೇಷ ವಾದ್ಯಗಳು**

ಮುನಿಸಿದ್ದಪ್ಪ, ಎನ್. ಶ್ರೀನಿವಾಸ್ ಪ್ರಸಾದ್, ಬೆನಡಿ, ರವಿ, ಚಂದ್ರು.

**ಶಹನಾಯ್**

ಬಾಲೇಶ್ ಮದ್ರಾಸ್

**ಸಾರಂಗಿ**

ಫಯಾಜ್ ಖಾನ್

**ದಿಲುರುಬಾ (ತಾರ್ ಶಹನಾಯ್)**

ವೀರೇಶ್ ಮದ್ರಿ

* * *

## ಅಧ್ಯಾಯ ೧೧ - ಸುಗಮ ಸಂಗೀತ ಇಂದು

ಇಂದು ಸುಗಮಸಂಗೀತ ಕಣಜದಲ್ಲಿ ಅತ್ಯಮೂಲ್ಯವಾದ ಸಾವಿರಾರು ಸಂಯೋಜನೆಗಳಿರುವುದರಿಂದ ಅದೊಂದು ಪ್ರತ್ಯೇಕ ಪ್ರಕಾರವಾಗಿ ಬೆಳೆದು ನಿಂತಿದೆ. ಇದಕ್ಕೆ ನೂರಾರು ಕವಿಗಳೂ ನೂರಾರು ಕವಿಗಳೂ ನೂರಾರು ಕಲಾವಿದರೂ ನೀಡಿದ ಕಾಣಿಕೆಯೇ ಕಾರಣವಾಗಿದೆ.

ಸಂಗೀತ ಮತ್ತು ಸಾಹಿತ್ಯಗಳೆರಡರ ಸುಮಧುರ ಬಾಂಧವ್ಯದಿಂದ ಹೊಸ ರುಚಿಯೊಂದು ಸೃಷ್ಟಿಯಾಗಿದೆ.ಪುಸ್ತಕದಲ್ಲಿ ಹಾಯಾಗಿ ಪವಡಿಸಿದ್ದ ಕವಿತಾ ಕನ್ನಿಕೆ ಸಂಗೀತದ ಅವಕುಂಠನ ಹೊದ್ದು, ವೇದಿಕೆಯಲ್ಲಿ ಜೀವಂತಿಕೆಯಿಂದ ಕಾರಂಜಿಯಾಗಿ ಪುಟಿಯುತ್ತಿದ್ದಾಳೆ. ಜನಪ್ರಿಯಳಾಗಿದ್ದಾಳೆ. ಹಿರಿಯರಿಂದ ಕಿರಿಯರವರೆಗೆ, ಜಾತಿಮತಗಳ, ಗೋಡೆಗಳನ್ನು ದಾಟಿ ಎಲ್ಲರನ್ನೂ ಬಾಚಿಕೊಂಡು ಅಲಂಗಿಸಿಕೊಂಡ ಸುಗಮಸಂಗೀತ ಒಂದೇ ಕುಟುಂಬದ ಎಲ್ಲಾ ವಯಸ್ಸಿನವರೂ ಒಟ್ಟಿಗೆ ಕುಳಿತು ಕೇಳಬಲ್ಲಂತಹ ಸಂಗೀತವಾಗಿರುವುದಕ್ಕೆ ಕಾರಣ, ಅದರಲ್ಲಿ ಹಾಸು ಹೊಕ್ಕಾಗಿರುವ ಪರಿಶುದ್ಧವಾದ ಉತ್ಕೃಷ್ಟ ಸಾಹಿತ್ಯ. ಇಂದು ರುಚಿಕೆಟ್ಟ ಚಲನಚಿತ್ರಗಳು ಯುವ ಪೀಳಿಗೆಯನ್ನು ದಾರಿ ತಪ್ಪಿಸುತ್ತಾ, ಅವರಲ್ಲಿರುವ ಸಾಹಿತ್ಯ ಸಂಗೀತಾಭಿರುಚಿಯನ್ನು ಹದಗೆಡಿಸುತ್ತಿರುವಾಗ, ಸುಗಮಸಂಗೀವೊಂದೇ ಅವರನ್ನು ಮುನ್ನಡೆಸುತ್ತಿದೆ. ಅವರಲ್ಲಿ ಸದಭಿರುಚಿಯನ್ನು ಹುಟ್ಟು ಹಾಕುತ್ತಿದೆ.

ಕವಿ ಮನಸ್ಸಿನ ಬೆಳಕಿನ ಹೆಜ್ಜೆಗಳ ಅರಿವು ಮುಡಿಸುತ್ತಿರುವ ಸುಗಮಸಂಗೀತ ಜನ ಜೀವನಕ್ಕೆ ನೆಮ್ಮದಿ ನೀಡುತ್ತಿದೆ. ಅವರನ್ನು ಬೆಳಕಿನತ್ತ ಕರೆದೊಯ್ಯುತ್ತಿದೆ. ಕಾರಣ ಅದರಲ್ಲಿರುವ ಕೆಲವು ವಿಶಿಷ್ಟತೆಗಳು ಎನ್ನಬಹುದು. ೧) ಮಾನವ ಬದುಕಿನ ಸಹಜ ಚಿತ್ರಣಗಳನ್ನೊಳಗೊಂಡ ಸುಗಮಸಂಗೀತದ ಸಾಹಿತ್ಯ, ಸರಳವಾಗಿರುವುದು ೨) ಸಂಕ್ಷಿಪ್ತವಾಗಿ ಕಡಿಮೆ ಕಾಲಾವಧಿಯಲ್ಲಿ ಮುಗಿಯುವುದು ೩) ಗೇಯತೆಯ ಸಾಹಚರ್ಯ ಮೂಲಕ ಆಕರ್ಷಕವಾಗಿರುವುದು ೪) ಧ್ವನಿಯಲ್ಲಿ ವಿಶೇಷ ಅರ್ಥನೀಡಿ ಸಂದೇಶವಿರುವುದು ೫) ತಾಳಕ್ಕೆ ಹೊಂದಿಕೊಂಡು ಲಯದ ಮೂಲಕ ಕವಿತೆಯ ಮುಖ್ಯ ಕೇಂದ್ರ ಭಾವ ಸ್ಫುರಣಗೊಳ್ಳುವುದು ೬) ಭಾವತೀವ್ರತೆಯ ಆತ್ಮನಿವೇದನೆಯ ಮೂಲಕ ವ್ಯಕ್ತಿತ್ವದ ಒಳತೋಟಿ ಇರುವುದು ೭) ಉತ್ಕೃಷ್ಟವಾದ ಸಾಹಿತ್ಯಾನುಭವಗಳ ಮೂಲಕ ಮನಸ್ಸನ್ನು ಶುಚಿಗೊಳಿಸಿ ಸಿಂಗರಿಸುವುದು ೮) ಮನಸ್ಸಿಗೆ ಉಲ್ಲಾಸ ನೀಡುವುದು ೯) ವಾಸ್ತವ ಜೀವನದ ಚಿತ್ರಣದಿಂದ ಕೇಳುಗರಿಗೆ ಆತ್ಮೀಯತೆಯನ್ನು ಮೂಡಿಸುವುದು, ಹಾಡು ಅವನದೇ ಅನ್ನಿಸುವುದು ೧೦) ಪ್ರಕ್ಷುಬ್ಧ ಮನಸ್ಸನ್ನು ತಣಿಸಿ, ಮಣಿಸಿ ನೆಮ್ಮದಿ ನೀಡುವುದು.

ಈ ಹತ್ತು ಅಂಶಗಳಿಂದ ಇಂದಿನ ಸುಗಮಸಂಗೀತ ಬೇರೆಯ ಸಂಗೀತ ಪ್ರಕಾರಗಳಿಂದ ಭಿನ್ನವಾಗಿ ಶುಚಿ-ರುಚಿಯಾಗಿ ಜನರನ್ನು ಆಕರ್ಷಿಸುತ್ತಿದೆ.

ಯಾವುದೇ ರಸಾನುಭವಕ್ಕೆ ಬೇಕಾದದ್ದು ಮನೋರಂಜನೆ, ಮನಸ್ಸನ್ನು ಮುದಗೊಳಿಸಿ ಸಿಂಗರಿಸುವುದು. ಇಂದಿನ ಯಾಂತ್ರಿಕ ಬದುಕಿಗೆ ಬೇಕಾದ ಮನರಂಜನೆಯ ಜೊತೆಗೆ ಸಂದೇಶವನ್ನೂ, 'ಸುಗಮಸಂಗೀತ' ನೀಡುತ್ತಿದೆ ಎನ್ನುವ ಕಾರಣದಿಂದ ಇದು ಜನಪರವೂ, ಜನಪ್ರಿಯವೂ ಆಗಿದೆ. ಕೇವಲ ಮನರಂಜನೆಯನ್ನಷ್ಟೇ ಅಲ್ಲದೆ, ಮನಸ್ಸಿಗೆ ಬೇಕಾದ ನೆಮ್ಮದಿ, ಸುಖಗಳನ್ನು ಕೊಡುತ್ತಿದೆ. ಮಸುಕಿನ ಮಬ್ಬಿನ ದಾರಿಗೆ ಕೈ ಹಿಡಿದು ನಡೆಸುತ್ತಲೂ ಇದೆ. ಮನೋ ಯಾತನೆಗಳಿಗೆ ಸಂಗೀತದ ಸಕ್ಕರೆ ಲೇಪನದಿಂದ ಮದ್ದನ್ನೂ ನೀಡುತ್ತಿದೆ. ಅತ್ಯಂತ ಕಡಿಮೆ ಕಾಲಾವಧಿಯಲ್ಲಿ ಪರಿಣಾಮಕಾರಿಯಾದ ಅನುಭವವನ್ನು ಕೊಡುತ್ತದೆ ಅನ್ನುವ ಕಾರಣದಿಂದ ಸುಗಮಸಂಗೀತ ಇಂದು ಜನಪ್ರಿಯವಾಗಿದೆ. ಹಾಡು ಕೇಳುವವನಿಗೆ, ಅದು ತನ್ನದೇ, ನಲಿವು, ನೋವು, ಎನ್ನುವ ಅನುಭವವನ್ನು ಕ್ಷಣ ಮಾತ್ರದಲ್ಲಿ ನೀಡುವುದಲ್ಲದೆ ಚಿತ್ತಕ್ಕೆ ಸಮಾಧಾನವನ್ನು ನೀಡುತ್ತಿದೆ.

ಸುಗಮಸಂಗೀತ ಸಂಯೋಜಕ ಕವಿತೆಗೆ ರಾಗ ಸಂಯೋಜನೆ ಮಾಡುವಾಗ ಆ ಕವಿತೆ ತನ್ನದೇ ಭಾವನೆಗಳ ಚಿತ್ರಣ ಎಂದು ತಿಳಿದೇ ಅದಕ್ಕೆ ತನ್ನ ರಾಗದ ತೊಡುಗೆಯನ್ನು ತೊಡಿಸುತ್ತಾನೆ. ತನ್ನದೇ ಗೀತೆ ಎಂದೇ ಭಾವಿಸಿ ಸಂಭ್ರಮ ಪಡುತ್ತಾನೆ. ಆ ಗೀತೆಯನ್ನು ಹಾಡುವ ಗಾಯಕ ಅದನ್ನು ಹಾಡುವಾಗ ಅದು ತನ್ನ ಕವಿತೆಯೇ, ತನ್ನ ಭಾವನೆಗಳ ಅಭಿವ್ಯಕ್ತಿಯೇ, ಎಂದು ಎದೆ ತುಂಬಿ ಹಾಡುತ್ತಾನೆ. ತನ್ನದೇ ಹಾಡು ಎಂದೇ ಬೀಗಿ ಹಾಡುತ್ತಿರುತ್ತಾನೆ. ಅದೇ ಹಾಡನ್ನು ಕೇಳಿದ ಕೇಳುಗ ಆ ಹಾಡಿಗೆ ಮನಸೋತು ಮತ್ತೆ ಮತ್ತೆ ಅದೇ ಹಾಡನ್ನೆ ಗುನುಗಿಸಿಕೊಳ್ಳುತ್ತಾ ಮತ್ತೆ ಮತ್ತೆ ಅದೇ ಹಾಡನ್ನು ಕೇಳಲು ತವಕಿಸುತ್ತಾನೆ. ಪ್ರತಿಬಾರಿ ಕೇಳುವಾಗಲೂ ಅದು ಅವನ ಹಾಡೇ ಆಗುತ್ತಾ ಆ ಗೀತೆ ಅವನಿಗೆ ಆತ್ಮೀಯವಾಗುತ್ತದೆ. ಪುನಃ ಪುನಃ ಆ ಹಾಡಿಗಾಗಿ ಆತ ಹಂಬಲಿಸಿ ಕೇಳುತ್ತಾಣೆ. ತನ್ನ ಹಾಡೆಂದು ಸಂತೋಷಪಡುತ್ತಾನೆ. ಇದು ಕವಿತೆ ಪುನರ್ಭವವಾಗುತ್ತಾ ಮತ್ತೆ ಮತ್ತೆ ಹುಟ್ಟಿ ಹೊಸದಾಗುತ್ತಾ ಹೋಗುವ ಕ್ರಿಯೆ. ಸುಗಮಸಂಗೀತದಲ್ಲಿ ಈ ಒಂದು ಮರು ಸೃಷ್ಟಿ,

ಆಗುತ್ತಲೇ ಇರುವುದರಿಂದ ಇದು ಅನಂತವಾಗುತ್ತಾ ಹೋಗುತ್ತದೆ. ಅನೇಕ ವೇಳೆ ಏಕಾಂತದ ವ್ಯಕ್ತಿಗತವಾದ ನೋವು, ಬೇಸರಗಳಿಗೆ, ನಿನ್ನ ಜೊತೆ ನಾನಿದ್ದೇನೆ, ನನಗೂ ನಿನ್ನ ಹಾಗೆಯೇ ಬೇಸರವಾಗಿದೆ, ನಿನ್ನ ಅನುಭವ ನನಗೂ ಆಗಿದೆ ಇದು ಸಹಜ ಸ್ವಾಭಾವಿಕ ಅನ್ನುವ ಸ್ವಾಂತನವೂ ವ್ಯಕ್ತವಾಗುತ್ತದೆ. ಉದಾ. ಜಿ.ಎಸ್.ಶಿವರುದ್ರಪ್ಪನವರ 'ಎದೆ ತುಂಬಿ ಹಾಡಿದೆನು' ಗೀತೆಯನ್ನಾಗಲಿ ನಿಸಾರ್ ಅಹಮದ್ ಅವರ 'ಮತ್ತದೇ ಬೇಸರ ಅದೇ ಏಕಾಂತ' ಗೀತೆಯನ್ನಾಗಲಿ 'ಎಲ್ಲ ಮರೆತಿರುವಾಗ ಇಲ್ಲ ಸಲ್ಲದನೆವವ ಹೂಡದಿರು' ಗೀತೆಯನ್ನಾಗಲಿ- ಕೇಳಿದಾಗ ಪ್ರಿಬಾರಿಯೂ ಒಂದು ವಿಧವಾದ ನೆಮ್ಮದಿ, ಸ್ವಾಂತನಗಳ ಅನುಭವವಾಗುತ್ತದೆ. ಅದೇ ಕವಿತೆಯನ್ನು ಕವಿತೆಯಾಗಿ ಓದಿದ್ದಾಗ ದೊರೆತ ಸಂತೋಷ, ನೆಮ್ಮದಿ, ನಿಟ್ಟುಸಿರು, ಧೈರ್ಯ ಮುಂತಾದ ಭಾವನೆಗಳಿಗಿಂತ ಮಿಗಿಲಾದ ಭಾವನೆಗಳು ಗೀತೆಯ ರೂಪದಲ್ಲಿ ಕೇಳಿದಾಗ ಮೂಡುತ್ತವೆ. ಗೀತೆಯು ಕವಿತೆಯೊಳಗೆ ಪ್ರವೇಶಿಸಿ ಗಾಯಕನ ಕಂಠದಿಂದ ಹೊರಹೊಮ್ಮಿದಾಗ ಆದ ಮಿಂಚಿನ ಸಂಚಾರವನ್ನು ಶಬ್ದಗಳಲ್ಲಿ ತುಂಬಿಕೊಡುವುದು ಕಷ್ಟದ ಕೆಲಸ. ಮೈಸೂರು ಅನಂತಸ್ವಾಮಿಯವರ ಸಂಗೀತ ಸಂಯೋಜನೆ, ಗಾಯನ ಪ್ರಸ್ತುತಿಯಲ್ಲಿ ಈ ಗೀತೆಗಳನ್ನು ಉದಾಹರಿಸಿದ್ದೇನೆ. ಇದು ಒಂದು ತುಣುಕು. ಸುಗಮಸಂಗೀತ ಇಂತಹ ಸಾವಿರಾರು ಗೀತೆಗಳಿಂದ ವಿಜೃಂಭಿಸುತ್ತಿದೆ. ಮನಸ್ಸಿನ ಚಿಂತೆಯನ್ನು ನೀಗಿಸಿ ಉಲ್ಲಾಸವನ್ನು ಕೊಡುತ್ತಿದೆ. ಕೇಳುಗನ 'ಶುಚಿರುಚಿ'ಯ ಭಾವನೆಗಳನ್ನು ಉದ್ದೀಪನಗೊಳಿಸುತ್ತಾ, ಬದುಕಿನ ಓರೆಕೋರೆಗಳನ್ನು ತೋರಿಸುತ್ತಾ, ತಿದ್ದುತ್ತಾ, ಕೆಳಗೆ ಬೀಳಬೇಡ ಎಂದು ಬುದ್ಧಿ ಹೇಳುತ್ತಾ, ಬಿದ್ದಾಗ, ಎದ್ದು ನಿಲ್ಲು ಎಂದು ಹುರಿದುಂಬಿಸುತ್ತಾ ನಡೆದಿರುವ ಸುಗಮಸಂಗೀತ ವರ್ತಮಾನ ಕಾಲದ ಬಹುದೊಡ್ಡ ದಾರಿದೀವಿಗೆಯಾಗಿದೆ. ಬದುಕಿಗೆ ಕನ್ನಡಿ ಹಿಡಯುತ್ತಾ ಬದುಕನ್ನು ಹೇಗೆ ಕನ್ನಡಿಯಂತೆ ಒರೆಸಿ, ಸ್ವಚ್ಛವಾಗಿ ಪಾರದರ್ಶಕವಾಗಿ ಇಟ್ಟುಕೊಳ್ಳಬಹುದು ಎಂಬುದನ್ನು ತೋರಿಸಿಕೊಡುತ್ತಿದೆ. ಜೀವನದ ಮೌಲ್ಯಗಳನ್ನು ನಾನಾ ಕಾರಣಗಳಿಂದ ಕಳೆದುಕೊಳ್ಳುತ್ತಿರುವ ನಮ್ಮ ಸಮಾಜ ಇದನ್ನು ಗಮನಿಸಿ ಸ್ವಚ್ಛವೂ ಪಾರದರ್ಶಕವೂ ಆದ ಭಾವನೆಗಳನ್ನು, ಚಿಂತನೆಗಳನ್ನು, ಮುಕ್ತವಾದ ಪ್ರೀತಿ, ಆತ್ಮೀಯತೆಗಳನ್ನು ಬಾಳಿಗಿಳಿಸಿಕೊಳ್ಳಬೇಕಾಗಿದೆ. ಅವರ ಆಶೋತ್ತರಗಳನ್ನು ಸಕಾರಾತ್ಮಕವಾದ ಹಾದಿಯಲ್ಲಿ ನೆರವೇರಿಸಿಕೊಳ್ಳಬೇಕಾಗಿದೆ.

ಪು.ತಿ.ನ.ರವರು ಹೇಳುವಂತೆ 'ಮನಸ್ಸನ್ನು ಕೆರಳಿಸುವ ಸಾಹಿತ್ಯ ಸಂಗೀತ'ಗಳಿಂದ ದೂರವಿದ್ದು, ಮನಸ್ಸನ್ನು ಅರಳಿಸುವ ಸಾಹಿತ್ಯ ಸಂಗೀತದ ಸುತ್ತ ನಾವು ಬದುಕಬೇಕಾಗಿದೆ. ಇಂದು 'ಸುಗಮಸಂಗೀತ' ತನ್ನ ಬದುಕಿಗೆ ಹತ್ತಿರವಾದ ಉತ್ಕೃಷ್ಟವಾದ ಸಾಹಿತ್ಯ, ಚಿಂತನಗಳಿಂದ, ಸಾಹಿತ್ಯಾರ್ಥವನ್ನು ತಲೆ ಮೇಲೆ ಹೊತ್ತು ಬರುವ ಸರಳ ಮಧುರ ಸಂಗೀತದಿಂದ, ಸಮಾಜ ಮುಖಿಯಾಗಿದೆ. ಬಹುಮುಖಿಯಾಗುತ್ತಲೂ ಇದೆ. ಬೇರೆ ಬೇರೆ ಮಾಧ್ಯಮಗಳ ಮೂಲಕವೂ ಹೊರಹೊಮ್ಮುತ್ತಿದೆ. ಚಿತ್ರ, ಅಭಿನಯ, ನೃತ್ಯಗಳ ಮೂಲಕವೂ ಸುಗಮಸಂಗೀದ ಮತ್ತೊಂದು ಮುಖ ತಲೆ ಎತ್ತಿ ಅವುಗಳಲ್ಲಿಯೂ ತನ್ನನ್ನು ತೋರಿಸಿಕೊಳ್ಳುತ್ತಿದೆ. ಕವಿತೆಯ ಹಲವು ಸಾಧ್ಯತೆಗಳು, ಸಂಗೀತದ ಹಲವು ಹೊಸ ಹೊಸ ಸಾಧ್ಯತೆಗಳ ಶೋಧನೆಯಾಗುತ್ತಿವೆ. ಸಂಗೀತದಲ್ಲಿ ಅಭಿರುಚಿ ಇರುವವರಿಗೆ ಸಾಹಿತ್ಯದ ಸವಿಯೂ ದೊರಕುತ್ತಿದೆ. ಸಾಹಿತ್ಯದಲ್ಲಿ ಅಭಿರುಚಿ ಇರುವವರಿಗೆ ಸಂಗೀತದ ರುಚಿ ಅನುಭವವಾಗುತ್ತಿದೆ. ಸಾಹಿತ್ಯದ ಗುಣಮಟ್ಟವನ್ನು ಅದನ್ನು ಆಸ್ವಾದಿಸುವ ಗುಣವನ್ನು ಸುಗಮಸಂಗೀತ ಕೊಟ್ಟು, ಭಾವನೆಗಳ ಸಂವೇನದಯನ್ನು ಸೂಕ್ಷ್ಮಗೊಳಿಸಿದೆ. ಕೇಳುಗರಲ್ಲಿ ಕಾವ್ಯಪ್ರೀತಿ, ಸದಭಿರುಚಿ ಮೂಡಿಸುವಲ್ಲಿ ಗಮನಾರ್ಹವಾಗಿದೆ.

೧೯೭೦ರಲ್ಲಿ ಪ್ರಾರಂಭವಾದ 'ಧ್ವನಿಸುರುಳಿ ಸಂಸ್ಕೃತಿ' ಯ ಹಾದಿ ಇಂದು ತುಸು ತುಸು ದುರ್ಗಮವಾಗುತ್ತಾ ಬಂದಿದೆ. ಸುಮಾರು ಇಪ್ಪತ್ತೈದು ವರುಷಗಳಲ್ಲಿ ಸಾವಿರ ಸಾವಿರ ಧ್ವನಿಸುರುಳಿಗಳು ಹೊರಬಂದು ಜನಪ್ರಿಯವಾಗಿ ಮೆರೆದದ್ದು ಇಂದು ಇತಿಹಾಸದಂತೆ ಕಂಡು ಬರುತ್ತಿದೆ.ಧ್ವನಿಸುರಳಿ ಅಲ್ಲೊಂದು ಇಲ್ಲೊಂದು ತಲೆ ಎತ್ತಿ ಹುಟ್ಟಿದರೂ, ಮಾರುಕಟ್ಟೆಯ ದವಡೆಯಲ್ಲಿ ಪಾರಾಗಿ ಈಚೆ ಬರುವುದು ಕಷ್ಟಕರವಾಗಿದೆ. ಹೊಸ ಹೊಸ ಭಾವಗೀತೆಗಳ ಮಾತಿರಲಿ; ಹಳೆಯ ಧ್ವನಿಸುರುಳಿಗಳಾದ 'ಮೈಸೂರು ಮಲ್ಲಿಗೆ', 'ಭಾವಸಂಗಮ', 'ಶಿಶುನಾಳ ಶರೀಫರ ಹಾಡುಗಳು' ಅನೇಕ ಜನಪ್ರಿಯ ಭಾವಗೀತೆಗಳೂ ತಮ್ಮ ಹಿಂದಿನ ತಾರಾ ವರ್ಚಸ್ಸನ್ನು ಕ್ರಮೇಣ ಕಳೆದುಕೊಳ್ಳುತ್ತಾ ನೇಪಥ್ಯಕ್ಕೆ ತೆರಳುವ ಸೂಚನೆಗಳನ್ನು ಕೊಡುತ್ತಿವೆ. ಇದಕ್ಕೆ ಕಾಲವೇ ಪರಿಹಾರವನ್ನು ನೀಡಬೇಕಾಗಿದೆ.

ಇಂದು ಸುಗಮಸಂಗೀತದ ವೇದಿಕೆ, ಶಿಬಿರಗಳು ಹತ್ತು ಹಲವಾಗಿ, ಹಲವು ನೂರಾಗಿ ಧಾಪುಕಾಲು ಇಡುತ್ತಿವೆ. ಸುಗಮಸಂಗೀತವನ್ನು ಕಲಿಸುವ ಶಾಲೆಗಳು ಅಲ್ಲಲ್ಲಿ ಹುಟ್ಟಿಕೊಳ್ಳುತ್ತಿವೆ. ಕಲಿಯುವ ಆಸಕ್ತರೂ ಅತ್ತಣಿಂದ ಇತ್ತ, ಇತ್ತಣಿಂದ ಅತ್ತ, ಆಸಕ್ತಿಯಿಂದ ಮುನ್ನುಗ್ಗುತ್ತಿದ್ದಾರೆ. ತರಬೇತಿ ಶಿಬಿರಗಳು, ಸುಗಮಸಂಗೀತ ಗಾಯನದೊಂದಿಗೆ ಅಗತ್ಯವಾದ ವಾದ್ಯಗಳನ್ನು ಕಲಿಸುತ್ತಾ ಹೊರಟಿದೆ.

ಒಂದು ಕಾಲದಲ್ಲಿ ಸಂಗೀತ ವೇದಿಕೆಗಳಲ್ಲಿ ಸುಗಮಸಂಗೀತವನ್ನು ಹಾಡುವುದೇ ಅಪಮಾನವೆಂದು ತಿಳಿದಿದ್ದವರು, ಅದರಿಂದ ಒಂದು ಪೈಸೆಯನ್ನು ಸಂಪಾದಿಸಲಾಗದಿದ್ದವರು, ಇಂದು ಸುಗಮಸಂಗೀತವನ್ನೇ ವೃತ್ತಿಯಾಗಿಟ್ಟುಕೊಂಡು ಹಣಗಳಿಸಿ, ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ಕರ್ನಾಟಕ ಸರ್ಕಾರ 'ಸುಗಮಸಂಗೀತ' ಗೌರವ ಪ್ರಶಸ್ತಿ, ವಾರ್ಷಿಕ ಪ್ರಶಸ್ತಿಗಳನ್ನಷ್ಟೇ ಅಲ್ಲದೆ ಅತ್ಯುನ್ನತ 'ಸಂತ ಶಿಶುನಾಳಶರೀಫರ' ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ. ಸುಗಮಸಂಗೀತ ಗಾಯಕರು, ಸಂಯೋಜಕರು, ವಾದ್ಯಗಾರರು ನೂರಾರು ಸಂಖ್ಯೆಗಳಿಂದ ಸಾವಿರ ಸಾವಿರ ಸಂಖ್ಯೆಗೆ ಮುಟ್ಟುತ್ತಿದ್ದಾರೆ. ಕ್ಯಾಸೆಟ್ ಸಂಸ್ಕೃತಿಯಿಂದ ಸಾವಿರಾರು ಹಾಡುಗಳು ಜನ್ಮತಳೆದಿವೆ. ನೂರಾರು ಗಾಯಕರು ಬೆಳಕಿಗೆ ಬಂದಿದ್ದಾರೆ. ಸುಗಮಸಂಗೀತ ವ್ಯಕ್ತಿ ವಿಶಿಷ್ಟವಾದ ಸಂಗೀತವಾದ್ದರಿಂದ ಪ್ರತಿಯೊಬ್ಬ ಗಾಯಕನಲ್ಲೂ ಹೊಸ ಶೈಲಿ ರೂಪುಗೊಂಡಿದೆ. ಗಾಯನದ ಶೈಲಿಯ ಜೊತೆಗೆ ವಾದ್ಯಗಳ ಬಳಕೆಯಲ್ಲೂ ಹೊಸತನ ಬಂದಿದೆ. ಹಿಂದೆ ವಾದ್ಯ ಸಹಕಾರಕ್ಕೆ ಪಿಟೀಲು, ವೀಣೆ, ಕೊಳಲು, ತಬಲ ಗಳನ್ನು ಮಾತ್ರ ಉಪಯೋಗಿಸುತ್ತಿದ್ದರೆ, ಈಗ ವಿದ್ಯುನ್ಮಾನ ಸಾಧನಗಳೂ ಬಳಕೆಗೆ ಬಂದಿವೆ. ಕೀ ಬೋರ್ಡ್, ರಿದಂ ಪ್ಯಾಡ್ ಗಳ ಜೊತೆ ಹಿಂದೂಸ್ತಾನಿ ಮತ್ತು ಪಾಶ್ಚಾತ್ಯ ವಾದ್ಯಗಳಾದ 'ಸಾರಂಗಿ', 'ಶಹನಾಯ್', 'ಸಿತಾರ್', 'ಮ್ಯಾಂಡಲಿನ್', 'ಬ್ಯಾಂಜೋ', 'ಗಿಟಾರ್' ಮುಂತಾದ ವಾದ್ಯಗಳನ್ನು ಬಳಸಲಾಗುತ್ತಿದೆ. ಧ್ವನಿಮುದ್ರಣದಲ್ಲೂ ತಾಂತ್ರಿಕತೆ ಹೊಸತನವಾಗುತ್ತಲೇ ಇದೆ. ಸ್ಪೂಲ್ ರೆಕಾರ್ಡಿಂಗ್‌ನಿಂದ ಹಂತಹಂತವಾಗಿ ಬೆಳೆದು ಕಂಪ್ಯೂಟರ್ ರೆಕಾರ್ಡಿಂಗ್ ಹಂತಕ್ಕೆ ಬಂದು ನಿಂತಿದೆ. ಧ್ವನಿಯ ಸೂಕ್ಷ್ಮತೆಗಳನ್ನು ತರಂಗಗಳಲ್ಲಿ ತುಂಬಿ ಪರಿಣಾಮಕಾರಿಯನ್ನಾಗಿ ಮಾಡುವ ಹೊಸತನ, ದಿನ ದಿನಕ್ಕೂ ಹೊಸತು ಹೊಸತು ತರುತಿದೆ. ಹೊಸ ಹೊಸ ಉಪಕರಣಗಳು ನಾದದ ಅನುಕರಣನಕ್ರಿಯೆಗೆ ನಾದದ ತಾಂತ್ರಿಕತೆ ಸವಾಲೆಸೆಯುತ್ತಾ ಹುಟ್ಟಿಕೊಳ್ಳುತ್ತಿದೆ.

ಇಂದು ಸುಗಮಸಂಗೀತದ ವೈಶಿಷ್ಟ್ಯವೇನೆಂದರೆ ಗುಣ ಮತ್ತು ದೋಷಗಳು ಒಟ್ಟೊಟ್ಟಿಗೆ ಬೆಳೆಯುತ್ತಿರುವುದು. ಹೊಸ ಪ್ರಯೋಗಗಳಂತೆ ಹೊಸ ವಿಚಾರಗಳು, ಕೀರ್ತಿಯ ಆಮಿಷಗಳು ಸುಗಮಸಂಗೀತಕ್ಕೆ ಒಂದು ಸವಾಲಾಗವೆ. ಕನ್ನಡತನದ ಭಾವ ಸಂಸ್ಕೃತಿಯ ಆವರಣದಲ್ಲಿಯೇ ಇದರ ಸಫಲತೆಯನ್ನು ಕಾಣುವುದೇ ಇಂದಿನ ಸವಾಲಾಗಿದೆ. ಇಲ್ಲಿ ಬೆಳಕು ಇದ್ದಂತೆ ಥಳುಕೂ ಬಂದು ಸೇರಿಕೊಳ್ಳುವ ಅಪಾಯವಿದೆ. ಅಕ್ಕಿಯಲ್ಲಿ ಕಲ್ಲೂ ಕಲಸಿ ಬಿಡುವ ಆಪಾದನೆಯೂ ಇದೆ. ಬಂಗಾರವೂ ಹಿತ್ತಾಳೆಯೂ ಬೆರೆತು ಬಿಡುವ ಮೋಸವೂ ಇದೆ. ಬೇರೇ ಯಾವುದೇ ಆಕರ್ಷಕ ಗೀತ ಮಾಧ್ಯಮದ ಕಬಂಧಬಾಹುಗಳಿಂದ ಪಾರಾಗಿ ಸ್ವಂತಿಕೆಯೊಡನೆ ಮೂಡಿ ನಿಲ್ಲುತ್ತಾ, ಶ್ರೋತೃಗಳನ್ನು ಗಾಯನ, ಸಂಯೋಜನೆಗಳ ಮೂಲಕ ಹಿಡಿದಿಟ್ಟುಕೊಳ್ಳುವಂತಹ ಸುಗಮಸಂಗೀತ ಎಲ್ಲಿಯವರೆವಿಗೆ ಸಮಾಜಮುಖಯಾಗಿರುತ್ತದೋ ಅಲ್ಲಿಯವರೆವಿಗೆ ಅದು ಜೀವಂತವಾಗಿರುತ್ತದೆ.

**ಇಂದಿನ ಸುಗಮ ಸಂಗೀತಗಾರರ ಜವಾಬ್ದಾರಿಗಳು**

ಇಂದಿನ ಸುಗಮಸಂಗೀತಗಾರರಿಗೆ ಹೊಣೆಗಾರಿಕೆ ಬೃಹತ್ತಾಗಿದೆ. ಮೊದಲು ತಮ್ಮ ಮಾಧ್ಯಮದ ಘನತೆಯನ್ನು ಅವರು ಕಾಪಾಡಬೇಕಾಗಿದೆ. ತಮ್ಮ ಮಾಧ್ಯಮದ ಘನತೆಯನ್ನು, ಶ್ರೇಷ್ಠತೆಯನ್ನು ಯಾವಾಗಲೂ ಗರಿಷ್ಠ ಪ್ರಮಾಣದಲ್ಲಿ ಸಾಧಿಸುವುದಕ್ಕೆ ಪ್ರಯತ್ನಿಸಬೇಕಾಗಿದೆ. ಮೊದಲನೇಯದಾಗಿ ಉತ್ತಮವಾದ ಗೀತೆಗಳನ್ನು ಆರಿಸಿಕೊಂಡು ಹಾಡುವ ಜವಾಬ್ದಾರಿ. ಸುಗಮ ಸಂಗೀತದ ಮೂಲ ಸಾಮಗ್ರಿಯೇ ಶ್ರೇಷ್ಠಗೀತೆಗಳು. ಇಂತಹ ಶ್ರೇಷ್ಠಗೀತೆಗಳನ್ನು ಆರಿಸಿಕೊಳ್ಳುವ ಸಂಸ್ಕಾರ ಅವರಿಗಿರಬೇಕು. ಗೀತೆಗಳನ್ನು ಆರಿಸಿಕೊಂಡು ಅವುಗಳನ್ನು ಅಧ್ಯಯನಿಸಬೇಕು. ಅವುಗಳ ಭಾವವನ್ನು ಗ್ರಹಿಸಿ ಧ್ಯಾನಿಸಬೇಕು. ಆ ಭಾವಕ್ಕೆ ಪ್ರೇರಕವಾಗುವ, ಪೂರಕವಾಗುವ ಸಂಗೀತ ಸಂಯೋಜಿಸಬೇಕು. ಅಂದರೆ ಕವಿತೆಯ ಭಾವದ ಮೊಗ್ಗು ಸಂಗೀತ ಸಂಯೊಜನೆಯೆಂಬ ಬೆಳಕಿನ ಕಿರಣಗಳ

ಮೂಲಕ ಅರಳಬೇಕು. ಸಂಗೀತ ತನ್ನ ಶಕ್ತಿಯನ್ನು ಭಾವಗೀತೆಗೆ ಧಾರೆ ಎರೆಯುತ್ತಲೇ ಪುಸ್ತಕದಲ್ಲಿದ್ದ ಕಾವ್ಯಕನ್ನಿಕೆ ಜೀವಂತವಾಗುತ್ತಾಳೆ. ಮಿಂಚಿನಂತೆ ತನ್ನ ಹಾವಭಾವ, ಬೆಡುಗು ಬಿನ್ನಾಣಗಳನ್ನು ತೋರುತ್ತಾ ಪ್ರಕಾಶದಿಂದ ಬೆಳಗುತ್ತಾಳೆ. ಸರ್ವರಿಗೂ ಪ್ರಿಯಳಾಗುತ್ತಾಳೆ. ಕವಿತೆಯನ್ನು ಓದುವುದಕ್ಕಿಂತಲೂ, ಶ್ರೇಷ್ಠ ಗಾಯಕನ ಕಂಠದಲ್ಲಿ ಕೇಳುವಾಗ ಅದರ ಸಫಲತೆ ಪರಿಣಾಮ ದುಪ್ಪಟ್ಟಾಗುತ್ತದೆ. ಸಂಗೀತದ ಮೂಲಕ ಸಾಹಿತ್ಯವೂ ಮನಸ್ಸಿನ ಒಳಗೆ ಪ್ರವೇಶಮಾಡುತ್ತದೆ. ನಿಧಾನವಾಗಿ ಸಾಹಿತ್ಯ ಜೀರ್ಣವಾಗುತ್ತಾ ಹೋಗುತ್ತದೆ. ಇದರಿಂದ ಕವಿತೆಯ ಸಂದೇಶ ಜೀವನಕ್ಕಿಳಿದು ಒಳ್ಳೆಯ ಪರಿಣಾಮ ಬೀರುತ್ತದೆ. ಅಂದರೆ ಎರಡನೆಯ ಹೊಣೆಗಾರಿಕೆ ಸಂಗೀತ ಸಂಯೋಜನೆ,ಆದರೆ ಸಂಗೀತ ಸಂಯೋಜನೆಯನ್ನು ಸಾರ್ವಜನಿಕರಿಗೆ ತಲುಪಿಸುವವನೇ ಗಾಯಕ. ಹಾಗಾಗಿ ಗಾಯಕನ ಆಯ್ಕೆಯೇ ಮೂರನೇಯ ಹೊಣೆಗಾರಿಕೆಯಾಗಿದೆ. ಉತ್ತಮವಾದ ಕವಿತೆಗೆ ಅನುರೂಪವಾದ ಸಂಗೀತ ಶ್ರುತಿ ಲಯ ಶುದ್ಧಿಯಿದ್ದು ಮಾಧುರ್ಯ ಪೂರ್ಣವಾದ ಕಂಠ ಸಂಪತ್ತನ್ನುಳ್ಳ ಸಂಯೋಜನೆಯಿದ್ದು ಉತ್ತಮವಾದ ಗಾಯಕ ನಿಲ್ಲದೆ ಹೋದಲ್ಲಿ ಎಲ್ಲವೂ ವ್ಯರ್ಥ ಪ್ರಯತ್ನವಾಗುತ್ತದೆ. ಭಾವಗೀತೆಯನ್ನೂ ಸಂಪೂರ್ಣ ಅರ್ಥಮಾಡಿಕೊಂಡು, ತಿಳಿದು, ಭಾವಿಸಿ, ಅನುಭವಿಸಿ, ಹಾಡಬಲ್ಲಂತಹ ಗಾಯಕ ನಿದ್ದಾಗ ಮಾತ್ರಗೀತೆ ಸಫಲತೆಯನ್ನು ಕಾಣುತ್ತದೆ. ಗಾಯಕ ಗೀತೆಗೆ ಪರಕಾಯ ಪ್ರವೇಶ ಮಾಡಬೇಕು. ಗೀತೆಯ ಪ್ರತಿಯೊಂದು ಪದವನ್ನು ಅನುಭವಿಸಿ ಹಾಡಬೇಕು. ಹಾಡುತ್ತಾ, ತನ್ನ ತಾನು ಮರೆಯುವಷ್ಟು ತಾದ್ಯಾತ್ಮತೆಯನ್ನು ಹೊಂದಬೇಕು. ಗೀತೆಗೆ ತನ್ನನ್ನೇ ಅರ್ಪಿಸಿಕೊಂಡಾಗ ಮಾತ್ರ ಸುಗಮ ಸಂಗೀತ ತನ್ನ ಸಾರ್ಥಕತೆಯನ್ನು ಪಡೆಯುತ್ತದೆ. ಇನ್ನೂ ವಾದ್ಯ ಸಂಯೋಜನೆ. ಕವಿತೆಯನ್ನು ಸಂಪೂರ್ಣವಾಗಿ ಓದಿ ಅರ್ಥಮಾಡಿಕೊಂಡ ಸಂಯೋಜಕನಿಗೆ ಕವಿತೆ ಏನನ್ನು ಕೇಳುತ್ತದೆ ಎಂಬ ಅರಿವು ಇದ್ದೇ ಇರುತ್ತದೆ. ಔಚಿತ್ಯವನ್ನು ತಿಳಿದು ಸಂಯೋಜಿಸಬೇಕಾದದ್ದು ಅತ್ಯಗತ್ಯ. ವಾದ್ಯಳ ವ್ಯಕ್ತಿತ್ವದ ಅರಿವಿದ್ದೇ ಇರಬೇಕು.

ಇಂದು ಯುವಕಲಾವಿದರು ಸುಗಮ ಸಂಗೀತದತ್ತ ಆಕರ್ಷಿತರಾಗಿ ವಾಲುತ್ತಿದ್ದಾರೆ. ಇದ್ದಕೆ ದೂರದರ್ಶನ, ಸಾರ್ವಜನಿಕ ಸಮಾರಂಭಗಳು, ಧ್ವನಿಸುರುಳಿಗಳು ಪ್ರೇರಕವಾಗಿರಲೂಬಹುದು. ದಿಢೀರನೆ ಸಿಗುವ ಜನಪ್ರಿಯತೆ, ಹಣಗಳಿಕೆ ಕಾರಣವಾಗಿರಲೂಬಹುದು. ಆದರೆ ಮಾನವನ ವ್ಯಕ್ತಿತ್ವ ವಿಕಸನವನ್ನು ಮಾಡುವಂತಹ, ಸಮುದಾಯವನ್ನು ಬೆಸೆಯುವಂತಹ ಶಕ್ತಿ ಸುಗಮಸಂಗೀತದಲ್ಲಿದೆ. ಒಂದು ಒಳ್ಳೆಯ ಕವಿತೆ, ಒಬ್ಬ ಸಹೃದಯ ಸಂಗೀತ ನಿರ್ದೇಶಕ ಒಬ್ಬ ಸಮರ್ಥ ಗಾಯಕನ ನಿರೂಪಣೆಯಿಂದ ಇದು ಸರ್ವಾಮಗ ಸುಂದರವಾಗಬಲ್ಲದು. ಅಂತಹ ಸುಗಮ ಸಂಗೀತ ಮನಸ್ಸಿನ ಕಶ್ಮಲಗಳನ್ನು ಕ್ಷಣ ಮಾತ್ರದಲ್ಲಿ ತೊಳೆಯಬಲ್ಲದು, ನಿಮಿಷಮಾತ್ರದಲ್ಲಿ ಮನದ ಉರಿಯನ್ನು ತಣಿಸಬಲ್ಲದು. ಸೇಡಿನ ಹೊಗೆಯಾಡುವ ಎದೆಗಳಲಿ ಪ್ರೀತಿಯ ತಂಪನು ಎರೆಯಬಲ್ಲದು. ಬತ್ತಿದ ನೆಲದಲ್ಲಿ ಒಲವಿನ ಹಸಿರನ್ನು ಚಿಗುರಿಸಬಲ್ಲದು. ವಿರಹದ ಬೇಗೆಯನ್ನು ನೀಗಿ ಮಿಲನದ ಹೂಮಳೆಯನ್ನು ಸುರಿಸಬಲ್ಲದು. ಇಂದು ಇಂತಹ ಸುಗಮ ಸಂಗೀತದಿಂದ ಹಿರಿಯರ ಕಿರಿಯರ ನಡುವಿನ ಪ್ರೇಮ ಸೇತುವೆ ನಿರ್ಮಾಣವಾಗಬೇಕಾಗಿದೆ. ಕಿರಿಯರ ತಪ್ಪನ್ನು ತಿದ್ದಿ ಅವರನ್ನು ಮುನ್ನಡೆಸುತ್ತಾ ಹಿರಿಯತನ ತೋರುವ ಹಿರಿಯ ಸುಗಮಸಂಗೀತಗಾರರು, ಮನಸ್ಸು ತೆರೆದು ಕಿರಿಯರನ್ನು ಬರಮಾಡಿಕೊಳ್ಳಬೇಕಾಗಿದೆ. ಹಾಗೆಯೇ ಹಿರಿಯ ಕಲಾವಿದರನ್ನು ವಿನಯ ಗೌರವಾದರಗಳಿಂದ ಕಾಣುತ್ತಾ, ಅವರಲ್ಲಿರುವ ಹಿರಿಯ ಗುಣಗಳನ್ನು ಗ್ರಹಿಸುತ್ತಾ, ಪ್ರಗತಿಪಥದತ್ತ ನಡೆಯುವ ಛಲ ಹೊತ್ತ ಕಿರಿಯ ಕಲಾವಿದರೂ ಸುಗಮ ಸಂಗೀತವೆಂಬ ಕಲಾದೇಗುಲದ ಬಾಗಿಲಿಗೆ ನಲಿವಿನ, ಅರಿವಿನ, ಹೊಸತೋರಣ ಕಟ್ಟಬೇಕಾಗಿದೆ.

ಹಿರಿಯರು ನೀಡಿದ ವಿವೇಕದ ಬೆಳಕಿನಲ್ಲಿ ಸ್ವಂತ ಸಾಧನೆಯ ಪರಿಶ್ರಮದಲ್ಲಿ ಸುಗಮ ಸಂಗೀತದ ಗಾನವಿಮಾನದಲಿ ಬಹು ಎತ್ತರಕ್ಕೆ ಹಾರಬೇಕಾಗಿದೆ. ಸುಗಮ ಸಂಗೀತದ ದಾರಿಯಲ್ಲಿ ಬಹುದೂರಕ್ಕೆ ಸಾಗಬೇಕಾಗಿದೆ. ಮುಂದಿನ ಪರಂಪರೆಗೆ ಬೆಳಕಾಗಿ ಒಯ್ಯಬೇಕಾಗಿದೆ. ಹಳೇಬೇರಿನೊಂದಿಗೆ ಹೊಸಚಿಗುರು ಮೂಡಬೇಕಾಗಿದೆ.

ಸಾಹಿತ್ಯ ಮತ್ತು ಸಂಗೀತವು ತನ್ನ ರಸತಂತ್ರದಿಂದ ಜೀವನವನ್ನು ಮೇಲಕ್ಕೆತ್ತಲು ಹವಣಿಸುತ್ತದೆ. ಒಂದನೊಂದು ತಿಂದು ಬದುಕುವುದು ಅಥವಾ ತಿಳಿದು ಬದುಕುವುದು, ಬದುಕೇ ಅಲ್ಲ. ಒಂದನೊಂದು ತಿಳಿದು ಬದುಕುವುದೇ ನಿಜವಾದ ಬಾಳು. ಜೀವಕ್ಕೆ ಜೀವ ಕೊಟ್ಟು ಬದುಕುವುದೇ ಕಲೆ ಮತ್ತು ಸಾಹಿತ್ಯದ ಧ್ವನಿಯಾಗಿದೆ.

* * *

## ಗ್ರಂಥಋಣ


೧. ಡಾ. ಡಿ.ಎಸ್.ಕರ್ಕಿ, ಕನ್ನಡ ಛಂದೋವಿಕಾಸ, ಸಮಾಜ ಪುಸ್ತಕಾಲಯ, ಧಾರವಾಡ

೨. ಡಾ.ಎಸ್. ಸಂಪತ್ ಕುಮಾರಾಚಾರ್ಯ, ಕರ್ನಾಟಕ ಸಂಗೀತ ದೀಪಿಕೆ, ಗೀತಾ ಬುಕ್ ಹೌಸ್, ಮೈಸೂರು

೩. ಸಂ.ನೃ.ಅ., ಗಾನ ಕಲಾ ಮಂಜರಿ ಭಾಗ೧, ಭಾಗ ೨, ಬೆಂಗಳೂರು

೪. ಗಮಕ ಕಲೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೫. ಮಧುರಚನ್ನ, ಗರತಿಯ ಹಾಡು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೬. ಡಾ. ಬೆಟಗೇರಿ ಕೃಷ್ಣಶರ್ಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೭. ಗೋರೂರು ರಾಮಸ್ವಾಮಿ ಅಯ್ಯಂಗಾರ್, ಹಳ್ಳಿಯ ಹಾಡುಗಳು

೮. ವಾಗೀಶ್ವರೀ ಶಾಸ್ತ್ರೀ, ಹೃದಯ ಸಂಪುಟ

೯. ಡಾ. ರಾಮಕೃಷ್ಣ ಮರಾಠೆ, ಉತ್ತರ ಕರ್ನಾಟಕ ವೃತ್ತಿರಂಗಭೂಮಿ

೧೦. ಯೋಗಾನರಸಿಂಹ, ರಂಗ ಚಿಂತನೆ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು.

೧೧. ಡಾ. ಜಿ. ವರದರಾಜರಾವ್, ಹರಿದಾಸ ಸಾಹಿತ್ಯಸಾರ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೧೨. ಪ್ರೊ ಟಿ ಕೇಶವ ಭಟ್ಟ, ಯಕ್ಷಗಾನ ಕಲಾ ದರ್ಶನ

೧೩. ಡಾ. ಎಲ್ ಬಸವರಾಜು, ಶಿವದಾಸ ಗೀತಾಂಜಲಿ

೧೪. ಎಸ್.ಕೆ. ರಾಮಚಂದ್ರರಾವ್, ದಾಸ ಸಾಹಿತ್ಯ ಮತ್ತು ಸಂಸ್ಕೃತಿ

೧೫. ಎಸ್ ಅನಂತನಾರಾಯಣ, ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ, ಡಿ.ವಿ.ಕೆ. ಮೂರ್ತಿ, ಮೈಸೂರು.

೧೬. ಶ್ರೀ, ಇಂಗ್ಲೀಷ್ ಗೀತೆಗಳು, ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಂಗಳೂರು

೧೭. ಡಾ. ಪ್ರಭುಶಂಕರ, ಭಾವಗೀತೆ, ಗೀತಾ ಬುಕ್ ಹೌಸ್, ಮೈಸೂರು

೧೮. ಡಿ.ವಿ.ಜಿ., ಸಾಹಿತ್ಯ ಶಕ್ತಿ, ಕಾವ್ಯಾಲಯ, ಮೈಸೂರು

೧೯. ಸಿ. ಅಶ್ವತ್ಥ್ ಅಭಿನಂದನಾ ಗ್ರಂಥ,ತಂಬೂರಿ

೨೦. ಡಾ. ಜಯಶ್ರೀ ಅರವಿಂದ್, ಬೆಳದಿಂಗಳ ಹಕ್ಕಿ, ಪಿ. ಕಾಳಿಂಗರಾವ್

೨೧. ಡಾ. ಜಯಶ್ರೀ ಅರವಿಂದ್, ನಾದಯೋಗಿ ಪದ್ಮಚರಣ್

೨೨. ನಿಸಾರ್ ಅಹಮದ್, ಪ್ರತಿಭಾ ಸಂಕುಲ, ಸಂಕುಲ ಭಾಗ ೫, ಇಳಾ ಮುದ್ರಣ

೨೩. ಹೆಚ್ ಆರ್ ಲೀಲಾವತಿ ಅಭಿನಂದನಾ ಗ್ರಂಥ, ನಾದಲೀಲ, ಮೈಸೂರು.

# ಸುಗಮ ಸಂಗೀತ ಪ್ರಶಸ್ತಿ ಪುರಸ್ಕೃತರು

**ಪಿ. ಕಾಳಿಂಗರಾವ್**

ಜನನ:೩೧-೮-೧೯೧೪-ಪಾಂಡೇಶ್ವರದಲ್ಲಿ ಜನ್ಮನಾಮ ಸುಬ್ರಾಯ ಶಾನುಭೋಗ್-ಅನಂತರ ಕಾಳಿಂಗಶರ್ಮನಾಗಿ ಮುಂದೆ ಕಾಳಿಂಗರಾವ್ ಆದರು.

ಮನೆತನ: ಸುಪ್ರಸಿದ್ಧ ಯಕ್ಷಗಾನ ಕಲಾವಿದರ ಮನೆತನ. ತಂದೆ ಪುಟ್ಟಯ್ಯನವರು ಯಕ್ಷಗಾನ ಕಲಾವಿದರು. ತಾಯಿ ನಾಗರತ್ನಮ್ಮ.

ಗುರು ಪರಂಪರೆ: ನಾಟಕ ಕಂಪೆನಿಯ ರಂಗನಾಥ ಭಟ್ಟರು ನಟನೆಯಲ್ಲಿ ಶಿಕ್ಷಣ ನೀಡಿ ಬಾಲನಟನಾಗಿ ಪಾತ್ರ ನೀಡಿದ್ದೇ ಅಲ್ಲದೆ ಕರ್ನಾಟಕ ಸಂಗೀತವನ್ನೂ ಕಲಿಸಿ ಹನ್ನೆರಡನೆ ವಯಸ್ಸಿನಲ್ಲಿ ಕಚೇರಿ ಮಾಡುವಷ್ಟು ಶಿಕ್ಷಣ ನೀಡಿದರು. ಮುಂದೆ ಸವಾಯಿ ಗಂಧರ್ವ ಅವರ ಶಿಷ್ಯರಾದ ವೆಂಕಟರಾವ್ ರಾಮದುರ್ಗ ಅವರಲ್ಲಿ ಹಿಂದೂಸ್ಥಾನಿ ಸಂಗೀತವನ್ನೂ ಅಭ್ಯಸಿಸಿದರು. ಅನಂತರ ಪಂ. ರಾಮಚಂದ್ರ ಬುವಾ ಮರೊಲ್‌ಕರ್ ರವರಲ್ಲಿ ಉನ್ನತ ಶಿಕ್ಷಣ ಪಡೆದು ಅವರ ಪಟ್ಟ ಶಿಷ್ಯರಾದರು.

ಸಾಧನೆ: ಮೊದಲ ಗುರು ರಂಗನಾಥ ಭಟ್ಟರ ಕಂಪೆನಿಯಲ್ಲಿ ಬಾಲಪ್ರತಿಭೆಯಾಗಿ ಗಾಯನ-ನಟನೆಯೆರಡರಲ್ಲೂ ಹೆಸರು ಮಾಡಿದರು. ಆ ಕಂಪೆನಿ ನಿಂತು ಹೋದ ಮೇಲೆ ದಕ್ಷಿಣ ಭಾರತ ಹಿಂದೀ ಪ್ರಚಾರ ಮಂಡಲಿಯ ಕಲಾಶಾಲೆಯ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿದರು. ಅಲ್ಲಿರುವಾಗಲೇ ಚಲನಚಿತ್ರರಂಗ ಪ್ರವೇಶಮಾಡಿ ಗಾಯಕನಾಗಿ, ನಟನಾಗಿ ಮೆರೆದರು. ಅಂಬಾ ಪ್ರಸಾದಿನ ನಾಟಕ ಸಂಸ್ಥೆಯಲ್ಲಿ ಗಾಯಕ-ನಟನಾಗಿ ಅಲ್ಲಿ ಪ್ರಮುಖ ಸ್ತ್ರೀ ಪಾತ್ರಧಾರಿಯಾಗಿಯೂ ಹೆಸರು ಮಾಡಿದರು. ಮುಂದೆ ಸುಗಮ ಸಂಗೀತದ ಕಡೆಗೆ ಅವರ ಮನಸ್ಸುವಾಲಿತು. ಅನೇಕ ಕನ್ನಡ ಗೀತೆಗಳಿಗೆ, ಜಾನಪದ ಹಾಡುಗಳಿಗೆ ತಾವೇ ರಾಗ ಸಂಯೋಜನೆ ಮಾಡಿ ಹಾಡಲು ತೊಡಗಿದರು. ಕನ್ನಡ ದೇವರನಾಮಗಳಿಗೆ ಆಧುನಿಕ ರಾಗಗಳ ಸೊಗಡನ್ನು ನೀಡಿ ಹಾಡುತ್ತಿದ್ದರು. ಹುಯಿಲುಗೋಳ ನಾರಾಯಣರಾಯರ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಗೀತೆ ಇವರ ಕಂಠದಿಂದ ಹೊರ ಹೊಮ್ಮಿ ಪ್ರಸಿದ್ಧಿಯಾಗಿ ಒಂದು ರೀತಿಯಲ್ಲಿ ನಾಡಗೀತೆಯೇ ಆಯಿತು. ಬೇಂದ್ರೆಯವರ ಗೀತೆಗಳಿಗೆ ಜಾನಪದ ಸೊಗಡನ್ನು ನೀಡಿದರು. ರಾಜರತ್ನಂರವರ ರತ್ನನ ಪದಗಳು, ಅನೇಕ ಜಾನಪದ ಗೀತೆಗಳು ಇವರ ಕಂಠದಿಂದ ಹೊರಬಂದವು. ಕಾಳಿಂಗರಾಯರು-ಮೋಹನ್‌ಕುಮಾರಿ, ಸೋಹನ್ ಕುಮಾರಿ ಸಹೋದರಿಯರೊಂದಿಗೆ-ಹಾಡುತ್ತಿದ್ದ ಗಾಯನ ಕಾರ್ಯಕ್ರಮಗಳು ನಾಡಿನಾದ್ಯಂತ ಹೆಸರು ಗಳಿಸಿತು.

೧೯೫೬ರಲ್ಲಿ ಕನ್ನಡ ನಾಡು ಒಂದಾದಾಗ ಇವರಿಂದ ಉದಯವಾಗಲಿ ನಾಡಗೀತೆ ಹಾಡಿಸಿ ಸರ್ಕಾರ ಗೌರವಿಸಿತು. ಅಣ್ಣ ತಂಗಿ, ಕಿತ್ತೂರು ಚೆನ್ನಮ್ಮ, ಅಬ್ಬಾ ಆ ಹುಡುಗಿ, ತುಂಬಿದ ಕೊಡ ಮುಂತಾದ ಚಲನಚಿತ್ರಗಳಲ್ಲೂ ಹಾಡಿದ್ದಾರೆ. ನಟಶೇಖರ, ಅಬ್ಬಾ ಆ ಹುಡುಗಿ, ತರಂಗ ಚಿತ್ರಗಳಿಗೆ ಸಂಗೀತ ನಿರ್ದೇಶಕರಾಗಿ ರಾಗ ಸಂಯೋಜನೆ ಮಾಡಿದ್ದಾರೆ. ಆಕಾಶವಾಣಿಯ ಕಲಾವಿದರಾಗಿ ಅನಭಿಷಿಕ್ತ ದೊರೆಯಾಗಿ ಮೆರೆದವರು.

ಪ್ರಶಸ್ತಿ-ಸನ್ಮಾನ: ಬಾಲ ಗಂಧರ್ವ, ಜಾನಪದ ಸಂಗೀತ ರತ್ನ, ಗಾಯನ ಚಕ್ರವರ್ತಿ, ಗಾಯನ ಕಂಠೀರವ, ಕನ್ನಡ ಉದಯಗಾನ ಕೋಗಿಲೆ, ಸಂಗೀತ ರಸ ವಿಹಾರಿ ಮುಂತಾದ ಬಿರುದು ಗೌರವಗಳಿಗೆ ಪಾತ್ರರಾದ ರಾಯರನ್ನು ರಾಜ್ಯ ಸಂಗೀತ-ನಾಟಕ ಅಕಾಡೆಮಿ ೧೯೬೮-೬೯ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.

ಸುಗಮ ಹಾಗೂ ಶಾಸ್ತ್ರೀಯ ಸಂಗೀತದ ಅನಭಿಷಿಕ್ತ ದೊರೆಯಾಗಿ ರಾಜ್ಯಾದ್ಯಂತ ಮನೆಮಾತಾಗಿದ್ದ ಕಾಳಿಂಗರಾಯರು ದಿನಾಂಕ: ೨೧-೯-೧೯೮೧ರಂದು ನಿಧನರಾದರು.